ಕರ್ನಾಟಕ ಸರ್ಕಾರ

# ಕರ್ನಾಟಕದಲ್ಲಿ 2014–2015 ರಿಂದ 2016–2017ರ ಅವಧಿಯವರೆಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ
ಡಿಸೆಂಬರ್ 2021

# ಕರ್ನಾಟಕದಲ್ಲಿ 2014–2015 ರಿಂದ 2016–2017ರ ಅವಧಿಯವರೆಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ

ಪ್ರಧಾನ ಶೋಧಕರು

ಡಾ. ಸುದೇಷ್ಣಾ ಮುಖರ್ಜಿ

ಪ್ಯಾನ್ ಇಂಡಿಯಾ ನೆಟ್‌ವರ್ಕ್, ಬೆಂಗಳೂರು

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

ಮತ್ತು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಕರ್ನಾಟಕ ಸರ್ಕಾರ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

Karnataka Evalution Authority

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಡಿಸೆಂಬರ್ 2021

**© ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ 2021**

**ಪ್ರಕಟಣೆ**
**ಇವರಿಗಾಗಿ,**
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
#542, 5ನೇ ಮಹಡಿ, 2ನೇ ಹಂತ,
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು–560 001

**ಇವರಿಂದ**
ಪ್ಯಾನ್ ಇಂಡಿಯಾ ನೆಟ್‌ವರ್ಕ್,
ಸಂ. 68/14, 2ನೇ ಅಡ್ಡ ರಸ್ತೆ, ಕೃಷ್ಣಾ ಬ್ಲಾಕ್,
ಶೇಷಾದ್ರಿಪುರಂ ಮುಖ್ಯ ರಸ್ತೆ
ಬೆಂಗಳೂರು–560 020

**ಅಕ್ಷರ ಜೋಡಣೆ ಮತ್ತು ಮುದ್ರಣ**
ಎಸ್.ಪಿ.ಸಿ. ಎಂಟರ್‌ಪ್ರೈಸಸ್
#36, ಎನ್ ಎಸ್ ಐಯಂಗಾರ್ ರಸ್ತೆ,
ಶೇಷಾದ್ರಿಪುರಂ,
ಬೆಂಗಳೂರು–560 020
srislm666@gmail.com

# ಮುನ್ನುಡಿ

ಯುವಜನಾಂಗಕ್ಕೆ ಉತ್ತಮ ಉದ್ಯೋಗಾವಕಾಶಗಳು ಮತ್ತು ಜೀವನೋಪಾಯಗಳನ್ನು ಪಡೆಯುವುದಕ್ಕಾಗಿ ಜ್ಞಾನ ಮತ್ತು ಕೌಶಲ್ಯಗಳು 21ನೇ ಶತಮಾನದಲ್ಲಿ ಅಗತ್ಯವೆಂದು ಪರಿಗಣಿಸಲಾಗಿದೆ. ಈ ಫಲಿತಾಂಶಗಳನ್ನು ಸಾಧಿಸಲು ಕೇಂದ್ರ ಸರ್ಕಾರದ ಯೋಜನೆಗಳ ಜೊತೆಗೆ ಕರ್ನಾಟಕ ರಾಜ್ಯವು, ಸ್ವಯಂ ಉದ್ಯೋಗ ಹಾಗೂ ದಿನಗೂಲಿ ಉದ್ಯೋಗಗಳ ಮೂಲಕ ಪರ್ಯಾಯ ಫಲದಾಯಕ ಮತ್ತು ಆದಾಯ ಸೃಜನೆ ಚಟುವಟಿಕೆಗಳನ್ನು ಗ್ರಾಮೀಣ ಯುವ ಜನತೆಗೆ ಒದಗಿಸಲು ಕೌಶಲ್ಯ ತರಬೇತಿ ಮತ್ತು ಉದ್ಯೋಗ ಒಳಗೊಂಡಿರುವ ರಾಜೀವ್ ಗಾಂಧಿ ಚೈತನ್ಯ ಯೋಜನೆ (RGCY)ಯನ್ನು ಆರಂಭಿಸಿದೆ. 2013–14ರಿಂದ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಉದ್ಯೋಗ ಸೃಜನೆ, ಆದಾಯ ಮತ್ತು ಗ್ರಾಮೀಣ ಯುವ ಜನತೆಯ ಸಾಮಾಜಿಕ –ಆರ್ಥಿಕ ಸ್ಥಿತಿಗತಿಗಳ ಮೇಲೆ ಯೋಜನೆಯ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅಧ್ಯಯನವನ್ನು ಕೈಗೊಂಡಿದ್ದವು ಈ ಅಧ್ಯಯನವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಪ್ಯಾನ್ ಇಂಡಿಯಾ ನೆಟ್ ವರ್ಕ್ ಮೂಲಕ ಕೈಗೊಳ್ಳಲಾಗಿತ್ತು.

ಅಧ್ಯಯನವು ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಧ್ಯಮಿಕ ಹಾಗೂ ಪ್ರಾಥಮಿಕ ದತ್ತಾಂಶದ ವಿಶ್ಲೇಷಣೆಯ ಆಧಾರವಾಗಿರುತ್ತದೆ. ಪ್ರಾಥಮಿಕ ದತ್ತಾಂಶವನ್ನು ಎರಡು ರೀತಿಯ ದತ್ತಾಂಶ ಸಮೂಹಗಳೊಡನೆ 16 (3 ವ್ಯಾಪಕ) ಜಿಲ್ಲೆಗಳಿಂದ, ನಾಲ್ಕು ಆಡಳಿತ ವಲಯಗಳಿಂದ, ಸ್ವಯಂ ಉದ್ಯೋಗ ಅಂಶವನ್ನು ಹೊಂದಿದ 2046 ಫಲಾನುಭವಿಗಳ ಹಾಗೂ ಕೌಶಲ್ಯಾ ತರಬೇತಿ ಮತ್ತು ಉದ್ಯೋಗ ಅಂಶವನ್ನು ಹೊಂದಿದೆ. 2305 ಫಲಾನುಭವಿಗಳನ್ನು ಯಾದೃಚ್ಛಿಕ ನಮೂನೆ ವಿಧಾನದ ಆಧಾರದಲ್ಲಿ ಆರಿಸಿ ಸಂಗ್ರಹಿಸಲಾಯಿತು. ಅಧ್ಯಯನದ ಪ್ರಮುಖ ಫಲಿತಾಂಶಗಳೆಂದರೆ– ಶೇಕಡ 56 ಕ್ಕಿಂತ ಹೆಚ್ಚಿನ ಫಲಾನುಭವಿಗಳು ಸ್ವಯಂ ಉದ್ಯೋಗದಿಂದ ನಿರೀಕ್ಷಿತ ಆದಾಯವನ್ನು ಹೊಂದಿದ್ದರು, ಶೇಕಡ 85–25 ಫಲಾನುಭವಿಗಳಿಗೆ ಸಾಲ ತೆಗೆದುಕೊಳ್ಳುವ ಪ್ರಕ್ರಿಯೆಗೇ ಮೂರರಿಂದ ಆರು ತಿಂಗಳುಗಳು ಬೇಕಾಯಿತು. ಆದರೆ ಶೇಕಡ 22.5 ಫಲಾನುಭವಿಗಳು ಮಾತ್ರ ಸ್ವಯಂ ಉದ್ಯೋಗ ಕಾರ್ಯವನ್ನು ಉಳಿಸಿಕೊಳ್ಳಲು ಯಶಸ್ವಿಯಾಗಿದ್ದಾರೆ. ಮುಚ್ಚಲಾದ ಉದ್ದಿಮೆಗಳಲ್ಲಿ ಬ್ಯೂಟಿ ಪಾರ್ಲರುಗಳು (81.5%), ಹೋಟೆಲ್/ ಚಹಾದಂಗಡಿಗಳು (80%), ಕೋಳಿಸಾಕಣೆಕೆ ಮತ್ತು ಪಶು ಸಂಗೋಪನೆ (63%) ಹಾಗೂ ಸಗಟು ಮತ್ತು ಜವಳಿ ಅಂಗಡಿಗಳು ಇವುಗಳನ್ನು ಒಳಗೊಂಡಿವೆ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನೀಡಿಕೆ ವಿಭಾಗದಲ್ಲಿ ಫಲಾನುಭವಿಗಳು ಟೈಲರಿಂಗ್ (32.19%) ಮತ್ತು ಗಣಕಯಂತ್ರ ಸಂಬಂಧಿ (24.12%) ಕಾರ್ಯಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಮಹಿಳೆಯರು ಬ್ಯೂಟಿಷಿಯನ್, ಟೈಲರಿಂಗ್ ಮತ್ತು ಹೈನುಗಾರಿಕೆಯಲ್ಲಿ ಆಸಕ್ತಿ ಹೊಂದಿದ್ದಾರೆ. ತರಬೇತಿಗೊಂಡವರಲ್ಲಿ ಶೇಕಡ 76ರಷ್ಟು ಫಲಾನುಭವಿಗಳು, ಯೋಜನಾ ಅನುಷ್ಠಾನದ ಅಂಗವಾಗಿ ಏಜೆನ್ಸಿಗಳ ಮೂಲಕ ಉದ್ಯೋಗ ಪ್ರಯೋಜನಗಳನ್ನು ಪಡೆದರು. ಇವರಲ್ಲಿ ಮೂರನೇ ಒಂದರಷ್ಟು ಫಲಾನುಭವಿಗಳು ತಿಂಗಳಿಗೆ ರೂ.7500 ಕ್ಕಿಂತ ಕಡಿಮೆ ಆದಾಯವನ್ನು ಪಡೆಯುತ್ತಿದ್ದಾರೆ.

ಅಧ್ಯಯನದ ಬಹುಮುಖ್ಯ ಶಿಫಾರಸ್ಸುಗಳು: ಕೌಶಲ-ಸಿದ್ಧತೆ, ಸ್ಥಳೀಯ ಸಂಬಂಧಪಟ್ಟ ಕೌಶಲ್ಯಗಳನ್ನು ಒಟ್ಟುಗೂಡಿಸುವುದು ಮತ್ತು ಸ್ಥಳೀಯ ಅಗತ್ಯತೆಯ ಅನುಗುಣವಾಗಿ ಮೌಲ್ಯನಿರ್ಧರಣೆ ಮಾಡುವುದು, ಕನಿಷ್ಠ ಪ್ರವೇಶ ಹಂತದ ವಯಸ್ಸನ್ನು 21 ವರ್ಷಗಳಿಗೆ ಪರಿಷ್ಕರಿಸುವುದು, ವಿಕಲಾಂಗ ಚೇತನರನ್ನುಆದ್ಯತೆಯ ಆಧಾರದ ಮೇಲೆ ಸೇರಿಸಿಕೊಳ್ಳುವುದು, ತೃತೀಯ ಲಿಂಗಿ ವ್ಯಕ್ತಿಗಳಿಗಾಗಿ ಅಗತ್ಯತೆಗಳ ಅರ್ಹತಾ ಪಟ್ಟಿಯನ್ನು ಅವರು ಸ್ಥಳವನ್ನು ಆಯ್ಕೆ ಮಾಡಲು ಅನುವಾಗುವಂತೆ ಸಡಿಲಗೊಳಿಸುವುದು. ಸ್ವಯಂ ಉದ್ಯೋಗಕ್ಕಾಗಿನ ತರಬೇತಿ ಕಾರ್ಯಕ್ರಮಗಳ ಒಳಾಂಶಗಳು ಮತ್ತಷ್ಟು ವೈಜ್ಞಾನಿಕವಾಗುವ ಮತ್ತು ಕ್ರಮಬದ್ಧಗೊಳ್ಳುವ ಅಗತ್ಯವಿದೆ ಹಾಗೂ ಸ್ವಯಂ-ಉದ್ಯೋಗ ಮತ್ತು ಕೌಶಲ ಹಾಗೂ ದಿನಗೂಲಿ ಉದ್ಯೋಗದ ಘಟಕಗಳನ್ನು ಜೊತೆಗೂಡಿಸಬೇಕು. "ಜಂಟಿ ಹೊಣೆಗಾರಿಕೆ ಸಮೂಹ" ಪರಿಕಲ್ಪನೆಯನ್ನು ತೆಗೆದುಹಾಕುವುದು, ಸಾಲ ಮಂಜೂರಾತಿಯ ಅವಧಿಯನ್ನು ಕಡಿಮೆಗೊಳಿಸುವುದು, ಸಾಕಷ್ಟು ಮಾನವ ಸಂಪನ್ಮೂಲಗಳು ಗುಣಮಟ್ಟದ ತರಬೇತಿ ಮಾದರಿಗಳೊಂದಿಗೆ ಸೂಕ್ತ ತರಬೇತಿ ಸಂಸ್ಥೆಗಳು ಗುರುತಿಸುವುದು, ಸರ್ಕಾರವು ಎಂಎಸ್‌ಎಂಇಗಳು ಹಾಗೂ ಕೈಗಾರಿಕೆಗಳಿಂದ ನುರಿತ ವ್ಯಕ್ತಿಗಳಿಗೆ ಸೇರಿಕೊಳ್ಳುವುದು. ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಉದ್ಯೋಗವನ್ನು ನೀಡುವ ಕೌಶಲ್ಯವನ್ನು ಕಲ್ಪಿಸುವ ಮತ್ತು ಸ್ವಯಂ ಉದ್ಯೋಗಕ್ಕಾಗಿ ಸಾಲಗಳು ಸಂಯೋಜಿಸುವ ಇಲಾಖೆಗಳು ಒಟ್ಟುಗೂಡಿಸಬೇಕೆ ಹಾಗೂ ಯೋಜನೆಯ ಮರುವಿನ್ಯಾಸಗೊಳಿಸುವ ಅಗತ್ಯವಿದೆ ಹಾಗೂ ವಿಸ್ತಾರವಾದ ಆಧಾರದ ಮೇಲೆ ಮಾಡಬೇಕಾಗಿದೆ ಅಥವಾ ಅಸ್ತಿತ್ವದಲ್ಲಿರುವ ಡಿಡಿಯುಜಿಕೆವೈ ಅಥವಾ ಯಾವುದೇ ಇತರ ಕೌಶಲ ತರಬೇತಿಯೊಂದಿಗೆ ವಿಲೀನಗೊಳಿಸಬಹುದಾಗಿದೆ.

ಯೋಜನೆಯ ವಿನ್ಯಾಸದಲ್ಲಿ ಅವಶ್ಯಕ ಮಾರ್ಪಾಡುಗಳನ್ನು ತರುವುದಕ್ಕಾಗಿ ಹಾಗೂ ಗ್ರಾಮೀಣ ಯುವಜನತೆಗಾಗಿ ಆದಾಯ ಮತ್ತು ಉದ್ಯೋಗದ ವಿಷಯಗಳಲ್ಲಿ ಫಲಿತಾಂಶಗಳನ್ನು ಗರಿಷ್ಠಗೊಳಿಸುವಂತೆ, ಅನುಷ್ಠಾನಗೊಳಿಸುವುದಕ್ಕಾಗಿ ಕರ್ನಾಟಕ ಸರ್ಕಾರ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅಧ್ಯಯನದ ತೀರ್ಮಾನಗಳು ಹಾಗೂ ಶಿಫಾರಸ್ಸುಗಳು ಉಪಯುಕ್ತವಾಗುವುದೆಂದು ನಾನು ಭಾವಿಸುತ್ತೇನೆ.

ಈ ಅಧ್ಯಯನದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಇವರ ಬೆಂಬಲ ಮತ್ತು ಮಾರ್ಗದರ್ಶನವನ್ನು ಪಡೆಯಲಾಯಿತು. 49ನೇ ತಾಂತ್ರಿಕ ಸಮಿತಿ ಸಭೆಯಲ್ಲಿ ವರದಿಯನ್ನು ಅನುಮೋದಿಸಲಾಯಿತು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ (ಕೆಇಎ), ತಾಂತ್ರಿಕ ಸಮಿತಿಯ ಸದಸ್ಯರು ಮತ್ತು ಸ್ವತಂತ್ರ ಮೌಲ್ಯಮಾಪಕರು ಕರಡು ವರದಿಯ ಗುಣಮಟ್ಟವನ್ನು ಸುಧಾರಿಸಲು ಉಪಯುಕ್ತವಾದ ಸಲಹೆಗಳು ಮತ್ತು ಮಾಹಿತಿಗಳನ್ನು ನೀಡಿರುತ್ತಾರೆ. ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವಲ್ಲಿ ಎಲ್ಲರೂ ನೀಡಿದ ಸಹಾಯಕ್ಕೆ ನಾನು ಕೃತಜ್ಞನಾಗಿದ್ದೇನೆ.

ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

# ಕೃತಜ್ಞತೆಗಳು

"ಕರ್ನಾಟಕದಲ್ಲಿ 2013–14 ರಿಂದ 2016–17ರ ಅವಧಿಯವರೆಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ" ಕುರಿತ ವರದಿಯನ್ನು, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಪಿ.ಎಸ್.ಎ, ಪಿ.ಐ.ಎ ಮತ್ತು ಫಲಾನುಭವಿಗಳು ಇವರು ನೀಡಿದ ಅಮೂಲ್ಯ ಮಾಹಿತಿಯಿಂದ ಪಡೆದ ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶಗಳ ಸಮರ್ಥ ವಿಶ್ಲೇಷಣೆಯೊಂದಿಗೆ ಕ್ರೋಢೀಕರಿಸಲಾಗಿರುತ್ತದೆ.

ಈ ಮೌಲ್ಯಮಾಪನ ಅಧ್ಯಯನವನ್ನು ಪೂರ್ಣಗೊಳಿಸುವಲ್ಲಿ ಈ ಕೆಳಗಿನ ವ್ಯಕ್ತಿಗಳು ನೀಡಿದ ಅಮೂಲ್ಯ ಕೊಡುಗೆಗಳಿಗಾಗಿ ಪ್ಯಾನ್ ಇಂಡಿಯಾ ನೆಟ್‌ವರ್ಕ್ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಡಾ. ಶಾಲಿನಿ ರಜನೀಶ್, ಐ.ಎ.ಎಸ್., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಶ್ರೀ ಹರಿ ಕುಮಾರ್ ಝಾ. ಐ.ಎಫ್.ಎಸ್., ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನ ಅಧಿಕಾರಿ ಮತ್ತು ಡಾ.ಛಾಯಾ ಕೆ. ದೇಗಾಂವ್ಕರ್. ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿ ಇವರುಗಳು ನೀಡಿದ ಒಳಹರಿವು ಮತ್ತು ಸಲಹೆಗಳು ಹೆಚ್ಚು ಮೌಲ್ಯಯುತವಾಗಿವೆ. ಅವರೆಲ್ಲರಿಗೂ ನಾವು ಪ್ರಾಮಾಣಿಕವಾಗಿ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ.

ಶ್ರೀಮತಿ ಸವಿತಾ ದಯಾನಂದ್ ಆಡಳಿತಾಧಿಕಾರಿ, ಶ್ರೀ ಮಂಜುನಾಥ್ ನಿರ್ದೇಶಕರು, ಶ್ರೀಮತಿ ಜ್ಯೋತಿ ಎಸ್ ಜೆನ್ನಿ ಸಹ ನಿರ್ದೇಶಕರು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಹಾಗೂ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಎಲ್ಲಾ ಸಿಬ್ಬಂದಿಗಳ ನಿರಂತರ ಬೆಂಬಲಕ್ಕಾಗಿ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ನಿರ್ದೇಶಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ಡಾ. ಸುಧೇಶ್ನಾ ಮುಖರ್ಜಿಯವರು ಈ ಅಧ್ಯಯನದ ಪ್ರಧಾನ ಶೋಧಕರಾಗಿ ಕಾರ್ಯ ನಿರ್ವಹಿಸಿ ಈ ವರದಿಯನ್ನು ಸಿದ್ಧಪಡಿಸಿದ್ದಾರೆ. ಈ ಮೌಲ್ಯಮಾಪನ ಅಧ್ಯಯನಕ್ಕಾಗಿ ಅವರ ಒಟ್ಟು ಸಮರ್ಪಣೆ ಮತ್ತು ಈ ವರದಿಯನ್ನು ಸಿದ್ಧಪಡಿಸುವಲ್ಲಿನ ಪಾಲ್ಗೊಳ್ಳುವಿಕೆಯು ಹೆಚ್ಚು ಮೆಚ್ಚುಗೆಯನ್ನು ಪಡೆದಿರುತ್ತದೆ. ಅವರಿಗೆ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ಯೋಜನೆಯ ಮೌಲ್ಯಮಾಪನವನ್ನು ತೆಗೆದುಕೊಳ್ಳುವಲ್ಲಿ ಸಹಕರಿಸಿದ ಎಲ್ಲಾ ಪ್ಯಾನ್ ಇಂಡಿಯಾ ನೆಟ್‌ವರ್ಕ್ ತಂಡಕ್ಕೆ ನಮ್ಮ ಪಾಮಾಣಿಕ ಧನ್ಯವಾದಗಳು, ಇವರ ಸಹಕಾರವಿರದಿದ್ದರೆ ಈ ಮೌಲ್ಯಮಾಪನವು ಸಾಧ್ಯವಾಗುತ್ತಿರಲಿಲ್ಲ.

(ಶ್ರೀಮತಿ ಅಪರ್ಣ ಎಂ ಕೊಳ್ಳಾ)

ಮ್ಯಾನೇಜಿಂಗ್ ಪಾರ್ಟ್ನರ್

ಪ್ಯಾನ್ ಇಂಡಿಯಾ ನೆಟ್‌ವರ್ಕ್, ಬೆಂಗಳೂರು

# ಪರಿವಿಡಿ


**ಕಾರ್ಯಕಾರಿ ಸಾರಾಂಶ ..................................................... 01**

ಮೌಲ್ಯಮಾಪನ ವಿಧಾನ ..................................................... 02

ಯೋಜನೆಯ ಸ್ವಯಂ ಉದ್ಯೋಗ ಘಟಕ ಕುರಿತ ಫಲಿತಾಂಶಗಳು ..................................................... 03

ಕೌಶಲ್ಯ–ತರಬೇತಿ ಮತ್ತು ನಿಯೋಜನೆ ಕುರಿತ ಫಲಿತಾಂಶಗಳು ..................................................... 06

ಕಾರ್ಯಕ್ರಮದ ಒಟ್ಟಾರೆ ಗುರಿ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಅವಲೋಕನಗಳು ಮತ್ತು ಫಲಿತಾಂಶಗಳು ..................................................... 09

ನೀತಿ ಶಿಫಾರಸ್ಸುಗಳು ..................................................... 10

ಮೌಲ್ಯಮಾಪನದ ನಂತರದ ಮಾತೃಕೆ ..................................................... 14

**1. ಪರಿಚಯ ..................................................... 23**

1.1 ಕರ್ನಾಟಕದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ ಜಿಲ್ಲೆಗಳ ಆರ್ಥಿಕ ಸ್ಥಿತಿಯ ಬಗ್ಗೆ ವಿಸ್ತಾರ ಚಿತ್ರಣ ..................................................... 25

1.2 ರಾಜೀವ್ ಗಾಂಧಿ ಚೈತನ್ಯ ಯೋಜನೆ ಉದ್ದೇಶಗಳು ..................................................... 26

**2. ದಾಖಲೆ ಚೌಕಟ್ಟು/ ಬದಲಾವಣೆಯ ಸಿದ್ಧಾಂತ ..................................................... 29**

2.1 ಮೌಲ್ಯಮಾಪನದ ತಾರ್ಕಿಕ ಚೌಕಟ್ಟು ..................................................... 29

**3. ಮೌಲ್ಯಮಾಪನದ ವ್ಯಾಪ್ತಿ ಮತ್ತು ಉದ್ದೇಶ ..................................................... 31**

**4. ಪ್ರಗತಿ ಪರಿಶೀಲನೆ ..................................................... 33**

4.1 ಬಿಡುಗಡೆಯಾದ ನಿಧಿಗಳು ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು ..................................................... 33

4.2 ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಒದಗಿಸಲಾದ ತರಬೇತಿಯ ವಿಧಗಳು ..................................................... 34

4.3 ತರಬೇತಿಯ ಸ್ವರೂಪ ..................................................... 36

**5. ಸಾಹಿತ್ಯದ ಅವಲೋಕನ ..................................................... 39**

5.1. ಭಾರತದಲ್ಲಿ ಕೌಶಲ್ಯ ಅಭಿವೃದ್ಧಿಯ ಮೂಲವನ್ನು ಪತ್ತೆ ಹಚ್ಚುವುದು ..................................................... 39

5.2 ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನೀತಿಯ ಪ್ರಮುಖ ಲಕ್ಷಣಗಳು: ..................................................... 40

5.3 ಕೌಶಲ್ಯ ಅಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ..................................................... 45

5.4 ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ನಿಯೋಜನೆ ..................................................... 53

**6. ಉದ್ದೇಶಗಳು ಮತ್ತು ಮೌಲ್ಯಮಾಪನದ ಸಮಸ್ಯೆಗಳು ..................................................... 61**

6.1 ಮೌಲ್ಯಮಾಪನದ ಉದ್ದೇಶಗಳು ..................................................... 61

6.2 ಮೌಲ್ಯಮಾಪನ ಪ್ರಶ್ನೆಗಳು: ..................................................... 62

**7. ಮೌಲ್ಯಮಾಪನ ವಿಧಾನ ........ 65**
7.1 ಮೌಲ್ಯಮಾಪನ ವಿನ್ಯಾಸ ........ 65
7.2 ಮಾದರಿ ಆಯ್ಕೆ ವಿನ್ಯಾಸ ........ 66
7.3 ಮಾದರಿ ಆಯ್ಕೆ ಪ್ರಕ್ರಿಯೆ ........ 66

**8. ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆಯ ಸಾಧನಗಳು ........ 69**
8.1 ಅಧ್ಯಯನದ ಕೆಲವು ಮಿತಿಗಳು ........

**9. ಮೌಲ್ಯಮಾಪನ ಮಾತೃಕೆ ........ 71**
9.1 ಮೌಲ್ಯಮಾಪನ ಪೂರ್ವ ಮಾತೃಕೆ ........

**10. ಮೌಲ್ಯಮಾಪನ ಅಧ್ಯಯನದ ಫಲಿತಾಂಶಗಳು ಮತ್ತು ಚರ್ಚೆ ........ 75**
10.1 ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕ ........ 75
10.2 ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯಗಳು ಮತ್ತು ಉದ್ಯೋಗ ಘಟಕದ ಫಲಿತಾಂಶಗಳು ........ 119
10.3 ಕಾರ್ಯಕ್ರಮದ ಒಟ್ಟಾರೆ ಗುರಿ ಮತ್ತು ಉದ್ದೇಶಗಳಿಗೆ ಸಂಬಂಧಿಸಿದಂತೆ: ತರಬೇತಿ ಪಾಲುದಾರರ ಸವಾಲುಗಳು ಮತ್ತು ಅನುಭವಗಳು ........ 158

**11. ತೀರ್ಮಾನಗಳು ಮತ್ತು ಮೌಲ್ಯಮಾಪನೋತ್ತರ ಮಾತೃಕೆ ........ 165**
11.1 ಯಶೋಗಾಥೆಗಳು ........ 165
11.2 ಮೌಲ್ಯಮಾಪನೋತ್ತರ ಮಾತೃಕೆ ........ 177

**12. ನೀತಿ ಶಿಫಾರಸ್ಸುಗಳು ........ 193**
12.1. ಅಲ್ಪಾವಧಿಯ ಗುರಿಗಳು. ........ 193
12.2. ದೀರ್ಘಕಾಲಿಕ ಗುರಿಗಳು ........ 195

ಅನುಬಂಧ 1: ಮೌಲ್ಯಮಾಪನ ಅಧ್ಯಯನದ ಉಲ್ಲೇಖಿತ ನಿಯಮಗಳು ........ 201
ಅನುಬಂಧ 2: ಮೌಲ್ಯಮಾಪನದ ಪ್ರಶ್ನಾವಳಿಗಳು ........ 211
ಅನುಬಂಧ 3: ತರಬೇತಿ ಕೇಂದ್ರವಾಗಿ ಬಳಸಬಹುದಾದ ಖಾಲಿ ಇರುವ ತರಗತಿ ಕೊಠಡಿಗಳ ಪಟ್ಟಿ ........ 219
ಅನುಬಂಧ 4: ಮೌಲ್ಯಮಾಪನ ಅಧ್ಯಯನಕ್ಕೆ ಸಂಬಂದಿಸಿದ ಸಲಹೆಗಳಿಗೆ/ಟೀಕೆಗಳಿಗೆ ಉತ್ತರಗಳು ಮತ್ತು ಅನುಸರಣೆಗಳು ........ 221
ಅನುಬಂಧ 5: ಮೌಲ್ಯಮಾಪನ ಕ್ಷೇತ್ರದ ಛಾಯಚಿತ್ರಗಳು ........ 223

# ಕೋಷ್ಟಕಗಳ ಪಟ್ಟಿ


| ಕ್ರಮ. ಸಂಖ್ಯೆ | ಕೋಷ್ಟಕಗಳು | ಪುಟ ಸಂಖ್ಯೆ |
|---|---|---|
| 1.1 | ಕರ್ನಾಟಕದಲ್ಲಿ 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ (ಯುಪಿಎಸ್ಎಸ್) ವ್ಯಕ್ತಿಗಳಿಗೆ ಕಾರ್ಮಿಕ ಬಲದ ಭಾಗವಹಿಸುವಿಕೆ ದರ, ಕಾರ್ಮಿಕ ಜನಸಂಖ್ಯೆ ಅನುಪಾತ ದರ, ನಿರುದ್ಯೋಗ ದರ ಮತ್ತು ನಿರುದ್ಯೋಗಿಗಳ ಅನುಪಾತ (ಶೇಕಡಾ ದರದಲ್ಲಿ) | 24 |
| 1.2 | ಮಾದರಿ ಜಿಲ್ಲೆಗಳಲ್ಲಿ ತಲಾ ಆದಾಯದ ಪ್ರವೃತ್ತಿಗಳು (2011–12 ರಿಂದ 2017–18) | 26 |
| 2.1 | ದಾಖಲೆ ಚೌಕಟ್ಟು | 30 |
| 4.1 | ರಾಜ್ಯ ಮಟ್ಟದಲ್ಲಿ, 2013–14 ರಿಂದ 2017–18 ಅವಧಿಯಲ್ಲಿ ಬಿಡುಗಡೆಯಾದ ನಿಧಿಗಳು ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು | 33 |
| 4.2 | 2013–14 ರಿಂದ 2017–18 ರವರೆಗೆ ಆಯ್ದ (ಮಾದರಿ) ಜಿಲ್ಲೆಗಳಲ್ಲಿ ಬಿಡುಗಡೆಯಾದ ಹಣ (ಲಕ್ಷಗಳಲ್ಲಿ) ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು | 34 |
| 7.1 | ಉಲ್ಲೇಖದ ನಿಯಮಗಳ ಪ್ರಕಾರ ಪಡೆದ ಮಾದರಿ ಮಾರ್ಗಸೂಚಿಗಳು ಮತ್ತು ಜಿಲ್ಲೆಗಳು ಹಾಗೂ ಫಲಾನುಭವಿಗಳ ಆಯ್ಕೆ: ಸ್ವಯಂ ಉದ್ಯೋಗ ಘಟಕ | 67 |
| 7.2 | ಕೌಶಲ್ಯ ತರಬೇತಿ ಮತ್ತು ನಿಯೋಜನೆಗಾಗಿ ಮಾದರಿ ಆಯ್ಕೆ ಪ್ರಕ್ರಿಯೆ | 67 |
| 7.3 | ಪರಿಮಾಣಾತ್ಮಕ ದತ್ತಾಂಶಕ್ಕಾಗಿ ಮಾದರಿ | 68 |
| 7.4 | ಗುಣಾತ್ಮಕ ದತ್ತಾಂಶ | 68 |
| 10.1.1 | ಮಾದರಿ ಜಿಲ್ಲೆಗಳಲ್ಲಿ ತರಬೇತಿ ಸಂಸ್ಥೆಗಳು (ಸ್ವಯಂ ಉದ್ಯೋಗ) | 76 |
| 10.1.2 | ಮಾದರಿ ಜಿಲ್ಲೆಗಳು ಮತ್ತು ತರಬೇತಿ ಪಡೆದ ಕ್ಷೇತ್ರಗಳು | 78 |
| 10.1.3 | ಮಾದರಿ ಜಿಲ್ಲೆಗಳು ಮತ್ತು ಬ್ಯಾಂಕ್ ಸಾಲಕ್ಕೆ ಅನರ್ಹರಾದ ತರಬೇತಿ ಪಡೆದ ಯುವಕರು | 80 |
| 10.1.4 | ಪ್ರಯೋಜನ ವರ್ಷ ಮತ್ತು ಫಲಾನುಭವಿಗಳ ವಯಸ್ಸು | 83 |
| 10.1.5 | ವಿಭಾಗಗಳು ಮತ್ತು ಜಿಲ್ಲೆಗಳಾದ್ಯಂತ ಗುರುತಿಸಲಾದ ಮತ್ತು ತರಬೇತಿ ಪಡೆದ ಫಲಾನುಭವಿಗಳ ವಯಸ್ಸು | 84 |
| 10.1.6 | ಮಾದರಿಯಲ್ಲಿರುವ ಫಲಾನುಭವಿಗಳ ಲಿಂಗ ಮತ್ತು ಬ್ಯಾಂಕ್ ಸಾಲಗಳಿಗೆ ಅವರ ಅನರ್ಹತೆಯ ಪಾಲು | 86 |
| 10.1.7 | ಮಾದರಿ ಜಿಲ್ಲೆಗಳಾದ್ಯಂತ ಫಲಾನುಭವಿಗಳ ಜಾತಿ | 89 |
| 10.1.8 | ಜಿಲ್ಲೆಗಳಾದ್ಯಂತ ಮಾದರಿಯಲ್ಲಿರುವ ಫಲಾನುಭವಿಗಳ ಶೈಕ್ಷಣಿಕ ಮಟ್ಟ | 92 |
| 10.1.9 | ಮಾದರಿಯಲ್ಲಿರುವ ಜಿಲ್ಲೆಗಳಲ್ಲಿ ಫಲಾನುಭವಿಗಳ ಸ್ವಯಂ ಉದ್ಯೋಗದ ಮುಂಚಿನ ಕ್ಷೇತ್ರಗಳು | 95 |
| 10.1.10 | ಹಿಂದಿನ ಉದ್ಯೋಗ ಮತ್ತು ಯೋಜನೆ ಸುಗಮಗೊಳಿಸಿದ ಸ್ವಯಂ ಉದ್ಯೋಗ | 95 |
| 10.1.11 | ತರಬೇತಿಯ ಗುಣಮಟ್ಟದ ಶ್ರೇಣೀಕರಣ | 98 |
| 10.1.12 | ಜಿಲ್ಲೆ ಮತ್ತು ವಸತಿ ಸೌಲಭ್ಯದ ಗುಣಮಟ್ಟ | 99 |

| | | |
|---|---|---|
| 10.1.13 | ಉದ್ಯಮದ ವಿಧ ಮತ್ತು ಬಳಸಿದ ಸಾಲದ ವ್ಯಾಪ್ತಿ | 102 |
| 10.1.14 | ತರಬೇತಿಯ ನಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ತೆಗೆದುಕೊಂಡ ಸಮಯ | 104 |
| 10.1.15 | ಉದ್ಯಮದ ವಿಧ ಮತ್ತು ತರಬೇತಿಯ ನಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ತೆಗೆದುಕೊಂಡ ಸಮಯ | 106 |
| 10.1.16 | ಉದ್ಯಮದ ವಿಧ ಮತ್ತು ನಿರೀಕ್ಷಿತ ಮಾಸಿಕ ಆದಾಯ | 107 |
| 10.1.17 | ಉದ್ಯಮದ ವಿಧ ಮತ್ತು ನಿರೀಕ್ಷೆ ಪ್ರಕಾರ ಆದಾಯ | 109 |
| 10.1.18 | ಜಿಲ್ಲೆಗಳು ಮತ್ತು ನಿರೀಕ್ಷೆಗಳ ಪ್ರಕಾರ ಆದಾಯ | 112 |
| 10.1.19 | ಮಾದರಿ ಜಿಲ್ಲೆಗಳಲ್ಲಿ ಸ್ವಯಂ ಉದ್ಯೋಗ ಉದ್ಯಮದ ಪ್ರಸ್ತುತ ಸ್ಥಿತಿಗತಿ | 113 |
| 10.1.20 | ಉದ್ಯಮದ ವಿಧ ಮತ್ತು ಸ್ವಯಂ ಉದ್ಯೋಗ ಉದ್ಯಮದ ಪ್ರಸ್ತುತ ಸ್ಥಿತಿಗತಿ | 114 |
| 10.1.21 | ಸ್ವಯಂ ಉದ್ಯೋಗ ಉದ್ಯಮದ ಪ್ರಯೋಜನ ಮತ್ತು ಪ್ರಸ್ತುತ ಸ್ಥಿತಿಗತಿಯ ವರ್ಷ | 115 |
| 10.2.1 | ಆಡಳಿತಾತ್ಮಕ ವಿಭಾಗ, ಜಿಲ್ಲೆಗಳು ಮತ್ತು ಪ್ರಯೋಜನದ ವರ್ಷದ ಪ್ರಕಾರ ಫಲಾನುಭವಿ ಮಾದರಿಗಳು | 119 |
| 10.2.2 | ಜಿಲ್ಲೆಗಳಾದ್ಯಂತ ಫಲಾನುಭವಿಗಳ ಲಿಂಗ ಮತ್ತು ವಯಸ್ಸಿನ ಗುಂಪು | 120 |
| 10.2.3 | ಮಾದರಿ ಜಿಲ್ಲೆಗಳಾದ್ಯಂತ ಫಲಾನುಭವಿಗಳ ಜಾತಿ ವರ್ಗಗಳು | 121 |
| 10.2.4 | ಜಿಲ್ಲೆಗಳಾದ್ಯಂತ ಫಲಾನುಭವಿಗಳು ಮತ್ತು ಅವರ ಶಿಕ್ಷಣ ಅರ್ಹತೆಗಳು | 123 |
| 10.2.5 | ಜಿಲ್ಲೆಗಳಾದ್ಯಂತ ರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ಮಾಹಿತಿಯ ಮೂಲ | 123 |
| 10.2.6 | ಮಾದರಿ ಜಿಲ್ಲೆಗಳಲ್ಲಿ ಪಡೆದ ಕೌಶಲ್ಯ ತರಬೇತಿ | 126 |
| 10.2.7 | ಆಡಳಿತಾತ್ಮಕ ವಿಭಾಗಗಳಾದ್ಯಂತ ಪಡೆದ ಕೌಶಲ್ಯ ತರಬೇತಿ | 127 |
| 10.2.8 | ಪಡೆದ ಕೌಶಲ್ಯ ತರಬೇತಿ ಮತ್ತು ಫಲಾನುಭವಿಗಳ ಸಾಮಾಜಿಕ ಹಿನ್ನೆಲೆ | 129 |
| 10.2.9 | ಲಿಂಗ ಮತ್ತು ಪಡೆದ ಕೌಶಲ್ಯ ತರಬೇತಿ | 130 |
| 10.2.10 | ವಯಸ್ಸು ಮತ್ತು ಪಡೆದ ಕೌಶಲ್ಯ ತರಬೇತಿ | 131 |
| 10.2.11 | ಪಡೆದ ಕೌಶಲ್ಯ ತರಬೇತಿ ಮತ್ತು ಶೈಕ್ಷಣಿಕ ಅರ್ಹತೆ | 132 |
| 10.2.12 | ವಿಭಾಗ ಮತ್ತು ಜಿಲ್ಲೆಗಳು, ಮತ್ತು ಫಲಾನುಭವಿಗಳ ಪೂರ್ವ ಉದ್ಯೋಗ ಸ್ಥಿತಿಗತಿ | 134 |
| 10.2.13 | ಮಾದರಿ ಜಿಲ್ಲೆಗಳಲ್ಲಿ ತರಬೇತಿಯ ಸಮಯದಲ್ಲಿ ವಾಸ್ತವ್ಯ | 136 |
| 10.2.14 | ಜಿಲ್ಲೆಗಳು ಮತ್ತು ಬೋಧನೆಗಾಗಿ ಉಪಗ್ರಹ ತಂತ್ರಜ್ಞಾನದ ಬಳಕೆ | 137 |
| 10.2.15 | ಪಡೆದ ಕೌಶಲ್ಯ ತರಬೇತಿ ಮತ್ತು ನಗರಕ್ಕೆ ವಲಸೆ ಹೋಗುವ ಉದ್ದೇಶ | 139 |
| 10.2.16 | ಜಿಲ್ಲೆಗಳಲ್ಲಿ ಪಡೆಯಲಾಗಿರುವ ಉದ್ಯೋಗ ನಿಯೋಜನೆ | 142 |
| 10.2.17 | ಬೆಳಗಾವಿಯಲ್ಲಿ ಪಡೆದ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನಿಯೋಜನೆ | 143 |
| 10.2.18 | ಪಡೆದ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನಿಯೋಜನೆ | 145 |
| 10.2.19 | ಪಡೆದುಕೊಂಡಿರುವ ಕೌಶಲ್ಯ ಮತ್ತು ಉದ್ಯೋಗ ಹೊಂದಾಣಿಕೆ ಅಥವಾ ಹೊಂದಾಣಿಕೆ | 146 |

| | | |
|---|---|---|
| | ಇಲ್ಲದಿರುವುದು | |
| 10.2.20 | ಪಡೆದುಕೊಂಡಿರುವ ಕೌಶಲ್ಯ ಮತ್ತು ಉದ್ಯೋಗ ಹೊಂದಾಣಿಕೆ ಅಥವಾ ಹೊಂದಾಣಿಕೆಯಾಗದಿರುವುದು | 147 |
| 10.2.21 | ಕೌಶಲ್ಯ ಪಡೆದಿದ್ದಾರೆ ಆದರೆ ನಿಯೋಜನೆ ಇಲ್ಲ – ಅವರು ಏನು ಮಾಡುತ್ತಿದ್ದಾರೆ? | 149 |
| 10.2.22 | ತರಬೇತಿ ಮತ್ತು ಉದ್ಯೋಗಕ್ಕೆ ಮೊದಲು ಅಂತರ | 150 |
| 10.2.23 | ಪಡೆದ ಕೌಶಲ್ಯ ತರಬೇತಿ ಮತ್ತು ಉದ್ಯೋಗ ಪಡೆಯುವ ಮೊದಲಿನ ಅಂತರ | 152 |
| 10.2.24 | ಮಾದರಿ ಜಿಲ್ಲೆಗಳಲ್ಲಿ ನಿಜವಾದ ಆದಾಯ | 154 |
| 10.2.25 | ಪಡೆದ ಕೌಶಲ್ಯ ತರಬೇತಿ ಮತ್ತು ನಿಜವಾದ ಆದಾಯ | 155 |
| 10.2.26 | ನಿರೀಕ್ಷಿತ ಮತ್ತು ನೈಜ ಆದಾಯದ ನಡುವಿನ ವ್ಯತ್ಯಾಸ | 156 |

# ರೇಖಾಚಿತ್ರಗಳ ಪಟ್ಟಿ


| ಕ್ರಮ. ಸಂಖ್ಯೆ | ರೇಖಾಚಿತ್ರಗಳು | ಪುಟ ಸಂಖ್ಯೆ |
|---|---|---|
| 1.1 | 1993 ರಿಂದ 2017–18ರವರೆಗೆ ಕಾರ್ಮಿಕ ಬಲದ ಭಾಗವಹಿಸುವಿಕೆ ದರದಲ್ಲಿ ಬದಲಾವಣೆಗಳು (ಅಖಿಲ ಭಾರತ) | 23 |
| 2.1 | ದಾಖಲೆ ಚೌಕಟ್ಟು | 29 |
| 5.1 | ಕೌಶಲ ಅಭಿವೃದ್ಧಿಯ ಇತಿಹಾಸ : ಒಂದು ಕ್ಷಿಪ್ರ ಚಿತ್ರ | 41 |
| 10.1.1 | ಕೃಷಿಯಲ್ಲದ ಸ್ವಯಂ ಉದ್ಯೋಗ ತರಬೇತಿ ಹಂಚಿಕೆ | 79 |
| 10.1.1ಎ | ಬ್ಯಾಂಕ್ ಸಾಲಕ್ಕೆ ಅನರ್ಹವಾದ ಮಾದರಿ ಫಲಾನುಭವಿಗಳು | 81 |
| 10.1.2 | ಮಾದರಿ ಜಿಲ್ಲೆಯಾದ್ಯಂತ ವಯಸ್ಸು ಮತ್ತು ಅನರ್ಹತೆಯ ದರ | 85 |
| 10.1.3 | ಸಾಮಾಜಿಕ ಗುಂಪುಗಳ ದುರ್ಬಲತೆ (ಸ್ವಯಂ ಉದ್ಯೋಗ ಘಟಕ) | 88 |
| 10.1.4 | ಮಾದರಿಯಲ್ಲಿರುವ ಫಲಾನುಭವಿಗಳಲಿಂಗ ಮತ್ತು ಶಿಕ್ಷಣ | 91 |
| 10.1.5 | ತರಬೇತಿ ಗುಣಮಟ್ಟದ ಶ್ರೇಣೀಕರಣ | 97 |
| 10.1.6 | ತರಬೇತಿ ಪಡೆದ ನಂತರ ಉದ್ಯಮವನ್ನು ಪ್ರಾರಂಭಿಸಲು ತೆಗೆದುಕೊಂಡ ಸಮಯ | 105 |
| 10.1.7 | ಸ್ವಯಂ ಉದ್ಯೋಗದ ಮೂಲಕ ನಿರೀಕ್ಷಿತ ಮತ್ತು ವಾಸ್ತವಿಕ ಆದಾಯದ ನಡುವಿನ ವ್ಯತ್ಯಾಸ | 109 |
| 10.1.8 | ಉದ್ಯಮಗಳಾದ್ಯಂತ ನಿರೀಕ್ಷಿತ ಮತ್ತು ವ್ಯಕ್ತಪಡಿಸಿರುವ ಆದಾಯ | 110 |
| 10.1.9ಎ | ಬ್ಯಾಂಕ್‌ನಿಂದ ಎರವಲು ಪಡೆದವರಲ್ಲಿ ನಿರೀಕ್ಷಿತ ಮತ್ತು ವಾಸ್ತವಿಕ ಆದಾಯ | 110 |
| 10.1.9ಬಿ | ಆಡಳಿತ ವಿಭಾಗಗಳಾದ್ಯಂತ ನಿರೀಕ್ಷಿತ ಮತ್ತು ವಾಸ್ತವಿಕ ಆದಾಯದ ನಡುವಿನ ವ್ಯತ್ಯಾಸ | 111 |
| 10.1.10 | ಈಲ್ಲೆಯಲ್ಲಿ ನಿರೀಕ್ಷಿಸಿದಂತೆ ಸ್ವಯಂ ಉದ್ಯೋಗ ಆದಾಯ | 111 |
| 10.1.11 | ಈಲ್ಲೆಯಾದ್ಯಂತ ಉದ್ಯಮಗಳ ಪ್ರಸ್ತುತ ಸ್ಥಿತಿಗತಿ | 113 |
| 10.1.12 | ಉದ್ಯಮಗಳ ವಿಧ ಮತ್ತು ಪ್ರಸ್ತುತ ಸ್ಥಿತಿಗತಿ | 115 |
| 10.1.13 | ಲಾಭದ ವರ್ಷ ಮತ್ತು ಉದ್ಯಮಗಳ ಪ್ರಸ್ತುತ ಸ್ಥಿತಿಗತಿ | 116 |
| 10.2.1 | ತರಬೇತಿ ಸಮಯದಲ್ಲಿ ವಾಸ್ತವ್ಯ | 135 |
| 10.2.2 | ಪಡೆದುಕೊಂಡ ಕೌಶಲ್ಯಗಳು ಮತ್ತು ವಲಸೆಯ ಉದ್ದೇಶ | 140 |
| 10.2.3 | ಈಲ್ಲೆಗಳಲ್ಲಿ ಉದ್ಯೋಗ ನಿಯೋಜನೆ | 144 |
| 10.2.4 | ಸ್ವೀಕರಿಸಿದ ಕೌಶಲ್ಯ ತರಬೇತಿ ಮತ್ತು ಪಡೆದುಕೊಂಡ ಉದ್ಯೋಗ ನಿಯೋಜನೆ | 143 |

# ಕಾರ್ಯಕಾರಿ ಸಾರಾಂಶ

ಬಡತನ ನಿರ್ಮೂಲನೆ ಮತ್ತು ಉದ್ಯೋಗ ಸೃಷ್ಟಿಯನ್ನು ಭಾರತದ ಆರ್ಥಿಕ ಯೋಜನೆ ಮತ್ತು ನೀತಿಯ ಅವಳಿ ಉದ್ದೇಶಗಳಾಗಿ ಅಳವಡಿಸಿಕೊಳ್ಳಲಾಗಿದೆ. 21ನೇ ಶತಮಾನದಲ್ಲಿ ಇದಕ್ಕೆ ಸಮಾಜದಲ್ಲಿ ಯುವಕರು ಕೌಶಲ್ಯ ಅಭಿವೃದ್ಧಿ ಮತ್ತು ಸಂಗ್ರಹಣೆಯ ಅಗತ್ಯವಿದೆ. ಕರ್ನಾಟಕ ಸರ್ಕಾರದ ಪ್ರಾಯೋಜಿತ ಯೋಜನೆಯಾದ ರಾಜೀವ್ ಗಾಂಧಿ ಚೈತನ್ಯ ಯೋಜನೆ 2013–14ರಿಂದ ರಾಜ್ಯದಲ್ಲಿ ಉದ್ಯೋಗ – ಸ್ವಯಂ ಉದ್ಯೋಗವಾಗಲಿ ಅಥವಾ ವೇತನ–ಉದ್ಯೋಗವಾಗಲಿ– ಸೃಷ್ಟಿಸುವ ಗುರಿಯನ್ನು ಹೊಂದಿದೆ. ರಾಜೀವ್ ಗಾಂಧಿ ಚೈತನ್ಯ ಯೋಜನೆ ಪ್ರತಿ ವರ್ಷ ಸುಮಾರು ಮೂರು ಲಕ್ಷ ಗ್ರಾಮೀಣ ಯುವಕರನ್ನು ನೇಮಿಸಿಕೊಳ್ಳುವ ಗುರಿಯನ್ನು ಹೊಂದಿದೆ.

http://koushalya.karnataka.gov.in/ ಯಿಂದ ಪಡೆದ ದತ್ತಾಂಶದ ಪ್ರಕಾರ ಫೆಬ್ರವರಿ 28, 2020ರ ವೇಳೆಗೆ 93,887 ಯುವಕರಿಗೆ ತರಬೇತಿ ನೀಡಲಾಗಿದೆ ಮತ್ತು ಸ್ವಯಂ ಉದ್ಯೋಗ ಘಟಕದ ಅಡಿಯಲ್ಲಿ ಸಾಲಗಳನ್ನು ಪಡೆದಿದ್ದಾರೆ ಮತ್ತು 3695 ಫಲಾನುಭವಿಗಳಿಗೆ ಕೌಶಲ್ಯ ಮತ್ತು ಉದ್ಯಮಶೀಲತೆ ಘಟಕದ ಅಡಿಯಲ್ಲಿ ತರಬೇತಿ ನೀಡಲಾಗಿದೆ. ಮೇಲೆ ಹೇಳಿದಂತೆ ಒಟ್ಟು 99.58 ಕೋಟಿ ರೂ.ಗಳನ್ನು ಚಟುವಟಿಕೆಗಳಿಗೆ ಖರ್ಚು ಮಾಡಲಾಗಿದೆ. ಈ ಕೆಳಗಿನ ಉದ್ದೇಶಗಳೊಂದಿಗೆ ಮೌಲ್ಯಮಾಪನವನ್ನು ಕೈಗೊಳ್ಳಲಾಗಿದೆ.

1. ಅರ್ಥ ಮಾಡಿಕೊಳ್ಳಲು ಮತ್ತು ನಕ್ಷೆ ಮಾಡಲು
2. ಕರ್ನಾಟಕದ ನಿರುದ್ಯೋಗಿ ಯುವಕರ ಜನಸಂಖ್ಯಾ ಗುಣಲಕ್ಷಣಗಳು ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರ ಪ್ರವೇಶಾವಕಾಶ ಮತ್ತು ಇಚ್ಛೆ /ಸಮ್ಮತಿ
3. ಯೋಜನೆಯ ಅನುಷ್ಠಾನದ ಮೊದಲು ಮತ್ತು ನಂತರ ಗ್ರಾಮೀಣ ನಿರುದ್ಯೋಗಿ ಯುವಕರ ಸ್ಥಿತಿಗತಿಯನ್ನು ವಿಶ್ಲೇಷಿಸಲು ಮತ್ತು ದಾಖಲಿಸಲು.
4. ಫಲಾನುಭವಿಗಳಲ್ಲಿ ಆದಾಯ ಉತ್ಪಾದನಾ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ ಕಾರ್ಯಕ್ರಮ ಅನುಷ್ಠಾನ ನಿಯೋಗಗಳ ಮತ್ತು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳ ತರಬೇತಿ ಚಟುವಟಿಕೆಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸಲು ಮತ್ತು ಪ್ರಮಾಣೀಕರಿಸಲು.
5. ಫಲಾನುಭವಿ ಕುಟುಂಬಗಳ ಜೀವನೋಪಾಯ ಮತ್ತು ಆದಾಯ ಸ್ಥಿತಿಗತಿಯ ಮೇಲೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಪ್ರಭಾವವನ್ನು ನಿರ್ಣಯಿಸುವುದು.
6. ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಸ್ವಯಂ ಉದ್ಯೋಗ ಮತ್ತು ವೇತನ ಉದ್ಯೋಗ ಉಪಕ್ರಮಗಳ ಸುಸ್ಥಿರತೆಯನ್ನು ಮೌಲ್ಯಮಾಪನ ಮಾಡುವುದು.
7. ಬ್ಯಾಂಕ್ ಸಾಲಗಳನ್ನು ಪಡೆಯುವಲ್ಲಿ ಅಂತರ್ಗತವಾಗಿರುವ ಅಡೆತಡೆಗಳನ್ನು ನಿರ್ಣಯಿಸುವುದು ಮತ್ತು ಮರುಪಾವತಿಯ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದು.
8. ತರಬೇತಿ ಪಡೆದ ಯುವಕರಿಗೆ ಸೃಷ್ಟಿಸಲಾದ ನಿಯೋಜನೆಗಳು ಮತ್ತು ಉದ್ಯೋಗಾವಕಾಶಗಳನ್ನು ಪರಿಶೀಲಿಸಲು.

9. ಫಲಾನುಭವಿಗಳ ಆಯ್ಕೆ, ತರಬೇತಿ, ಬೆಂಬಲ, ಉಸ್ತುವಾರಿ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳ ಕಾರ್ಯವಿಧಾನದಲ್ಲಿ ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳು ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಎದುರಿಸುತ್ತಿರುವ ಅನುಷ್ಠಾನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸುವುದು.
10. ಈ ಅಧ್ಯಯನವು ಯೋಜನೆಯ ಕಾರ್ಯಸಾಧ್ಯತೆಯನ್ನು ಅರ್ಥಮಾಡಿಕೊಳ್ಳುವ ಬಗ್ಗೆ ಬೆಳಕು ಚೆಲ್ಲಲು ಮತ್ತು ಅದರ ಸುಧಾರಣೆಗೆ ಕ್ರಮಗಳನ್ನು ಸೂಚಿಸಲು ಉದ್ದೇಶಿಸಿದೆ.

## ಮೌಲ್ಯಮಾಪನ ವಿಧಾನ:

ಈ ಮೌಲ್ಯಮಾಪನ ಅಧ್ಯಯನಕ್ಕೆ ಕಡ್ಡಾಯಗೊಳಿಸಿದಂತೆ ಗುಣಾತ್ಮಕ ಮತ್ತು ಪರಿಮಾಣಾತ್ಮಕ ದತ್ತಾಂಶ ಎರಡನ್ನೂ ಸಮತೋಲನಗೊಳಿಸುವ ತ್ರಿಕೋನ ವಿಧಾನವನ್ನು (ಮಿಶ್ರ ವಿಧಾನ) ಬಳಸುವ ನೈದಾನಿಕ ಸಂಶೋಧನಾ ವಿನ್ಯಾಸವನ್ನು ಒಳಗೊಂಡ ಅರೆ–ಪ್ರಾಯೋಗಿಕ ಉಪಕ್ರಮ ವಿನ್ಯಾಸವನ್ನು ಅನುಸರಿಸಲಾಗಿದೆ. ಇದು ಅರೆ–ಪ್ರಾಯೋಗಿಕವಾಗಿದೆ ಏಕೆಂದರೆ ಅಧ್ಯಯನವು ಯಾವುದೇ ನಿರ್ದಿಷ್ಟ ಯಾದೃಚ್ಛಿಕ ನಿಯಂತ್ರಣ ಸಮೂಹವಿಲ್ಲದೆ ಉದ್ದೇಶಿತ ಸಮೂಹದ ಮೇಲೆ ಕಾರ್ಯ ಚಟುವಟಿಕೆ ಪ್ರಭಾವವನ್ನು ಮೌಲ್ಯಮಾಪನ ಮಾಡುತ್ತದೆ. ಕಾರ್ಯ ಚಟುವಟಿಕೆಗೆ ಗುರಿಯಾಗದವರ ಒಂದು ಸಣ್ಣ ವಿಭಾಗವನ್ನು ನಿಯಂತ್ರಿತ ಗುಂಪಾಗಿ ಆಯ್ಕೆ ಮಾಡಲಾಗಿದೆ.

ಅಧ್ಯಯನವು ಈ ಕೆಳಗಿನ ಹಂತಗಳನ್ನು ಒಳಗೊಂಡ ಪ್ರಮಾಣಿತ ಕಾರ್ಯವಿಧಾನಗಳನ್ನು ಅನುಸರಿಸಿದೆ.

- ಕ್ಷೇತ್ರದಲ್ಲಿ ಲಭ್ಯವಿರುವ ಸಾಹಿತ್ಯದ ಅವಲೋಕನ.
- ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ ವಿವಿಧ ವರದಿಗಳು, ಸಮೀಕ್ಷೆಗಳು ಮತ್ತು ದತ್ತಾಂಶಗಳನ್ನು ಬಳಸಿಕೊಂಡು ದ್ವಿತೀಯ ದತ್ತಾಂಶದ ವಿಶ್ಲೇಷಣೆ.
- ವಿನ್ಯಾಸಗೊಳಿಸಿದ ಸಂದರ್ಶನ ಅನುಸೂಚಿಯ ಮೂಲಕ ಪ್ರಾಥಮಿಕ ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ.
- ಕೇಂದ್ರೀಕೃತ ಗುಂಪು ಚರ್ಚೆಗಳು – ಫಲಾನುಭವಿಗಳು, ಮಧ್ಯಸ್ಥಗಾರರು, ಸರ್ಕಾರಿ ಅಧಿಕಾರಿಗಳು.
- ದತ್ತಾಂಶವನ್ನು ಸರಳ ಸಂಖ್ಯಾಶಾಸ್ತ್ರೀಯ ತಂತ್ರಗಳಾದ ಶೇಕಡಾ ದರ, ಸರಾಸರಿಗಳ ತುಲನೆ ಮತ್ತು ಸರಳ ಸಹಸಂಬಂಧಗಳನ್ನು ಬಳಸಿಕೊಂಡು ದತ್ತಾಂಶ ಸಂಕಲನ ಮತ್ತು ವಿಶ್ಲೇಷಣೆ ಮಾಡಲಾಗಿದೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯಲ್ಲಿ ಎರಡು ಘಟಕಗಳಿವೆ– ಸ್ವಯಂ ಉದ್ಯೋಗ ಮತ್ತು ಕೌಶಲ್ಯ ತರಬೇತಿ ಹಾಗೂ ಉದ್ಯೋಗ ಎರಡೂ ಘಟಕಗಳ ಮೇಲೆ ಕೇಂದ್ರೀಕರಿಸಬೇಕಾಗಿರುವುದರಿಂದ ಎರಡು ಪ್ರತ್ಯೇಕ ಮಾದರಿಗಳ ಸೆಟ್‌ಗಳನ್ನು ಆಯ್ಕೆ ಮಾಡಲಾಗಿದೆ. ರಾಜ್ಯದ ಆಡಳಿತ ವಿಭಾಗಗಳಿಂದ ಪ್ರತಿ ಘಟಕಕ್ಕೂ ಎಂಟು ಜಿಲ್ಲೆಗಳ ಎರಡು ಸೆಟ್‌ಗಳನ್ನು ಆಯ್ಕೆ ಮಾಡಲಾಗಿದೆ. ಅಧ್ಯಯನಕ್ಕಾಗಿ ಆಯ್ಕೆ ಮಾಡಲಾದ ಮಾದರಿಯಲ್ಲಿ 2013 ರಿಂದ 2017ರ ಅವಧಿಯಲ್ಲಿದ್ದ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ 2046 ಫಲಾನುಭವಿಗಳು ಮತ್ತು ಕೌಶಲ್ಯ ತರಬೇತಿ ಹಾಗೂ ಉದ್ಯೋಗ ಘಟಕದ 2305 ಫಲಾನುಭವಿಗಳು ಇದ್ದಾರೆ. ಒಟ್ಟು ನಮೂನೆಯು 4351 ಫಲಾನುಭವಿಗಳನ್ನು ಒಳಗೊಂಡಿದೆ.

ನಮೂನೆ ಆಯ್ಕೆಯಲ್ಲಿ ಸಂಭಾವ್ಯ ಗಾತ್ರದ ಅನುಪಾತೀಯ ಮಾದರಿ ತಂತ್ರವನ್ನು ಬಳಸಲಾಗಿದೆ. ಇದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು, ಅಲ್ಪಸಂಖ್ಯಾತರು, ಅಂಗವಿಕಲರು, ಮಹಿಳೆಯರು – ಈ ವರ್ಗಗಳ ಸಮಂಜಸ ಪ್ರಾತಿನಿಧ್ಯತೆ ಇದೆ ಎಂಬುದನ್ನು ಖಚಿತಪಡಿಸಿದೆ. ಜಿಲ್ಲಾ ಹಂತದಲ್ಲಿ ಫಲಾನುಭವಿಗಳಲ್ಲದವರಲ್ಲಿ ನಮೂನೆಯ 1 ಪ್ರತಿಶತ ಭಾಗದಷ್ಟು ಮಂದಿಯನ್ನು ನಿಯಂತ್ರಿತ ಗುಂಪಾಗಿ ಆಯ್ಕೆ ಮಾಡಲಾಗಿದೆ. ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಮತ್ತು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳು ತಯಾರಿಸಿದ ಕಾರ್ಯಕ್ರಮಕ್ಕೆ ದಾಖಲು ಮಾಡಿಕೊಂಡ ಅಥವಾ ನೋಂದಾಯಿಸಿಕೊಂಡ ಆದರೆ ಕಾರ್ಯಕ್ರಮದ ನಂತರದ ಹಂತಗಳಿಗೆ ಮುಂದುವರಿಸಲಾಗದ ಅಭ್ಯರ್ಥಿಗಳ ಪಟ್ಟಿಯ ಆಧಾರದ ಮೇಲೆ ನಿಯಂತ್ರಿತ ಗುಂಪನ್ನು ನಿಗದಿ ಮಾಡಲಾಗಿದೆ.

## <u>ಯೋಜನೆಯ ಸ್ವಯಂ ಉದ್ಯೋಗ ಘಟಕ ಕುರಿತ ಫಲಿತಾಂಶಗಳು:</u>

**ಸಾಮಾಜಿಕ ಮತ್ತು ಜನಸಂಖ್ಯಾ ಅಂಶಗಳು:**

- 35 ವರ್ಷ ಮೇಲ್ಪಟ್ಟವರ ಗುಂಪುಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಅರ್ಹತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿಲ್ಲ. ಕನಿಷ್ಠ 9 ಪ್ರತಿಶತ ಫಲಾನುಭವಿಗಳು ಹೆಚ್ಚಿನ ವಯಸ್ಸಿನವರಾಗಿದ್ದಾರೆ.
- ಲಿಂಗ ವಿತರಣೆಗೆ ಸಂಬಂಧಿಸಿದಂತೆ, ಕೇವಲ 28.9 ಪ್ರತಿಶತ ಫಲಾನುಭವಿಗಳು ಮಹಿಳೆಯರಿದ್ದಾರೆ. ಹೈದರಾಬಾದ್ ಕರ್ನಾಟಕ ವಲಯದ ಜಿಲ್ಲೆಗಳಾದ ಯಾದಗಿರಿ (7.69) ಮತ್ತು ಕಲಬುರಗಿ (16.86)ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆಯಿದ್ದರೆ, ಉಡುಪಿ (72.73) ಮತ್ತು ಬೆಂಗಳೂರು–ನಗರ (51.52) ದಲ್ಲಿ ಅತಿ ಹೆಚ್ಚಾಗಿದೆ. ಕೇಂದ್ರೀಕೃತ ಸಮೂಹ ಚರ್ಚೆಗಳ ಸಮಯದಲ್ಲಿ ಮಹಿಳಾ ಫಲಾನುಭವಿಗಳ ಬೇಡಿಕೆಗಳಲ್ಲಿ ಒಂದಾದ ಒಂದು ವಾರದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವ ಕಡ್ಡಾಯ ಅಗತ್ಯವನ್ನು ಸಡಿಲಿಕೆ ಮಾಡಿದೆ. ಹೆಚ್ಚಿನ ಸ್ವಯಂ ಉದ್ಯೋಗ ವ್ಯಾಪಾರಗಳಲ್ಲಿ ಅಗತ್ಯವಿರುವ ಕೌಶಲ್ಯಗಳನ್ನು ಅವರು ಈಗಾಗಲೇ ಹೊಂದಿದ್ದಾರೆ ಎಂದು ಅವರು ನಂಬುತ್ತಾರೆ
- ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವು ನಮೂನೆಯಲ್ಲಿ ಶೇಕಡಾ 27.66 ರಷ್ಟಿದೆ. ಆದರೆ ನಿಗದಿಪಡಿಸಿದ ಮಿತಿ 7.5 ಪ್ರತಿಶತಕ್ಕೂ ಹೆಚ್ಚಿನ ಪ್ರಾತಿನಿಧ್ಯ ನೀಡಿರುವುದು ಸ್ವಾಗತಾರ್ಹವಾಗಿದೆ. ಧಾರವಾಡ (9.92 ಪ್ರತಿಶತ), ಚಿತ್ರದುರ್ಗ (17.03 ಪ್ರತಿಶತ), ಮತ್ತು ಯಾದಗಿರಿ (19.05 ಪ್ರತಿಶತ) –ಈ ಮೂರು ಜಿಲ್ಲೆಗಳಲ್ಲಿ ಈ ವಿಷಯದಲ್ಲಿ ಕೊರತೆ ಕಂಡುಬಂದಿದೆ.
- ಅಧ್ಯಯನ ಮಾಡಿದ ಎಲ್ಲಾ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡ (6.09) ಪ್ರಾತಿನಿಧ್ಯವು ಉದ್ದೇಶಿತ 9% ಕ್ಕಿಂತ ಕಡಿಮೆ ಇದೆ. ಫಲಾನುಭವಿಗಳಲ್ಲಿ ಶೇಕಡಾ 95 ಪ್ರತಿಶತ ಹಿಂದೂಗಳು, ಕೇವಲ 3.4% ಮುಸ್ಲಿಮರು ಮತ್ತು 1.5% ಕ್ರಿಶ್ಚಿಯನ್ನರು ಇದ್ದಾರೆ.
- ಶೈಕ್ಷಣಿಕ ಅರ್ಹತೆಯ ಮೇಲೆ, 40.4 ಪ್ರತಿಶತ ಫಲಾನುಭವಿಗಳು ಪ್ರೌಢ ಶಾಲೆಯಿಂದ ಉತ್ತೀರ್ಣರಾಗಿದ್ದಾರೆ. ಮಹಿಳೆಯರು ಉತ್ತಮ ಅರ್ಹತೆ ಹೊಂದಿದ್ದಾರೆ.

- ಅನೇಕ ಸ್ಥಳಗಳಲ್ಲಿ ಪೋಷಕರು ತಮ್ಮ ಹೆಣ್ಣು ಮಕ್ಕಳ ಹೆಸರನ್ನು ಫಲಾನುಭವಿಗಳಾಗಿ ಪ್ರಾಯೋಜಿಸಿದ ಪ್ರವೃತ್ತಿ ಇತ್ತು, ಬಹಳಷ್ಟು ಮಟ್ಟಿಗೆ ಅವರು ಮಾತ್ರ ಪಂಚಾಯಿತಿ ಅಥವಾ ರಾಜ್ಯದ ಮೂಲಕ ಯಾವುದೇ ಪ್ರಯೋಜನವನ್ನು ಪಡೆಯದವರಾಗಿರುತ್ತಾರೆ.
- ಸ್ವಯಂ ಉದ್ಯೋಗ ಉದ್ಯಮಕ್ಕಾಗಿ ಐದು ಯುವಕರ ಜಂಟಿ ಹೊಣೆಗಾರಿಕೆ ಗುಂಪನ್ನು ಮಾಡುವುದು, ಕಾರ್ಯಾಚರಣೆಗೆ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ ಮತ್ತು ಪ್ರಾಯೋಗಿಕವಲ್ಲ. ಕಾರ್ಯಕ್ರಮದ ಸ್ವಯಂ ಉದ್ಯೋಗ ಘಟಕವು ಸ್ವತಂತ್ರ ಉದ್ಯಮಗಳನ್ನು ಉತ್ತೇಜಿಸುವ ಅಥವಾ ದೊಡ್ಡ ನಿಧಿ ಸಂಗ್ರಹವನ್ನು ಬಳಸಿಕೊಂಡು ಸಹಕಾರಿ ಸಂಘಗಳ ರಚನೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರಬೇಕು.

**ಯೋಜನೆ ಮತ್ತು ತರಬೇತಿಗೆ ಸೇರಲು ಅರ್ಹತಾ ಮಾನದಂಡಗಳನ್ನು ಪೂರೈಸುವುದು:**

- ತರಬೇತಿ ಪಡೆದ ಸಂಭಾವ್ಯ ಫಲಾನುಭವಿಗಳಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಜನರು ಬ್ಯಾಂಕ್ ಸಾಲಗಳಿಗೆ ಅನರ್ಹರು ಎಂದು ಕಂಡುಬಂದಿದೆ. ಮಾದರಿಯಲ್ಲಿರುವ ವಿವಿಧ ಜಿಲ್ಲೆಗಳಲ್ಲಿ, ಈ ಅನರ್ಹರ ಸಂಖ್ಯೆ ಉಡುಪಿ ಜಿಲ್ಲೆಯಲ್ಲಿ 45.83 ಪ್ರತಿಶತದೊಂದಿಗೆ ಅತ್ಯಧಿಕವಾಗಿದೆ, ನಂತರ ಕಲಬುರಗಿ (45.75%), ಬಾಗಲಕೋಟೆ (45.37%), ಮತ್ತು ಯಾದಗಿರಿ (41.27%) ಜಿಲ್ಲೆಗಳಿವೆ. ಧಾರವಾಡ ಮತ್ತು ಹಾಸನದಲ್ಲಿ (ಕ್ರಮವಾಗಿ 31.40 ಮತ್ತು 32.84%) ಕನಿಷ್ಠ ಮಟ್ಟದಲ್ಲಿದೆ.
- 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕಿರಿಯ ಗುಂಪುಗಳಲ್ಲಿ ಮತ್ತು 21 ರಿಂದ 25 ವರ್ಷಗಳ ನಡುವೆ ಫಲಾನುಭವಿಗಳ ಅನರ್ಹತೆಯ ಪ್ರಮಾಣವು ತುಂಬಾ ಕಡಿಮೆ ಎಂದು ಕಂಡುಬಂದಿದೆ. ಮಾದರಿಗಳಲ್ಲಿ ಪ್ರತಿಶತ 185 ರಷ್ಟು 36 ವರ್ಷಗಳಿಗಿಂತ ಹೆಚ್ಚಿನವರು ಇದ್ದಾರೆ ಎಂದು ಕಂಡುಬರುತ್ತದೆ, ಅವರಲ್ಲಿ 25 ಪ್ರತಿಶತಕ್ಕಿಂತ ಹೆಚ್ಚು ಜನರು ಫಲಾನುಭವಿಗಳಾಗಲು ಅನರ್ಹರಾಗಿದ್ದಾರೆ.
- ಚಿತ್ರದುರ್ಗ ಹೊರತುಪಡಿಸಿ ಮಾದರಿಯಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿ ನಿಯೋಜಿತ ಕಾರ್ಯಕ್ರಮ ಬೆಂಬಲಿಸುವ ನಿಯೋಗ ಇದೆ. ಅಧಿಕೃತವಾಗಿ ತೊಡಗಿಸಿಕೊಂಡಿರುವ ಕಾರ್ಯಕ್ರಮ ಬೆಂಬಲಿಸುವ ನಿಯೋಗ ಸಂಭಾವ್ಯ ಸ್ವಯಂ ಉದ್ಯೋಗ ಫಲಾನುಭವಿಗಳಿಗೆ ತರಬೇತಿ ನೀಡುವ ಜವಾಬ್ದಾರಿಯನ್ನು ಎಷ್ಟರ ಮಟ್ಟಿಗೆ ಹೊರಗುತ್ತಿಗೆ ನೀಡಬಹುದು ಎಂಬುದರ ಬಗ್ಗೆ ಅಧಿಕೃತ ಮಾರ್ಗಸೂಚಿಗಳು ಸಂಪೂರ್ಣವಾಗಿ ಸ್ಪಷ್ಟವಾಗಿಲ್ಲ.
- ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ರಾಜಕೀಯ ಹಸ್ತಕ್ಷೇಪ ತುಂಬಾ ಇತ್ತು. ಸರ್ಕಾರೇತರ ಸಂಸ್ಥೆಗಳು ಅಥವಾ ಆಯಾ ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳು ಯಾವುದೇ ಪಾತ್ರವನ್ನು ವಹಿಸುವುದಿಲ್ಲ.

**ತರಬೇತಿಗೆ ಮೊದಲು ಉದ್ಯೋಗ ಸ್ಥಿತಿಗತಿ:**

- ಹೆಚ್ಚಿನ ಫಲಾನುಭವಿಗಳಿಗೆ ಈಗಾಗಲೇ ಉದ್ಯೋಗದಲ್ಲಿರುವ ಕಾರಣ ಸಾಲವು ಹೆಚ್ಚುವರಿ ಸಂಪನ್ಮೂಲವಾಗಿದೆ. ಅನೇಕ ಬಾರಿ ಉದ್ಯಮಶೀಲತೆಯನ್ನು ಮುಂದುವರಿಸಲು ಅವರು ಈಗಾಗಲೇ ಅಗತ್ಯವಿರುವ ಆಸ್ತಿಗಳನ್ನು (ನರ್ಸರಿ, ಸಾವಯವ ಕೃಷಿ, ಹಿಟ್ಟಿನ ಗಿರಣಿ, ಪ್ರಾಣಿಗಳು, ಮೊಬೈಲ್ ಅಂಗಡಿಗಳು) ಹೊಂದಿದ್ದರು. ಯೋಜನೆಯ ಪ್ರಯೋಜನವನ್ನು ಪಡೆಯುವಾಗ ಕೇವಲ 40 ಪ್ರತಿಶತ ಮಂದಿ ಮಾತ್ರ ನಿರುದ್ಯೋಗಿಗಳಾಗಿರುವುದಾಗಿ ಹೇಳಿಕೊಂಡಿದ್ದರು. ಜಿಲ್ಲೆಗಳಾದ್ಯಂತ ಯೋಜನೆಗೆ ಸೇರುವ ಮೊದಲು

ನಿರುದ್ಯೋಗಿ ಎಂದು ಹೇಳಿಕೊಳ್ಳುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಬಾಗಲಕೋಟೆ (71.67 ಪ್ರತಿಶತ) ಅತೀ ಹೆಚ್ಚಿನ ಸ್ಥಾನ ಪಡೆದಿದೆ. ಪ್ರಾಸಂಗಿಕವಾಗಿ ಪ್ರಯೋಜನಗಳನ್ನು ಪಡೆಯುವ ಸಮಯದಲ್ಲಿ ಫಲಾನುಭವಿಗಳನ್ನು ನೇಮಿಸಿದ ಬಗ್ಗೆ ಗರಿಷ್ಠ ಸಂಖ್ಯೆಯ ದೂರುಗಳು ಬಾಗಲಕೋಟೆ ಜಿಲ್ಲೆಯಲ್ಲಿತ್ತು.

**ತರಬೇತಿ ಕಾರ್ಯಕ್ರಮ ಮತ್ತು ಸೌಲಭ್ಯಗಳ ಬಗ್ಗೆ ಫಲಾನುಭವಿಗಳ ಮೌಲ್ಯಮಾಪನ**

- ಬಾಗಲಕೋಟೆ ಜಿಲ್ಲೆಯನ್ನು ಹೊರತುಪಡಿಸಿ ತರಬೇತಿಯ ಬಗ್ಗೆ ಎಲ್ಲಾ ಮಾದರಿ ಜಿಲ್ಲೆಯಲ್ಲೂ ಫಲಾನುಭವಿಗಳಿಗೆ ತರಬೇತಿ ನೀಡಲು ಉಪಗ್ರಹ ತಂತ್ರಜ್ಞಾನವನ್ನು ಬಳಸಿವೆ ಎಂದು ವರದಿಯಾಗಿದೆ. ಇದಲ್ಲದೆ ಅವರು ತರಬೇತಿ ಸೌಲಭ್ಯವನ್ನು 'ತುಂಬಾ ಉತ್ತಮ' (28.82%) ಅಥವಾ 'ಉತ್ತಮ' (26.89%), 42.70% ಸರಾಸರಿ ಎಂದು ಕಂಡುಕೊಂಡಿದ್ದಾರೆ (ಕೋಷ್ಟಕ ಸಂಖ್ಯೆ 10.1.11). ವಸತಿಯ ಗುಣಮಟ್ಟದ ವಿಷಯಕ್ಕೆ ಬಂದಾಗ ಸೌಲಭ್ಯಗಳನ್ನು ಬಳಸಿಕೊಳ್ಳುವವರಲ್ಲಿ 52.1 ಪ್ರತಿಶತದಷ್ಟು ಫಲಾನುಭವಿಗಳು ಅದನ್ನು 'ಕಳಪೆ' (45%) ಅಥವಾ 'ಅತೀ ಕಳಪೆ' (55%) ಎಂದು ಬಣ್ಣಿಸಿದ್ದಾರೆ.
- ಬಹುಪಾಲು (85.25 ಪ್ರತಿಶತ) ಫಲಾನುಭವಿಗಳಿಗೆ ಸಾಲವನ್ನು ಸಂಸ್ಕರಿಸಲು ಸುಮಾರು ಮೂರರಿಂದ ಆರು ತಿಂಗಳುಗಳನ್ನು ತೆಗೆದುಕೊಂಡಿತು. ಕೇವಲ 5.83 ಪ್ರತಿಶತ ಫಲಾನುಭವಿಗಳು ಮಾತ್ರ ತಮ್ಮ ಸಾಲವನ್ನು ಪಡೆದಿದ್ದಾರೆ ಮತ್ತು ತರಬೇತಿಯನ್ನು ಪೂರ್ಣಗೊಳಿಸಿದ ಮೂರು ತಿಂಗಳೊಳಗೆ ತಮ್ಮ ಸ್ವಯಂ ಉದ್ಯೋಗ ಉದ್ಯಮಗಳನ್ನು ಪ್ರಾರಂಭಿಸಿದ್ದಾರೆ.
- ಒಟ್ಟು ಸಾಲದ ಮೊತ್ತವಾದ 50,000 ರೂ.ಗಳಲ್ಲಿ ಬ್ಯಾಂಕಿನ ನಿಜವಾದ ಮೊತ್ತ ಕೇವಲ 40,000 ಎಂದು ಕೇಂದ್ರೀಕೃತ ಸಮೂಹ ಚರ್ಚೆ ಬಹಿರಂಗಪಡಿಸಿದೆ. ಬ್ಯಾಂಕುಗಳು ಸರ್ಕಾರದಿಂದ ಪಡೆಯಬೇಕಾಗಿದ್ದ 10,000 ರೂ.ಗಳ ಸಹಾಯಧನ ಮೊತ್ತವನ್ನು ಆಗಾಗ್ಗೆ ತಡೆಹಿಡಿಯುತ್ತವೆ. ಬದಲಾಗಿ ಈ ಮೊತ್ತವನ್ನು ಉಳಿಸಿಕೊಂಡು ಸಾಲದ ಮರುಪಾವತಿಗೆ ಬಳಸಿಕೊಳ್ಳಲಾಗುತ್ತಿದೆ.

**ಸ್ವಯಂ ಉದ್ಯೋಗಕ್ಕಾಗಿ ಕ್ಷೇತ್ರಗಳ ಆಯ್ಕೆ:**

- ಸುಮಾರು 75 ಪ್ರತಿಶತ ಫಲಾನುಭವಿಗಳು ಪಶುಸಂಗೋಪನೆಗೆ ಸಂಬಂಧಿಸಿದ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ: ಹೈನುಗಾರಿಕೆ (71.23 ಪ್ರತಿಶತ), ಕುರಿ / ಹಂದಿ ಸಾಕಣೆ (ಪಶುಸಂಗೋಪನೆ ಎಂದು ಪಟ್ಟಿ ಮಾಡಲಾಗಿದೆ) 1.93 ಪ್ರತಿಶತ; ಅಥವಾ ಕೋಳಿ ಸಾಕಣಿಕೆ (2.56 ಪ್ರತಿಶತ).

**ತರಬೇತಿಯ ನಂತರ: ಸ್ವಯಂ ಉದ್ಯೋಗ ಮತ್ತು ಜೀವನೋಪಾಯದ ಸುಸ್ಥಿರತೆ ಬಗ್ಗೆ:**

- 56 ಪ್ರತಿಶತಕ್ಕೂ ಹೆಚ್ಚು 'ಫಲಾನುಭವಿಗಳು' ತಮ್ಮ ಆದಾಯದ ನಿರೀಕ್ಷೆಗಳನ್ನು ಮೀರಿದ್ದಾರೆ. 'ನಿರೀಕ್ಷೆಗಿಂತ ಕಡಿಮೆ' ಲಾಭದ ಘಟನೆಗಳು ಪಶುಸಂಗೋಪನೆಯಲ್ಲಿ ಹೆಚ್ಚಿನ ಪ್ರತಿಶತ ಪಾಲನ್ನು ಹೊಂದಿದೆ ಎಂದು ಗಮನಿಸಲಾಗಿದೆ ನಂತರ ವಿದ್ಯುತ್ ಸೇವೆಗಳು, ಹೋಟೆಲ್ / ಚಹಾ ಅಂಗಡಿಗಳು ಆದಾಯದ ಮೂಲಕ ತುಲನಾತ್ಮಕವಾಗಿ ಹೆಚ್ಚಿನ ಯಶಸ್ಸು ಆಟೋ ಚಾಲಕರ (88 ಪ್ರತಿಶತ) ಫಲಾನುಭವಿಗಳಲ್ಲಿ ಅತ್ಯಧಿಕವಾಗಿದೆ ಎಂದು ವರದಿಯಾಗಿದೆ ನಂತರ ಕೃಷಿ (66.7%), ಗಣಕಯಂತ್ರ ಅಂಗಡಿ (60%), ಜವಳಿ ಅಂಗಡಿಗಳು (64%), ಮತ್ತು ವಿದ್ಯುತ್ ಸೇವೆಗಳು (60%).

- ತಮ್ಮ ಉದ್ಯಮವನ್ನು ಪ್ರಾರಂಭಿಸಿದ ನಂತರ 42.87% ಫಲಾನುಭವಿಗಳು 15,001 ರಿಂದ ರೂ. 20.000 ಗಳಿಸುತ್ತಾರೆ. 31.77% 12,001 ರಿಂದ ರೂ. 15,000 ಮತ್ತು 21.56% ರೂ. 12,000 ವರೆಗೆ ಸಂಪಾದಿಸುತ್ತಾರೆ ಮತ್ತು ಸುಮಾರು 4 ಪ್ರತಿಶತ ಫಲಾನುಭವಿಗಳು ಯಾವುದೇ ಸ್ವಯಂ ಉದ್ಯೋಗ ಪ್ರಾರಂಭಿಸಲಿಲ್ಲ.
- ಕೇವಲ 22.49 ಪ್ರತಿಶತ ಯಶಸ್ವಿ ಫಲಾನುಭವಿಗಳು ಮಾತ್ರ ಸ್ವಯಂ ಉದ್ಯೋಗ ಉದ್ಯಮವನ್ನು ಪ್ರಾರಂಭಿಸಿದ್ದಾರೆ ಮತ್ತು ನಮ್ಮ ಅಧ್ಯಯನದ ಸಮಯದಲ್ಲಿ ಅದನ್ನು ಉಳಿಸಿಕೊಂಡಿದ್ದಾರೆ (2068 ರ ಮಾದರಿಯಲ್ಲಿ 465) ಎಂದು ಈ ಮೌಲ್ಯಮಾಪನವು ಕಂಡುಕೊಂಡಿದೆ.
- ಮುಚ್ಚಲ್ಪಟ್ಟ ಉದ್ಯಮಗಳು, ಬ್ಯೂಟಿ ಪಾರ್ಲರ್‌ಗಳು (87.5%), ಹೋಟೆಲ್/ಚಹಾ ಅಂಗಡಿಗಳು (80%), ನಂತರ ಕೋಳಿ ಸಾಕಾಣಿಕೆ ಮತ್ತು ಪಶುಸಂಗೋಪನೆ (63%), ಚಿಲ್ಲರೆ ಮತ್ತು ಜವಳಿ ಅಂಗಡಿಗಳಲ್ಲಿ ಹೆಚ್ಚು ಗಮನಾರ್ಹ ಪಾಲು ಇದೆ.
- ಫಲಾನುಭವಿಗಳ ಮಾದರಿಯಲ್ಲಿರುವ 1234ರಲ್ಲಿ ಕೇವಲ 81 ಜನರು (6.56) ಪಡೆದ ಸಾಲವನ್ನು ಸರ್ವವ್ಯಾಪಿಯಾಗಿ ಬಳಸಿದ್ದಾರೆ.

## ಕೌಶಲ್ಯ-ತರಬೇತಿ ಮತ್ತು ನಿಯೋಜನೆ ಕುರಿತ ಫಲಿತಾಂಶಗಳು:

**ಸಾಮಾಜಿಕ ಮತ್ತು ಜನಸಂಖ್ಯಾ ಅಂಶಗಳು:**

- ಮಹಿಳೆಯರ ಪ್ರಮಾಣವು ಈ ಘಟಕದಲ್ಲಿ ಸ್ವಲ್ಪ ಹೆಚ್ಚು ಸುಮಾರು 40 ಪ್ರತಿಶತ ಮಹಿಳಾ ಫಲಾನುಭವಿಗಳಲ್ಲಿ ಅತ್ಯಂತ ಕಡಿಮೆ ಪಾಲು ರಾಯಚೂರು ಜಿಲ್ಲೆಯಲ್ಲಿದೆ (12.50 ಪ್ರತಿಶತ), ನಂತರ ಕಲಬುರಗಿ 21.61 ಪ್ರತಿಶತ ಹೊಂದಿದೆ. ಮಹಿಳೆಯರು ತುಮಕೂರಲ್ಲಿ (80.61 ಪ್ರತಿಶತ) ಅತಿ ಹೆಚ್ಚು, ಮಂಡ್ಯದಲ್ಲಿ 51.52 ಪ್ರತಿಶತ ಇದ್ದಾರೆ.
- ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಪಾಲ್ಗೊಳ್ಳುವಿಕೆಯ ನಿಗದಿತ 20% ಗಿಂತ ತುಲನಾತ್ಮಕವಾಗಿ ಹೆಚ್ಚಿನ ಪ್ರಮಾಣವಿದೆ (25%) ಎಂಬುದನ್ನು ಕೋಷ್ಟಕ 10.2.3 ಪ್ರಸ್ತುತಪಡಿಸುತ್ತದೆ. ನಿಗದಿತ ಮಿತಿ ಪರಿಶಿಷ್ಟ ಪಂಗಡಗಳಿಗೆ 9 ಪ್ರತಿಶತವಾಗಿದ್ದರೆ ಫಲಾನುಭವಿಗಳ ಮಾದರಿಯಲ್ಲಿ ಅವರ ಉಪಸ್ಥಿತಿ ಕೇವಲ 6.81 ಪ್ರತಿಶತವಾಗಿದೆ.
- ಫಲಾನುಭವಿಗಳ ಧಾರ್ಮಿಕ ಹಂಚಿಕೆಯ ವಿಷಯದಲ್ಲಿ, ಹಿಂದೂಗಳು 92.5% ನೊಂದಿಗೆ ಪ್ರಾಬಲ್ಯ ಸಾಧಿಸಿದ್ದಾರೆ, ನಂತರ ಮುಸ್ಲಿಮರು ಕೇವಲ 6.8% ರಷ್ಟಿದ್ದಾರೆ.
- ಕೌಶಲ್ಯ ಮತ್ತು ಉದ್ಯೋಗ ಕಾರ್ಯಕ್ರಮವು ಹೆಚ್ಚು ಶಿಕ್ಷಣ ಪಡೆಯದವರಿಗೆ ಅಥವಾ ಪಿಯುಸಿ ಮಟ್ಟವನ್ನು ಮೀರಿಲ್ಲದವರಿಗೆ ಸೀಮಿತಗೊಂಡಿದೆ. ಎಸ್.ಎಸ್.ಎಲ್.ಸಿಯವರೆಗೆ ಕನಿಷ್ಠ ಶಿಕ್ಷಣ ಹೊಂದಿರುವ ಫಲಾನುಭವಿಗಳು ಶೇಕಡಾ 58.26 ರಷ್ಟು ಹೆಚ್ಚಾಗಿದ್ದಾರೆ. ಪಿಯುಸಿ ಶಿಕ್ಷಣ ಪಡೆದಿರುವವರು ಮಾದರಿಯ 25.21 ಪ್ರತಿಶತದಷ್ಟಿದ್ದಾರೆ. ಇದು ಅವರು ತಮ್ಮನ್ನು ತಾವು ಕೌಶಲ್ಯಭರಿತರಾಗಲು ಮತ್ತು ಉದ್ಯೋಗವನ್ನು ಪಡೆಯಲು ಮಾಡುವ ಕ್ಷೇತ್ರಗಳ ಆಯ್ಕೆಯನ್ನು ಮತ್ತಷ್ಟು ಮಿತಿಗೊಳಿಸುತ್ತದೆ. ಪಿತೃಪ್ರಧಾನ ಸಮಾಜದಲ್ಲಿ ವೃತ್ತಿಯ ಲಿಂಗತ್ವ ಸ್ವರೂಪವನ್ನು ಸಾಬೀತುಪಡಿಸಲು ಹೆಚ್ಚಿನ ಪದವೀಧರರು ಮಹಿಳಾ ಫಲಾನುಭವಿಗಳಲ್ಲಿದ್ದಾರೆ. ಹೆಚ್ಚಿನ ಅರ್ಹತೆಯನ್ನು ಹೊಂದಿರುವ ಮಹಿಳೆಯರು ವಿಭಿನ್ನ ಸಂಭಾವನೆಯನ್ನು ಪಡೆಯುತ್ತಾರೆ ಅಥವಾ ಕಡಿಮೆ ಸಂಬಳದ ಸ್ಥಾನಕ್ಕೆ ತಳ್ಳಲ್ಪಡುತ್ತಾರೆ.

**ಕೌಶಲ್ಯ ತರಬೇತಿಗಾಗಿ ಕ್ಷೇತ್ರಗಳ ಆಯ್ಕೆ:**

- ಹೊಲಿಗೆ ಕೆಲಸ (32.19%) ಆಯ್ಕೆ ಮಾಡಿದ ಫಲಾನುಭವಿಗಳು ಹೆಚ್ಚಾಗಿದ್ದಾರೆ ನಂತರ ಗಣಕಯಂತ್ರ ಸಂಬಂಧಿತ ಉದ್ಯಮಗಳಲ್ಲಿ (24.12%) ಇದ್ದಾರೆ. ಬೆಂಗಳೂರು–ನಗರ ಜಿಲ್ಲೆಯು ಈ ಪ್ರದೇಶದಲ್ಲಿ ರಫ್ತು ಆಧಾರಿತ ಉಡುಪು ಕಾರ್ಖಾನೆಗಳ ಕೇಂದ್ರೀಕರಣದಿಂದಾಗಿ ಜವಳಿ ವಿನ್ಯಾಸ, ಹೊಲಿಗೆ ಕೆಲಸ ಮತ್ತು ಸಂಬಂಧಿತ ಕ್ಷೇತ್ರಗಳನ್ನು ಆಯ್ಕೆ ಮಾಡುವವರಲ್ಲಿ ಹೆಚ್ಚಿನ ಪಾಲನ್ನು (35.18 ಪ್ರತಿಶತ) ಹೊಂದಿದೆ. ವಾಸ್ತವವಾಗಿ ಕೌಶಲ್ಯದ ಕ್ಷೇತ್ರವಾಗಿ ಗಣಕಯಂತ್ರಗಳು ಎಲ್ಲಾ ಜಿಲ್ಲೆಗಳಲ್ಲಿ ಸಾಕಷ್ಟು ಜನಪ್ರಿಯವಾಗಿವೆ. ರಾಯಚೂರು (37.5 ಪ್ರತಿಶತ), ಕಲಬುರಗಿ (31.72 ಪ್ರತಿಶತ), ಬೆಳಗಾವಿ (30.63 ಪ್ರತಿಶತ) ಮತ್ತು ಬೆಂಗಳೂರು ನಗರ (24.95 ಪ್ರತಿಶತ).
- ಮಹಿಳೆಯರು ಬ್ಯೂಟಿ ಪಾರ್ಲರ್‌ಗಳು (73 ಪ್ರತಿಶತ), ಹೊಲಿಗೆ ಕೆಲಸ (62 ಪ್ರತಿಶತ), ಮತ್ತು ಹೈನುಗಾರಿಕೆ (46 ಪ್ರತಿಶತ) ವೃತಿಗಳಲ್ಲಿ ಹೆಚ್ಚು ಕೇಂದ್ರೀಕೃತಗೊಂಡಿದ್ದಾರೆ ಮತ್ತು ಅದು ಅಸ್ತಿತ್ವದಲ್ಲಿರುವ ಲಿಂಗ ಪಾತ್ರಗಳ ಬಲವರ್ಧನೆಯನ್ನು ಪ್ರತಿಬಿಂಭಿಸುತ್ತದೆ. ಆದರೆ ಇಲ್ಲಿಯವರೆಗೆ ಪುರುಷ ಭದ್ರಕೋಟೆ ಎಂದು ಪರಿಗಣಿಸಲಾಗಿದ್ದ ಕೌಶಲ್ಯಗಳನ್ನು ಪಡೆಯುವ ಮೂಲಕ ಮಹಿಳೆಯರು ಪ್ರವೇಶ ಪಡೆದ ಇತರ ಕ್ಷೇತ್ರಗಳೆಂದರೆ ಗಣಕಯಂತ್ರಗಳು (32 ಪ್ರತಿಶತ), ಹೋಟೆಲ್ (30 ಪ್ರತಿಶತ), ಸಾಮಾನ್ಯ ಅಂಗಡಿ (21 ಪ್ರತಿಶತ) ಸುಮಾರು 17 ಪ್ರತಿಶತ ಮಹಿಳೆಯರು ಕೌಶಲ್ಯಗಳನ್ನು ಹುಡುಕುವ ಮೂಲಕ ಮೊಬೈಲ್ ಫೋನ್‌ಗಳಿಗೆ ಸಂಬಂಧಿಸಿದ ಸೇವೆಗಳ ಕ್ಷೇತ್ರಕ್ಕೆ ಸಣ್ಣದಾಗಿ ಪ್ರವೇಶ ಮಾಡಿದ್ದಾರೆ. ಅವಕಾಶಗಳನ್ನು ಒದಗಿಸಿದರೆ, ಮಹಿಳೆಯರು ಲಿಂಗ–ಸಮಾನತೆಗೆ ವಿರುದ್ಧದ ಅಡೆತಡೆಯನ್ನು ಜಯಿಸಬಹುದು ಮತ್ತು ಅವರು ಬಹಳಷ್ಟು ಸಮಯದಲ್ಲಿ ಕುಟುಂಬದ ಒತ್ತಡದಲ್ಲಿ ಸೇರುತ್ತಾರೆ ಎಂದು ಇದು ತೋರಿಸುತ್ತದೆ.
- ಕೋಷ್ಟಕ 10.2.10 ರಲ್ಲಿ ಕಂಡುಬಂದಂತೆ 18–25 ವರ್ಷ ವಯಸ್ಸಿನ ಫಲಾನುಭವಿಗಳು ಗಮನಾರ್ಹ ಪಾಲನ್ನು ಹೊಂದಿರುವ ಮರಗೆಲಸ, ಹೋಟೆಲ್ ಮತ್ತು ಹೈನುಗಾರಿಕೆಯನ್ನು ಹೊರತುಪಡಿಸಿ ಹೆಚ್ಚಿನ ಔದ್ಯೋಗಿಕ ಕೌಶಲ್ಯ ವಿಭಾಗಗಳಲ್ಲಿ 25–30 ವರ್ಷ ವಯಸ್ಸಿನವರು ಹೆಚ್ಚು ಗಮನಾರ್ಹ ಪಾಲು ಹೊಂದಿದ್ದಾರೆ. ಫಲಾನುಭವಿಗಳೊಂದಿಗಿನ ಗುಣಾತ್ಮಕ ಸಂವಾದವು 20 ವರ್ಷಕ್ಕಿಂತ ಕಡಿಮೆ ವಯಸ್ಸಿನ ಫಲಾನುಭವಿಗಳು ಇನ್ನೂ ಮನಸ್ಸು ಮಾಡದ ಕಾರಣ ದುರ್ಬಲರಾಗಿದ್ದಾರೆ ಎಂದು ಬಹಿರಂಗಪಡಿಸುತ್ತದೆ ಆದರೆ 35 ವರ್ಷಕ್ಕಿಂತ ಹೆಚ್ಚು ವಯಸ್ಸಿನವರು ತಮ್ಮ ಜೀವನ ಹಾದಿಯಲ್ಲಿ ಹೊಸದನ್ನು ಪಡೆಯಲು ಅಥವಾ ಈಗಾಗಲೇ ನಿರ್ಧರಿಸಲಾದ ಯಾವುದನ್ನೂ ಪಡೆಯಲು ತುಂಬಾ ವಯಸ್ಸಾದವರಾಗಿದ್ದಾರೆ.

**ಕೌಶಲ್ಯ– ತರಬೇತಿಗೆ ಸೇರುವ ಮೊದಲು ಉದ್ಯೋಗದ ಸ್ಥಿತಿಗತಿ**

- 43.47 ಪ್ರತಿಶತ ಫಲಾನುಭವಿಗಳು ಯಾವುದೇ ತರಬೇತಿ ಕಾರ್ಯಕ್ರಮಕ್ಕೆ ಒಳಗಾಗುವ ಮೊದಲು ನಿರುದ್ಯೋಗಿಗಳಾಗಿದ್ದರು ಎಂದು ವರದಿ ಮಾಡಿದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಫಲಾನುಭವಿಗಳ ಮಾಹಿತಿ ಪ್ರಕಾರ 56 ಪ್ರತಿಶತದಷ್ಟು ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲು ಅರ್ಹತೆಯನ್ನು ಹೊಂದಿಲ್ಲ. ಕೊಡಗು ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಎಲ್ಲೆಡೆ ಸಾಕಷ್ಟು ನಿಯಮಗಳ ಉಲ್ಲಂಘನೆಯಾಗಿದೆ ಎಂದು ಕಂಡುಬಂದಿದೆ.

**ತರಬೇತಿ ಕಾರ್ಯಕ್ರಮ ಮತ್ತು ಸೌಲಭ್ಯಗಳ ಬಗ್ಗೆ ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಮತ್ತು ಫಲಾನುಭವಿಗಳ ಮೌಲ್ಯಮಾಪನ:**

- ಫಲಾನುಭವಿಗಳಲ್ಲಿ ಸುಮಾರು 69 ಪ್ರತಿಶತದಷ್ಟು ಒದಗಿಸಲಾದ ವಸತಿಯಲ್ಲಿ ವಾಸ್ತವ್ಯವಿರಲಿಲ್ಲ ಇದು ತರಬೇತಿ ಗುಣಮಟ್ಟದ ಮೇಲೆ ಧನಾತ್ಮಕವಾಗಿ ಪರಿಣಾಮ ಬೀರಿದೆ.
- ಮಾಹಿತಿ ತಂತ್ರಜ್ಞಾನದ ಬಳಕೆಯ ಮಟ್ಟ ಮತ್ತು ತರಬೇತಿ ಉದ್ದೇಶಗಳಿಗಾಗಿ ಅದರ ಗುಣಮಟ್ಟವು ಜಿಲ್ಲೆಗಳಾದ್ಯಂತ ಬದಲಾಗಿದೆ. ಎಂಟರಲ್ಲಿ ಐದು ಜಿಲ್ಲೆಗಳಲ್ಲಿ ಪಡೆದ ಪ್ರತಿಕ್ರಿಯೆಯು ಇತರ ಮೂರು ಜಿಲ್ಲೆಗಳಂತೆ ಸಕಾರಾತ್ಮಕವಾಗಿಲ್ಲ. ಹೀಗಾಗಿ ಈ ಐದು ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನದ ಜವಾಬ್ದಾರಿ ಹೊಂದಿರುವ ನಿಯೋಗಗಳು ತಮ್ಮ ಬೋಧನಾ ಕ್ರಮದ ಅಂಶದ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಮತ್ತು ಅವರ ಮಾಹಿತಿ ತಂತ್ರಜ್ಞಾನ ಸಾಮರ್ಥ್ಯವನ್ನು ನವೀಕರಿಸಬೇಕು ಎಂದು ಸೂಚಿಸಲಾಗಿದೆ.
- ನಿಯೋಜನೆ ನಂತರ ಮೂರು ವರ್ಷಗಳ ಕಾಲ ಅನುಸರಣೆಯನ್ನು ಉಸ್ತುವಾರಿ ಮಾಡುವ ಜವಾಬ್ದಾರಿಯನ್ನು ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಹೊಂದಿರುವುದರಿಂದ ಈ ಮೌಲ್ಯಮಾಪನ ಅಧ್ಯಯನವು ಫಲಾನುಭವಿಯು ಉದ್ಯೋಗವನ್ನು ಪಡೆದ ನಂತರ ಲಾಕ್-ಇನ್ ಅನುಸರಣಾ ಅವಧಿಯನ್ನು ಒಂದು ಅಥವಾ ಎರಡು ವರ್ಷಗಳಿಗೆ ಇಳಿಸಬಹುದು ಎಂದು ಅಭಿಪ್ರಾಯಪಟ್ಟಿದೆ. ಏಕೆಂದರೆ ಅವರು ಆಗಾಗ್ಗೆ ಉತ್ತಮ ಅವಕಾಶಗಳಿಗೆ ಹೋಗುತ್ತಾರೆ ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ತಮ್ಮ ಅಂತಿಮ ಬಾಕಿಗಳನ್ನು ಪಡೆಯಲು ವಿಫಲವಾಗಿವೆ. ಈ ಖಂಡವು ಅಭ್ಯರ್ಥಿ ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳೆರಡಕ್ಕೂ ನಿರ್ಬಂಧಿತವಾಗಿದೆ.

**ಉದ್ಯೋಗ ನಿಯೋಜನೆ ಸೇವೆಗಳು:**

- ಕಾರ್ಯಕ್ರಮ ಅನುಷ್ಠಾನ ನಿಯೋಗಗಳ ಮೂಲಕ ನಿಯೋಜನೆಯ ಪ್ರಯೋಜನಗಳನ್ನು ಕೇವಲ 76 ಪ್ರತಿಶತದಷ್ಟು ಮಾತ್ರ ಪಡೆದುಕೊಂಡಿದ್ದಾರೆ. ಸುಮಾರು 24 ಪ್ರತಿಶತ ಜನರು ತಾವು ಸೇವೆಯನ್ನು ಪಡೆದುಕೊಂಡಿಲ್ಲ ಎಂದು ವರದಿ ಮಾಡಿದ್ದಾರೆ. ತುಮಕೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಸುಮಾರು 100 ಪ್ರತಿಶತ ಉದ್ಯೋಗ ನಿಯೋಜನೆ ಇದೆ. ಸಾಕಷ್ಟು ಹೆಚ್ಚಿನ ಶೇಕಡಾದರ ಉದ್ಯೋಗ ನಿಯೋಜನೆ ಹೊಂದಿರುವ ಇತರ ಜಿಲ್ಲೆಗಳು ಕಲ್ಬುರ್ಗಿ (84.14%) ಮತ್ತು ಬೆಂಗಳೂರು –ನಗರ (76.12%).
- ಸುಮಾರು 73 ಪ್ರತಿಶತ ಫಲಾನುಭವಿಗಳ ವಿಷಯದಲ್ಲಿ ತರಬೇತಿ ಕ್ಷೇತ್ರವು ಉದ್ಯೋಗ ಕ್ಷೇತ್ರದೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗಿದೆ. ಹೊಂದಾಣಿಕೆಯಾಗದ ನಿದರ್ಶನಗಳು ಕೇವಲ 2.99 ಪ್ರತಿಶತ ಪ್ರಕರಣಗಳ ಮಟ್ಟಿಗೆ ಮಾತ್ರ ಇದೆ.
- ಕೆಲವರು 3000 ಅಥವಾ 4000 ರೂ.ಗಳಷ್ಟು ಕಡಿಮೆ ಮಾಸಿಕ ವೇತನವನ್ನು ಹೊಂದಿದ್ದಾರೆ ಎಂದು ಕಂಡುಬಂದಿದೆ. ಇದು ರಾಜ್ಯದ ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ. ಉದ್ಯೋಗ ಸೇವೆಗಳ ಮೂಲಕ ಉದ್ಯೋಗ ಕಂಡುಕೊಂಡ ಫಲಾನುಭವಿಗಳಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಮಂದಿ ಒಂದು ತಿಂಗಳಲ್ಲಿ 7500 ರೂ.ಗಳಿಗಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ.

## ಕಾರ್ಯಕ್ರಮದ ಒಟ್ಟಾರೆ ಗುರಿ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಅವಲೋಕನಗಳು ಮತ್ತು ಫಲಿತಾಂಶಗಳು

1. ಯೋಜನೆಯ ಸ್ವಯಂ ಉದ್ಯೋಗ ಘಟಕದ ಫಲಾನುಭವಿಗಳಲ್ಲಿ ಸುಸ್ಥಿರ ಜೀವನೋಪಾಯಕ್ಕಾಗಿ ತಾವು ಮತ್ತೊಮ್ಮೆ ಕೌಶಲ್ಯ ತರಬೇತಿ ಪಡೆಯುವ ಬದಲು ಹೆಚ್ಚುವರಿ ಆರ್ಥಿಕ ಪ್ರಯೋಜನಗಳನ್ನು ಪಡೆಯುವ ಮತ್ತೊಂದು ಯೋಜನೆಯಾಗಿ ಕಾರ್ಯಕ್ರಮವನ್ನು ನೋಡುವ ಬಲವಾದ ಪ್ರವೃತ್ತಿ ಇದೆ.
2. ಗ್ರಾಮೀಣ ನಿರುದ್ಯೋಗಿ ಯುವಕರ ನಗರ ವಲಸೆಯನ್ನು ತಡೆಗಟ್ಟಲು ಯುವಕರಿಗೆ ತರಬೇತಿ ನೀಡುವ ಕ್ಷೇತ್ರಗಳು ಹೆಚ್ಚು ಗ್ರಾಮೀಣ ವಿಷಯ ಮತ್ತು ದೃಷ್ಟಿಕೋನವನ್ನು ಹೊಂದಿರಬೇಕು. ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಕೌಶಲ್ಯಗಳ ಗುಂಪನ್ನು ಪರಿಚಯಿಸುವ ಮೊದಲು ಅಗತ್ಯ ಮೌಲ್ಯಮಾಪನ ಮತ್ತು ಕೌಶಲ್ಯ ನಕ್ಷಾ ನಿರೂಪಣೆಯ ಅವಶ್ಯಕತೆಯಿದೆ.
3. ಅಂತಹ ಉದ್ಯಮಗಳು ಅಥವಾ ಕೌಶಲ್ಯಗಳ ಮಾರುಕಟ್ಟೆ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕು.
4. ಸುಸ್ಥಿರ ಜೀವನೋಪಾಯಕ್ಕಾಗಿ ಸ್ವಯಂ ಉದ್ಯೋಗ ಅಥವಾ ಕೌಶಲ್ಯದ ಮೂಲಕ ಗ್ರಾಮೀಣ ಯುವಕರ ವಲಸೆಯನ್ನು ತಡೆಗಟ್ಟುವ ಬಗ್ಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಗಮನವು ಅಂತರ್ಗತ ವಿರೋಧಾಭಾಸವನ್ನು ಹೊಂದಿದೆ. ಅನೇಕ ಬಾರಿ ಆದ್ಯತೆಯ ಕೌಶಲ್ಯವು ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ಹೊಂದಿರುವುದಿಲ್ಲ. ಕೆಲವು ಪ್ರಯೋಜನಗಳನ್ನು ಪಡೆಯುವದರಿಂದ ವೈಯಕ್ತಿಕ ಆಕಾಂಕ್ಷೆಗಳ ಮೇಲೆ ನಿರ್ಬಂಧವು ಫಲಾನುಭವಿಗಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ.

5 '18ರಿಂದ 25ರ ವಯೋಮಾನದವರಲ್ಲಿ ಅವರ ನಿರುದ್ಯೋಗವನ್ನು ತಾತ್ಕಾಲಿಕ ವಿದ್ಯಮಾನ ಎಂದು ಪರಿಗಣಿಸುವ ಪ್ರವೃತ್ತಿ ಬಲವಾಗಿದೆ. ಆದ್ದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಗುರಿಗಳು ಮತ್ತು ಅವಕಾಶಗಳು ಅಂತಿಮ ಜೀವನೋಪಾಯದ ಗುರಿಗಳಿಗಿಂತ ಮಧ್ಯಂತರ ತಂತ್ರಗಳೆಂದು ಗ್ರಹಿಸಲಾಗಿದೆ'.

6. ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಮತ್ತು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳೊಂದಿಗೆ ಕೇಂದ್ರೀಕೃತ ಸಮೂಹ ಚರ್ಚೆಗಳು ವಿವಿಧ ಆಡಳಿತ ಮಟ್ಟಗಳ ನಡುವೆ ಕೆಲವು ತೀವ್ರ ಸಮನ್ವಯ ಸಮಸ್ಯೆಗಳಿವೆ ಎಂಬುದಕ್ಕೆ ಸ್ಪಷ್ಟ ಪುರಾವೆಗಳನ್ನು ನೀಡುತ್ತವೆ. ಗ್ರಾಮ ಮಟ್ಟದಿಂದ ರಾಜ್ಯ ಮಟ್ಟಕ್ಕೆ ನಿಯೋಜಿತ ಸಿಬ್ಬಂದಿ ಇಲ್ಲದಿರುವುದು ಸವಾಲಾಗಿದೆ. ನಿಯೋಜಿತ ಸಿಬ್ಬಂದಿಯ ಆಗಾಗ್ಗೆ ವರ್ಗಾವಣೆ ಮತ್ತು ಅನುಪಸ್ಥಿತಿಯು ಉಸ್ತುವಾರಿ ಮಾನದಂಡದ ಮೇಲೆ ಪರಿಣಾಮ ಬೀರುತ್ತದೆ. ವಿಭಜಿತ ದತ್ತಾಂಶದ ಆಧಾರದ ಮೇಲೆ ದಸ್ತಾವೇಜೀಕರಣ ಮಾನದಂಡಗಳ ಸುಧಾರಣೆಗೆ ತುರ್ತು ಅವಶ್ಯಕತೆ ಇದೆ.
7. ಪ್ರಸ್ತುತ ಗ್ರಾಮೀಣ ಪ್ರದೇಶದ ವ್ಯಕ್ತಿಗಳು ದೀರ್ಘಕಾಲೀನ ಆಧಾರದ ಮೇಲೆ ಸ್ವಯಂ ಉದ್ಯೋಗ ಅಥವಾ ಉದ್ಯೋಗದ ಕಡೆಗೆ ದೃಢವಾದ ಹೆಜ್ಜೆ ಇಡಲು ಪ್ರವೇಶಾತಿ ಮಟ್ಟದ ವಯೋಮಿತಿ ಬಹಳ ಕಡಿಮೆ ಇದೆ. ಮುಖ್ಯವಾಹಿನಿಯ ಶಿಕ್ಷಣದಲ್ಲಿ ಮುಂದುವರಿಯಲು ಅವರನ್ನು ಪ್ರೋತ್ಸಾಹಿಸಬೇಕು ಮತ್ತು ಪ್ರವೇಶಾತಿ ಮಟ್ಟದ ವಯಸ್ಸಿನ ಅವಶ್ಯಕತೆಗಳನ್ನು ಹೆಚ್ಚಿಸಬೇಕಾಗಿದೆ.
8. ಸ್ವಯಂ–ಉದ್ಯೋಗ ಮಾರ್ಗಗಳ ಕಾರ್ಯಸಾಧ್ಯತೆ ಮತ್ತು ಅವುಗಳ ದ್ವಿಗುಣತೆ (ಒಂದೇ ಪ್ರದೇಶದಲ್ಲಿ ಬಹು ಸಂಖ್ಯೆಯ ಬ್ಯೂಟಿ ಪಾರ್ಲರ್‌ಗಳು ಅಥವಾ ಸಣ್ಣ ಅಂಗಡಿಗಳು) ಕಾರ್ಯಸಾಧ್ಯವಾದ ಜೀವನೋಪಾಯ ಆಯ್ಕೆಗಳಿಗಾಗಿ ಗಮನ ಹರಿಸಬೇಕಾಗಿದೆ.

9. ಫಲಾನುಭವಿಗಳಲ್ಲಿ ಸಹಕಾರಿ ಉದ್ಯಮಗಳನ್ನು ಪ್ರೋತ್ಸಾಹಿಸುವ ಅಗತ್ಯವಿದೆ
10. ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಆದ್ಯತೆಯ ಆಧಾರದ ಮೇಲೆ ಮಂಗಳಮುಖಿ ಸಮುದಾಯದ ಸೇರ್ಪಡೆಯನ್ನು ಉತ್ತೇಜಿಸುವುದು ಬಹುತೇಕ ವಿಫಲವಾಗಿದೆ, ಏಕೆಂದರೆ ನಮ್ಮ ಕ್ಷೇತ್ರ ಸಂಶೋಧಕರು ಅಧ್ಯಯನ ಮಾಡಿದ ಫಲಾನುಭವಿಗಳಲ್ಲಿ ಒಬ್ಬ ಮಂಗಳಮುಖಿ ವ್ಯಕ್ತಿಯನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ, ಮತ್ತು ಇಲಾಖೆಯಲ್ಲಿಯೂ ಈ ಬಗ್ಗೆ ಯಾವುದೇ ದತ್ತಾಂಶ ಇಲ್ಲ.

ಕೇಂದ್ರೀಕೃತ ಸಮೂಹ ಚರ್ಚೆಗಳ ಫಲಿತಾಂಶವು ಫಲಾನುಭವಿಗಳು ಮೂಲದ ಹಳ್ಳಿಯಲ್ಲಿ ತಮ್ಮ ಪ್ರಯೋಜನಗಳನ್ನು ಪಡೆಯಬೇಕಾಗಿರುವುದರಿಂದ, ಅದು ಅಪ್ರಾಯೋಗಿಕವಾಗಿದೆ ಎಂದು ಬಹಿರಂಗಪಡಿಸಿದೆ. ಸಾಂಪ್ರದಾಯಿಕ ಕುಟುಂಬ ರಚನೆ ಮತ್ತು ಸಂಪ್ರದಾಯವಾದಿ, ಸಾಮಾಜಿಕ ವಾತವಾರಣದಲ್ಲಿ ಯಾವುದೇ ಮಂಗಳಮುಖಿ ವ್ಯಕ್ತಿಯು ಯೋಜನೆಗೆ ಸೇರಲು ತಮ್ಮ ಗುರುತನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಏಕೆಂದರೆ ಇದು ಅವರ ಕುಟುಂಬಕ್ಕೆ ಅಗೌರವವನ್ನು ತರಬಹುದಾಗಿದೆ.

## ನೀತಿ ಶಿಫಾರಸುಗಳು:

## ಅಲ್ಪಾವಧಿಯ ಗುರಿಗಳು.

**ಸಾಮಾನ್ಯವಾಗಿ ಯೋಜನೆಯ ಬಗ್ಗೆ:**

1. ಸರಿಯಾದ ಕೌಶಲ್ಯ-ನಕ್ಷಾ ನಿರೂಪಣೆಯನ್ನು ಕೌಶಲ್ಯ ಕಲಿಸುವ ಮೊದಲು ಸ್ಥಳೀಯವಾಗಿ ಸಂಬಂಧಿತ ಕೌಶಲ್ಯಗಳ ಭಂಡಾರವನ್ನು ರೂಪಿಸುವುದು ಮತ್ತು ಕೌಶಲ್ಯಗಳ ವಿಷಯದಲ್ಲಿ ಸ್ಥಳೀಯ ಅಗತ್ಯ ಮೌಲ್ಯಮಾಪನವನ್ನು ಮಾಡಬೇಕಾಗಿದೆ.
2. ಯೋಜನೆಯ ಎರಡೂ ಘಟಕಗಳಲ್ಲಿ ಪ್ರವೇಶ ಮಟ್ಟದ ಅರ್ಹತೆಯನ್ನು ಪರಿಶೀಲಿಸಬೇಕಾಗಿದೆ. ಕನಿಷ್ಠ ಪ್ರವೇಶ ಮಟ್ಟದ ವಯಸ್ಸನ್ನು 21 ವರ್ಷಗಳನ್ನಾಗಿ ಮಾಡಲು ಪರಿಷ್ಕರಿಸಬೇಕು.
3. ಯಾವುದೇ ರಾಜ್ಯ ಅಥವಾ ಪಂಚಾಯಿತಿ ಪ್ರಾಯೋಜಿತ ಯೋಜನೆಗಳ ಮೊದಲ ಬಾರಿ ಫಲಾನುಭವಿಗಳಿಗೆ ಮಾತ್ರ ಯೋಜನೆಯ ಪ್ರಯೋಜನವನ್ನು ನಿರ್ಬಂಧಿಸುವ ಕಠಿಣ ನಿಯಮವನ್ನು ಕೌಶಲ್ಯ ಮತ್ತು ಸ್ವಾವಲಂಬನೆಯ ಸಂದರ್ಭದಲ್ಲಿ ಮರುಪರಿಶೀಲಿಸಬೇಕಾಗಿದೆ ಮತ್ತು ಸಡಿಲಗೊಳಿಸಬೇಕಾಗಿದೆ.
4. ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಎರಡೂ ಘಟಕಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಈ ಕೆಳಗಿನ ಅಂಶಗಳನ್ನು ಗಮನಿಸಿದರೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವರನ್ನು ಸೇರಿಸಲು ನಿರ್ದಿಷ್ಟವಾಗಿ ಪರಿಶಿಷ್ಟ ಪಂಗಡ ಯುವಕರನ್ನು ಗುರಿಯಾಗಿಸುವ ಅಗತ್ಯವಿದೆ. ಇದು ಅಲ್ಪಸಂಖ್ಯಾತರಿಗೂ ಸರಿ ಹೊಂದುತ್ತದೆ.
5. ವಿಕಲಚೇತನರನ್ನು (ಪಿಡಬ್ಲ್ಯೂಡಿ) ಯೋಜನೆಯ ಘಟಕಗಳೆರಡರಲ್ಲೂ ಆದ್ಯತೆಯ ಆಧಾರದ ಮೇಲೆ ಸೇರಿಸಬೇಕು ಮತ್ತು ಸಾಲಗಳನ್ನು ಪಡೆಯುವ ವಿಷಯದಲ್ಲಿ ಅವರಿಗೆ ಒಂದು ಬಾರಿಯ ಪ್ರಯೋಜನದ ನಿಯಮಗಳನ್ನು ಸಡಿಲಿಸಬೇಕು.

6. ಮಂಗಳಮುಖಿ ವ್ಯಕ್ತಿಗೆ ಅರ್ಹತಾ ಖಂಡವನ್ನು ಸಡಿಲಿಸಬೇಕಾಗಿದೆ ಮತ್ತು ಅವರ ಆಯ್ಕೆಯ ಸ್ಥಳದಿಂದ ಪ್ರಯೋಜನವನ್ನು ಪಡೆಯಲು ಅವರಿಗೆ ಅವಕಾಶ ನೀಡಬೇಕು. ಏಕೆಂದರೆ ಅವರ ಸ್ವಂತ ಸ್ಥಳದಿಂದ ಪ್ರಯೋಜನಗಳನ್ನು ಪಡೆಯಲು ಅವರ ಗುರುತನ್ನು ಬಹಿರಂಗಪಡಿಸುವುದು ಸವಾಲಾಗಿದೆ.

**ಸ್ವಯಂ ಉದ್ಯೋಗ ಯೋಜನೆ:**

1. ಸ್ವಯಂ ಉದ್ಯೋಗಕ್ಕಾಗಿ ತರಬೇತಿ ಕಾರ್ಯಕ್ರಮಗಳ ವಿಷಯಗಳು ಹೆಚ್ಚು ವೈಜ್ಞಾನಿಕ ಮತ್ತು ಪ್ರಸ್ತುತವಾಗಿರಬೇಕು. ಇಲಾಖೆಯು ಪ್ರಾಥಮಿಕ ಪ್ರದೇಶ ನಿರ್ದಿಷ್ಟ ಅಗತ್ಯ ವಿಶ್ಲೇಷಣೆಯನ್ನು ಮಾಡಬೇಕಾಗಿದೆ ಮತ್ತು ಕಾರ್ಯದಲ್ಲಿ ತೊಡಗುವ ಮೊದಲು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳನ್ನು ಅವರ ನಿರ್ದಿಷ್ಟ ಕೌಶಲ್ಯ-ಪಾಲುದಾರಿಕೆ ಸಾಮರ್ಥ್ಯಗಳ ದೃಷ್ಟಿಯಿಂದ ಮೌಲ್ಯಮಾಪನ ಮಾಡಬೇಕು.
2. ಸಾಕಷ್ಟು ಮಾನವ ಸಂಪನ್ಮೂಲ ಹೊಂದಿರುವ ಸೂಕ್ತ ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗಿದೆ. ಉಪಗ್ರಹ ಆಧಾರಿತ ತರಬೇತಿಗಾಗಿ ಪ್ರಾದೇಶಿಕ ಭಾಷೆಗಳಲ್ಲಿ ಪ್ರಮಾಣೀಕೃತ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಬೇಕಾಗಿದೆ. ಜೀವನೋಪಾಯದ ಆಯ್ಕೆಗಳನ್ನು ಬೆಂಬಲಿಸುವ ಸುಸ್ಥಿರತೆ, ಲಾಭದಾಯಕತೆ ಮತ್ತು ಸಾಮರ್ಥ್ಯದ ದೃಷ್ಟಿಕೋನದಿಂದ ಸ್ವಯಂ ಉದ್ಯೋಗ ಮಾರ್ಗಗಳ ಕಾರ್ಯಸಾಧ್ಯತೆಯ ಮೌಲ್ಯಮಾಪನವನ್ನು ಸರಿಯಾಗಿ ನಡೆಸಬೇಕು.
3. ಸಾಲದ ಕಾರ್ಯವಿಧಾನಗಳ ಬಗ್ಗೆ ವಾಣಿಜ್ಯ ಬ್ಯಾಂಕುಗಳೊಂದಿಗೆ ಉತ್ತಮ ತಿಳುವಳಿಕೆಯನ್ನು (ಮೇಲಾಧಾರ; ಒಂದು ಕುಟುಂಬ, ಒಂದು ಸಾಲವೆಂಬ ನಿಯಮವಾಗಿ) ತಿರಸ್ಕಾರವನ್ನು ಕಡಿಮೆ ಮಾಡಲು ಖಚಿತಪಡಿಸಿಕೊಳ್ಳಬೇಕು.
4. "ಜಂಟಿ ಹೊಣೆಗಾರಿಕೆ" ಗುಂಪಿನ ಪರಿಕಲ್ಪನೆಯನ್ನು ರದ್ದುಗೊಳಿಸಬಹುದು ಮತ್ತು ಅದನ್ನು ಮುಂದುವರಿಸಿದರೂ ಅದು ಸಹಕಾರಿ ಉಪಕ್ರಮವನ್ನು ಉತ್ತೇಜಿಸಬೇಕು.
5. ಫಲಾನುಭವಿಗಳು ತರಬೇತಿ ಪ್ರಾರಂಭಿಸುವ ಮೊದಲು ಸಾಲಗಳ ಅರ್ಹತಾ ಮಾನದಂಡಗಳ ಬಗ್ಗೆ ಅಭ್ಯರ್ಥಿಗಳು ಹಣಕಾಸು ಸಂಸ್ಥೆಗಳಿಂದ (ವಾಣಿಜ್ಯ ಬ್ಯಾಂಕುಗಳು) ಸರಿಯಾದ ಅನುಮತಿಯನ್ನು ಹಾಜರುಪಡಿಸಬೇಕು.
6. ಈ ಮೌಲ್ಯಮಾಪನವು ಪ್ರತಿ ಕ್ಷೇತ್ರಕ್ಕೆ ಕನಿಷ್ಠ ಸಂಖ್ಯೆಯ ತರಬೇತಿದಾರರನ್ನು ನಿಗದಿಪಡಿಸಲು ಮತ್ತು ಫಲಾನುಭವಿಗಳಿಗೆ ವಿಶಾಲವಾದ ಕೌಶಲ್ಯ ಆಯ್ಕೆಗಳನ್ನು ಒದಗಿಸಲು ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಕೊಳ್ಳುತ್ತದೆ.

**ಕೌಶಲ್ಯ-ತರಬೇತಿ ಮತ್ತು ನಿಯೋಜನೆ:**

1. ಕೌಶಲ್ಯ ತರಬೇತಿ ಮತ್ತು ನಿಯೋಜನೆ ಕಾರ್ಯಕ್ರಮವು ಪೂರೈಕೆ-ಸ್ವರೂಪದ ಕಾರ್ಯಕ್ರಮಕ್ಕಿಂತ ಬೇಡಿಕೆ-ಚಾಲಿತವಾಗಬೇಕು. ಈ ಕಾರ್ಯಕ್ರಮವು ಮೊದಲು ಸಂಭಾವ್ಯ ಉದ್ಯೋಗದಾತರ ಸಂಸ್ಥೆಗಳಿಂದ ಕೌಶಲ್ಯಗಳ ಬೇಡಿಕೆಯನ್ನು ಮೌಲ್ಯಮಾಪನ ಮಾಡಬೇಕು ಮತ್ತು ನಂತರ ನಿರುದ್ಯೋಗಿ ಯುವಕರಿಗೆ ತರಬೇತಿಯನ್ನು ಕೈಗೊಳ್ಳಬೇಕು. ಸರ್ಕಾರವು ಕೈಗಾರಿಕೆಗಳ ಸಂಭಾವ್ಯ ಉದ್ಯೋಗದಾತರೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು

ಮತ್ತು ಅವರನ್ನು ಕೌಶಲ್ಯದಲ್ಲಿ ತೊಡಗಿಸಿಕೊಳ್ಳಬಹುದು (ಉಲ್ಲೇಖ: ಕೆಫೆ, ಕಾಫಿ ಡೇ, ಗ್ರಾಮ್ ತರಂಗ್ ಉಪಕ್ರಮ)

2. ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಪ್ರಮಾಣಿತ ತರಬೇತಿ ಮಾಡ್ಯೂಲ್‌ಗಳೊಂದಿಗೆ ಸೂಕ್ತ ಕಾರ್ಯಕ್ರಮ ಅನುಷ್ಠಾನ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು.
3. ಉತ್ತಮ ಸಮನ್ವಯ ವಿಶೇಷವಾಗಿ ಹೊಸದಾಗಿ ಉದ್ಯೋಗದಲ್ಲಿರುವ ವ್ಯಕ್ತಿಗಳಿಗೆ ವೇತನ ಪ್ರಸ್ತಾವನೆಗಳ ಬಗ್ಗೆ (ಕನಿಷ್ಠ ವೇತನ, ಕೆಲಸದ ಸಮಯ, ಸಾಮಾಜಿಕ ಭದ್ರತಾ ಕ್ರಮಗಳು) ಖಚಿತಪಡಿಸಿಕೊಳ್ಳಬೇಕು.
4. ಕೌಶಲ್ಯ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ನೀಡಲಾಗುವ ಕೌಶಲ್ಯಗಳ ಸೆಟ್ (ಸಾಮಾನ್ಯ ಅಂಗಡಿ, ಹೈನುಗಾರಿಕೆ) ಒಂದು ತಿಂಗಳಿಗಿಂತ ಹೆಚ್ಚಿನ ಅವಧಿ ತರಬೇತಿ ನೀಡಬೇಕಾದ ವ್ಯಾಪಾರಗಳಲ್ಲ. ಆದ್ದರಿಂದ ಸೂಕ್ತ ಕೌಶಲ್ಯವನ್ನು ಗುರುತಿಸುವಲ್ಲಿ ಮತ್ತು ಕಠಿಣ ತರಬೇತಿಯ ನಂತರ ಹೆಚ್ಚು ಸಂಘಟಿತ ಪ್ರಯತ್ನಗಳನ್ನು ಮಾಡಬೇಕು.
5. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ವೇತನ ಉದ್ಯೋಗ ಘಟಕವನ್ನು ಉದ್ದೇಶಿಸಿ ಮಾತನಾಡುವಾಗ ಕಾರ್ಯಕ್ರಮದ ಉದ್ಯಮಶೀಲತೆ ಮತ್ತು ಸ್ವಯಂ ಉದ್ಯೋಗ ಘಟಕವನ್ನು ಸಹ ಉತ್ತೇಜಿಸಬೇಕು. ಇವೆರಡೂ ಪರಸ್ಪರ ಪ್ರತ್ಯೇಕವಾಗಿ ಉಳಿಯಬೇಕಾಗಿಲ್ಲ ಬದಲಾಗಿ ವೇತನ, ಉದ್ಯೋಗ, ಸಾಂಸ್ಥಿಕ ಸಾಲ ಮತ್ತು ಅರ್ಹ ಅಭ್ಯರ್ಥಿಗಳಿಗೆ ಅವರು ಸಲ್ಲಿಸಿದ ಪ್ರಸ್ತಾವನೆಗಳ ಆಧಾರದ ಮೇಲೆ ಸಹಾಯಧನ ಸಾಲಗಳ ಮೂಲಕ ಸ್ವಯಂ ಉದ್ಯೋಗ ಮತ್ತು ಉದ್ಯಮಶೀಲತೆ ಚಟುವಟಿಕೆಗಳ ಆಯ್ದ ಉತ್ತೇಜನ ನೀಡಬೇಕು.
6. ಯೋಜನೆಯನ್ನು ಮರು ವಿನ್ಯಾಸಗೊಳಿಸಬೇಕಾಗಿದೆ ಮತ್ತು ಪರಿಷ್ಕೃತ ವಿಷಯದೊಂದಿಗೆ ವಿಶಾಲವಾಗಿ ಮಾಡಬೇಕಾಗಿದೆ ಅಥವಾ ಅಸ್ತಿತ್ವದಲ್ಲಿರುವ ದೀನ ದಯಾಳು ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅಥವಾ ಇತರ ಯಾವುದೇ ಕೌಶಲ್ಯ ಕಾರ್ಯಕ್ರಮದೊಂದಿಗೆ ವಿಲೀನಗೊಳಿಸಬಹುದು.

### ದೀರ್ಘಕಾಲೀನ ಗುರಿಗಳು:

1. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಿಂದ ಅನೇಕ ಸರ್ಕಾರಿ ಇಲಾಖೆಗಳು (ಉದಾಹರಣೆಗೆ, ಸಮಾಜ ಕಲ್ಯಾಣ, ಕೌಶಲ್ಯ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ) ಸ್ವಯಂ ಉದ್ಯೋಗಾವಕಾಶಗಳಿಗಾಗಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು, ನಿಯೋಜನೆ ಮತ್ತು ಸಾಲಗಳನ್ನು ನೀಡುತ್ತವೆ ಮತ್ತು ಪ್ರಯೋಜನಗಳ ಪುನರಾವರ್ತನೆ ತಡೆಗಟ್ಟಲು ಒಂದೇ ಇಲಾಖೆಯ ಅಡಿಯಲ್ಲಿ ತರಬೇಕಾಗಿದೆ.
2. ಒಂದು ಆಪ್ ಆಧಾರಿತ, ಆಧಾರ್-ಜಂಟಿ ತಂತ್ರಾಂಶವನ್ನು ಫಲಾನುಭವಿಗಳು ಮತ್ತು ಕುಟುಂಬವು ಇತರ ಯಾವುದೇ ಯೋಜನೆಗಳಲ್ಲಿ ಸಾಲವನ್ನು ಪಡೆಯುವುದರ ಜಾಡು ಹಿಡಿಯಲು ಸಿದ್ಧಪಡಿಸಬಹುದು ಮತ್ತು ಸಮಯದ ಪುನರಾವರ್ತನೆ ಮತ್ತು ವ್ಯರ್ಥವನ್ನು ನಿಲ್ಲಿಸಬಹುದು
3. ಅದು ಕಾರ್ಯ ಸಾಧ್ಯವಾಗಿಲ್ಲದಿರುವುದರಿಂದ ಮತ್ತು ವಾಸ್ತವಿಕವಾಗಿಲ್ಲದಿರುವುದರಿಂದ ಯೋಜನೆಯ ಮಾರ್ಗದರ್ಶಿ ಉದ್ದೇಶವಾಗಿ ವಲಸೆತಡೆಗಟ್ಟುವ ಗುರಿಯನ್ನು ಪರಿಷ್ಕರಿಸಬೇಕಾಗಿದೆ.

4 .ಮಂಗಳಮುಖಿ ವ್ಯಕ್ತಿಗೆ ಅರ್ಹತಾ ಖಂಡವನ್ನು ಸಡಿಲಿಸಬೇಕಾಗಿದೆ ಮತ್ತು ಅವರ ಆಯ್ಕೆಯ ಸ್ಥಳದಿಂದ ಪ್ರಯೋಜನವನ್ನು ಪಡೆಯಲು ಅವರಿಗೆ ಅವಕಾಶ ನೀಡಬೇಕು ಏಕೆಂದರೆ ಅವರ ಸ್ವಂತ ಸ್ಥಳದಿಂದ ಪ್ರಯೋಜನಗಳನ್ನು ಪಡೆಯಲು ಅವರ ಗುರುತನ್ನು ಬಹಿರಂಗಪಡಿಸುವುದು ಸವಾಲಾಗಿದೆ.

5. ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಸಂಬಂಧಿಸಿದ ಕೆಲಸವನ್ನು ನಿರ್ವಹಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಿಯೋಜಿತ ಆಡಳಿತಾತ್ಮಕ ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಯನ್ನು ನೇಮಿಸುವುದು ತುರ್ತು ಅಗತ್ಯವಾಗಿದೆ.

6. ಸ್ಥಳೀಯ ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳನ್ನು (ಸರ್ಕಾರಿ ಶಾಲೆಗಳಲ್ಲಿ ಲಭ್ಯವಿರುವ ಖಾಲಿ ಕೋಣೆಗಳ ಪಟ್ಟಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ) ಉಪಗ್ರಹ ತರಬೇತಿ ಕೇಂದ್ರವಾಗಿ ಸಜ್ಜುಗೊಳಿಸಬಹುದು, ಮತ್ತು ವಿವಿಧ ರೀತಿಯ ತರಬೇತಿ ನೀಡಲು ಶಾಲೆ ನಡೆಯದ ಸಮಯ ಅಥವಾ ರಜೆಯ ಸಮಯವನ್ನು ಬಳಸಬಹುದು. ಸರ್ಕಾರಿ ಶಾಲಾ ಮಟ್ಟದಲ್ಲಿ ಸೌಲಭ್ಯಗಳನ್ನು ಹೆಚ್ಚಿಸುವುದು ಶಾಲೆ ಮತ್ತು ತರಬೇತಿ ಕೇಂದ್ರ ಎರಡಕ್ಕೂ ಪರಸ್ಪರ ಪ್ರಯೋಜನಕಾರಿಯಾಗಿದೆ.

## ಮೌಲ್ಯಮಾಪನದ ನಂತರದ ಮಾತೃಕೆ

| ಉದ್ದೇಶಗಳು | ದತ್ತಾಂಶದ ಮೂಲಗಳು | ಫಲಿತಾಂಶಗಳು | ಸಲಹೆಗಳು |
|---|---|---|---|
| ತರಬೇತಿ, ಜಾಗೃತಿ ಮತ್ತು ಸಾಮರ್ಥ್ಯ ವರ್ಧನೆ ಕಾರ್ಯಕ್ರಮಗಳ ಮೂಲಕ ಸುಧಾರಿತ ಮತ್ತು ಪರ್ಯಾಯ ಜೀವನೋಪಾಯ ಅವಕಾಶಗಳನ್ನು ಸೃಷ್ಟಿಸುವುದು. | ಅನುಷ್ಠಾನ ಇಲಾಖೆ ಮತ್ತು ಇತರ ವರದಿಗಳು ಮತ್ತು ಸಮೀಕ್ಷೆಗಳಿಂದ ಸಂಗ್ರಹಿಸಲಾದ ದ್ವಿತೀಯ ದತ್ತಾಂಶ<br>+<br>ಪ್ರಾಥಮಿಕ ಕ್ಷೇತ್ರ ಸಮೀಕ್ಷೆ | 1. ಪಂಚಾಯಿತಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಗ್ರಾಮ ಸಭೆಯ (56.75) ನಂತರ ಸ್ನೇಹಿತರು (28.16) ಮೂಲಕ ಜಾಗೃತಿಯ ಪ್ರಮುಖ ಮೂಲವಾಗಿದೆ.<br>2. ಕಾರ್ಯಕ್ರಮ ಅನುಷ್ಠಾನ ನಿಯೋಗ ಮತ್ತು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳು ಜಾಗೃತಿ–ನಿರ್ಮಾಣ ಮತ್ತು ಅಭ್ಯರ್ಥಿಗಳ ಆಯ್ಕೆಯಲ್ಲಿ ಬಹುತೇಕ ಯಾವುದೇ ಪಾತ್ರವನ್ನು ವಹಿಸುವುದಿಲ್ಲ.<br>3. ಸ್ಥಳೀಯ ಮಟ್ಟದಲ್ಲಿ ಯಾವುದೇ ತೀವ್ರ ಕೌಶಲ್ಯ– ನಕ್ಷಾ ನಿರೂಪಣೆ ಮತ್ತು ಅಗತ್ಯ ಮೌಲ್ಯಮಾಪನವನ್ನು ಮಾಡಲಾಗಿಲ್ಲ ಇದು ಕೆಲವು ಕೌಶಲ್ಯಗಳ ಸುತ್ತಲೂ ಅಭ್ಯರ್ಥಿಗಳ ಏಕಾಗ್ರತೆಗೆ ಕಾರಣವಾಗುತ್ತದೆ.<br>4. ಫಲಾನುಭವಿಗಳನ್ನು ಆಯ್ಕೆ ಮಾಡಲು ಅರ್ಹತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿಲ್ಲ. 35 ವರ್ಷ ಮೇಲ್ಪಟ್ಟವರ ಮೇಲಿನ ವಯಸ್ಸಿನ ಗುಂಪುಗಳಿಗೆ ಸಂಬಂಧಿಸಿದಂತೆ ಹೀಗೆ ಕನಿಷ್ಠ 9 ಪ್ರತಿಶತ ಫಲಾನುಭವಿಗಳು ಹೆಚ್ಚು ವಯಸ್ಸಿನವರಾಗಿದ್ದರು. | 1. ಸರಿಯಾದ ಕೌಶಲ್ಯ ನಕ್ಷಾ ನಿರೂಪಣೆಯನ್ನು ಕೌಶಲ್ಯಗೊಳಿಸಲು ಮೊದಲು ಸ್ಥಳೀಯವಾಗಿ ಸಂಬಂಧಿತ ಕೌಶಲ್ಯದ ಭಂಡಾರ ಮತ್ತು ಕೌಶಲ್ಯಗಳ ವಿಷಯದಲ್ಲಿ ಸ್ಥಳೀಯ ಅಗತ್ಯ ಮೌಲ್ಯಮಾಪನವನ್ನು ಮಾಡಬೇಕಾಗಿದೆ.<br>2. ಯೋಜನೆಯ ಎರಡೂ ಘಟಕಗಳಲ್ಲಿ ಪ್ರವೇಶ ಮಟ್ಟದ ಅರ್ಹತೆಯನ್ನು ಪರಿಶೀಲಿಸಬೇಕಾಗಿದೆ. ಕನಿಷ್ಠ ಪ್ರವೇಶ ಮಟ್ಟದ ವಯಸ್ಸನ್ನು 21 ವರ್ಷಗಳನ್ನಾಗಿ ಮಾಡಲು ಅದನ್ನು ಪರಿಷ್ಕರಿಸಿವುದು.<br>3. ಮೊದಲ ಬಾರಿಗೆ ಫಲಾನುಭವಿಗಳಿಗೆ ಮಾತ್ರ ಯೋಜನೆಯ ಪ್ರಯೋಜನವನ್ನು ಯಾವುದೇ ರಾಜ್ಯ ಪ್ರಾಯೋಜಿತ ಯೋಜನೆಗಳಿಗೆ ಸೀಮಿತಗೊಳಿಸುವ ಕಠಿಣ ನಿಯಮವನ್ನು ಕೌಶಲ್ಯ ಮತ್ತು ಸ್ವಾವಲಂಬನೆಯ ಹಿನ್ನೆಲೆಯಲ್ಲಿ ಮರುಪರಿಶೀಲಿಸಬೇಕಾಗಿದೆ.<br>4. ನಕಲು ಮತ್ತು ಸಮಯ ವ್ಯರ್ಥವಾಗುವುದನ್ನು ನಿಲ್ಲಿಸಲು ಫಲಾನುಭವಿಗಳು ಮತ್ತು ಕುಟುಂಬವು ಈ ಹಿಂದೆ ಪಡೆದ ಸರ್ಕಾರಿ ಸಾಲಗಳ ಜಾಡು ಹಿಡಿಯಲು ಒಂದು ಆ್ಯಪ್ ಆಧಾರಿತ, ಆಧಾರ್ ಸಂಬಂಧಿತ ತಂತ್ರಾಂಶವನ್ನು ತಯಾರಿಸಬಹುದು.<br>5. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ವೇತನ ಉದ್ಯೋಗ ಘಟಕವನ್ನು ಉದ್ದೇಶಿಸಿ ಮಾತನಾಡುವಾಗ ಅದು ಕಾರ್ಯಕ್ರಮದ ಉದ್ಯಮಶೀಲತೆ ಮತ್ತು ಸ್ವಯಂ ಉದ್ಯೋಗ ಘಟಕವನ್ನು ಸಹ ಉತ್ತೇಜಿಸಬೇಕು. ಇವೆರಡೂ ಪರಸ್ಪರ ಪ್ರತ್ಯೇಕವಾಗಿ ಉಳಿಯಬೇಕಾಗಿಲ್ಲ ಬದಲಾಗಿ ವೇತನ, ಉದ್ಯೋಗದ ಜೊತೆಗೆ ಅವರು ಸಲ್ಲಿಸಿದ ಪ್ರಸ್ತಾಪಗಳ ಆಧಾರದ ಮೇಲೆ ಸಾಂಸ್ಥಿಕ ಸಾಲ ಮತ್ತು ಅರ್ಹ ಅಭ್ಯರ್ಥಿಗಳಿಗೆ ಸಹಾಯಧನ ಸಾಲಗಳ ಮೂಲಕ ಸ್ವಯಂ ಉದ್ಯೋಗ ಮತ್ತು ಉದ್ಯಮಶೀಲತೆ ಚಟುವಟಿಕೆಗಳ ಆಯ್ದ ಉತ್ತೇಜನ ಇರಬಹುದು. |
| ಕೌಶಲ್ಯ ತರಬೇತಿ ಮತ್ತು ಸ್ವಯಂ ಉದ್ಯೋಗ ವೈಯಕ್ತಿಕ ಉದ್ಯಮಗಳನ್ನು ಪ್ರಾರಂಭಿಸುವ ಮೂಲಕ ನಿರುದ್ಯೋಗಿ ಯುವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು.<br><br>ಗ್ರಾಮೀಣ ಬಡ ಯುವಕರಿಗೆ | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ | 1. ತರಬೇತಿ ಪಡೆದ 40 ಪ್ರತಿಶತಕ್ಕೂ ಹೆಚ್ಚು ಫಲಾನುಭವಿಗಳು ಬ್ಯಾಂಕ್ ಸಾಲಗಳಿಗೆ ಅನರ್ಹರು ಎಂದು ಕಂಡುಬಂದಿದೆ. ಈ ನಿರ್ಮೂಲನೆಯು ಉಡುಪಿ ಜಿಲ್ಲೆಯ ವಿಷಯದಲ್ಲಿ 45.83 ಪ್ರತಿಶತದೊಂದಿಗೆ ಅತ್ಯಧಿಕವಾಗಿತ್ತು ನಂತರ ಕಲಬುರಗಿ (45.75%), ಬಾಗಲಕೋಟೆ (45.37%), ಮತ್ತು ಯಾದಗಿರಿ (41.27%). ಧಾರವಾಡ ಮತ್ತು ಹಾಸನದಲ್ಲಿ (31.40 ಮತ್ತು 32.84%) ಕನಿಷ್ಠ ತಿರಸ್ಕಾರದ ಪ್ರಮಾಣ ನಡೆಯಿತು. | 1. ಸ್ವಯಂ ಉದ್ಯೋಗಕ್ಕಾಗಿ ತರಬೇತಿ ಕಾರ್ಯಕ್ರಮಗಳ ವಿಷಯಗಳು ಹೆಚ್ಚು ವೈಜ್ಞಾನಿಕ ಮತ್ತು ಪ್ರಸ್ತುತವಾಗಿರಬೇಕು. ಇಲಾಖೆಯು ಪ್ರಾಥಮಿಕ ಪ್ರದೇಶ–ನಿರ್ದಿಷ್ಟ ಅಗತ್ಯ ವಿಶ್ಲೇಷಣೆಯನ್ನು ಮಾಡಬೇಕಾಗಿದೆ. ಮತ್ತು ಕಾರ್ಯದಲ್ಲಿ ತೊಡಗುವ ಮೊದಲು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳನ್ನು ಅವರ ನಿರ್ದಿಷ್ಟ ಕೌಶಲ್ಯ–ಪಾಲುದಾರಿಕೆ ಸಾಮರ್ಥ್ಯಗಳ ದೃಷ್ಟಿಯಿಂದ ಮೌಲ್ಯಮಾಪನ ಮಾಡಬೇಕು.<br>2. ಸಾಕಷ್ಟು ಮಾನವ ಸಂಪನ್ಮೂಲ ಹೊಂದಿರುವ ಸೂಕ್ತ ಕಾರ್ಯಕ್ರಮ |

| | | | |
|---|---|---|---|
| ಉದ್ಯಮಶೀಲತೆ ಮತ್ತು ವ್ಯವಹಾರ ಕೌಶಲ್ಯಗಳಲ್ಲಿ ತರಬೇತಿ ನೀಡುವ ಮೂಲಕ ಆದಾಯ ಉತ್ಪಾದಿಸುವ ಯೋಜನೆಗಳನ್ನು ಪ್ರಾರಂಭಿಸಲು ಪ್ರೇರೇಪಿಸುವುದು. | ಸಂದರ್ಶನಗಳು | **2.** 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕಿರಿಯ ಗುಂಪುಗಳಲ್ಲಿ ಮತ್ತು 21 ರಿಂದ 25 ವರ್ಷಗಳ ನಡುವೆ ಫಲಾನುಭವಿಗಳ ಅನರ್ಹತೆಯ ಪ್ರಮಾಣವು ತುಂಬಾ ಕಡಿಮೆಯಾಗಿದೆ.<br>**3.** ಹೆಚ್ಚಿನ ಫಲಾನುಭವಿಗಳಿಗೆ ಈಗಾಗಲೇ ಉದ್ಯೋಗದಲ್ಲಿರುವ ಕಾರಣ ಸಾಲವು ಹೆಚ್ಚುವರಿ ಸಂಪನ್ಮೂಲವಾಗಿದೆ. ಯೋಜನೆಗೆ ಸೇರುವ ಮೊದಲು ನಿರುದ್ಯೋಗಿ ಎಂದು ಹೇಳಿಕೊಳ್ಳುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಬಾಗಲಕೋಟೆ (71.67 ಪ್ರತಿಶತ) ಅತ್ಯುನ್ನತ ಸ್ಥಾನದಲ್ಲಿದೆ.<br>**4.** ಸುಮಾರು 75 ಪ್ರತಿಶತದಷ್ಟು ಫಲಾನುಭವಿಗಳು ಸ್ವಯಂ ಉದ್ಯೋಗಕ್ಕಾಗಿ ಪಶುಸಂಗೋಪನೆ ಸಂಬಂಧಿತ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.<br>**5.** 56 ಪ್ರತಿಶತಕ್ಕೂ ಹೆಚ್ಚು 'ಫಲಾನುಭವಿಗಳು' ತಮ್ಮ ಆದಾಯದ ನಿರೀಕ್ಷೆಗಳನ್ನು ಮೀರಿದ್ದಾರೆ.<br>**6.** ತಮ್ಮ ಉದ್ಯಮವನ್ನು ಪ್ರಾರಂಭಿಸಿದ ನಂತರ 42.87% ಫಲಾನುಭವಿಗಳು 15,001 ರಿಂದ 20.000 ಗಳಿಸುತ್ತಾರೆ, 31.77% 12,001 ರಿಂದ 15,000 ಮತ್ತು 21.56% 12,000 ವರೆಗೆ ಸಂಪಾದಿಸುತ್ತಾರೆ ಮತ್ತು ಸುಮಾರು 4 ಪ್ರತಿಶತ ಫಲಾನುಭವಿಗಳು ಯಾವುದೇ ಸ್ವಯಂ ಉದ್ಯೋಗ ಚಟುವಟಿಕೆಯನ್ನು ಪ್ರಾರಂಭಿಸಲಿಲ್ಲ.<br>**7.** ಈ ಮೌಲ್ಯಮಾಪನವು ಕೇವಲ 22.49 ಪ್ರತಿಶತದಷ್ಟು ಯಶಸ್ವಿ ಫಲಾನುಭವಿಗಳು ಮಾತ್ರ ಸ್ವಯಂ ಉದ್ಯೋಗ ಉದ್ಯಮವನ್ನು ಪ್ರಾರಂಭಿಸಿದರು ಮತ್ತು ನಮ್ಮ ಅಧ್ಯಯನದ ಸಮಯದಲ್ಲಿ ಅದನ್ನು ಉಳಿಸಿಕೊಂಡರು ಎಂದು ಕಂಡುಬಂದಿದೆ.<br>**8.** ಮುಚ್ಚಲ್ಪಟ್ಟ ಉದ್ಯಮಗಳು, ಬ್ಯೂಟಿಪಾರ್ಲರ್‌ಗಳು (87.5%), ಹೋಟೆಲ್ /ಚಹಾ ಅಂಗಡಿಗಳು (80%), ನಂತರ ಕೋಳಿ ಸಾಕಾಣಿಕೆ ಮತ್ತು ಪಶುಸಂಗೋಪನೆ (63%), ಮತ್ತು ಚಿಲ್ಲರೆ ಮತ್ತು ಜವಳಿ ಅಂಗಡಿಗಳಲ್ಲಿ ಹೆಚ್ಚು ಗಮನಾರ್ಹ ಪಾಲು ಇದೆ.<br>**9.** ಕೇವಲ 6.56% ಫಲಾನುಭವಿಗಳು ಪಡೆದ ಸಾಲವನ್ನು ಸರ್ವವ್ಯಾಪಿಯಾಗಿ ಬಳಸಿದ್ದರು. | ಬೆಂಬಲಿಸುವ ನಿಯೋಗಗಳನ್ನು ಗುರುತಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕಾಗಿದೆ. ಉಪಗ್ರಹ ಆಧಾರಿತ ತರಬೇತಿಗಾಗಿ ಪ್ರಾದೇಶಿಕ ಭಾಷೆಗಳಲ್ಲಿ ಪ್ರಮಾಣೀಕೃತ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಬೇಕಾಗಿದೆ. ಜೀವನೋಪಾಯದ ಆಯ್ಕೆಗಳನ್ನು ಬೆಂಬಲಿಸುವ ಸುಸ್ಥಿರತೆ, ಲಾಭದಾಯಕತೆ ಮತ್ತು ಸಾಮರ್ಥ್ಯದ ದೃಷ್ಟಿಕೋನದಿಂದ ಸ್ವಯಂ ಉದ್ಯೋಗ ಮಾರ್ಗಗಳ ಕಾರ್ಯಸಾಧ್ಯತೆಯ ಎಚ್ಚರಿಕೆಯ ಮೌಲ್ಯಮಾಪನವನ್ನು ನಡೆಸಬೇಕು.<br>3. ಸಾಲದ ಕಾರ್ಯವಿಧಾನಗಳ ಬಗ್ಗೆ ವಾಣಿಜ್ಯ ಬ್ಯಾಂಕುಗಳೊಂದಿಗೆ ಉತ್ತಮ ತಿಳುವಳಿಕೆಯನ್ನು (ಮೇಲಾಧಾರ; ಒಂದು ಕುಟುಂಬವು ಅಸಲು ಆಗಿ ಒಂದು ಸಾಲ) ತಿರಸ್ಕಾರವನ್ನು ಕಡಿಮೆ ಮಾಡಲು ಖಚಿತಪಡಿಸಿಕೊಳ್ಳಬೇಕು.<br>4. "ಜಂಟಿ ಹೊಣೆಗಾರಿಕೆ" ಗುಂಪಿನ ಪರಿಕಲ್ಪನೆಯನ್ನು ರದ್ದುಗೊಳಿಸಬಹುದು ಮತ್ತು ಅದನ್ನು ಮುಂದುವರಿಸಿದರೂ ಅದು ದೊಡ್ಡ ನಿಧಿ ಸಂಗ್ರಹದೊಂದಿಗೆ ಸಹಕಾರಿ ಉಪಕ್ರಮವನ್ನು ಉತ್ತೇಜಿಸಬೇಕು.<br>5. ಫಲಾನುಭವಿಗಳು ತರಬೇತಿ ಪ್ರಾರಂಭಿಸುವ ಮೊದಲು ಸಾಲಗಳ ಅರ್ಹತಾ ಮಾನದಂಡಗಳ ಬಗ್ಗೆ ಅಭ್ಯರ್ಥಿಗಳು ಹಣಕಾಸು ಸಂಸ್ಥೆಗಳಿಂದ (ವಾಣಿಜ್ಯ ಬ್ಯಾಂಕುಗಳು) ಸರಿಯಾದ ಅನುಮತಿಯನ್ನು ಹಾಜರುಪಡಿಸಬೇಕು.<br>6. ಈ ಮೌಲ್ಯಮಾಪನವು ಪ್ರತಿಕ್ಷೇತ್ರಕ್ಕೆ ಕನಿಷ್ಠ ಸಂಖ್ಯೆಯ ತರಬೇತಿದಾರರನ್ನು ನಿಗದಿಪಡಿಸಲು ಮತ್ತು ಫಲಾನುಭವಿಗಳಿಗೆ ವಿಶಾಲವಾದ ಕೌಶಲ್ಯ ಆಯ್ಕೆಗಳನ್ನು ಒದಗಿಸಲು ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಕೊಳ್ಳುತ್ತದೆ. |

| | | | |
|---|---|---|---|
| ಕೌಶಲ್ಯ ತರಬೇತಿ ಮತ್ತು ವೇತನ – ಉದ್ಯೋಗ<br>ವೃತ್ತಿಪರ ಮತ್ತು ವ್ಯವಸ್ಥಾಪಕ ಕೌಶಲ್ಯಗಳನ್ನು ಉನ್ನತೀಕರಿಸುವ ಮೂಲಕ ಮತ್ತು ವೇತನ ಉದ್ಯೋಗಕ್ಕೆ ಅವಕಾಶಗಳನ್ನು ಸೃಷ್ಟಿಸುವ ಮೂಲಕ ನಿರುದ್ಯೋಗಿ ಯುವಕರ ಆದಾಯವನ್ನು ಸುಧಾರಿಸುವುದು.<br><br>ತರಬೇತಿ ಪಡೆದ ಯುವಕರಿಗೆ ನಿಯೋಜನೆ ಮತ್ತು ಸೃಷ್ಟಿಸಲಾದ ಉದ್ಯೋಗಾವಕಾಶಗಳನ್ನು ಪರಿಶೀಲಿಸುವುದು. | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ ಸಂದರ್ಶನಗಳು | 1. ಕೌಶಲ್ಯ ಮತ್ತು ಉದ್ಯೋಗ ಕಾರ್ಯಕ್ರಮವು ಹೆಚ್ಚು ಶಿಕ್ಷಣ ಪಡೆಯದವರಲ್ಲಿ ಪಿಯುಸಿ ಮಟ್ಟವನ್ನು ಮೀರಿಲ್ಲ. ಎಸ್‌ಎಸ್‌ಎಲ್‌ಸಿ ವರೆಗೆ ಕನಿಷ್ಠ ಶಿಕ್ಷಣ ಹೊಂದಿರುವ ಫಲಾನುಭವಿಗಳನ್ನು ಶೇಕಡಾ 58.26 ರಷ್ಟು ಹೆಚ್ಚು ಲೆಕ್ಕ ಹಾಕಲಾಗುತ್ತದೆ. ವಿಶ್ವ ವಿದ್ಯಾಲಯ ಪೂರ್ವ ಶಿಕ್ಷಣ ಹೊಂದಿರುವವರು ಶೇಕಡಾ 25.21. ಮಹಿಳಾ ಫಲಾನುಭವಿಗಳಲ್ಲಿ ಹೆಚ್ಚಿನ ಪದವೀಧರರು ಇದ್ದಾರೆ.<br>2. ಕೋಷ್ಟಕ 10.2.6.ಎ ಹೊಲಿಗೆ ಕೆಲಸ (32.19%) ಆಯ್ಕೆ ಮಾಡಿದ ಫಲಾನುಭವಿಗಳು ಹೆಚ್ಚಿನವರಾಗಿದ್ದಾರೆ ನಂತರ ಕಂಪ್ಯೂಟರ್ ಸಂಬಂಧಿತ ಉದ್ಯಮಗಳಲ್ಲಿ (24.12%) ಇದ್ದಾರೆ ಎಂದು ಪ್ರತಿಬಿಂಬಿಸುತ್ತದೆ. ಬೆಂಗಳೂರು ನಗರ ಜಿಲ್ಲೆಯು, ಈ ಪ್ರದೇಶದಲ್ಲಿ ರಫ್ತು ಆಧಾರಿತ ಉಡುಪು ಕಾರ್ಖಾನೆಗಳ ಕೇಂದ್ರೀಕರಣದಿಂದಾಗಿ, ಜವಳಿ ವಿನ್ಯಾಸ, ಹೊಲಿಗೆ ಕೆಲಸ ಮತ್ತು ಸಂಬಂಧಿತ ಕ್ಷೇತ್ರಗಳನ್ನು ಆಯ್ಕೆ ಮಾಡುವವರಲ್ಲಿ ಹೆಚ್ಚಿನ ಪಾಲನ್ನು (35.18 ಪ್ರತಿಶತ) ಹೊಂದಿದೆ.<br>3. ಕೋಷ್ಟಕ 10.2.9 ರಲ್ಲಿ ಕಂಡುಬರುವಂತೆ, ಪ್ರತಿಯೊಂದು ಔದ್ಯೋಗಿಕ ಕೌಶಲ್ಯ ವಿಭಾಗಗಳಲ್ಲಿ 20–30 ವರ್ಷಗಳ ವಯಸ್ಸಿನವರಲ್ಲಿ ಹೆಚ್ಚು ಗಮನಾರ್ಹ ಪಾಲು ಇದೆ. ಫಲಾನುಭವಿಗಳೊಂದಿಗಿನ ಗುಣಾತ್ಮಕ ಸಂವಾದವು 20 ವರ್ಷಕ್ಕಿಂತ ಕಡಿಮೆ ವಯಸ್ಸಿನ ಫಲಾನುಭವಿಗಳು ಇನ್ನೂ ಮನಸ್ಸು ಮಾಡದ ಕಾರಣ ದುರ್ಬಲರಾಗಿದ್ದಾರೆ ಎಂದು ಬಹಿರಂಗಪಡಿಸುತ್ತದೆ ಆದರೆ 35 ವರ್ಷಕ್ಕಿಂತ ಹೆಚ್ಚು ವಯಸ್ಸಿನವರು ತಮ್ಮ ಜೀವನ ಹಾದಿಯಲ್ಲಿ ಹೊಸದನ್ನು ಪಡೆಯಲು ಅಥವಾ ಈಗಾಗಲೇ ನಿರ್ಧರಿಸಲಾದ ಯಾವುದನ್ನೂ ಪಡೆಯಲು ತುಂಬಾ ವಯಸ್ಕರಾಗಿದ್ದಾರೆ.<br>4. 43.47 ಪ್ರತಿಶತ ಜನರು ಯಾವುದೇ ತರಬೇತಿ ಕಾರ್ಯಕ್ರಮಕ್ಕೆ ಒಳಗಾಗುವ ಮೊದಲು ನಿರುದ್ಯೋಗಿಗಳಾಗಿದ್ದಾರೆ ಎಂದು ವರದಿ ಮಾಡಲಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಫಲಾನುಭವಿಗಳ ಮಾಹಿತಿಯನ್ನು ಒಪ್ಪಿಕೊಂಡಂತೆ 56 ಪ್ರತಿಶತದಷ್ಟು ಜನರು ಕಾರ್ಯಕ್ರಮದಲ್ಲಿ ಸೇರಿಕೊಳ್ಳಲು ಅರ್ಹತೆಯನ್ನು ಹೊಂದಿಲ್ಲ.<br>5. ಕಾರ್ಯಕ್ರಮ ಅನುಷ್ಠಾನ ನಿಯೋಗಗಳ ಮೂಲಕ ನಿಯೋಜನೆಯ ಪ್ರಯೋಜನಗಳನ್ನು ಕೇವಲ 76 ಪ್ರತಿಶತದಷ್ಟು ಮಾತ್ರ ಪಡೆದುಕೊಂಡಿದ್ದಾರೆ. ಸುಮಾರು 24 ಪ್ರತಿಶತದವರು ತಾವು ಸೇವೆಯನ್ನು ಪಡೆದುಕೊಂಡಿಲ್ಲ ಎಂದು ವರದಿ ಮಾಡಿದ್ದಾರೆ. ಇದು | 1. ಕೌಶಲ್ಯ ತರಬೇತಿ ಮತ್ತು ನಿಯೋಜನೆ ಕಾರ್ಯಕ್ರಮ ಪೂರೈಕೆ–ಸ್ವರೂಪದ ಕಾರ್ಯಕ್ರಮಕ್ಕಿಂತ ಬೇಡಿಕೆ–ಚಾಲಿತ ಆಗಬೇಕು. ಈ ಕಾರ್ಯಕ್ರಮವು ಮೊದಲು ಸಂಭಾವ್ಯ ಉದ್ಯೋಗದಾತರ ಸಂಸ್ಥೆಗಳಿಂದ ಕೌಶಲ್ಯಗಳ ಬೇಡಿಕೆಯನ್ನು ಮೌಲ್ಯಮಾಪನ ಮಾಡಬೇಕು ಮತ್ತು ನಂತರ ನಿರುದ್ಯೋಗಿ ಯುವಕರಿಗೆ ತರಬೇತಿಯನ್ನು ಕೈಗೊಳ್ಳಬೇಕು. ಸರ್ಕಾರವು ಕೈಗಾರಿಕೆಗಳ ಸಂಭಾವ್ಯ ಉದ್ಯೋಗದಾತರೊಂದಿಗೆ ಒಪ್ಪಂದ<br>2. ಮಾಡಿಕೊಳ್ಳಬಹುದು ಮತ್ತು ಅವರನ್ನು ಕೌಶಲ್ಯದಲ್ಲಿ ತೊಡಗಿಸಿಕೊಳ್ಳಬಹುದು (ಉಲ್ಲೇಖ : ಕೆಫೆ ಕಾಫಿಡೇ ಗ್ರಾಮ್ ತರಂಗ್ ಉಪಕ್ರಮ)<br>3. ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಪ್ರಮಾಣಿತ ತರಬೇತಿ ಮಾಡ್ಯೂಲ್‌ಗಳೊಂದಿಗೆ ಸೂಕ್ತ ಕಾರ್ಯಕ್ರಮ ಅನುಷ್ಠಾನ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗಿದೆ.<br>4. ಉತ್ತಮ ಸಮನ್ವಯ ವಿಶೇಷವಾಗಿ ಹೊಸದಾಗಿ ಉದ್ಯೋಗದಲ್ಲಿರುವ ವ್ಯಕ್ತಿಗಳಿಗೆ ವೇತನ ಪ್ರಸ್ತಾವನೆಗಳ ಬಗ್ಗೆ (ಕನಿಷ್ಠ ವೇತನ, ಕೆಲಸದ ಸಮಯ, ಸಾಮಾಜಿಕ ಭದ್ರತಾ ಕ್ರಮಗಳು) ಖಚಿತಪಡಿಸಿಕೊಳ್ಳಬೇಕು.<br>5. ಕೌಶಲ್ಯ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ನೀಡಲಾಗುವ ಕೌಶಲ್ಯಗಳ ಸೆಟ್ (ಸಾಮಾನ್ಯ ಅಂಗಡಿ, ಹೈನುಗಾರಿಕೆ) ಹೆಚ್ಚಾಗಿ ಒಂದು ತಿಂಗಳ ತರಬೇತಿಅವಧಿಯನ್ನು ನೀಡಬೇಕಾದ ವ್ಯಾಪಾರಗಳಲ್ಲ. ಆದ್ದರಿಂದ, ಸೂಕ್ತ ಕೌಶಲ್ಯವನ್ನು ಗುರುತಿಸುವಲ್ಲಿ ಮತ್ತು ಕಠಿಣ ತರಬೇತಿಯ ನಂತರ ಹೆಚ್ಚು ಸಂಘಟಿತ ಪ್ರಯತ್ನಗಳನ್ನು ಮಾಡಬೇಕಾಗಿದೆ. |

| | | | |
|---|---|---|---|
| | | ತುಮಕೂರು ಮತ್ತು ಕೊಡಗು ಜಿಲ್ಲೆಗಳಲ್ಲಿದೆ, ಅಲ್ಲಿ ಸುಮಾರು 100 ಪ್ರತಿಶತ ಉದ್ಯೋಗ ನಿಯೋಜನೆ ಇದೆ. ಉದ್ಯೋಗ ನಿಯೋಜನೆಯ ಸಮಂಜಸವಾದ ಹೆಚ್ಚಿನ ಶೇಕಡಾದರ ಹೊಂದಿರುವ ಇತರ ಜಿಲ್ಲೆಗಳು ಕಲ್ಬುರ್ಗಿ (84.14%) ಮತ್ತು ಬೆಂಗಳೂರು ನಗರ (76.12%).<br>6. ಸುಮಾರು 73 ಪ್ರತಿಶತ ಫಲಾನುಭವಿಗಳ ವಿಷಯದಲ್ಲಿ, ತರಬೇತಿ ಕ್ಷೇತ್ರವು ಉದ್ಯೋಗ ಕ್ಷೇತ್ರದೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗಿದೆ. ಹೊಂದಾಣಿಕೆಯಾಗದ ನಿದರ್ಶನಗಳು ಕೇವಲ 2.99 ಪ್ರತಿಶತ ಪ್ರಕರಣಗಳ ಮಟ್ಟಿಗೆ ಮಾತ್ರ ಇದ್ದವು.<br>7. ಕೆಲವರಿಗೆ ಮಾಸಿಕ ವೇತನ 3000–4000 ರೂ.ಗಳಷ್ಟು ಕಡಿಮೆ ಇದೆ. ಇದು ಭೂಮಿಯ ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತದೆ. ಉದ್ಯೋಗ ನಿಯೋಜನೆ ಸೇವೆಗಳ ಮೂಲಕ ಉದ್ಯೋಗವನ್ನು ಕಂಡುಕೊಂಡ ಸುಮಾರು ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ಒಂದು ತಿಂಗಳಲ್ಲಿ ರೂ.7500 ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ. | |
| ಯುವಕರು ತಮ್ಮ ಸ್ಥಳೀಯ ವಾಸಸ್ಥಾನಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಪಟ್ಟಣಗಳು ಮತ್ತು ನಗರಗಳಿಗೆ ವಲಸೆ ಹೋಗುವುದನ್ನು ಪರಿಶೀಲಿಸುವುದು | ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ ಸಂದರ್ಶನಗಳು | 1. ಸ್ವಯಂ ಉದ್ಯೋಗ ಅಥವಾ ಕೌಶಲ್ಯಗಳು ಮತ್ತು ಉದ್ಯೋಗದ ಗುರಿಗಳು ಪ್ರಾಥಮಿಕವಾಗಿ ಗ್ರಾಮೀಣ ನಿರುದ್ಯೋಗಿ ಯುವಕರ ನಗರ ವಲಸೆಯನ್ನು ತಡೆಗಟ್ಟುವುದಾದರೆ, ಅವರು ತರಬೇತಿ ಪಡೆದ ಕ್ಷೇತ್ರಗಳು ಹೆಚ್ಚು ಗ್ರಾಮೀಣ ಸಂಬಂಧಿತ ವಿಷಯ ಮತ್ತು ದೃಷ್ಟಿಕೋನವನ್ನು ಹೊಂದಿರಬೇಕು. ಅಂತಹ ಉದ್ಯಮಗಳು ಅಥವಾ ಕೌಶಲ್ಯಗಳ ಮಾರುಕಟ್ಟೆ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕು. ಉದಾಹರಣೆಗೆ, ಭದ್ರತಾ ಸೇವೆಗಳು, ಅಥವಾ ಗಣಕಯಂತ್ರ ಯಂತ್ರಾಂಶ ನಿರ್ವಹಣೆ ಕ್ಷೇತ್ರದಲ್ಲಿ ಯುವಕರಿಗೆ ತರಬೇತಿ ನೀಡುವ ಮತ್ತು ಅವರು ಸ್ವಯಂ ಉದ್ಯೋಗಿಗಳಾಗುತ್ತಾರೆ ಅಥವಾ ಗ್ರಾಮೀಣ ವಾಸಸ್ಥಾನಗಳಲ್ಲಿ ಉದ್ಯೋಗದಲ್ಲಿ ಇರಿಸಲ್ಪಡುತ್ತಾರೆ ಎಂದು ನಿರೀಕ್ಷಿಸುವ ಉಪಯುಕ್ತತೆಯಾಗಿದೆ.<br>2. ಸ್ವಯಂ ಉದ್ಯೋಗ ಅಥವಾ ಕೌಶಲ್ಯದ ಮೂಲಕ ಗ್ರಾಮೀಣ ಯುವಕರ ವಲಸೆಯನ್ನು ತಡೆಗಟ್ಟುವತ್ತ ಗಮನ ಹರಿಸುವುದು ಅದರಲ್ಲಿ ಅಂತರ್ಗತ ವಿರೋಧಾಭಾಸವನ್ನು ಹೊಂದಿದೆ. ಈ ಅಧ್ಯಯನದಲ್ಲಿ ಕಂಡುಬರುವಂತೆ ಯಶಸ್ಸು ಒಬ್ಬರು ವಲಸೆ ಹೋಗಲು ಕಾರಣವಾಗುವ ಸಂದರ್ಭಗಳಿದ್ದರೆ, ಮತ್ತೊಬ್ಬರಲ್ಲಿ ವೈಫಲ್ಯವು ವಲಸೆ ಹೋಗಲು ಕಾರಣವಾಗುತ್ತದೆ. | 1. ಯಾವುದೇ ನೀತಿಯನ್ನು ವಿನ್ಯಾಸಗೊಳಿಸುವಾಗ ಅಥವಾ ಅನುಷ್ಠಾನಗೊಳಿಸುವಾಗ ಕೌಶಲ್ಯಗಳ ಬೇಡಿಕೆ ಮತ್ತು ಕಾರ್ಮಿಕ ಮಾರುಕಟ್ಟೆ ರಚನೆಯ ಗುಣಲಕ್ಷಣದೊಂದಿಗೆ ಅವುಗಳ ಸಂಪರ್ಕಗಳ ಸರಿಯಾದ ತಿಳುವಳಿಕೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.<br>2. ಯೋಜನೆಯ ಮಾರ್ಗದರ್ಶಿ ಉದ್ದೇಶವಾಗಿ ವಲಸೆಯನ್ನು ತಡೆಗಟ್ಟುವ ಗುರಿಯನ್ನು ಅದರ ಕಾರ್ಯಸಾಧ್ಯತೆ ಮತ್ತು ವಾಸ್ತವಿಕತೆ ಇಲ್ಲದಿರುವುದರಿಂದ ಪರಿಷ್ಕರಿಸಬೇಕಾಗಿದೆ. |

| | | | |
|---|---|---|---|
| | | 3. ಅನೇಕ ವೇಳೆ ಆದ್ಯತೆಯ ಕೌಶಲ್ಯಕ್ಕೆ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಇರುವುದಿಲ್ಲ. ಕೆಲವು ಪ್ರಯೋಜನಗಳನ್ನು ಪಡೆಯುವುದರಿಂದ ವೈಯಕ್ತಿಕ ಆಕಾಂಕ್ಷೆಗಳ ಮೇಲೆ ನಿರ್ಬಂಧವು ಫಲಾನುಭವಿಗಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. | |
| ಲಿಂಗದ ವಿಷಯದಲ್ಲಿ ಯೋಜನೆಯ ಸಮಾವಿಷ್ಟತೆ | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ | 1. **ಸ್ವಯಂ ಉದ್ಯೋಗದ** ಘಟಕವು ಕೇವಲ 28.9 ಪ್ರತಿಶತ ಫಲಾನುಭವಿಗಳು ಮಹಿಳೆಯರಾಗಿದ್ದಾರೆ. ಹೈದರಾಬಾದ್ ಕರ್ನಾಟಕ ವಲಯದ ಜಿಲ್ಲೆಗಳಾದ ಯಾದಗಿರಿ (7.69) ಮತ್ತು ಕಲಬುರಗಿ (16.86)ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆಯಿದ್ದರೆ, ಉಡುಪಿ (72.73) ಮತ್ತು ಬೆಂಗಳೂರು–ನಗರ (51.52) ಜಿಲ್ಲೆಗಳಲ್ಲಿ ಅತಿ ಹೆಚ್ಚು ಮತ್ತು ಬಹಳಷ್ಟು ಮಟ್ಟಿಗೆ ಮಹಿಳೆಯರು ಪುರುಷರಿಗಿಂತ ಉತ್ತಮ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ್ದಾರೆ.<br>2. ಮುಚ್ಚಲ್ಪಟ್ಟ ಉದ್ಯಮಗಳಲ್ಲಿ ಬ್ಯೂಟಿ ಪಾರ್ಲರ್‌ಗಳು (87.5%) ಹೆಚ್ಚು ಗಮನಾರ್ಹ ಪಾಲು ಹೊಂದಿವೆ. ಇದು ಸಾಲದ ಮೊತ್ತವನ್ನು ಸ್ವಾವಲಂಬನೆಯನ್ನು ಹೊರತುಪಡಿಸಿ ಇತರ ಉದ್ದೇಶಗಳಿಗೆ ಖರ್ಚು ಮಾಡಲಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ.<br>3. **ವೇತನ–ಉದ್ಯೋಗ:** ಮಹಿಳೆಯರ ಪ್ರಮಾಣವು ಈ ಘಟಕದಲ್ಲಿ ಸ್ವಲ್ಪ ಹೆಚ್ಚು ಸುಮಾರು 40 ಪ್ರತಿಶತ ಮಹಿಳಾ ಫಲಾನುಭವಿಗಳಲ್ಲಿ ಅತ್ಯಂತ ಕಡಿಮೆ ಪಾಲು ರಾಯಚೂರಿನ ಜಿಲ್ಲೆಯಿಂದ 12.50 ಪ್ರತಿಶತ, ನಂತರ ಕಲಬುರಗಿ ಜಿಲ್ಲೆ 21.61 ಪ್ರತಿಶತ. ತುಮಕೂರಲ್ಲಿ ಅತಿ ಹೆಚ್ಚು ಶೇಕಡಾದರ ಮಹಿಳೆಯರು 80.61 ಪ್ರತಿಶತ ನಂತರ ಮಂಡ್ಯ 51.52 ಪ್ರತಿಶತ.<br>4. ಬ್ಯೂಟಿ ಪಾರ್ಲರ್‌ಗಳು (73 ಪ್ರತಿಶತ), ಹೊಲಿಗೆ ಕೆಲಸ (62 ಪ್ರತಿಶತ), ಮತ್ತು ಪಶು ಸಂಗೋಪನೆ (46 ಪ್ರತಿಶತ) ಯಂತಹ ವೃತ್ತಿಯಲ್ಲಿ ಮಹಿಳೆಯರು ಹೆಚ್ಚಾಗಿದ್ದಾರೆ ಮತು ್ತಅದು ಅಸ್ತಿತ್ವದಲ್ಲಿರುವ ಲಿಂಗ ಪಾತ್ರಗಳ ಬಲವರ್ಧನೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಇಲ್ಲಿಯವರೆಗೆ ಪುರುಷ ಭದ್ರಕೋಟೆ ಎಂದು ಪರಿಗಣಿಸಲಾಗಿದ್ದ ಕೌಶಲ್ಯಗಳನ್ನು ಪಡೆಯುವ ಮೂಲಕ ಮಹಿಳೆಯರು ಪ್ರವೇಶ ಪಡೆದ ಇತರ ಕ್ಷೇತ್ರಗಳೆಂದರೆ ಗಣಕಯಂತ್ರಗಳು (32 ಪ್ರತಿಶತ), ಹೋಟೆಲ್ (30 ಪ್ರತಿಶತ); ಸಾಮಾನ್ಯ ಅಂಗಡಿಗಳು (21 ಪ್ರತಿಶತ), ಮೊಬೈಲ್ ಫೋನ್ | 1. ಯೋಜನೆಯಲ್ಲಿ ಹೆಚ್ಚಿನ ಮಹಿಳೆಯರನ್ನು ಉತ್ತೇಜಿಸಬೇಕಾಗಿದೆ ಮತ್ತು ಕೌಶಲ್ಯದ ವಿಷಯದಲ್ಲಿ ಲಿಂಗ–ರೂಪ ಮಾದರಿ (ಸ್ಟೀರಿಯೊಟೈಪಿಂಗ್)ಯನ್ನು ತರಬೇತಿ ಪಾಲುದಾರರುಗಳ ಸರಿಯಾದ ಸಮಾಲೋಚನೆಯ ಮೂಲಕ ತಡೆಯಬೇಕಾಗಿದೆ.<br>2. ಯೋಜನೆಯಲ್ಲಿ ಫಲಾನುಭವಿಗಳನ್ನು ಉಳಿಸಿಕೊಳ್ಳುವುದು ಅವರ ಸಾಲದ ಮೊತ್ತವನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರ ಖರ್ಚು ಮಾಡಬೇಕೆಂದು ಒತ್ತಾಯಿಸುತ್ತದೆ.<br>3. ಮಂಗಳಮುಖಿ ವ್ಯಕ್ತಿಗೆ ಅರ್ಹತಾ ಖಂಡವನ್ನು ಸಡಿಲಿಸಬೇಕಾಗಿದೆ, ಮತ್ತು ಅವರ ಆಯ್ಕೆಯ ಸ್ಥಳದಿಂದ ಪ್ರಯೋಜನವನ್ನು ಪಡೆಯಲು ಅವರಿಗೆ ಅವಕಾಶ ನೀಡಬೇಕು ಏಕೆಂದರೆ ಅವರ ಸ್ವಂತ ಸ್ಥಳದಿಂದ ಪ್ರಯೋಜನಗಳನ್ನು ಪಡೆಯಲು ಅವರ ಗುರುತನ್ನು ಬಹಿರಂಗ ಪಡಿಸುವುದು ಸವಾಲಾಗಿದೆ. |

| | | | |
|---|---|---|---|
| | | ಸಂಬಂಧಿತ (17%).<br>5. **ಮಂಗಳಮುಖಿ ಸಮುದಾಯವನ್ನು ಸೇರಿಸುವ ಬಗ್ಗೆ:** ಆದ್ಯತೆಯ ಆಧಾರದ ಮೇಲೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಮಂಗಳಮುಖಿ ಸಮುದಾಯದ ಸೇರ್ಪಡೆಯನ್ನು ಉತ್ತೇಜಿಸುವುದು ಬಹುತೇಕ ವಿಫಲವಾಗಿದೆ. ನಮ್ಮ ಕ್ಷೇತ್ರ ಶೋಧಕರು ಅಧ್ಯಯನ ಮಾಡಿದ ಫಲಾನುಭವಿಗಳಲ್ಲಿ ಒಬ್ಬ ಮಂಗಳಮುಖಿ ವ್ಯಕ್ತಿಯನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ ಮತ್ತು ಇಲಾಖೆಗೂ ಈ ಬಗ್ಗೆ ಯಾವುದೇ ದತ್ತಾಂಶ ಇಲ್ಲ. | |
| ಜಾತಿ ಮತ್ತು ಧರ್ಮದ ದೃಷ್ಟಿಯಿಂದ ಯೋಜನೆಯನ್ನು ಒಳಗೊಳ್ಳುತ್ತದೆ | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ | 1. **ಸ್ವಯಂ ಉದ್ಯೋಗ:** ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವು ನಮೂನೆಯಲ್ಲಿ ಶೇಕಡಾ 27.66 ರಷ್ಟಿದೆ. ಈ ಅರ್ಥದಲ್ಲಿ ಗುರಿಯನ್ನು 7.5 ಪ್ರತಿಶತಕ್ಕೂ ಹೆಚ್ಚು ಪಾಯಿಂಟ್‌ಗಳಿಂದ ಮೀರಿಸುವ ಸ್ವಾಗತವಿದೆ. ಆದರೆ ಮೂರು ಜಿಲ್ಲೆಗಳು ಈ ವಿಷಯದಲ್ಲಿ ಕೊರತೆಯನ್ನು ತೋರಿಸುತ್ತವೆ. ಧಾರವಾಡ (9.92 ಪ್ರತಿಶತ), ಚಿತ್ರದುರ್ಗ (17.03 ಪ್ರತಿಶತ), ಮತ್ತು ಯಾದಗಿರಿ (19.05 ಪ್ರತಿಶತ). ಅಧ್ಯಯನ ಮಾಡಿದ ಎಲ್ಲಾ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ (6.09) ಪ್ರಾತಿನಿಧ್ಯವು ಉದ್ದೇಶಿತ 9% ಆಗಿದೆ. ಫಲಾನುಭವಿಗಳಲ್ಲಿ ಶೇಕಡಾ ತೊಂಬತ್ತೈದು ಪ್ರತಿಶತ ಹಿಂದೂಗಳು, ಕೇವಲ 3.4% ಮುಸ್ಲಿಮರು ಮತ್ತು 1.5% ಕ್ರಿಶ್ಚಿಯನ್ನರು ಇದ್ದಾರೆ.<br>2. **ವೇತನ–ಉದ್ಯೋಗ:** ಯೋಜನೆಯಲ್ಲಿ ಪರಿಶಿಷ್ಟ ಜಾತಿ ಪಾಲ್ಗೊಳ್ಳುವಿಕೆಯ ಪ್ರಮಾಣವು ತುಲನಾತ್ಮಕವಾಗಿ 20% ಕ್ಕಿಂತ ಹೆಚ್ಚಾಗಿದೆ. ಪರಿಶಿಷ್ಟ ಪಂಗಡ ಫಲಾನುಭವಿಗಳ ಉಪಸ್ಥಿತಿ ಕೇವಲ 6.81 ಪ್ರತಿಶತ ಇದೆ.<br>3. ಫಲಾನುಭವಿಗಳ ಧಾರ್ಮಿಕ ಹಂಚಿಕೆಯ ವಿಷಯದಲ್ಲಿ, ಹಿಂದೂಗಳು 92.5%ನೊಂದಿಗೆ ಪ್ರಾಬಲ್ಯ ಸಾಧಿಸಿದ್ದಾರೆ ನಂತರ ಮುಸ್ಲಿಮರು ಕೇವಲ 6.8% ರಷ್ಟಿದ್ದಾರೆ. | ರಾಜೀವ್ ಗಾಂಧಿ ಚೈತನ್ಯ ಯೋಜನೆಯೋಜನೆಯಎರಡೂ ಘಟಕಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಈ ಕೆಳಗಿನ ಅಂಶಗಳನ್ನು ಗಮನಿಸಿದರೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವರನ್ನು ಸೇರಿಸಲು ನಿರ್ದಿಷ್ಟವಾಗಿ ಪರಿಶಿಷ್ಟ ಪಂಗಡಗಳ ಯುವಕರನ್ನು ಗುರಿಯಾಗಿಸುವ ಅಗತ್ಯವಿದೆ. ಇದು ಅಲ್ಪಸಂಖ್ಯಾತರಿಗೂ ಒಳ್ಳೆಯದು.<br>ವಿಕಲಚೇತನರನ್ನು (ಪಿಡಬ್ಲ್ಯೂಡಿ) ಯೋಜನೆಯ ಘಟಕಗಳೆರಡರಲ್ಲೂ ಆದ್ಯತೆಯ ಆಧಾರದ ಮೇಲೆ ಸೇರಿಸಬೇಕು ಮತ್ತು ಸಾಲಗಳನ್ನು ಪಡೆಯುವ ವಿಷಯದಲ್ಲಿ ಅವರಿಗೆ ಒಂದು ಬಾರಿಯ ಪ್ರಯೋಜನದ ನಿಯಮಗಳನ್ನು ಸಡಿಲಿಸಬೇಕು. |
| ಕಾರ್ಯಕ್ರಮ ಬೆಂಬಲಿತ ನಿಯೋಗಗಳು ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳು (ಟಿಪಿಗಳು) ಎದುರಿಸುತ್ತಿರುವ ಅನುಷ್ಠಾನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳು | ಕೇಂದ್ರೀಕೃತ ಸಮೂಹ ಚರ್ಚೆ + ಆಳವಾದ ಸಂದರ್ಶನಗಳು | 1. ಆಯ್ಕೆ ಪ್ರಕ್ರಿಯೆಯಲ್ಲಿ ತರಬೇತಿ ಪಾಲುದಾರರ ಕನಿಷ್ಠ ಪಾಲ್ಗೊಳ್ಳುವಿಕೆಯು ಹೆಚ್ಚಿನ ತಿರಸ್ಕಾರಕ್ಕೆ ಕಾರಣವಾಯಿತು. ತರಬೇತಿ ಪಡೆದ ಸಂಭಾವ್ಯ ಫಲಾನುಭವಿಗಳಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಜನರು ಬ್ಯಾಂಕ್ ಸಾಲಗಳಿಗೆ ಅನರ್ಹರು ಎಂದು ಕಂಡುಬಂದಿದೆ. ಅಂತಹ ವ್ಯಕ್ತಿಗಳಿಗೆ ತರಬೇತಿ ನೀಡಲು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳಿಗೆ ವೇತನ ನೀಡದಿದ್ದರೂ, ಇದರಿಂದ ಕಾರ್ಯಕ್ರಮ | 1. ತರಬೇತಿಯ ಸಾಕಷ್ಟು ಮಾನವ ಸಂಪನ್ಮೂಲ ಹೊಂದಿರುವ ಸೂಕ್ತ ಕಾರ್ಯಕ್ರಮ ಬೆಂಬಲಿತ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗಿದೆ. ಉಪಗ್ರಹ ಆಧಾರಿತ ತರಬೇತಿಗಾಗಿ ಪ್ರಾದೇಶಿಕ ಭಾಷೆಗಳಲ್ಲಿ ಪ್ರಮಾಣೀಕೃತ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಬೇಕಾಗಿದೆ. ಜೀವನೋಪಾಯದ ಆಯ್ಕೆಗಳನ್ನು ಬೆಂಬಲಿಸುವ ಸಾಮರ್ಥ್ಯ, ಸುಸ್ಥಿರತೆ, ಲಾಭದಾಯಕತೆ ದೃಷ್ಟಿಕೋನದಿಂದ ಸ್ವಯಂ |

| | | | |
|---|---|---|---|
| | | ಬೆಂಬಲಿಸುವ ನಿಯೋಗಗಳ ಸಂಪನ್ಮೂಲಗಳ ಮೇಲೆ ಬೃಹತ್ ನಷ್ಟದ ಪರಿಣಾಮ ಉಂಟಾಗುತ್ತಿದೆ. ಅವರು ತಮ್ಮ ನಷ್ಟವನ್ನು ಸರಿಪಡಿಸಲು ಇತರ ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸಬಹುದಾಗಿದೆ.<br>2. ವಿವಿಧ ಹಂತಗಳಲ್ಲಿ ಅನೇಕ ಬೇಡಿಕೆಗಳೊಂದಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಪ್ರಾರಂಭಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳವರೆಗೆ ಅನೇಕ ಹಸ್ತಕ್ಷೇಪ ತಾಲ್ಲೂಕು ಪಂಚಾಯಿತಿಗಳ ಕಾರ್ಯಕ್ಷಮತೆಯನ್ನು ಕಾಡುತ್ತಿವೆ.<br>3. ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಮತ್ತು ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳು ಈಗಾಗಲೇ ಖರ್ಚು ಮಾಡಿದ ವೆಚ್ಚಗಳ ಸಮಯೋಚಿತ ಮರುಪಾವತಿ ಸಂಭವಿಸುವುದಿಲ್ಲ.<br>4. ಕೌಶಲ್ಯ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಅವರನ್ನು ಉದ್ಯೋಗದಲ್ಲಿ ನಿಯೋಜಿಸಲು ತರಬೇತಿ ಪಾಲುದಾರರು ಮೂರು ವರ್ಷಗಳ ಕಾಲ ಹಿಂಬಾಲಿಸಲು ನಿರೀಕ್ಷಿಸುವುದು ಅವಾಸ್ತವಿಕವಾಗಿದೆ. 3 ರಿಂದ 4 ನೂರು ಜನರಿಗೆ ವಿವಿಧ ಉದ್ಯೋಗ ಸ್ಥಳಗಳಲ್ಲಿ ಇದನ್ನು ಮಾಡುವುದು ಕಷ್ಟ!<br>5. ತರಬೇತಿಗಾಗಿ ಅನೇಕ ವೇಳೆ ನುರಿತ ಸಂಪನ್ಮೂಲ ವ್ಯಕ್ತಿಗಳು ಲಭ್ಯವಿಲ್ಲದಿರುವುದು ತರಬೇತಿ ಪಾಲುದಾರರು ಕೆಲವು ಕೌಶಲ್ಯ ಉಪಕ್ರಮಗಳನ್ನು ಮಾತ್ರ ಆಯ್ಕೆ ಮಾಡಲು ಕಾರಣವಾಗಿದೆ.<br>6. ಎರಡೂ ಘಟಕಗಳಲ್ಲಿ ಫಲಾನುಭವಿಗಳು ಆಹಾರ ಮತ್ತು ವಸತಿಯ ಗುಣಗಳ ವಿರುದ್ಧ ಅಗಾಧವಾಗಿ ಪ್ರತಿಕ್ರಯಿಸಿದ್ದಾರೆ.<br>7. ತರಬೇತಿ ಮತ್ತು ವಸತಿಗಾಗಿ ಸ್ಥಳಗಳನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಬಾಡಿಗೆ ಸಮಸ್ಯೆಗಳ ಬಗ್ಗೆ ತರಬೇತಿ ಪಾಲುದಾರರು ತಮ್ಮ ದುಃಖವನ್ನು ವ್ಯಕ್ತಪಡಿಸಿದ್ದಾರೆ. | ಉದ್ಯೋಗ ಮಾರ್ಗಗಳ ಕಾರ್ಯ ಸಾಧ್ಯತೆಯನ್ನು ಸರಿಯಾಗಿ ಮಾಪನ ಮಾಡಬೇಕು.<br>2. ಪೂರ್ವ ನಿಗದಿತ ಷರತ್ತುಗಳನ್ನು ಪೂರೈಸಿದ ನಂತರ ಅವರಿಗೆ ಸಕಾಲದಲ್ಲಿ ಪಾವತಿಸಬೇಕು. |
| ಸಮಸ್ಯೆಗಳ ಬ್ಯಾಂಕ್ ಸಾಲಗಳನ್ನು ಪ್ರವೇಶಿಸುವಲ್ಲಿ ಅಂತರ್ಗತವಾಗಿರುವ ಅಡೆತಡೆಗಳ ಮೌಲ್ಯಮಾಪನ ಮತ್ತು ಮರುಪಾವತಿಯ ಸ್ಥಿತಿಗತಿ ಅಧ್ಯಯನ | ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ ಸಂದರ್ಶನಗಳು | 1. ತಮ್ಮ ಕಡೆಯಿಂದ ಯೋಜನೆ ಬೆಂಬಲಿಸುವ ನಿಯೋಗಗಳು ತರಬೇತಿ ಪಡೆದ ಫಲಾನುಭವಿಗಳಿಗೆ ಸಾಲದ ಅನುಮೋದನೆಯ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ 'ಪ್ರಾಥಮಿಕ ಅನುಮೋದನೆ'ಯನ್ನು ಅಂತಿಮ ಹಂತವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬ್ಯಾಂಕ್ ಅಧಿಕಾರಿಗಳು ಸೂಚಿಸುತ್ತಾರೆ. ಅಂತಹ ಪ್ರಾಥಮಿಕ ಅನುಮೋದನೆಯನ್ನು ಪಡೆಯುವಾಗ ಅರ್ಜಿದಾರರಿಗೆ ಯಾವುದೇ ಹೊಣೆಗಾರಿಕೆ ಇದೆಯೇ ಅಥವಾ ಇಲ್ಲವೇ ಎಂಬ ಪರಿಶೀಲನೆಯ ಆಧಾರದ ಮೇಲೆ ಅಭಿಪ್ರಾಯವನ್ನು ನೀಡಲಾಗುವುದು.<br>2. ಸಾಮಾನ್ಯವಾಗಿ, ಅಂತಹ ಸಮಯದಲ್ಲಿ, ಅರ್ಜಿದಾರರು ಸಾಲದ | ನೀತಿಯನ್ನು ವಿನ್ಯಾಸಗೊಳಿಸುವಾಗ ಸಾಲ ನೀಡುವ ನಿಯಮಗಳು ಮತ್ತು ಷರತ್ತುಗಳು, ಸಹಾಯಧನ ಘಟಕ ಮತ್ತು ಅರ್ಹತಾ ಮಾನದಂಡಗಳ ಬಗ್ಗೆ ಹಣಕಾಸು ಸಂಸ್ಥೆಗಳೊಂದಿಗೆ ಸ್ಪಷ್ಟ ತಿಳುವಳಿಕೆಯನ್ನು ಹೊಂದುವುದು ಅಗತ್ಯವಾಗಿದೆ. ಇದರಿಂದ ಫಲಾನುಭವಿಗಳು ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳು / ಕಾರ್ಯಕ್ರಮ ಬೆಂಬಲಿಸುವ ನಿಯೋಗಗಳು ಇಬ್ಬರನ್ನೂ ಕಷ್ಟಗಳಿಗೆ ಒಳಪಡಿಸಲಾಗುವುದಿಲ್ಲ. |

| | | | |
|---|---|---|---|
| | | ಭದ್ರತೆಗೆ ಬೆಂಬಲವಾಗಿ ಯಾವುದೇ ಮೇಲಾಧಾರವನ್ನು ಒದಗಿಸಲು ವಿಫಲರಾಗಿರುತ್ತಾರೆ ಅಥವಾ ಬ್ಯಾಂಕಿನಲ್ಲಿ ಸಾಲ ಸುಸ್ತಿದಾರರಾಗಿರಲು ಇತರ ಯಾವುದೇ ಕುಟುಂಬ ಸದಸ್ಯರು ವಿಫಲರಾಗಿರುತ್ತಾರೆ. ಕೆಲವು ಬಾರಿ ಸರ್ಕಾರದಿಂದ ಸಾಲ ಮನ್ನಾವನ್ನು ನಿರೀಕ್ಷಿಸುತ್ತಿದ್ದ ಫಲಾನುಭವಿಗಳು ಮರುಪಾವತಿಯಲ್ಲಿ ಉದ್ದೇಶಪೂರ್ವಕ ಸುಸ್ತಿದಾರರಾಗಲು ಬಯಸುತ್ತಾರೆ.<br>3. ಅಂತಹ ಬಾಕಿ ಇರುವ ಸಾಲಗಳು ಕೇವಲ ಸಂಬಂಧಪಟ್ಟ ವಾಣಿಜ್ಯ ಬ್ಯಾಂಕುಗಳೊಂದಿಗೆ ಮಾತ್ರವಲ್ಲ, ಇತರ ಯಾವುದೇ ವಾಣಿಜ್ಯ ಬ್ಯಾಂಕ್‌ನೊಂದಿಗೆ ಸಹ ಇರಬಹುದು. ಬ್ಯಾಂಕ್ ವಹಿವಾಟುಗಳ ಬಗ್ಗೆ ಮಾಹಿತಿಯ ಡಿಜಿಟಲ್ ಹಂಚಿಕೆಯನ್ನು ಗಮನಿಸಿದರೆ – ಯಾವುದೇ ಸಾಲಗಳ ಮಾಹಿತಿಯನ್ನು ಮರೆಮಾಡುವುದು ಪ್ರಾಯೋಗಿಕವಾಗಿ ಅಸಾಧ್ಯ. ಆಗಾಗ್ಗೆ ವಾಣಿಜ್ಯ ಬ್ಯಾಂಕ್‌ಗಳು 'ವಸೂಲಾಗದ ಸಾಲಗಳು ಅಥವಾ 'ನಿಷ್ಕ್ರಿಯ ಬಂಡವಾಳ' ಬಗ್ಗೆ ಜಾಗರೂಕವಾಗಿವೆ. ಈ ನಿಯಮವನ್ನು ಕೇವಲ ಫಲಾನುಭವಿಗೆ ಮಾತ್ರವಲ್ಲದೆ ಫಲಾನುಭವಿ ಗೃಹ ಸದಸ್ಯರಿಗೂ ವಿಸ್ತರಿಸುತ್ತವೆ.<br>4. ಒಟ್ಟು ಸಾಲದ ಮೊತ್ತ ರೂ.50,000 ಗಳಲ್ಲಿ ಬ್ಯಾಂಕಿನ ನಿಜವಾದ ಮೊತ್ತ ಕೇವಲ 40,000 ಆಗಿದೆ. ಬ್ಯಾಂಕುಗಳು ಸರ್ಕಾರದಿಂದ ಪಡೆಯಬೇಕಾಗಿದ್ದ 10,000 ರೂ.ಗಳ ಸಹಾಯಧನ ಮೊತ್ತವನ್ನು ಆಗಾಗ್ಗೆ ತಡೆಹಿಡಿಯುತ್ತವೆ. ಬದಲಾಗಿ ಈ ಮೊತ್ತವನ್ನು ಉಳಿಸಿಕೊಂಡು ಸಾಲದ ಮರುಪಾವತಿಗೆ ಬಳಸಿಕೊಳ್ಳಬಹುದಾಗಿತ್ತು. | |
| ಯೋಜನೆಯ ಕಾರ್ಯಸಾಧ್ಯತೆಯನ್ನು ಅರ್ಥಮಾಡಿಕೊಳ್ಳುವುದು. | | 1. ಸ್ವಯಂ ಉದ್ಯೋಗ ಘಟಕ ಫಲಾನುಭವಿಗಳಲ್ಲಿ, 'ಸ್ವಯಂ ಉದ್ಯೋಗ ಘಟಕ ಫಲಾನುಭವಿಗಳಲ್ಲಿ, ಈ ಕಾರ್ಯಕ್ರಮವನ್ನು ವಾಣಿಜ್ಯ ಸಂಸ್ಥೆಗಳಿಂದ ಸಾಲ ಪಡೆಯಬಹುದಾದ ಮತ್ತೊಂದು ಯೋಜನೆ ಎಂದು ನೋಡುವ ಬಲವಾದ ಪ್ರವೃತ್ತಿ ಇದೆ. ಈ ಕಾರ್ಯಕ್ರಮವನ್ನು ಸುಸ್ಥಿರ ಜೀವನೋಪಾಯಕ್ಕಾಗಿ ತಮ್ಮನ್ನು ತಾವು ಪುನಃ ಕೌಶಲ್ಯ ತರಬೇತಿಗೆ ಒಳಗಾಗುವ ಬದಲು ಹೆಚ್ಚುವರಿ ಆರ್ಥಿಕ ಪ್ರಯೋಜನಗಳನ್ನು ಪಡೆಯಬಹುದಾದ ಮತ್ತೊಂದು ಯೋಜನೆ ಎಂದು ನೋಡುವ ಬಲವಾದ ಪ್ರವೃತ್ತಿ ಇದೆ. ನಿಯೋಜನೆ ಸೇವೆಗಳ ಮೂಲಕ ಉದ್ಯೋಗವನ್ನು ಕಂಡುಕೊಂಡ ಸುಮಾರು ಮೂರನೇ | 1. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಿಂದ ಅನೇಕ ಸರ್ಕಾರಿ ಇಲಾಖೆಗಳು (ಉದಾಹರಣೆಗೆ, ಸಮಾಜ ಕಲ್ಯಾಣ, ಕೌಶಲ್ಯ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ) ಸ್ವಯಂ ಉದ್ಯೋಗ ಅವಕಾಶಗಳಿಗಾಗಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳು, ನಿಯೋಜನೆ ಮತ್ತು ಸಾಲಗಳನ್ನು ನೀಡುತ್ತವೆ ಮತ್ತು ಪ್ರಯೋಜನಗಳ ಪುನರಾವರ್ತನೆ ತಡೆಗಟ್ಟಲು ಒಂದೇ ಇಲಾಖೆಯ ಅಡಿಯಲ್ಲಿ ತರಬೇಕಾಗಿದೆ.<br>2. ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಸಂಬಂಧಿಸಿದ ಕೆಲಸವನ್ನು ನಿರ್ವಹಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಿಯೋಜಿತ |

| | | | |
|---|---|---|---|
| | | ಒಂದು ಭಾಗದಷ್ಟು ಫಲಾನುಭವಿಗಳು ಒಂದು ತಿಂಗಳಲ್ಲಿ ರೂ.7500 ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ. ಇದು ಗಂಭೀರ ಆತ್ಮಾವಲೋಕನಕ್ಕೆ ಕರೆಮಾಡುತ್ತದೆ.<br>2. ಗ್ರಾಮೀಣ ಕೌಶಲ್ಯರಹಿತ ಯುವಕರನ್ನು ಕೌಶಲ್ಯಭರಿತರನ್ನಾಗಿ ಮಾಡುವುದು ರಾಷ್ಟ್ರೀಯ ಮಂತ್ರವಾಗಿದೆ ಮತ್ತು ರಾಷ್ಟ್ರ ನಿರ್ಮಾಣದ ಅತ್ಯಂತ ಪ್ರಮುಖ ಅಂಶವಾಗಿದೆ. ಆದ್ದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯಂತಹ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಈ ಯೋಜನೆಯು ಅಗತ್ಯ ಮಾರ್ಪಾಡುಗಳೊಂದಿಗೆ ಮುಂದುವರಿಯಬಹುದಾಗಿದೆ. | ಆಡಳಿತಾತ್ಮಕ ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಯನ್ನು ನೇಮಿಸುವುದು ತುರ್ತು ಅಗತ್ಯವಾಗಿದೆ.<br>3. ಸ್ಥಳೀಯ ಸರ್ಕಾರಿ ಶಾಲೆಗಳನ್ನು ಉಪಗ್ರಹ ತರಬೇತಿ ಕೇಂದ್ರವಾಗಿ ಸಜ್ಜುಗೊಳಿಸಬಹುದು, ಮತ್ತು ವಿವಿಧ ರೀತಿಯ ತರಬೇತಿಯನ್ನು ನೀಡಲು ಶಾಲೆ ನಡೆಯದ ಸಮಯ ಅಥವಾ ರಜೆಯ ಸಮಯವನ್ನು ಬಳಸಬಹುದು. ಸರ್ಕಾರಿ ಶಾಲಾ ಮಟ್ಟದಲ್ಲಿ ಸೌಲಭ್ಯಗಳನ್ನು ಹೆಚ್ಚಿಸುವುದು ಪರಸ್ಪರ ಪ್ರಯೋಜನಕಾರಿಯಾಗಿದೆ. |

# 1. ಪರಿಚಯ

ಬಡತನ ನಿರ್ಮೂಲನೆ ಮತ್ತು ಉದ್ಯೋಗ ಸೃಷ್ಟಿಯನ್ನು ಭಾರತದ ಆರ್ಥಿಕ ಯೋಜನೆ ಮತ್ತು ನೀತಿಯ ಅವಳಿ ಉದ್ದೇಶಗಳಾಗಿ ಅಳವಡಿಸಿಕೊಳ್ಳಲಾಗಿದೆ. 21 ನೇ ಶತಮಾನದಲ್ಲಿ ಉದ್ಯೋಗ ಸೃಷ್ಟಿಗೆ ಸಮಾಜದಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಸಂಗ್ರಹಣೆಯ ಅಗತ್ಯವಿದೆ. 2025ರ ವೇಳೆಗೆ ಭಾರತವು 87 ಕೋಟಿ ದುಡಿಯುವ, ವಿಶ್ವದಲ್ಲೇ ಅತಿ ದೊಡ್ಡದಾದ ಜನಸಂಖ್ಯೆಯೊಂದಿಗೆ ಜನಸಂಖ್ಯೆಯ ಲಾಭಾಂಶವನ್ನು ಪಡೆಯಬಹುದೆಂದು ಅಂದಾಜಿಸಲಾಗಿದೆ. ಆದರೆ ಮಕ್ಕಳು ಮತ್ತು ಯುವಕರ ಆರೋಗ್ಯ, ಶಿಕ್ಷಣ, ಕೌಶಲ್ಯಗಳು ಮತ್ತು ಉದ್ಯೋಗಾವಕಾಶಗಳನ್ನು ಗಮನಿಸಿದರೆ, ಜಾಗತಿಕ ಅವಕಾಶಗಳನ್ನು ಕಳೆದುಕೊಳ್ಳುವ ಅಪಾಯವಿದೆ. 'ಕೌಶಲ್ಯ ಭಾರತ', 'ಉದ್ಯೋಗ ಸೃಷ್ಟಿ', 'ಉದ್ಯೋಗಾವಕಾಶ', ಮತ್ತು 'ಮೇಕ್ ಇನ್ ಇಂಡಿಯಾ' ಯುವ ಪೀಳಿಗೆ ಜೀವನೋಪಾಯಕ್ಕೆ ನಿರ್ಣಾಯಕ ಉಪಕ್ರಮಗಳಾಗಿವೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್ ಆರ್ ಎಲ್ ಎಂ) ವನ್ನು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು 12 ರಾಜ್ಯಗಳಲ್ಲಿ ಪ್ರಾರಂಭಿಸಿತು (85% ಗ್ರಾಮೀಣ ಬಡವರನ್ನು ಪರಿಗಣಿಸಿದಂತೆ). ಬಡತನವನ್ನು ನಿವಾರಿಸುವುದು ಮತ್ತು ಸುಸ್ಥಿರ ಜೀವನೋಪಾಯ ಅವಕಾಶಗಳನ್ನು (ಸ್ವಯಂ ಉದ್ಯೋಗ ಮತ್ತು ವೇತನ ಉದ್ಯೋಗ) ಸೃಷ್ಟಿಸುವುದು ಅದರ ಪ್ರಾಥಮಿಕ ಉದ್ದೇಶವಾಗಿತ್ತು.

ರಾಜೀವ್ ಗಾಂಧಿ ಚೈತನ್ಯ ಯೋಜನೆಯು ಉದ್ಯೋಗವನ್ನು– ಸಂಬಳದ ಉದ್ಯೋಗವಾಗಲಿ ಅಥವಾ ಸ್ವಯಂ ಉದ್ಯೋಗವಾಗಲಿ ಸೃಷ್ಟಿಸುವ ಗುರಿಯನ್ನು ಹೊಂದಿರುವುದರಿಂದ ಭಾರತದಲ್ಲಿ ಅನೇಕ ದಶಕಗಳಲ್ಲಿ ಗ್ರಾಮೀಣ ಮತ್ತು ನಗರ ವ್ಯಕ್ತಿಗಳ, ಪುರುಷರು ಮತ್ತು ಮಹಿಳೆಯರ ಉದ್ಯೋಗ ಮತ್ತು ನಿರುದ್ಯೋಗದ ದತ್ತಾಂಶವನ್ನು ಪರಿಶೀಲಿಸುವುದು ಮೊದಲು ಉಪಯುಕ್ತವಾಗಿರುತ್ತದೆ. ರಾಷ್ಟ್ರೀಯ ಸೇವಾ ಯೋಜನೆ ದತ್ತಾಂಶವು ಕೆಲವು ಆಸಕ್ತಿದಾಯಕ ಮತ್ತು ಆದರೆ ಆತಂಕಕಾರಿ ಪ್ರವೃತ್ತಿಗಳನ್ನು ಬಹಿರಂಗಪಡಿಸುತ್ತದೆ. ರೇಖಾಚಿತ್ರ 1.1 ರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗ ಮತ್ತು ನಿರುದ್ಯೋಗದ ಬಗ್ಗೆ ವಿವಿಧ ರಾಷ್ಟ್ರೀಯ ಸೇವಾ ಯೋಜನೆ ಸುತ್ತುಗಳ ದತ್ತಾಂಶದ ಮೇಲಿನ ಫಲಿತಾಂಶಗಳನ್ನು ಪ್ರತಿನಿಧಿಸುತ್ತದೆ.

<u>ರೇಖಾಚಿತ್ರ 1.1: 1993 ರಿಂದ 2017–18ರವರೆಗೆ ಕಾರ್ಮಿಕ ಬಲದ ಭಾಗವಹಿಸುವಿಕೆ ದರದಲ್ಲಿ ಬದಲಾವಣೆಗಳು (ಅಖಿಲ ಭಾರತ)</u>




ಸೂಚನೆ: * ಶೇಕಡಾ ಸಂಖ್ಯೆಗಳನ್ನು ಪ್ರತಿ ಸಾವಿರಕ್ಕೆ ಸಂಖ್ಯೆ ಎಂಬಂತೆ ಪರಿವರ್ತಿಸಲಾಗಿದೆ. (ಮೂಲ: ಕಾರಂತ 2019)

ದೇಶದಲ್ಲಿ ಉದ್ಯೋಗ ಮತ್ತು ನಿರುದ್ಯೋಗದ ದತ್ತಾಂಶದ ವಿಶ್ಲೇಷಣೆಯಿಂದ ಹೊರಹೊಮ್ಮುವ ಕಾಳಜಿಯೆಂದರೆ ಕಾರ್ಮಿಕ ಬಲದ ಪಾಲ್ಗೊಳ್ಳುವಿಕೆಯಲ್ಲಿ ಕ್ರಮೇಣವಾಗಿ ಕುಸಿತ ಕಂಡುಬಂದಿರುವುದು ಪುರುಷರಿಗಿಂತ ಮಹಿಳೆಯರಲ್ಲಿ ತೀಕ್ಷ್ಣವಾದ ಕುಸಿತವಿದೆ. ಉದ್ಯೋಗಕ್ಕಾಗಿ ಹುಡುಕುತ್ತಿರುವ ಯುವಕರ ಗ್ರಾಮೀಣ–ನಗರ ವಲಸೆಯ ದರವು ಹೆಚ್ಚುತ್ತಿರುವುದು ಮತ್ತು ಆ ಮೂಲಕ ಗ್ರಾಮೀಣ ಆರ್ಥಿಕತೆಯಲ್ಲಿ ಮುಖ್ಯವಾಗಿ ಕೃಷಿ ವಲಯದಲ್ಲಿ ಕುಸಿತಕ್ಕೆ ಕಾರಣವಾಗಿರುವುದು ಇನ್ನೂ ಗಮನಾರ್ಹ ಕಾಳಜಿಯಾಗಿದೆ. ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಅಸಮಾನತೆಯು ಭಾರತದಲ್ಲಿ ನಗರೀಕರಣದ ನಿರ್ಣಾಯಕ ಸಮಸ್ಯೆಗಳಲ್ಲಿ ಒಂದಾಗಿದೆ. ಇಂತಹ ಅಸಮಾನತೆಗೆ ಒಂದು ಪ್ರಮುಖ ಕಾರಣವೆಂದರೆ ಗ್ರಾಮೀಣ ಪ್ರದೇಶಗಳಿಂದ ನಗರ ಕೇಂದ್ರಗಳಿಗೆ ಕೌಶಲ್ಯರಹಿತ, ಅರೆ ಮತ್ತು ನುರಿತ ಕಾರ್ಮಿಕರು ವಲಸೆ ಹೋಗುವುದಾಗಿದೆ. ವಾಸ್ತವವಾಗಿ ಭಾರತದ ನಗರೀಕರಣದ ಬಹುಭಾಗವನ್ನು ಹೆಚ್ಚಿನ ದರದಲ್ಲಿರುವ ಗ್ರಾಮೀಣ ವಲಯದಿಂದ ನಗರ ವಲಯಕ್ಕೆ ವಲಸೆಯಿಂದ ಗುರುತಿಸಲಾಗಿದೆ. ಇದು ಅನೌಪಚಾರಿಕ ಮತ್ತು ಅಸಂಘಟಿತ ವಲಯದ ಬೆಳವಣಿಗೆಗೆ (ಭಗತ್ 2017) ಕಾರಣವಾಗಿದೆ.

ಇದಲ್ಲದೆ ಕೆಳಗಿನ ಕೋಷ್ಟಕ 1.1 ರಿಂದ ಕಂಡುಬಂದ ಅಂಶವೆಂದರೆ; ಕರ್ನಾಟಕದಲ್ಲಿ ನಗರ ಕೇಂದ್ರಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಪುರುಷರು ಮತ್ತು ಮಹಿಳೆಯರಲ್ಲಿ ಕಾರ್ಮಿಕ ಬಲದ ಭಾಗವಹಿಸುವಿಕೆ ದರ ಸ್ವಲ್ಪ ಹೆಚ್ಚಾಗಿದೆ. ಕಾರ್ಮಿಕ ಜನಸಂಖ್ಯೆ ಅನುಪಾತ ದರ ವಿಷಯದಲ್ಲೂ ಇದೇ ರೀತಿ ಇದೆ. ಗ್ರಾಮೀಣ ಪ್ರದೇಶಗಳಲ್ಲಿ, ಪುರುಷರಲ್ಲಿ ಕಾರ್ಮಿಕ ಬಲದ ಭಾಗವಹಿಸುವಿಕೆ ದರಶೇಕಡಾ 79.3ರಷ್ಟಿದೆ ಇದು ಸಾಕಷ್ಟು ಉತ್ತಮವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ದರವು ಮಹಿಳೆಯರಲ್ಲಿ ಪುರುಷರಿಗಿಂತ ಸ್ವಲ್ಪ ಹೆಚ್ಚಾಗಿದೆ. ಇದಕ್ಕೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಮಹಿಳೆಯರಲ್ಲಿ ನಿರುದ್ಯೋಗ ದರವು ಇನ್ನೂ ಹೆಚ್ಚಾಗಿದ್ದು ಶೇಕಡಾ 3.1 ರಷ್ಟಿದೆ.

**ಕೋಷ್ಟಕ ಸಂಖ್ಯೆ 1.1: ಕರ್ನಾಟಕದಲ್ಲಿ 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ (ಯುಪಿಎಸ್‌ಎಸ್) ವ್ಯಕ್ತಿಗಳಿಗೆ ಕಾರ್ಮಿಕ ಬಲದ ಭಾಗವಹಿಸುವಿಕೆ ದರ, ಕಾರ್ಮಿಕ ಜನಸಂಖ್ಯೆ ಅನುಪಾತ ದರ, ನಿರುದ್ಯೋಗ ದರ ಮತ್ತು ನಿರುದ್ಯೋಗಿಗಳ ಅನುಪಾತ (ಶೇಕಡಾ ದರದಲ್ಲಿ)**

| ಗ್ರಾಮೀಣ | | | ನಗರ | | | ಗ್ರಾಮೀಣ + ನಗರ | | |
|---|---|---|---|---|---|---|---|---|
| ಪುರುಷ | ಹೆಣ್ಣು | ವ್ಯಕ್ತಿಗಳು | ಪುರುಷ | ಹೆಣ್ಣು | ವ್ಯಕ್ತಿಗಳು | ಪುರುಷ | ಹೆಣ್ಣು | ವ್ಯಕ್ತಿಗಳು |
| ಕಾರ್ಮಿಕ ಬಲದ ಭಾಗವಹಿಸುವಿಕೆ ದರ (ಎಲ್ ಎಫ್ ಪಿಆರ್) | | | | | | | | |
| 79.3 | 38.1 | 59.3 | 74.3 | 26.5 | 50.8 | 77.5 | 33.9 | 56.2 |
| ಕಾರ್ಮಿಕ ಜನಸಂಖ್ಯೆ ಅನುಪಾತ ದರ (ಡಬ್ಲ್ಯೂಪಿಆರ್‌ಆರ್) | | | | | | | | |
| 78.5 | 37.6 | 58.6 | 73.2 | 25.7 | 49.5 | 76.6 | 33.3 | 55.5 |
| ನಿರುದ್ಯೋಗ ದರ (ಯುಆರ್) | | | | | | | | |
| 1.1 | 1.4 | 1.1 | 1.5 | 3.1 | 1.9 | 1.2 | 1.8 | 1.4 |
| ನಿರುದ್ಯೋಗಿಗಳ ಅನುಪಾತ (ಪಿಯು) | | | | | | | | |
| 0.8 | 0.5 | 0.7 | 1.1 | 0.8 | 1.0 | 0.9 | 0.6 | 0.8 |

ಮೂಲ : ಕರ್ನಾಟಕದ ಆರ್ಥಿಕ ಸಮೀಕ್ಷೆ, 2018–19, ಕರ್ನಾಟಕ ಸರ್ಕಾರ

ಇವುಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಉದ್ಯೋಗ ಮತ್ತು ಸ್ವಯಂ ಉದ್ಯೋಗ ಉದ್ಯಮಗಳನ್ನು ಉತ್ತೇಜಿಸುವಂತಹ ವಿವಿಧ ಉದ್ಯೋಗಗಳು ಮತ್ತು ಜೀವನೋಪಾಯದ ವಿಧಾನಗಳಲ್ಲಿ ಗ್ರಾಮೀಣ ಯುವಕರಿಗೆ ಕೌಶಲ್ಯ ಮತ್ತು ತರಬೇತಿಯಂತಹ ಉದ್ಯೋಗ ಸೃಷ್ಟಿಸುವ ಚಟುವಟಿಕೆಗಳ ಸರಣಿಯನ್ನು ಪ್ರಾರಂಭಿಸಿತು. ಅಂತಹ ಒಂದು ಪ್ರಮುಖ ಕ್ರಮವೆಂದರೆ 2013 ರಿಂದ ಪ್ರಾರಂಭವಾದ ರಾಜೀವ್ ಗಾಂಧಿ ಚೈತನ್ಯ ಯೋಜನೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆ ರಾಜ್ಯ ಸರ್ಕಾರದ ಪ್ರಾಯೋಜಿತ ಯೋಜನೆಯಾಗಿದ್ದು, 2013–14ರಿಂದ ರಾಜ್ಯದಲ್ಲಿ ಅನುಷ್ಠಾನಗೊಂಡಿದೆ. ಮೀಸಲಾತಿ ನೀತಿಯ ಪ್ರಕಾರ, ಪರಿಶಿಷ್ಟ ಜಾತಿಯ 20% , ಪರಿಶಿಷ್ಟ ಪಂಗಡದ 9% ಫಲಾನುಭವಿಗಳನ್ನು ಆಯ್ಕೆ ಮಾಡಬೇಕು, ಮತ್ತು ಮಹಿಳಾ ಹಾಗೂ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ದೈಹಿಕ ವಿಕಲಚೇತನರು, ಬುಡಕಟ್ಟು ಯುವಕರು, ಮಂಗಳಮುಖಿಯರು, ಬಿಡುಗಡೆಯಾದ ಜೀತದಾಳುಗಳು, ವಿಧವೆಯರು ಮತ್ತು ಎಂಜಿಎನ್‌ಆರ್‌ಇಜಿಎ (ನರೇಗಾ) ಅಡಿಯಲ್ಲಿ 100 ದಿನಗಳ ಕೆಲಸ ಪೂರ್ಣಗೊಳಿಸಿದವರಿಗೂ ಸ್ವಯಂ ಸೇರ್ಪಡೆಯನ್ನು ನೀಡಲಾಗುತ್ತದೆ.

ಆಯ್ಕೆಯಾದ ಫಲಾನುಭವಿಗಳು ಜಾಗೃತಿ ಕಾರ್ಯಕ್ರಮ ಮತ್ತು ವೈಯಕ್ತಿಕ ಸಮಾಲೋಚನೆಯ ಮೂಲಕ ಮಾಹಿತಿಯನ್ನು ಪಡೆದರು. ಆಯ್ಕೆಯಾದ ಅಭ್ಯರ್ಥಿಗಳಿಗೆ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು ತರಬೇತಿ ನೀಡಲಾಗುತ್ತದೆ. 30 ಜಿಲ್ಲೆಗಳಲ್ಲಿ ಅಭ್ಯರ್ಥಿಗಳು ಆಯ್ಕೆ ಮಾಡಿದ ಸ್ವಯಂ ಉದ್ಯೋಗವನ್ನು ಸುಗಮಗೊಳಿಸಲು ಯೋಜನೆ ಬೆಂಬಲಿಸುವ ನಿಯೋಗಗಳನ್ನು ಗುರುತಿಸಲಾಗುತ್ತದೆ. ಪ್ರಸ್ತುತ 62 ಯೋಜನೆ ಪೂರಕ ನಿಯೋಗಗಳು ಮತ್ತು 21 ಯೋಜನೆ ಅನುಷ್ಠಾನ ಸಂಸ್ಥೆಗಳು ಯೋಜನೆಯ ಅನುಷ್ಠಾನದಲ್ಲಿ ತೊಡಗಿವೆ.

## 1.1 ಕರ್ನಾಟಕದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ ಜಿಲ್ಲೆಗಳ ಆರ್ಥಿಕ ಸ್ಥಿತಿಯ ಬಗ್ಗೆ ವಿಸ್ತಾರ ಚಿತ್ರಣ:

ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆ ಮತ್ತು ನಾಗರಿಕರ ಯೋಗಕ್ಷೇಮವನ್ನು ಒಟ್ಟು ದೇಶಿಯ ಉತ್ಪನ್ನ ಮತ್ತು ತಲಾ ಆದಾಯದ ದೃಷ್ಟಿಯಿಂದ ಅಳೆಯಲಾಗುತ್ತದೆ. ಆದರೆ ನಿಜವಾದ ಅರ್ಥದಲ್ಲಿ ಸಮಾಜದಲ್ಲಿ ಮಾನವರ ಯೋಗಕ್ಷೇಮವನ್ನು ನಿರ್ಣಯಿಸಲು ತಲಾ ಆದಾಯ ನಿಖರವಾದ ಸೂಚಕವಲ್ಲ. ಅದೇನೇ ಇದ್ದರೂ ಆರ್ಥಿಕ ಬೆಳವಣಿಗೆ ಮತ್ತು ಸೌಖ್ಯವನ್ನು ಮೌಲ್ಯಮಾಪನ ಮಾಡಲು ತಲಾ ಆದಾಯವನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಇದು ಆರ್ಥಿಕತೆಯಲ್ಲಿ ನಾಗರಿಕರ ಆರ್ಥಿಕ ಸ್ಥಿತಿಯನ್ನು ವಿಶಾಲವಾಗಿ ನಕ್ಷೆ ಮಾಡುವ ಸೂಚಕವಾಗಿದೆ. ಇಲ್ಲಿ ಆಯ್ದ ಜಿಲ್ಲೆಗಳ ಆರ್ಥಿಕ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ನಾವು ಆಯ್ದ ಜಿಲ್ಲೆಗಳಿಗೆ ತಲಾ ಆದಾಯವನ್ನು ಬಳಸಲಾಗಿದೆ ಮತ್ತು ಅವುಗಳನ್ನು ರಾಜ್ಯದೊಂದಿಗೆ ಹೋಲಿಸಲಾಗಿದೆ. 2012–13 ರಿಂದ 2017–18 ರವರೆಗೆ (ವರ್ಷವಾರು) ಆಯ್ದ ಜಿಲ್ಲೆಗಳ ತಲಾ ಆದಾಯವನ್ನು ನಾವು ವಿಶ್ಲೇಷಿಸಲಾಗಿದೆ. ನಾವು 2012–13 ಅನ್ನು ಮೂಲ ವರ್ಷವಾಗಿ ಬಳಸಲಾಗದೆ ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆ ಮೌಲ್ಯಮಾಪನ ಅವಧಿಗೆ ಐದು ವರ್ಷಗಳ ವರೆಗೆ ಸೂಚ್ಯಂಕಗಳನ್ನು ಲೆಕ್ಕ ಹಾಕಲಾಗಿದೆ. ಸೂಚ್ಯಂಕಗಳ ಆಧಾರದ ಮೇಲೆ ನಾವು ಆಯ್ದ ಜಿಲ್ಲೆಗಳನ್ನು ಶ್ರೇಣೀಕರಿಸಲಾಗಿದೆ ಮತ್ತು ಇದನ್ನು ರಾಜ್ಯದ ಸಂಖ್ಯೆಯೊಂದಿಗೆ ಹೋಲಿಸಬಹುದಾಗಿದೆ. ನಿರೀಕ್ಷೆಯಂತೆ, ಬೆಂಗಳೂರು ನಗರ 1ನೇ ಸ್ಥಾನದಲ್ಲಿದೆ (207 ರ ಸೂಚ್ಯಂಕದೊಂದಿಗೆ) ಮತ್ತು 106 ಸೂಚ್ಯಂಕವನ್ನು ಹೊಂದಿರುವ ಕೊಡಗು ಕನಿಷ್ಠಮಟ್ಟದಲ್ಲಿದೆ (ವಿವರಗಳಿಗಾಗಿ ಕೋಷ್ಟಕ).

**ಕೋಷ್ಟಕ ಸಂಖ್ಯೆ 1.2: ಮಾದರಿ ಜಿಲ್ಲೆಗಳಲ್ಲಿ ತಲಾ ಆದಾಯದ ಪ್ರವೃತ್ತಿಗಳು (2011–12 ರಿಂದ 2017–18)**

| ಕ್ರಮ ಸಂ. | ಜಿಲ್ಲೆಗಳು | ಪ್ರಸ್ತುತ ಬೆಲೆಗಳಲ್ಲಿ ತಲಾ ಆದಾಯ (ರೂ) ಎನ್‌ಡಿಡಿಪಿ | | | | | | |
|---|---|---|---|---|---|---|---|---|
| | | 2012–13 | 2013–14 | 2014–15 | 2015–16 | 2016–17 | 2017–18 | ಶ್ರೇಣಿಗಳು* |
| 01 | ಬಾಗಲಕೋಟೆ | 87,730 (100) | 99,737 (114) | 1,11,346 (127) | 1,27,639 (145) | 1,39,647 (159) | 1,51,071 (172) | 9 |
| 02 | ಧಾರವಾಡ | 84,495 (100) | 99,882 (118) | 1,09,252 (129) | 1,19,128 (141) | 1,36,245 (161) | 1,49,316 (177) | 7 |
| 03 | ಬೆಳಗಾವಿ | 59,799 (100) | 67,469 (113) | 76,573 (128) | 85,964 (144) | 95,847 (160) | 1,05,372 (176) | 8 |
| 04 | ಬೆಂಗಳೂರು ನಗರ | 2,16,867 (100) | 2,56,376 (118) | 2,80,698 (129) | 3,33,286 (154) | 3,90,653 (180) | 4,48,485 (207) | 1 |
| 05 | ಚಿತ್ರದುರ್ಗ | 59,436 (100) | 72,077 (121) | 81,448 (137) | 91,318 (154) | 95,149 (160) | 1,08,818 (183) | 4 |
| 06 | ತುಮಕೂರು | 89,002 (100) | 1,02,311 (115) | 1,14,220 (128) | 1,27,888 (144) | 1,52,604 (171) | 1,58,047 (178) | 6 |
| 07 | ಕಲ್ಬುರ್ಗಿ | 51424 (100) | 62994 (122) | 70033 (136) | 68662 (134) | 85777 (169) | 92,098 (179) | 5 |
| 08 | ರಾಯಚೂರು | 59,518 (100) | 69,303 (116) | 74,289 (125) | 81,824 (137) | 93,536 (157) | 95,451 (160) | 12 |
| 09 | ಯಾದಗಿರಿ | 53,144 (100) | 64,566 (121) | 67,293 (127) | 71,816 (135) | 85,218 (160) | 1,03,677 (195) | 2 |
| 10 | ಹಸನ್ | 86,532 (100) | 98,953 (114) | 1,07,325 (124) | 1,19,427 (138) | 1,31,608 (152) | 1,44,004 (166) | 11 |
| 11 | ಉಡುಪಿ | 1,44,467 (100) | 1,64,376 (114) | 1,80,534 (125) | 2,10,958 (146) | 2,42,830 (168) | 2,65,955 (184) | 3 |
| 12 | ಕೊಡಗು | 1,09,090 (100) | 1,15,691 (106) | 1,02,321 (94) | 99,696 (91) | 1,18,795 (109) | 1,16,032 (106) | 13 |
| 13 | ಮಂಡ್ಯ | 95,382 (100) | 1,07,462 (113) | 1,18,391 (124) | 1,34,803 (141) | 1,46,935 (154) | 1,58,067 (166) | 10 |
| | ಸ್ಥಿತಿ | 1,02,319 (100) | 1,18,829 (116) | 1,30,024 (127) | 1,48,108 (127) | 1,70,133 (166) | 1,88,765 (184) | |

ಸೂಚನೆ: ಶ್ರೇಯಾಂಕವು ಸೂಚ್ಯಂಕಗಳನ್ನು ಆಧರಿಸಿದೆ. ಆವರಣಗಳಲ್ಲಿನ ಅಂಕಿಅಂಶಗಳು ಸೂಚ್ಯಂಕಗಳಾಗಿವೆ.
ಮೂಲ: ಡಿಇಎಸ್, ಬೆಂಗಳೂರು

## 1.2 ರಾಜೀವ್ ಗಾಂಧಿ ಚೈತನ್ಯ ಯೋಜನೆ ಉದ್ದೇಶಗಳು:

ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ಗ್ರಾಮೀಣ ಯುವಕರಲ್ಲಿ ಪರ್ಯಾಯ ಉತ್ಪಾದಕ ಮತ್ತು ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಈ ಗುರಿಯನ್ನು ಸಾಧಿಸಲು ರಾಜೀವ್ ಗಾಂಧಿ ಚೈತನ್ಯ ಯೋಜನೆ ಪ್ರತಿ ವರ್ಷ ಸುಮಾರು ಮೂರು ಲಕ್ಷ ಗ್ರಾಮೀಣ ಯುವಕರನ್ನು ನೇಮಿಸಿಕೊಳ್ಳುವ ಗುರಿಯನ್ನು ಹೊಂದಿತ್ತು. ಇವರಲ್ಲಿ, 50% ಯುವಕರಿಗೆ ಸ್ವಯಂ ಉದ್ಯೋಗ/ಜೀವನೋಪಾಯ

ಚಟುವಟಿಕೆಗಳನ್ನು ಒದಗಿಸಬೇಕು, ಮತ್ತು ಇನ್ನೂ 50% ಜನರಿಗೆ ಕೌಶಲ್ಯ ತರಬೇತಿ ಮತ್ತು ನಿಯೋಜನೆ ಒದಗಿಸಬೇಕು. ಇದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ಇಲಾಖೆಯ ಅಡಿಯಲ್ಲಿ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದಿಂದ ಜಾರಿಗೆ ತರಲಾಗಿದೆ. ಈ ಎರಡು ಇಲಾಖೆಗಳಲ್ಲದೆ, ಜಿಲ್ಲಾ ಮಟ್ಟದಲ್ಲಿ ಹಲವಾರು ಅನುಷ್ಠಾನ ಪಾಲುದಾರರು ಇದ್ದಾರೆ. ಪ್ರತಿ ಪಂಚಾಯಿತಿಯಿಂದ, ಕಾಲಕಾಲಕ್ಕೆ ನೀಡಲಾದ ಅರ್ಹತಾ ಮಾನದಂಡಗಳ ಪ್ರಕಾರ (ಅಂದರೆ, ಕನಿಷ್ಠ 8ನೇ ತರಗತಿಯ ಅರ್ಹತೆಯೊಂದಿಗೆ 18 ರಿಂದ 35 ವರ್ಷ ವಯಸ್ಸಿನವರು) 50 ಯುವಕರನ್ನು ಗ್ರಾಮ ಸಭೆ ಆಯ್ಕೆ ಮಾಡಲಾಗಿದೆ. ಕರ್ನಾಟಕದ ಎಲ್ಲಾ 6,019 ಗ್ರಾಮ ಪಂಚಾಯಿತಿಗಳನ್ನು ಕಾರ್ಯಕ್ರಮದ ಅಡಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ನಿರ್ದಿಷ್ಟ ಉದ್ದೇಶಗಳು ಈ ಕೆಳಕಂಡಂತಿವೆ

ಎ. ತರಬೇತಿ, ಜಾಗೃತಿ ಮತ್ತು ಸಾಮರ್ಥ್ಯ ವರ್ಧನೆ ಕಾರ್ಯಕ್ರಮಗಳ ಮೂಲಕ ಸುಧಾರಿತ ಮತ್ತು ಪರ್ಯಾಯ ಜೀವನೋಪಾಯ ಅವಕಾಶಗಳನ್ನು ಸೃಷ್ಟಿಸುವುದು.

ಬಿ. ವೃತ್ತಿಪರ ಮತ್ತು ವ್ಯವಸ್ಥಾಪಕ ಕೌಶಲ್ಯಗಳನ್ನು ಉನ್ನತೀಕರಿಸುವ ಮತ್ತು ಸ್ವಯಂ ಉದ್ಯೋಗಕ್ಕೆ ಅವಕಾಶಗಳನ್ನು ಸೃಷ್ಟಿಸುವ ಮೂಲಕ ನಿರುದ್ಯೋಗಿ ಯುವಕರ ಆದಾಯವನ್ನು ಸುಧಾರಿಸುವುದು.

ಸಿ. ವೈಯಕ್ತಿಕ ಉದ್ಯಮಗಳನ್ನು ಪ್ರಾರಂಭಿಸುವ ಮೂಲಕ ನಿರುದ್ಯೋಗಿ ಯುವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು.

ಡಿ. ಗ್ರಾಮೀಣ ಬಡ ಯುವಕರಿಗೆ ಉದ್ಯಮಶೀಲತೆ ಮತ್ತು ವ್ಯವಹಾರ ಕೌಶಲ್ಯಗಳಲ್ಲಿ ತರಬೇತಿ ನೀಡುವ ಮೂಲಕ ಆದಾಯ ಉತ್ಪಾದಿಸುವ ಯೋಜನೆಗಳನ್ನು ಪ್ರಾರಂಭಿಸಲು ಪ್ರೇರೇಪಿಸುವುದು.

ಇ. ತಮ್ಮ ಸ್ಥಳೀಯ ಆವಾಸ ಸ್ಥಾನಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಯುವಕರು ಪಟ್ಟಣಗಳು ಮತ್ತು ನಗರಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದು.

ಅರ್ಹ ಯುವಕರಿಗೆ ಜಾಗೃತಿ ಕಾರ್ಯಕ್ರಮ ಮತ್ತು ಕಾರ್ಯಕ್ರಮದ ಪಾಲುದಾರರಿಂದ ವೈಯಕ್ತಿಕ ಸಮಾಲೋಚನೆಯ ಮೂಲಕ ಮಾಹಿತಿಯನ್ನು ನೀಡಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಜಾಗೃತಿ ಮೂಡಿಸಲು ಮತ್ತು /ಅಥವಾ ಯೋಜನೆಯ ಪ್ರಕಾರ ಅವರನ್ನು ಕೌಶಲ್ಯಗೊಳಿಸಲು ತರಬೇತಿ ನೀಡಲಾಗುತ್ತದೆ. 30 ಜಿಲ್ಲೆಗಳಲ್ಲಿ ಅಭ್ಯರ್ಥಿಗಳು ಆಯ್ಕೆ ಮಾಡಿದ ಸ್ವಯಂ ಉದ್ಯೋಗವನ್ನು ಸುಗಮಗೊಳಿಸಲು ಯೋಜನೆ ಬೆಂಬಲಿಸುವ ನಿಯೋಗಗಳನ್ನು ಗುರುತಿಸಲಾಗುತ್ತದೆ. ಅಧ್ಯಯನದ ಅವಧಿಯಲ್ಲಿ 62 ಯೋಜನೆ ಬೆಂಬಲಿಸುವ ನಿಯೋಗಗಳು (ಸ್ವಯಂ ಉದ್ಯೋಗ ಘಟಕಕ್ಕಾಗಿ), ಮತ್ತು 21 ಯೋಜನೆ ಅನುಷ್ಠಾನ ನಿಯೋಗಗಳು (ಕೌಶಲ್ಯ ಮತ್ತು ಉದ್ಯೋಗ ಘಟಕಕ್ಕಾಗಿ) ಯೋಜನೆಯ ಅನುಷ್ಠಾನದಲ್ಲಿ ತೊಡಗಿದ್ದವು.

---------------

# 2. ದಾಖಲೆ ಚೌಕಟ್ಟು/ ಬದಲಾವಣೆಯ ಸಿದ್ಧಾಂತ

## 2.1 ಮೌಲ್ಯಮಾಪನದ ತಾರ್ಕಿಕ ಚೌಕಟ್ಟು

ಎಲ್ಲರಿಗೂ ತಿಳಿದಿರುವಂತೆ, ಒಂದು ತಾರ್ಕಿಕ ಚೌಕಟ್ಟು ಕಾರ್ಯಗತಗೊಳಿಸುತ್ತಿರುವ ಯಾವುದೇ ಯೋಜನೆಯ ಚೌಕಟ್ಟು, ವಿನ್ಯಾಸ, ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಬಗ್ಗೆ ಬಳಸುವ ಮೂಲಭೂತ ತಾರ್ಕಿಕ ಯೋಜನಾ ಚೌಕಟ್ಟನ್ನು (ಬದಲಾವಣೆಯ ಸಿದ್ಧಾಂತ) ವಿವರಿಸಲು ಪ್ರಯತ್ನಿಸುತ್ತದೆ. ಪ್ರಸ್ತುತ ಅಧ್ಯಯನದಲ್ಲಿ, ಇದು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಎರಡು ಘಟಕಗಳ ಮೌಲ್ಯಮಾಪನವನ್ನು ಮಾತ್ರ ಉಲ್ಲೇಖಿಸುತ್ತದೆ, ಅವುಗಳೆಂದರೆ ಎ) ತರಬೇತಿ ಮತ್ತು (ಬ್ಯಾಂಕ್ ಸಾಲಗಳ ಮೂಲಕ) ಗ್ರಾಮೀಣ ನಿರುದ್ಯೋಗಿ ಯುವಕರ ಸ್ವಯಂ ಉದ್ಯೋಗ ಮತ್ತು ಬಿ) ನಿರುದ್ಯೋಗಿ ಗ್ರಾಮೀಣ ಯುವಕರ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನಿಯೋಜನೆ. ಹೊಸ ಚರಾಂಶ ಅಥವಾ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನಿಯೋಜನೆಗಳಂತಹ ಕಾರ್ಯವಿಧಾನಗಳನ್ನು ಅನುಷ್ಠಾನಗೊಳಿಸುವ ಪರಿಣಾಮವಾಗಿ ಬದಲಾವಣೆಗಳನ್ನು ಗುರುತಿಸುವುದು ಇದರ ಉದ್ದೇಶವಾಗಿದೆ. ಕೆಳಗಿನ ದಾಖಲೆ ಚೌಕಟ್ಟು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಎರಡೂ ಘಟಕಗಳ ನಿರೀಕ್ಷಿತ ಫಲಿತಾಂಶಗಳ ರೂಪುರೇಷೆಯನ್ನು ನೀಡುತ್ತದೆ.

**ಚಿತ್ರ 2.1** ದಾಖಲೆ ಚೌಕಟ್ಟು

**ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಮುಂಚಿತವಾಗಿ**

- ಕನಿಷ್ಠ 8ನೇ ತರಗತಿಯವರೆಗೆ ಅಥವಾ ಅದಕ್ಕಿಂತ ಹೆಚ್ಚಿನ ತರಗತಿಯೊಂದಿಗೆ ಶಿಕ್ಷಣ ಪಡೆದಿರಬೇಕು; ನಿರುದ್ಯೋಗಿಗಳಾಗಿರಬೇಕು ಮತ್ತು ಅನುತ್ಪಾದಕರಾಗಿರಬೇಕು ಅಥವಾ ಸಂಬಳವಿಲ್ಲದ ಕೆಲಸದಲ್ಲಿ ತೊಡಗಿರಬೇಕು. ಕೆಲಸಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವ ಅವಕಾಶವನ್ನು ಹುಡುಕುತ್ತಿರಬೇಕು.
- ಯಾವುದೇ ಕೆಲಸವಿಲ್ಲ ಅಥವಾ ಆನುವಂಶಿಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರಬೇಕು.
- ಯಾವುದೇ ಕೌಶಲ್ಯಗಳಿಲ್ಲ ಮತ್ತು ಔದ್ಯೋಗಿಕ ಚಲನಶೀಲತೆ ಇಲ್ಲ.
- ಯಾವುದೇ ಸ್ವತಂತ್ರ ಆದಾಯವಿಲ್ಲ, ಕುಟುಂಬ ಸದಸ್ಯರ ಮೇಲೆ ಅವಲಂಬಿತವಾಗಿರಬೇಕು.
- ವಲಸೆ ಹೋಗಲು ತಯಾರಾಗಿರಬೇಕು.

**ರಾಜೀವ್ ಗಾಂಧಿ ಚೈತನ್ಯ ಯೋಜನೆ ನಂತರ ಸ್ವಯಂ ಉದ್ಯೋಗ/ಕೌಶಲ್ಯ/ ಉದ್ಯೋಗ** ನಿಯೋಜನೆ

- ಕನಿಷ್ಠ 8ನೇ ತರಗತಿಯವರೆಗೆ ಅಥವಾ ಅದಕ್ಕಿಂತ ಹೆಚ್ಚಿನ ತರಗತಿಯೊಂದಿಗೆ ಶಿಕ್ಷಣ ಪಡೆದಿರಬೇಕು. ಗ್ರಾಮದೊಳಗೆ ಸ್ವಯಂ ಉದ್ಯೋಗಿಯಾಗಿರಬೇಕು (ಸ್ವಯಂ ಉದ್ಯೋಗ ಘಟಕದ ಅಡಿಯಲ್ಲಿ) ಅಥವಾ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ತರಬೇತಿ ಮೂಲಕ ಉದ್ಯೋಗದಲ್ಲಿ ನಿಯೋಜಿತವಾಗಿರಬೇಕು.
- ಸ್ವತಂತ್ರವಾಗಿರಬೇಕು ಮತ್ತು ಉತ್ತಮ ಆದಾಯ ಹೊಂದಿರಬೇಕು.
- ಗ್ರಾಮೀಣ ಸ್ವರೂಪದ ಜೀವನೋಪಾಯ ನಡೆಸಲು ಮತ್ತು ಮುಂದುವರಿಸಲು ಒಲವು ಹೊಂದಿರಬೇಕು.
- ಔದ್ಯೋಗಿಕ ಚಲನಶೀಲತೆ ಇರಬೇಕು.
- ಜೀವನೋಪಾಯಕ್ಕಾಗಿ ಹೊಸ ಕೌಶಲ್ಯ ಅಥವಾ ಸಾಮರ್ಥ್ಯವನ್ನು ಸ್ವಾಧೀನಪಡಿಸಿಕೊಳ್ಳಬೇಕು.
- ವೈಯಕ್ತಿಕ ಉದ್ಯಮಗಳು ಅಥವಾ ಉದ್ಯೋಗದ ಮೂಲಕ ನಿರುದ್ಯೋಗಿ ಯುವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಸುಧಾರಿಸಿರಬೇಕು.
- ಉದ್ಯಮಶೀಲತೆ ಮತ್ತು ವ್ಯವಹಾರ ಕೌಶಲ್ಯಗಳಲ್ಲಿ ತರಬೇತಿಯೊಂದಿಗೆ ಆದಾಯ ಉತ್ಪಾದಿಸುವ ಯೋಜನೆಗಳನ್ನು ಪ್ರಾರಂಭಿಸಲು ಪ್ರೇರೇಪಿತರಾಗಿರಬೇಕು.
- ನಗರ ಪ್ರದೇಶಗಳಿಗೆ ವಲಸೆ ಹೋಗಲು ಆಸಕ್ತಿ ಹೊಂದಿರಬಾರದು.

**ಕೋಷ್ಟಕ ಸಂಖ್ಯೆ.2.1 : ದಾಖಲೆ ಚೌಕಟ್ಟು**

| ಭರಿತಗಳು | ಚಟುವಟಿಕೆ | ಬಾಹ್ಯಾಂಶ | ಫಲಿತಾಂಶ | ಪ್ರಭಾವ |
|---|---|---|---|---|
| ನಿರುದ್ಯೋಗಿ ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗ<br><br>ಗ್ರಾಮೀಣ ಯುವಕರಿಗೆ ವೇತನ ಉದ್ಯೋಗ | • ಜಾಗೃತಿ ಸೃಷ್ಟಿ<br>• ಕೌಶಲ್ಯ ತರಬೇತಿ ಮತ್ತು ಆರ್ಥಿಕ ಬೆಂಬಲದ ಮೂಲಕ ಸ್ವಯಂ ಉದ್ಯೋಗದ ಮೂಲಕ ಸುಸ್ಥಿರ ಜೀವನೋಪಾಯಕ್ಕಾಗಿ ವಿವಿಧ ಕೌಶಲ್ಯಗಳಲ್ಲಿ ತರಬೇತಿ | ತರಬೇತಿ ಪಡೆದ ಯುವಕರ ಸಂಖ್ಯೆ: 1,26,085 (2013–14 ರಿಂದ 2017–18)<br><br>ವೆಚ್ಚ ಮಾಡಿದ ಮೊತ್ತ: 17,324.59 ಲಕ್ಷರೂ. (2013–14 ರಿಂದ 2017–18) | • ಸ್ವತಂತ್ರವಾಗಿರುವುದು ಮತ್ತು ತುಲನಾತ್ಮಕವಾಗಿ ಉತ್ತಮ ಆದಾಯ ಹೊಂದಿರುವುದು<br>• ಗ್ರಾಮೀಣ ಜೀವನೋಪಾಯವನ್ನು ಮುಂದುವರಿಸುವುದು<br>• ಔದ್ಯೋಗಿಕ ಚಲನಶೀಲತೆ ಇರುವುದು<br>• ಜೀವನೋಪಾಯಕ್ಕಾಗಿ ಹೊಸ ಕೌಶಲ್ಯ ಅಥವಾ ಸಾಮರ್ಥ್ಯವನ್ನು ಪಡೆಯುವುದು<br>• ವೈಯಕ್ತಿಕ ಉದ್ಯಮಗಳು ಅಥವಾ ಉದ್ಯೋಗದ ಮೂಲಕ ನಿರುದ್ಯೋಗಿ ಯುವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಸುಧಾರಿಸುವುದು<br>• ಉದ್ಯಮಶೀಲತೆ ಮತ್ತು ವ್ಯವಹಾರ ಕೌಶಲ್ಯಗಳಲ್ಲಿ ತರಬೇತಿಯೊಂದಿಗೆ ಆದಾಯ ಉತ್ಪಾದಿಸುವ ಯೋಜನೆಗಳನ್ನು ಪ್ರಾರಂಭಿಸಲು ಪ್ರೇರೇಪಿತರಾಗುವುದು | ಯುವಕರ ಸಾಮರ್ಥ್ಯ ವರ್ಧನೆ:<br><br>ಉದ್ಯಮಶೀಲತೆ, ನಾವೀನ್ಯತೆ ಮತ್ತು ಆರ್ಥಿಕ ಬೆಳವಣಿಗೆ<br><br>ಕನಿಷ್ಠ ಗುಂಪುಗಳ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ |

# 3. ಮೌಲ್ಯಮಾಪನದ ವ್ಯಾಪ್ತಿ ಮತ್ತು ಉದ್ದೇಶ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ ಆದ್ದರಿಂದ ಅಧ್ಯಯನದ ವ್ಯಾಪ್ತಿ ರಾಜ್ಯದ ಎಲ್ಲಾ 30 ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಅಧ್ಯಯನವು 2013–14 ರಿಂದ 2016–17ರವರೆಗಿನ ಅವಧಿಯನ್ನು (ನಾಲ್ಕು ವರ್ಷಗಳ ಅವಧಿ) ಒಳಗೊಂಡಿದೆ. ಅಧ್ಯಯನದ ಅಡಿಯಲ್ಲಿ ಸೇರಿಸಲಾದ ಯೋಜನೆಯ ವಿವಿಧ ಆಯಾಮಗಳು:

- ❖ ನಿಗದಿತ ಫಲಾನುಭವಿಗಳಿಂದ ಯೋಜನೆಯ ಅರಿವು ಮತ್ತು ಬಳಕೆ,
- ❖ ತರಬೇತಿ ಘಟಕಗಳು ಮತ್ತು ನಿಯೋಜನೆಗಳು, ಸ್ವಯಂ ಉದ್ಯೋಗ,
- ❖ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಅನುಷ್ಠಾನದಲ್ಲಿನ ಪರಿಣಾಮಕಾರಿತ್ವ, ಸಮಸ್ಯೆಗಳು ಮತ್ತು ಸವಾಲುಗಳು
- ❖ ಯೋಜನೆಯಲ್ಲಿ ಯುವಕರ ದಾಖಲಾತಿಯಲ್ಲಿ ಸಮಸ್ಯೆಗಳು, ಲಿಂಗ ವಿಂಗಡಣೆ
- ❖ ಬ್ಯಾಂಕ್ ಸಾಲಗಳ ಬಳಕೆ, ತರಬೇತಿ ಮತ್ತು ನಿಯೋಜನೆಗಳು.

ಮಿಶ್ರ–ವಿಧಾನದ ಉಪಕ್ರಮವನ್ನು ಬಳಸಿಕೊಂಡಿರುವ ಮೌಲ್ಯಮಾಪನ ಅಧ್ಯಯನವು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಫಲಾನುಭವಿಗಳು, ಅನುಷ್ಠಾನ ಪಾಲುದಾರರು, ಮತ್ತು ಬ್ಯಾಂಕುಗಳನ್ನು ಒಳಗೊಂಡಿದೆ. ಮೌಲ್ಯಮಾಪನವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕೈಗೊಂಡಿದ್ದು ಬಾಹ್ಯ ನಿಯೋಗದಿಂದ ನಡೆಸಲಾಗಿದೆ. ಕಾರ್ಯಕ್ರಮದ ಯಶಸ್ಸನ್ನು ನಿರ್ಣಯಿಸುವುದು, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಎದುರಿಸುತ್ತಿರುವ ಮಿತಿಗಳು ಮತ್ತು ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು, ಮತ್ತು ಭವಿಷ್ಯದ ಅನುಷ್ಠಾನಕ್ಕಾಗಿ ಪಾಠಗಳನ್ನು ಕಲಿಯುವುದು ಇದರ ಉದ್ದೇಶವಾಗಿತ್ತು.

------------

# 4. ಪ್ರಗತಿ ಪರಿಶೀಲನೆ

## 4.1 ಬಿಡುಗಡೆಯಾದ ನಿಧಿಗಳು ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು:

ಕೆಳಗಿನ ಕೋಷ್ಟಕದಿಂದ ತಿಳಿದು ಬರುವುದೆಂದರೆ, 2013–14 ರಿಂದ 2017–18ರವರೆಗೆ ಐದು ವರ್ಷಗಳಲ್ಲಿ ಸರ್ಕಾರವು 17,324.59 ಲಕ್ಷ ರೂಗಳನ್ನು ಬಿಡುಗಡೆ ಮಾಡಿದೆ ಮತ್ತು ಇದೇ ಅವಧಿಯಲ್ಲಿ 1,26,085 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ನಿಧಿ ಬಿಡುಗಡೆಗೆ ಸಂಬಂಧಿಸಿದಂತೆ, 2013–15ರ ಮೂಲ ವರ್ಷಗಳಿಂದ 2017–18 ರಲ್ಲಿ 41 ಪ್ರತಿಶತ ಕುಸಿತವಾಗಿದೆ. 2016–17 ಮಾತ್ರ ಮೂಲ ವರ್ಷಗಳಿಂದ ಶೇಕಡಾ 16 ರಷ್ಟು ಹೆಚ್ಚಳವನ್ನು ತೋರಿಸಿದೆ. ಮತ್ತೊಂದೆಡೆ 2015–16ರಲ್ಲಿ ನಿಧಿ ಹಂಚಿಕೆಯಲ್ಲಿ ಇಳಿಕೆಯಾಗಿದ್ದರೂ, ಮೂಲ ವರ್ಷಗಳಿಗೆ ಹೋಲಿಸಿದರೆ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಶೇಕಡಾ 43 ರಷ್ಟು ಹೆಚ್ಚಳವನ್ನು ತೋರಿಸಿದೆ. ಇದು ಗಮನಾರ್ಹವಾಗಿದೆ.

**ಕೋಷ್ಟಕ ಸಂಖ್ಯೆ: 4.1 ರಾಜ್ಯ ಮಟ್ಟದಲ್ಲಿ, 2013–14 ರಿಂದ 2017–18 ಅವಧಿಯಲ್ಲಿ ಬಿಡುಗಡೆಯಾದ ನಿಧಿಗಳು ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು**

| ಕ್ರ ಸಂ. | ವರ್ಷ | ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳಲ್ಲಿ) | ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳು |
|---|---|---|---|
| 01 | 2013–15(2 ವರ್ಷಗಳು) | 4,930.36(100) | 30,870(100) |
| 02 | 2015–16 | 3,767.30(76) | 44,271(143) |
| 03 | 2016–17 | 5,699.92(116) | 26,094(85) |
| 04 | 2017–18 | 2,927.01(59) | 24,850(81) |
| 05 | 2013–14 ರಿಂದ 2017–18 | 17,324.59 | 1,26,085 |

ಮೂಲ : ಸಂಬಂಧಿಸಿದ ಇಲಾಖೆಯಿಂದ ಅಧಿಕೃತ ದಾಖಲೆಗಳು.
ಸೂಚನೆ: ಆವರಣಗಳಲ್ಲಿರುವ ಅಂಕಿಅಂಶಗಳು ಸೂಚ್ಯಂಕ ಸಂಖ್ಯೆಗಳಾಗಿವೆ

ಇದಲ್ಲದೆ, ಕೆಳಗಿನ ಕೋಷ್ಟಕವು ನಾಲ್ಕು ಆಡಳಿತಾತ್ಮಕ ವಿಭಾಗಗಳಲ್ಲಿ ಆಯ್ದ ಜಿಲ್ಲೆಗಳಲ್ಲಿ ಬಿಡುಗಡೆಯಾದ ನಿಧಿಗಳು ಮತ್ತು ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆಯನ್ನು ತೋರಿಸುತ್ತದೆ. 2013 ರಿಂದ 2017–18 ರವರೆಗೆ ರಾಜ್ಯ ಮಟ್ಟದಲ್ಲಿ ಬಿಡುಗಡೆಯಾದ ಒಟ್ಟು ನಿಧಿಯ ಶೇಕಡಾ 21 ರಷ್ಟನ್ನು ಬೆಂಗಳೂರು ವಿಭಾಗವು ಪಡೆದುಕೊಂಡಿದೆ ಎಂಬುದು ವಿಭಾಗಗಳಾದ್ಯಂತ ಆಶ್ಚರ್ಯಕರವಾಗಿದೆ. ಆದರೆ ತರಬೇತಿ ಪಡೆದ ಅಭ್ಯರ್ಥಿಗಳು ಅದೇ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳಲ್ಲಿ ಕೇವಲ 17.60 ಪ್ರತಿಶತದಷ್ಟು ಆಗಿದ್ದಾರೆ. ಕಲಬುರ್ಗಿ ವಿಭಾಗಕ್ಕೆ ಬಿಡುಗಡೆಯಾಗಿರುವ ಹಣ ಒಟ್ಟು ಮೊತ್ತದ ಕೇವಲ ಶೇಕಡಾ 19.9ರಷ್ಟಿದೆ ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು 2013–14 ರಿಂದ 2017–18ರ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳಲ್ಲಿ 21.32 ಪ್ರತಿಶತ ಇದ್ದಾರೆ (ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಕೋಷ್ಟಕ).

**ಕೋಷ್ಟಕ ಸಂಖ್ಯೆ 4.2: 2013–14 ರಿಂದ 2017–18 ರವರೆಗೆ ಆಯ್ದ (ಮಾದರಿ) ಜಿಲ್ಲೆಗಳಲ್ಲಿ ಬಿಡುಗಡೆಯಾದ ಹಣ (ಲಕ್ಷಗಳಲ್ಲಿ) ಮತ್ತು ತರಬೇತಿ ಪಡೆದ ಅಭ್ಯರ್ಥಿಗಳು**

| ಕ್ರ. ಸಂ. | ಜಿಲ್ಲೆಗಳು | ಬಿಡುಗಡೆಯಾದ ನಿಧಿಗಳು (ಲಕ್ಷ ರೂ.) | ತರಬೇತಿ ಪಡೆದ ಅಭ್ಯರ್ಥಿಗಳು |
|---|---|---|---|
| 01 | ಬಾಗಲಕೋಟೆ | 737.81 | 7715 |
| 02 | ಧಾರವಾಡ | 278.93 | 1810 |
| 03 | ಬೆಳಗಾವಿ | 1171.66 | 11732 |
| 04 | ಬೆಳಗಾವಿ ವಿಭಾಗ | 2188.4 (27.78%) | 21257 (31.38) |
| 05 | ಬೆಂಗಳೂರು ನಗರ | 219.59 | 1655 |
| 06 | ಚಿತ್ರದುರ್ಗ | 659.93 | 5355 |
| 07 | ತುಮಕೂರು | 774.46 | 4911 |
| 08 | ಬೆಂಗಳೂರು ವಿಭಾಗ | 1,653.98 (21%) | 11921 (17.60) |
| 09 | ಗುಲ್ಬರ್ಗ | 401.88 | 5028 |
| 10 | ರಾಯಚೂರು | 802.27 | 7319 |
| 11 | ಯಾದಗಿರಿ | 362.48 | 2095 |
| 12 | ಕಲ್ಬುರ್ಗಿ ವಿಭಾಗ | 1566.63 (19.9%) | 14,442 (21.32) |
| 13 | ಹಾಸನ | 1247.50 | 7782 |
| 14 | ಉಡುಪಿ | 129.98 | 367 |
| 15 | ಕೊಡಗು | 170.57 | 1272 |
| 16 | ಮಂಡ್ಯ | 919.65 | 10702 |
| 17 | ಮೈಸೂರು ವಿಭಾಗ | 2467.7 (31.32%) | 20,123 (29.70) |
| 18 | ಸ್ಥಿತಿ | 7,876.71 (100) | 67,743 (100) |

ಮೂಲ: ಸಂಬಂಧಿಸಿದ ಇಲಾಖೆಯಿಂದ ಅಧಿಕೃತ ದಾಖಲೆಗಳು

ಸೂಚನೆ: ಆವರಣಗಳಲ್ಲಿರುವ ಅಂಕಿಅಂಶಗಳು ಶೇಕಡಾದರ

## 4.2 ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಒದಗಿಸಲಾದ ತರಬೇತಿಯ ವಿಧಗಳು:

ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ 2 ರೀತಿ ತರಬೇತಿ ನೀಡಲಾಗುತ್ತದೆ: 1. 'ಸ್ವಯಂ ಉದ್ಯೋಗ'ಕ್ಕಾಗಿ (ಬ್ಯಾಂಕ್ ಸಾಲಗಳೊಂದಿಗೆ) ತರಬೇತಿ. 2. 'ಉದ್ಯೋಗ ನಿಯೋಜನೆ' ಗಾಗಿ ತರಬೇತಿ. ಇದಕ್ಕಾಗಿ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳನ್ನು ಕ್ರಮವಾಗಿ ಕಾರ್ಯಕ್ರಮ ಬೆಂಬಲಿಸುವ ನಿಯೋಗ ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗ ಎಂದು ಕರೆಯಲಾಗುತ್ತದೆ.

**ಸ್ವಯಂ ಉದ್ಯೋಗ:** ಕರ್ನಾಟಕದಲ್ಲಿ 30 ಜಿಲ್ಲೆಗಳಲ್ಲಿ 62 ಯೋಜನೆ ಬೆಂಬಲಿಸುವ ನಿಯೋಗಗಳು ಕಾರ್ಯ ನಿರ್ವಹಿಸುತ್ತಿವೆ. 2016 ರಲ್ಲಿ ನಿಗದಿತ 176285 ಸಂಖ್ಯೆಯ ವಿರುದ್ಧ ಅರ್ಜಿಗಳನ್ನು ಸಲ್ಲಿಸಿದ 86209 ರಲ್ಲಿ 42050 ಯುವಕರಿಗೆ ಸಾಲ ಮಂಜೂರಾಗಿದೆ. ಈ ಸಾಧನೆಯು ನಿಗದಿಪಡಿಸಿದ್ದರಲ್ಲಿ ಶೇ.23.85ರಷ್ಟು ಮತ್ತು ಅವಶ್ಯಕತೆ ಬೇಡಿಕೆಯ ಶೇ.48.9 ರಷ್ಟು ಆಗಿದೆ.

**ಕೌಶಲ್ಯ ತರಬೇತಿ ಮತ್ತು ನಿಯೋಜನೆ:** ಸುಮಾರು 21 ಯೋಜನೆ ಅನುಷ್ಠಾನ ನಿಯೋಗಗಳು ಕೌಶಲ್ಯ ತರಬೇತಿ ಮತ್ತು ನಿಯೋಜನೆಗಾಗಿ ಕೆಲಸ ಮಾಡುತ್ತಿವೆ. 2014–15 ರಲಿ ಒಟ್ಟು 226871 ಅಭ್ಯರ್ಥಿಗಳಿಗೆ ತರಬೇತಿ ನೀಡಿ ನಿಯೋಜಿಸಲಾಗಿದೆ ಮತ್ತು 2015–16 ರಲ್ಲಿ ಒಟ್ಟು 32472 ಅಭ್ಯರ್ಥಿಗಳಿಗೆ ತರಬೇತಿ ನೀಡಿ ನಿಯೋಜಿಸಲಾಗಿದೆ.

**ಯೋಜನೆ ಅನುಷ್ಠಾನ ಕಾರ್ಯತಂತ್ರ:**

**ರಾಜ್ಯ ಮಟ್ಟದಲ್ಲಿ:**

- ರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ಸಂಜೀವಿನಿ ತಂಡಕ್ಕೆ ದಿಶಾ ನಿರ್ದೇಶನ
- ಯೋಜನೆಯಲ್ಲಿ ತೊಡಗಿಸಿಕೊಂಡಿರುವ ವಿವಿಧ ಪಾಲುದಾರರು ಮತ್ತು ಇಲಾಖೆಗಳಿಗೆ ದಿಶಾ ನಿರ್ದೇಶನ ನೀಡುವುದು ಮತ್ತು ಅನುಷ್ಠಾನದ ಸಮಯದಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳ ಬಗ್ಗೆ ಅವರಿಗೆ ಅರಿವು ಮೂಡಿಸುವುದು
- ಆಸಕ್ತ ಯುವಕರಿಗೆ ಸಾಲವನ್ನು ಒದಗಿಸಲು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ರಾಜ್ಯ ಮಟ್ಟದಲ್ಲಿ ಬ್ಯಾಂಕುಗಳನ್ನು ಕರೆಯುವುದು.

**ಜಿಲ್ಲಾ ಮಟ್ಟದಲ್ಲಿ:**

- ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಚುನಾಯಿತ ಪ್ರತಿನಿಧಿಗಳು ಮತ್ತು ತಂಡದ ಸದಸ್ಯರು ಯೋಜನೆ ಮತ್ತು ಅದರ ಅನುಷ್ಠಾನದ ಬಗ್ಗೆ ಮಾಹಿತಿ ನೀಡಲು ಅರಿವು ಮೂಡಿಸುವುದು
- ಜಿಲ್ಲಾ ಮಟ್ಟದ ಸಲಹಾ ಸಮಿತಿರಚನೆ ಮಾಡುವುದು.
- ಜಿಲ್ಲಾ ಪಂಚಾಯಿತಿ ಆಯೋಜಿಸಿದ್ದ ಯುವಜನ ಮೇಳವನ್ನು ಬೆಂಬಲಿಸುವುದು.
- ಅನುಷ್ಠಾನ ಪಾಲುದಾರರಿಗೆ ಸಲಹೆ ನೀಡುವುದು.
- ಉತ್ತಮತರಬೇತಿ ಸಂಸ್ಥೆಗಳನ್ನು ಗುರುತಿಸುವುದು.
- ಮಾರುಕಟ್ಟೆಯಲ್ಲಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಯುವ ಚಟುವಟಿಕೆಗಳಿಗೆ ಅನುಕೂಲಕರವಾದ ಯೋಜನೆಗಳನ್ನು ಯೋಜಿಸುವುದು.
- ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ ತಯಾರಿಸಲಾದ ಯುವಕರ ಉತ್ಪನ್ನಗಳಿಗೆ ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಲಭ್ಯವಿರುವ ಅಗತ್ಯ ಸೌಲಭ್ಯಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದು.

**ತಾಲ್ಲೂಕು ಮಟ್ಟದಲ್ಲಿ:**

- ಚುನಾಯಿತ ಪ್ರತಿನಿಧಿ, ತಂಡದ ಸದಸ್ಯರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಇತರ ಸಿಬ್ಬಂದಿಗಳಿಗೆ ಒಂದು ದಿನದ ಜಾಗೃತಿ ಕಾರ್ಯಕ್ರಮವನ್ನು ರೂಪಿಸುವುದು.
- ಯೋಜನೆಯ ಪ್ರಗತಿಯ ಉಸ್ತುವಾರಿ ನೋಡಿಕೊಳ್ಳಲು ಸಮಿತಿ ರಚಿಸುವುದು.
- ಸ್ವಯಂ ಉದ್ಯೋಗ ಮತ್ತು ಕೌಶಲ್ಯ ತರಬೇತಿ ಮತ್ತು ನಿಯೋಜನೆಗಾಗಿ ಗ್ರಾಮ ಸಭೆಯಿಂದ ಅಂತಿಮಗೊಳಿಸಲಾದ ಯುವಕರ ಪಟ್ಟಿಯನ್ನು ಅಂತಿಮಗೊಳಿಸುವುದು.

- ಪ್ರಗತಿಯ ಉಸ್ತುವಾರಿಗಾಗಿ ಸಮಿತಿಯು ತಿಂಗಳಿಗೊಮ್ಮೆ ಸಭೆ ಸೇರುವುದು.
- ಸಾಮಾಜಿಕ ಮತ್ತು ಭೌಗೋಳಿಕ ಪರಿಗಣನೆಯ ಆಧಾರದ ಮೇಲೆ ಸ್ವಯಂ ಉದ್ಯೋಗ ಮತ್ತು ಕೌಶಲ್ಯ ತರಬೇತಿ ಮತ್ತು ನಿಯೋಜನೆ ಅವಕಾಶಗಳನ್ನು ಪರಿಶೀಲಿಸುವುದು.
- ವಿವಿಧ ಇಲಾಖೆಯಿಂದ ಲಭ್ಯವಿರುವ ಬೆಂಬಲವನ್ನು ಪರಿಶೀಲಿಸುವುದು.

**ಗ್ರಾಮ ಮಟ್ಟದಲ್ಲಿ:**

- ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ನಿಗದಿತ ಮಾನದಂಡಗಳ ಪ್ರಕಾರ ಅರ್ಹರಾದ ಯುವಕರ ಪಟ್ಟಿಯನ್ನು ಅಂತಿಮಗೊಳಿಸುವುದು.
- ಆಯೋಜಿಸುವ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಅನುಸಾರ ಗ್ರಾಮ ಸಭೆಯಿಂದ ನಿರುದ್ಯೋಗಿ ಯುವಕರನ್ನು ಗುರುತಿಸುವುದು.

## 4.3 ತರಬೇತಿಯ ಸ್ವರೂಪ:

ಉಪಗ್ರಹ ಸಂವಹನದ ಮೂಲಕ ಪ್ರತಿ ಗ್ರಾಮ ಪಂಚಾಯಿತಿಯಿಂದ 40 ಯುವಕರನ್ನು ತರಬೇತಿಗೆ ಆಯ್ಕೆ ಮಾಡಬೇಕಿತ್ತು. ಆದ್ದರಿಂದ, 6019 ಗ್ರಾಮ ಪಂಚಾಯಿತಿಗಳಿಂದ, 240760 ಫಲಾನುಭವಿ ತರಬೇತಿದಾರರನ್ನು ಕೆಎಸ್‌ಆರ್‌ಎಲ್‌ಪಿಎಸ್ – ಸಂಜೀವಿನಿಯಿಂದ ಉಪಗ್ರಹ ತರಬೇತಿಗಾಗಿ ಆಯ್ಕೆ ಮಾಡಲಾಗಿತ್ತು. 177 ತಾಲ್ಲೂಕುಗಳನ್ನು ಒಳಗೊಂಡಂತೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ 34 ಪ್ರಸರಣಗಳ ಮೂಲಕ ತರಬೇತಿ ಕಾರ್ಯಕ್ರಮಗಳ ನಡೆಸಬೇಕಾಗಿತ್ತು. ಹೀಗಾಗಿ 7080 ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ತರಬೇತಿಗಾಗಿ ತರಬೇತಿ ನೀಡಬೇಕಾಗಿತ್ತು.

ಯೋಜನೆ ಅನುಷ್ಠಾನ ಸಂಸ್ಥೆಗಳು ತಾಲ್ಲೂಕು ಮಟ್ಟದಲ್ಲಿ ಫಲಾನುಭವಿಗಳಿಗೆ ತರಬೇತಿ ನೀಡುತ್ತವೆ. 3 ರಿಂದ 6 ದಿನಗಳ ಕಾಲ ಸ್ವಯಂ ಉದ್ಯೋಗ ತರಬೇತಿ ನಡೆಸಬೇಕಾಗಿತ್ತು. ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಆಯ್ಕೆಯಾದ ಅಭ್ಯರ್ಥಿಗಳನ್ನು ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಸಾಮಾನ್ಯ ಉದ್ದೇಶದ ಮೇರೆಗೆ ಜಂಟಿ ಹೊಣೆಗಾರಿಕೆ ಗುಂಪುಗಳಾಗಿ ರಚಿಸಬೇಕಾಗಿತ್ತು. ಅಂತೆಯೇ, ಪ್ರತಿಯೊಂದು ಗುಂಪು ಯಾವುದೇ ಆಯ್ಕೆ ಮಾಡಿದ ಉದ್ಯೋಗದಲ್ಲಿ ಸ್ವಯಂ ಉದ್ಯೋಗವನ್ನು ಮುಂದುವರಿಸುವ ಗುರಿಯನ್ನು ಹೊಂದಿರುವ ವ್ಯಕ್ತಿಗಳನ್ನು ಒಳಗೊಂಡಿರುತ್ತಿತ್ತು. ಇದರ ನಂತರ ಅವರು ಗುರುತಿಸಲಾದ ವಾಣಿಜ್ಯ ಬ್ಯಾಂಕ್ ಮೂಲಕ ಸಾಲಕ್ಕಾಗಿ ಅರ್ಜಿ ಸಲ್ಲಿಸಬೇಕು. ಔಪಚಾರಿಕವಾಗಿ ದೃಢೀಕರಣವನ್ನು ಪಡೆದ ನಂತರ, ಅವರು ಸಾಲಕ್ಕೆ ಅರ್ಹರಾಗುತ್ತಾರೆ ಮತ್ತು ಅವರು ಯೋಜನಾ ಅನುಷ್ಠಾನ ನಿಯೋಗದಿಂದ ತರಬೇತಿ ಪಡೆಯುತ್ತಾರೆ. ಕೌಶಲ್ಯ ಅಭಿವೃದ್ಧಿ ಮತ್ತು ನಿಯೋಜನೆ ಘಟಕದಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ 45 ದಿನಗಳ (ವಸತಿ ಮತ್ತು ವಸತಿಯೇತರ ಎರಡೂ) ತೀವ್ರ ತರಬೇತಿಯನ್ನು ನೀಡಲಾಗುತ್ತದೆ. ಈ ಹಂತಕ್ಕೆ ಮೊದಲು ಯೋಜನಾ ಅನುಷ್ಠಾನ ನಿಯೋಗಗಳು ಈಗಾಗಲೇ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ತರಬೇತಿ ಪಡೆದ ಮತ್ತು ಪ್ರಮಾಣೀಕೃತ ಫಲಾನುಭವಿಗಳ ಸೇವೆಗಳನ್ನು ವ್ಯವಹಾರ ಸಂಸ್ಥೆಗಳು ಪಡೆದುಕೊಳ್ಳಬಹುದೆಂಬ ತಿಳುವಳಿಕಾ ಒಡಂಬಡಿಕೆಯನ್ನು ಮಾಡಿಕೊಂಡಿರುವುದು ಅತ್ಯಗತ್ಯವಾಗಿದೆ.

ಆದರೂ ಈ ಕೆಳಗಿನ ವಿಭಾಗಗಳಲ್ಲಿ ಕಂಡುಬಂದಂತೆ, ಕ್ಷೇತ್ರ ಮತ್ತು ಆಡಳಿತಾತ್ಮಕ ಮಟ್ಟದಲ್ಲಿ ತಲೆದೋರಬಹುದಾದ ವಿವಿಧ ಕಾರಣಗಳಿಂದಾಗಿ ಈ ಹಂತಗಳು ಯಾವಾಗಲೂ ಒಂದೇ ಅನುಕ್ರಮವನ್ನು ಅನುಸರಿಸಲಾಗುವುದಿಲ್ಲ. ಉದಾಹರಣೆಗೆ, ವಾಣಿಜ್ಯ ಬ್ಯಾಂಕುಗಳು ಒಂದು ಕ್ಷೇತ್ರದಲ್ಲಿ ತರಬೇತಿ ಪಡೆದರೆ ಒಬ್ಬ ವ್ಯಕ್ತಿಗೆ ಸಾಲವನ್ನು ಮುಂಗಡವಾಗಿ ನೀಡುತ್ತೇವೆ ಎಂಬ ಭರವಸೆಯನ್ನು ನೀಡಲು ಸಾಧ್ಯವಾಗುವುದಿಲ್ಲ, ಬದಲಿಗೆ ಪರಿಶೀಲನೆಯ ದಿನಾಂಕದಂದು ಒಬ್ಬ ವ್ಯಕ್ತಿಯು ಬ್ಯಾಂಕುಗಳಿಗೆ ಸಾಲದ ಹೊಣೆಗಾರಿಕೆಗಳನ್ನು ಹೊಂದಿದ್ದಾನೆಯೇ ಅಥವಾ ಇಲ್ಲವೇ ಎಂದು ಪ್ರಮಾಣೀಕರಿಸಲು ಸಿದ್ಧವಾಗಿವೆ. ಅದರಂತೆಯೇ, ಖಾಸಗಿ ಸಂಸ್ಥೆಗಳೊಂದಿಗೆ ಮಾಡಿಕೊಂಡ ತಿಳುವಳಿಕಾ ಒಡಂಬಡಿಕೆ ಯಾವಾಗಲೂ ಯಾವುದೇ ಕೌಶಲ್ಯದಲ್ಲಿ ತರಬೇತಿ ಪಡೆದ ವ್ಯಕ್ತಿಗಳನ್ನು ತೊಡಗಿಸಿಕೊಳ್ಳಲಾಗುವುದಿಲ್ಲ ಏಕೆಂದರೆ, ಕಾರ್ಮಿಕರ ಬೇಡಿಕೆ ಒಂದೆರಡು ತಿಂಗಳುಗಳ ನಂತರ ಬದಲಾಗುವ ಸಾಧ್ಯತೆಯುಂಟು. ಈ ಕಾರ್ಯಾಚರಣೆಯ ಸವಾಲುಗಳು ಮತ್ತು ಮಾರ್ಪಾಡುಗಳನ್ನು ಮುಂದಿನ ಅಧ್ಯಾಯಗಳಲ್ಲಿ / ವಿಭಾಗಗಳಲ್ಲಿ ಚರ್ಚಿಸಲಾಗುತ್ತದೆ.

------------

# 5. ಸಾಹಿತ್ಯದ ಅವಲೋಕನ

## 5.1. ಭಾರತದಲ್ಲಿ ಕೌಶಲ್ಯ ಅಭಿವೃದ್ಧಿಯ ಮೂಲವನ್ನು ಪತ್ತೆ ಹಚ್ಚುವುದು:

ಜನಸಂಖ್ಯಾ ಲಾಭಾಂಶದಿಂದಾಗಿ ಭಾರತೀಯ ಸನ್ನಿವೇಶದಲ್ಲಿ ಕೌಶಲ್ಯ ಅಭಿವೃದ್ಧಿಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಸರಾಸರಿ ವಯಸ್ಸು ಚೀನಾ ಮತ್ತು ಅಮೇರಿಕ ಸಂಸ್ಥಾನದಲ್ಲಿ 37 ವರ್ಷ ಮತ್ತು ಪಶ್ಚಿಮ ಯುರೋಪಿನಲ್ಲಿ 45 ವರ್ಷಗಳಾಗಿದ್ದರೆ, ಭಾರತದಲ್ಲಿ ಸರಾಸರಿ ವಯಸ್ಸು 29 ವರ್ಷ ಆಗಿದ್ದು ವಿಶ್ವದ ಅತ್ಯಂತ ಕಿರಿಯ ದೇಶಗಳಲ್ಲಿ ಒಂದಾಗಲಿದೆ. ವಿಶ್ವ ಬ್ಯಾಂಕ್‌ನ ವರದಿಯ ಪ್ರಕಾರ, ಭಾರತದ ಒಟ್ಟು ಕಾರ್ಯಪಡೆಯಲ್ಲಿ ಕೇವಲ ಶೇಕಡಾ 2.3ರಷ್ಟು ಮಾತ್ರ ಔಪಚಾರಿಕ ಕೌಶಲ್ಯ ತರಬೇತಿಯನ್ನು ಹೊಂದಿದ್ದಾರೆ. ಶಿಕ್ಷಣ ಸಂಸ್ಥೆಗಳಿಂದ ಉತ್ತೀರ್ಣರಾಗುವ ವ್ಯಕ್ತಿಗಳಲ್ಲಿ ಕೇವಲ 47% ಮಾತ್ರ ಉದ್ಯೋಗಸ್ಥರಾಗಲು ಅರ್ಹರಾಗಿದ್ದಾರೆ ಎಂದು ಭಾರತ ಕೌಶಲ್ಯ ವರದಿ 2018 ಬಹಿರಂಗಪಡಿಸುತ್ತದೆ.

ಭಾರತದ ಜನಸಂಖ್ಯೆಯನ್ನು ಕೌಶಲ್ಯಪೂರ್ಣರನ್ನಾಗಿಸುವ ಮತ್ತು ಕೈಗಾರೀಕರಣವನ್ನು ಉತ್ತೇಜಿಸುವ ಪ್ರಕ್ರಿಯೆಯನ್ನು 1969 ರಲ್ಲಿ ದೇಶದ ಮೊದಲ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿದಾಗ ಪ್ರಾರಂಭಿಸಲಾಯಿತು. ಇದನ್ನು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಅಡಿಯಲ್ಲಿ ಸ್ಥಾಪಿಸಲಾಗಿದೆ. ತದನಂತರ ಅಪ್ರೆಂಟಿಸ್‌ಶಿಪ್ ಕಾಯ್ದೆ 1961, ರಾಷ್ಟ್ರೀಯ ಕೌಶಲ್ಯ ನೀತಿ 2009, ರಾಷ್ಟ್ರೀಯ ಕೌಶಲ್ಯ ಅರ್ಹತೆ ಚೌಕಟ್ಟು 2013, ಮತ್ತು ಇತ್ತೀಚೆಗೆ ಸ್ಕಿಲ್ ಇಂಡಿಯಾ ಅಭಿಯಾನ (ಇದರ ಅಡಿಯಲ್ಲಿ ವಿವಿಧ ಉಪಕ್ರಮಗಳನ್ನು ಪ್ರಾರಂಭಿಸಲಾಗಿದೆ) ಗಳು ಭಾರತದಲ್ಲಿ ಕೌಶಲ್ಯ ಅಭಿವೃದ್ಧಿಯ ಮಾರ್ಗಸೂಚಿಯನ್ನು ವ್ಯಾಖ್ಯಾನಿಸಿವೆ. 2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ 'ಕೌಶಲ್ಯ ಭಾರತ' ಅಥವಾ 'ರಾಷ್ಟ್ರೀಯ ಕೌಶಲ್ಯ ಭಾರತ ಅಭಿಯಾನ'ವು 2022ರ ವೇಳೆಗೆ 40 ಕೋಟಿ ಭಾರತೀಯರಿಗೆ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡುವ ಗುರಿಯನ್ನು ಹೊಂದಿದೆ.

ಭಾರತದಲ್ಲಿನ ಕೌಶಲ್ಯ ಬೆಳವಣಿಗೆಯನ್ನು ಈಗ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (ಎಂಎಸ್‌ಡಿಇ) ನೋಡಿಕೊಳ್ಳುತ್ತಿದೆ. ದೇಶಾದ್ಯಂತ ಎಲ್ಲಾ ಕೌಶಲ್ಯ ಸುಧಾರಣಾ ಚಟುವಟಿಕೆಗಳನ್ನು ಒಟ್ಟುಗೂಡಿಸಲು, ಸಾಕಷ್ಟು ಕೌಶಲ್ಯಗಳು ಮತ್ತು ಉದ್ಯಮದ ಅನುಭವ ಹೊಂದಿರುವ ಸಿಬ್ಬಂದಿಯನ್ನು ಒದಗಿಸುವಿಕೆ ಹಾಗೂ ಕೈಗಾರಿಕೆ ಅನುಭವಗಳ ನಡುವೆ ಹೆಚ್ಚುತ್ತಿರುವ ವಿಭಜನೆಯನ್ನು ಹೋಗಲಾಡಿಸಲು, ಗುಣಮಟ್ಟದ ವೃತ್ತಿಪರ ಮತ್ತು ವಿಧಾನಾತ್ಮಕ ತರಬೇತಿ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು, ಕೌಶಲ್ಯ ವರ್ಧನೆ ಮತ್ತು ಸಂವರ್ಧನೆಗೆ ಹೊಸ ಕೌಶಲ್ಯಗಳನ್ನು ಪ್ರೋತ್ಸಾಹಿಸಲು ಮತ್ತು ಕ್ರಾಂತಿಕಾರಿ ಮತ್ತು ಮಾರ್ಗ ಮುರಿಯುವ ಆಲೋಚನೆಗಳನ್ನು ತರಲು ಕಾರ್ಯಪಡೆಗೆ ವೇಗವರ್ಧಕವಾಗಲು ಸಚಿವಾಲಯವು ಹೊಣೆಯಾಗಿದೆ. ಹೀಗಾಗಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ ಉದ್ಯಮಶೀಲತೆಯ ಹಾದಿಗೆ ಕಾರಣವಾಗುವ ಸೃಜನಶೀಲತೆ, ನಾವೀನ್ಯತೆಯನ್ನು ಬೆಳೆಸುವ ಮೂಲಕ ಯುವಜನರನ್ನು ಪ್ರೋತ್ಸಾಹಿಸುತ್ತದೆ. 'ಕೌಶಲ್ಯಪೂರ್ಣ ಭಾರತ'ದ ದೃಷ್ಟಿಕೋನವನ್ನು ಸಾಧಿಸಲು ಸಚಿವಾಲಯವು ಸಮರ್ಥವಾಗಿ ಮತ್ತು ತ್ವರಿತವಾಗಿ ಮುಂದುವರಿಯುವ ಗುರಿಯನ್ನು ಹೊಂದಿದೆ. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಯೋಗ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಧಿ ಮತ್ತು 33 ವಲಯ ಕೌಶಲ್ಯ ಮಂಡಳಿಗಳು ಮತ್ತು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಯೋಗದೊಡನೆ ನೋಂದಾಯಿಸಿದ 187 ತರಬೇತಿ ಪಾಲುದಾರರು ಎಂಬ ದಕ್ಷ ಮತ್ತು ಉತ್ತಮ ವಿನ್ಯಾಸದ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಇದನ್ನು ಬೆಂಬಲಿಸುತ್ತವೆ.

ಕೌಶಲ್ಯ ಅಭಿವೃದ್ಧಿ ಉದ್ದೇಶಗಳನ್ನು ಪೂರೈಸಲು ಸರ್ಕಾರ ಮತ್ತು ಸರ್ಕಾರೇತರ ವಲಯಗಳಿಂದ ನಿಧಿ ಸಂಗ್ರಹಿಸಲು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಯಿತು. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದಲ್ಲಿ ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶನಾಲಯ ವೃತ್ತಿಪರ ಕೌಶಲ್ಯ ಅಭಿವೃದ್ಧಿಗೆ ಸಂಬಂಧಿಸಿದ ತರಬೇತಿಗಳನ್ನು ಸಂಯೋಜಿಸುತ್ತದೆ. ಭಾರತೀಯ ಉದ್ಯಮಶೀಲತೆ ಸಂಸ್ಥೆ, ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಡಿಯಲ್ಲಿ ರಾಷ್ಟ್ರೀಯ ಉದ್ಯಮಶೀಲತೆ ಮತ್ತು ಸಣ್ಣ ವಾಣಿಜ್ಯ ಅಭಿವೃದ್ಧಿ ಸಂಸ್ಥೆ ಉದ್ಯಮಶೀಲತೆಯನ್ನು ಉತ್ತೇಜಿಸಲು ತೊಡಗಿವೆ. ಕೌಶಲ್ಯ ಆಧಾರಿತ ತರಬೇತಿ ಮತ್ತು ಮೌಲ್ಯಮಾಪನ ಮಾದರಿಗಳು ವಿವಿಧ ಪ್ರಮುಖ ಯೋಜನೆಗಳ ಅಡಿಯಲ್ಲಿ ಅಸ್ತಿತ್ವದಲ್ಲಿವೆ. ಭಾರತ ಸರ್ಕಾರವು ವಿಸ್ತಾರವಾದ ಕೌಶಲ್ಯ ಅಭಿವೃದ್ಧಿ ವಾಸ್ತುಶಿಲ್ಪವನ್ನು ಸ್ಥಾಪಿಸಿದೆ ಮತ್ತು ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆಯಂತಹ ದೊಡ್ಡ ಪ್ರಮಾಣದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ಅಳವಡಿಸಿಕೊಂಡಿದೆ. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮವು ಭಾರತದಲ್ಲಿ ಅಂತಹ ಒಂದು ಸಾರ್ವಜನಿಕ ಖಾಸಗಿ ಪಾಲುದಾರಿಕೆಯಾಗಿದೆ. ಇದು ದೊಡ್ಡ ಗುಣಮಟ್ಟದ, ಲಾಭದಾಯಕ ವೃತ್ತಿಪರ ಸಂಸ್ಥೆಗಳ ಸೃಷ್ಟಿಯನ್ನು ವೇಗಗೊಳಿಸುವ ಮೂಲಕ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

## 5.2 ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನೀತಿಯ ಪ್ರಮುಖ ಲಕ್ಷಣಗಳು:

- ಐಟಿಐಗಳು/ ವೃತ್ತಿಪರ ಶಾಲೆಗಳು/ ತಾಂತ್ರಿಕ ಶಾಲೆಗಳು/ ಪಾಲಿಟೆಕ್ನಿಕ್‌ಗಳು/ ವೃತ್ತಿಪರ ಕಾಲೇಜುಗಳು ಸೇರಿದಂತೆ ಸಂಸ್ಥೆ ಆಧಾರಿತ ಕೌಶಲ್ಯ ಅಭಿವೃದ್ಧಿ
- ವಿವಿಧ ಸಚಿವಾಲಯಗಳು/ ಇಲಾಖೆಗಳು ಆಯೋಜಿಸುವ ವಲಯ ಕೌಶಲ್ಯ ಅಭಿವೃದ್ಧಿಯ ಕಲಿಕೆಯ ಉಪಕ್ರಮಗಳು
- ಔಪಚಾರಿಕ ಮತ್ತು ಅನೌಪಚಾರಿಕ ಅಭ್ಯಾಸಾವಧಿಗಳು ಮತ್ತು ಉದ್ಯಮಗಳಿಂದ ಇತರ ರೀತಿಯ ತರಬೇತಿ
- ಸ್ವಯಂ ಉದ್ಯೋಗ/ ಉದ್ಯಮಶೀಲತೆ ಅಭಿವೃದ್ಧಿಗಾಗಿ ತರಬೇತಿ
- ವಯಸ್ಕರ ಕಲಿಕೆ, ನಿವೃತ್ತ ಅಥವಾ ನಿವೃತ್ತಿ ಹೊಂದುತ್ತಿರುವ ಉದ್ಯೋಗಿಗಳ ಮರು ತರಬೇತಿ ಮತ್ತು ಜೀವನಪರ್ಯಂತ ಕಲಿಕೆ
- ನಾಗರಿಕ ಸಮಾಜ ಸಂಸ್ಥೆಗಳಿಂದ ತರಬೇತಿ ಸೇರಿದಂತೆ ಔಪಚಾರಿಕವಲ್ಲದ ತರಬೇತಿ
- ಇ–ಕಲಿಕೆ, ಜಾಲ– ಆಧಾರಿತ ಕಲಿಕೆ ಮತ್ತು ದೂರ ಕಲಿಕೆ
    - ನೀತಿಯು ಈ ಮೂರು ಸಾಂಸ್ಥಿಕ ಚೌಕಟ್ಟನ್ನು ಒಳಗೊಂಡಿದೆ:
    - ಪ್ರಧಾನಮಂತ್ರಿಯವರ ಕೌಶಲ್ಯ ಅಭಿವೃದ್ಧಿ ರಾಷ್ಟ್ರೀಯ ಮಂಡಳಿ
    - ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಸಮನ್ವಯ ಮಂಡಳಿ
    - ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ
    - ರಾಷ್ಟ್ರೀಯ ವೃತ್ತಿಪರ ತರಬೇತಿ ಮಂಡಳಿ (ಎನ್‌ಸಿವಿಟಿ)

**ಚಿತ್ರ 5.1 : ಕೌಶಲ ಅಭಿವೃದ್ಧಿಯ ಇತಿಹಾಸ : ಒಂದು ಕ್ಷಿಪ್ರ ಚಿತ್ರ**




**ಮೂಲ:** https://www.britishcouncil.org/sites/default/files/18.10.16_overview_of_skill_landscape.pdf

ಭಾರತದಲ್ಲಿ ಜಾರಿಗೆ ತರಲಾದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಕೇಂದ್ರ ಸರ್ಕಾರ ಸಮಗ್ರ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಭಾರತದಲ್ಲಿ ಜನಸಂಖ್ಯೆಯ ಪ್ರಮಾಣವನ್ನು ಹೆಚ್ಚು ಕೌಶಲ್ಯಪೂರ್ಣ ಮತ್ತು ಉದ್ಯೋಗಾರ್ಹವಾಗಿಸುವ ಮೂಲಕ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತುತ ಚೌಕಟ್ಟನ್ನು ಕಂಡುಹಿಡಿಯುವುದಕ್ಕಾಗಿ ವಿವಿಧ ಮೌಲ್ಯಮಾಪನಗಳು ಮತ್ತು ಅಧ್ಯಯನಗಳನ್ನು ಕೈಗೊಳ್ಳಲಾಗಿದೆ.

ಸುಶೇಂದ್ರ ಕುಮಾರ್ ಮಿಶ್ರಾ (2015) ಅವರ "ಕೌಶಲ್ಯ ಅಭಿವೃದ್ಧಿ: ಭಾರತದಲ್ಲಿ ಜನಸಂಖ್ಯಾ ಲಾಭಾಂಶವನ್ನು ಬಳಸಿಕೊಳ್ಳುವ ಒಂದು ಮಾರ್ಗ" ಎಂಬ ಶೀರ್ಷಿಕೆಯ ಅಧ್ಯಯನವು ಕೌಶಲ್ಯ ಅಭಿವೃದ್ಧಿ ಯೋಜನೆಗಳ ಮೂಲಕ ಪ್ರಸ್ತುತ ಕೌಶಲ್ಯ ಅಭಿವೃದ್ಧಿ ನೀತಿಯನ್ನು ಪರಿಶೀಲಿಸಿದೆ ಮತ್ತು ಅದು ವಿಶ್ವದರ್ಜೆಯ ನುರಿತ ಮಾನವ ಶಕ್ತಿಯನ್ನು ಉತ್ಪಾದಿಸುವಲ್ಲಿ ಫಲ ನೀಡುತ್ತದೆಯೇ ಎಂಬುದನ್ನು ಪರಿಶೀಲಿಸಿದೆ. ಈ ಅಧ್ಯಯನದಲ್ಲಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಸಮನ್ವಯ ಮಂಡಳಿ ಮತ್ತು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಯೋಗ ನೀತಿಗಳ ಬಗ್ಗೆ ಪತ್ರಿಕೆ ಚರ್ಚಿಸಲಾಗಿದೆ ಮತ್ತು ಅಸ್ತಿತ್ವದಲ್ಲಿರುವ ಕೌಶಲ್ಯ ಅಭಿವೃದ್ಧಿ ನೀತಿಯನ್ನು ಉದ್ಯಮ ಮತ್ತು ಜಾಗತಿಕ ಮಾರುಕಟ್ಟೆಯ ಅಗತ್ಯಕ್ಕೆ ಅನುಗುಣವಾಗಿ ಮಾರ್ಪಡಿಸಬೇಕು ಮತ್ತು ಕೌಶಲ್ಯ ಗುರಿಗಳನ್ನು ಸಾಧಿಸಲು ಖಾಸಗಿ ಪಾಲುದಾರಿಕೆಯನ್ನು ಉತ್ತೇಜಿಸಬೇಕು ಎಂದು ತೀರ್ಮಾನಿಸಲಾಗಿದೆ.

ಅಗರ್ವಾಲ್ ಎಸ್. (2016) ಅವರು "ಉದ್ಯೋಗಾವಕಾಶದ ಕೇಂದ್ರ ಸ್ತಂಭ: ಕೌಶಲ್ಯ ಅಭಿವೃದ್ಧಿ" ಎಂಬುವುದರ ಪ್ರಾಮುಖ್ಯತೆಯನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಈ ಸಂಶೋಧನಾ ಪ್ರಬಂಧವು ಪ್ರಸ್ತುತ ಕೌಶಲ್ಯ ಸಾಮರ್ಥ್ಯ ಮತ್ತು ಭಾರತದಲ್ಲಿ ಕೌಶಲ್ಯ ಅಭಿವೃದ್ಧಿ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳನ್ನು ಅವುಗಳ ಪರಿಹಾರಗಳೊಂದಿಗೆ ಅರ್ಥಮಾಡಿಕೊಳ್ಳುವ ಮತ್ತು ಶಿಕ್ಷಣ ಮತ್ತು ವೃತ್ತಿಪರ ತರಬೇತಿಯ ಸಹಾಯದಿಂದ ಭಾರತೀಯ ಕಾರ್ಯಪಡೆಯ ಕೌಶಲ್ಯ ಸಾಮರ್ಥ್ಯದ ಮಟ್ಟವನ್ನು ನಿರ್ಣಯಿಸುವ ಪ್ರಯತ್ನವಾಗಿದೆ. ಆರ್ಥಿಕತೆಯಲ್ಲಿ ಕೌಶಲ್ಯ ಅಭಿವೃದ್ಧಿ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರ ಮತ್ತು ಅದರ ಪಾಲುದಾರ ನಿಯೋಗಗಳು ವಿವಿಧ ಕ್ರಮಗಳು / ಉಪಕ್ರಮಗಳನ್ನು ಪ್ರಾರಂಭಿಸಿವೆ. ಆದರೆ ಈ ವಲಯವು ಇನ್ನೂ ನೀತಿ ನಿರೂಪಕರ ತಕ್ಷಣದ ಗಮನ ಅಗತ್ಯವಿರುವ ಹಲವಾರು ಅನಿಶ್ಚಿತ ಸಮಸ್ಯೆಗಳು / ಸವಾಲುಗಳನ್ನು ಎದುರಿಸುತ್ತಿದೆ ಎಂದು ಅಧ್ಯಯನವು ಕಂಡುಕೊಂಡಿದೆ. ಈ ಕಾರ್ಯಕ್ರಮವು ಸಾಮಾನ್ಯ ಕೆಲಸಗಾರರಿಗೆ ಮಾರ್ಗಗಳನ್ನು ರೂಪಿಸಲು ಅಸಮರ್ಥವಾಗಿದೆ ಮತ್ತು ಅಗತ್ಯವಿರುವ ಪ್ರಮಾಣದಲ್ಲಿಲ್ಲ ಎಂದು ಅಧ್ಯಯನವು ಕಂಡುಕೊಂಡಿದೆ.

ಸಿಂಗ್ & ಕೌರ್ (2018) ಕೈಗೊಂಡ "ಬಣ್ಣ ಮತ್ತು ಲೇಪನ ಉದ್ಯಮದ ಕೌಶಲ್ಯ ಅಭಿವೃದ್ಧಿಯ ಅಧ್ಯಯನ" ಎಂಬ ಅಧ್ಯಯನವು ಚಿತ್ರಕಲೆ ಉದ್ಯಮದಲ್ಲಿ ಕೌಶಲ್ಯಗಳ ಕೊರತೆಗೆ ಕಾರಣಗಳನ್ನು ಗುರುತಿಸುವ ಮತ್ತು ವರ್ಣಚಿತ್ರಕಾರರಲ್ಲಿ ಕೌಶಲ್ಯದ ಅಂತರವನ್ನು ಹೇಗೆ ನಿಭಾಯಿಸಬೇಕೆಂದು ನಿರ್ಧರಿಸುವ ಗುರಿಯನ್ನು ಹೊಂದಿತ್ತು. ಅಧ್ಯಯನದ ಫಲಿತಾಂಶಗಳು ಔಪಚಾರಿಕ ತರಬೇತಿಯ ಕೊರತೆ ಮತ್ತು ವರ್ಣಚಿತ್ರಕಾರರ ತರಬೇತಿಗೆ ಅಸಮರ್ಪಕ ನಿಬಂಧನೆಗಳು ಬಣ್ಣದ ಉದ್ಯಮದಲ್ಲಿ ಕೌಶಲ್ಯಗಳ ಕೊರತೆಗಿರುವ ಮುಖ್ಯ ಕಾರಣಗಳಾಗಿವೆ ಎಂಬುದನ್ನು ಸೂಚಿಸಿವೆ. ಅಧ್ಯಯನದ ಫಲಿತಾಂಶಗಳು ಬಣ್ಣದ ಉದ್ಯಮದಲ್ಲಿ ನುರಿತ ಕಾರ್ಯಪಡೆಯ ಕೊರತೆ ಇದೆ ಎಂಬುದನ್ನು ಸೂಚಿಸಿವೆ. ಕೌಶಲ್ಯಗಳನ್ನು ಯಾವಾಗಲೂ ಕೆಲಸದ ಗುಣಮಟ್ಟದಲ್ಲಿ ತೋರಿಸಲಾಗುತ್ತದೆ. ಕಳಪೆ ಗುಣಮಟ್ಟದ ಕೃತಿಗಳು ನುರಿತ ಚಿತ್ರಕಾರರ ಕೊರತೆಯ ಫಲಿತಾಂಶಗಳಾಗಿರಬಹುದು. ತರಬೇತಿಯು ಕಾರ್ಯಪಡೆಯ ಕಾರ್ಯಕ್ಷಮತೆಯ ಮೇಲೆ ಧನಾತ್ಮಕ ಮತ್ತು ಗಮನಾರ್ಹ ಪರಿಣಾಮವನ್ನು ಬೀರುತ್ತದೆ. ವರ್ಣಚಿತ್ರಕಾರರಿಗೆ ಔಪಚಾರಿಕ ತರಬೇತಿಯ ಕೊರತೆಯಿದೆ ಎಂದು ಫಲಿತಾಂಶವು ತೋರಿಸುತ್ತದೆ. ಅವರು ಔಪಚಾರಿಕ ತರಬೇತಿಯ ಮೂಲಕ ಪಡೆದ ಔಪಚಾರಿಕ ಪ್ರಮಾಣಪತ್ರ ಅಥವಾ ಡಿಪ್ಲೊಮಾವನ್ನು ಹೊಂದಿರಲಿಲ್ಲ. ಇದಲ್ಲದೆ, ಚಿತ್ರಕಲೆ ಕೆಲಸದಲ್ಲಿ ಹೊಸ ಉಪಕರಣಗಳು ಮತ್ತು ತಂತ್ರಗಳನ್ನು ಬಳಸಲು ಪ್ರಸ್ತುತ ಮಟ್ಟದ ಜ್ಞಾನ ಮತ್ತು ಕೌಶಲ್ಯಗಳು ಅಸಮರ್ಪಕವಾಗಿವೆ. ಬಣ್ಣದ ಉದ್ಯಮದಲ್ಲಿ ಕೌಶಲ್ಯದ ಅಂತರವಿದೆ.

ಸಿಂಗ್ ಮತ್ತು ಸಂಜೀವ್ (2016), "ಮೇಕ್ ಇನ್ ಇಂಡಿಯಾ ಉಪಕ್ರಮದ ಕಡೆಗೆ ಮರು ಕೌಶಲ್ಯ ತರಬೇತಿಯ ಅಗತ್ಯ" ಎಂಬ ಅಧ್ಯಯನವನ್ನು ಕೈಗೊಂಡಿದ್ದಾರೆ. ಕೌಶಲ್ಯ ತರಬೇತಿಯ ಬಗ್ಗೆ ಸಂಸ್ಥೆಯಲ್ಲಿ ಉದ್ಯೋಗಿಯ ಮನೋಭಾವದ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿತ್ತು. ಅಧ್ಯಯನದ ಆವಿಷ್ಕಾರವು ಉದ್ಯೋಗಿಗಳು ಉದ್ಯೋಗ ಬೆಳವಣಿಗೆಗೆ ಮರು–ಹತ್ಯೆ ಮುಖ್ಯ ಎಂದು ಒಪ್ಪಿಕೊಂಡಿದ್ದಾರೆ ಮತ್ತು ಇದು ಹೊಸ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಕಲಿಯಲು ಸಹಾಯ ಮಾಡಿದೆ ಎಂದು ತೋರಿಸಿದೆ. ಮರು ಕೌಶಲ್ಯವು ಅವರಿಗೆ ಉತ್ತಮ ಬೆಳವಣಿಗೆಯ ಅವಕಾಶಗಳನ್ನು ಒದಗಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಉತ್ತಮ ಉದ್ಯೋಗಾವಕಾಶಗಳಿಗಾಗಿ ಉದ್ಯೋಗಿಗಳಿಗೆ ಸರಿಯಾದ ರೀತಿಯ ಕೌಶಲ್ಯಗಳನ್ನು ಒದಗಿಸುವುದು ಬಹಳ

ಮುಖ್ಯ ಎಂದು ಅಧ್ಯಯನವು ಸೂಚಿಸಿದೆ. ಕಂಪನಿಗಳು ತಮ್ಮ ಸಮಯ ಮತ್ತು ಹಣವನ್ನು ಉಳಿಸಲು ಐಟಿ ವೃತ್ತಿಪರರನ್ನು ನೇಮಿಸಿಕೊಳ್ಳುವುದಕ್ಕಿಂತ ಮರು ಕೌಶಲ್ಯಕ್ಕೆ ಹೆಚ್ಚು ಒತ್ತು ನೀಡಬೇಕು.

ಸಂಜಯ್ ಎಸ್. ಕಪ್ತಾನ್ (2014) ರವರ "ಕೌಶಲ್ಯ ಅಭಿವೃದ್ಧಿ ಮತ್ತು ಸಾಮರ್ಥ್ಯ ವರ್ಧನೆ–ಶಿಕ್ಷಣ ಸಂಸ್ಥೆಯ ಪಾತ್ರ" ಅಧ್ಯಯನದಲ್ಲಿ ಶಿಕ್ಷಣದ ಪ್ರಮುಖ ಉದ್ದೇಶವಾಗಿ ಕೌಶಲ್ಯ ಅಭಿವೃದ್ಧಿ ಮತ್ತು ಸಾಮರ್ಥ್ಯ ವರ್ಧನೆ ಕಾರ್ಯಕ್ರಮದ ಪ್ರಾಮುಖ್ಯತೆ, ಪಾತ್ರ ಮತ್ತು ಅಗತ್ಯದ ಬಗ್ಗೆ ಚರ್ಚಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯು ಕೈಗಾರಿಕೆಗಳು ಮತ್ತು ಸಂಸ್ಥೆಗಳ ನಡುವೆ ಸಮನ್ವಯವನ್ನು ಹೊಂದಿಲ್ಲದ ಕಾರಣ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಮೂಲಕ ಕಾರ್ಮಿಕರ ಗುಣಮಟ್ಟ ಮತ್ತು ಸಾಮರ್ಥ್ಯವನ್ನು ಸುಧಾರಿಸುವ ಮತ್ತು ಉದ್ಯಮ ಹಾಗೂ ಕಾರ್ಮಿಕ ಮಾರುಕಟ್ಟೆಯ ಅಗತ್ಯವನ್ನು ಪೂರೈಸಲು ಶಿಕ್ಷಣದ ಸೂಕ್ತತೆಯ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಈ ಮಿಷನ್‌ನ್ನು ಸಾಧಿಸಲು ಶಿಕ್ಷಣ ಸಂಸ್ಥೆಯ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ ಸಾಮರ್ಥ್ಯ ವರ್ಧನೆ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಬಲವಾದ ಅಗತ್ಯವಿದೆ ಎಂದು ಅಧ್ಯಯನವು ತೀರ್ಮಾನಿಸಿದೆ. ಉನ್ನತ ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಮತ್ತು ಮೇಕ್ ಇನ್ ಇಂಡಿಯಾಗಳ ಅಡಿಯಲ್ಲಿ ತರುವ ಪಾತ್ರ ವಹಿಸಲು ಅದು ಒತ್ತು ನೀಡಿದೆ. ಈ ಅಧ್ಯಯನವು ಆವಿಷ್ಕಾರಗಳು, ಸುಧಾರಣೆಗಳು ಮತ್ತು ಉತ್ತಮ ಗುಣಮಟ್ಟದ ತರಬೇತಿಯ ಪರವಾಗಿ ಕೌಶಲ್ಯ ಅಭಿವೃದ್ಧಿ ವಲಯದಲ್ಲಿ ಬದಲಾವಣೆಯನ್ನು ಶಿಫಾರಸ್ಸು ಮಾಡಿದೆ.

ಉದ್ಯೋಗಗಳಿಗೆ (ಕಾರ್ಯಪಡೆಗೆ) ಸೇರುವ ಹೊಸ ಅಭ್ಯರ್ಥಿಗಳಲ್ಲಿ ನೇಮಕ ಯೋಗ್ಯತೆ ಬಗ್ಗೆ ಆಳವಾದ ಅಧ್ಯಯನದ ವಿವರಗಳನ್ನು ಭಾರತ ಕೌಶಲ್ಯಗಳ ವರದಿ 2019 ರಲ್ಲಿ ಪ್ರಕಟಿಸಲಾಗಿದೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ಮತ್ತು ಭಾರತೀಯ ವಿಶ್ವವಿದ್ಯಾಲಯಗಳ ಸಂಘದಂತಹ ಪಾಲುದಾರರೊಂದಿಗೆ ಭಾರತಿಯ ಉದ್ಯಮಗಳ ಒಕ್ಕೂಟದ ಸಹಯೋಗದೊಂದಿಗೆ ಜಾಗತಿಕ ಪ್ರತಿಭಾ ಕಂಪನಿ 'ಪೀಪಲ್ ಸ್ಟ್ರಾಂಗ್'ನಿಂದ ಜಂಟಿ ಕಾರ್ಯಕ್ರಮವಾಗಿದೆ. ಕೌಶಲ್ಯ ಅಭಿವೃದ್ಧಿಯ ಮಹತ್ವ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಯೋಗ ಮತ್ತು ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ ಮುಂತಾದ ಸಂಸ್ಥೆಗಳ ಪಾತ್ರದ ಬಗ್ಗೆ ವರದಿಯಲ್ಲಿ ಚರ್ಚಿಸಲಾಗಿದೆ. ವರದಿಯ ಪ್ರಮುಖ ಫಲಿತಾಂಶಗಳು ಹೀಗಿವೆ:

1. ಸುಮಾರು ಶೇ.46.21 ರಷ್ಟು ವಿದ್ಯಾರ್ಥಿಗಳು ನೇಮಕಾರ್ಹರಾಗಿರುವುದು ಅಥವಾ 2019ರಲ್ಲಿ ಉದ್ಯೋಗ ತೆಗೆದುಕೊಳ್ಳಲು ಸಿದ್ಧರಾಗಿರುವುದು ಕಂಡುಬಂದಿದೆ, ಇದು 2014 ರಲ್ಲಿ ಶೇಕಡಾ 33 ಮತ್ತು 2018 ರಲ್ಲಿ ಶೇಕಡಾ 47.38 ಇತ್ತು.
2. ಸ್ತ್ರೀ ನೇಮಕ ಯೋಗ್ಯತೆ 2017 ರಲ್ಲಿ ಶೇ.38 ಮತ್ತು 2018 ರಲ್ಲಿ ಶೇ.46 ಆಗಿದ್ದು, ಈ ವರ್ಷ ಶೇಕಡಾ 47ಕ್ಕೆ ಏರಿಕೆಯಾಗಿದೆ.
3. ಕೋರ್ಸ್‌ಗಳ ಪ್ರಕಾರ ಹೆಚ್ಚಿನ ನೇಮಕಾರ್ಹ ಅಭ್ಯರ್ಥಿಗಳಲ್ಲಿ ಎಂ.ಬಿ.ಎ ವಿದ್ಯಾರ್ಥಿಗಳು ಕಳೆದ ಎರಡು ವರ್ಷಗಳಲ್ಲಿ 40 ಪ್ರತಿಶತದಷ್ಟಿದ್ದು ಈ ವರ್ಷ ಶೇಕಡಾ 54 ರಷ್ಟಿದ್ದಾರೆ.
4. ಬಿ.ಟೆಕ್, ಎಂಜಿನಿಯರಿಂಗ್, ಎಂಸಿಎ, ತಾಂತ್ರಿಕ ಮತ್ತು ಕಂಪ್ಯೂಟರ್ ಸಂಬಂಧಿತ ಕೋರ್ಸ್‌ಗಳಲ್ಲಿ ನೇಮಕ ಯೋಗ್ಯತೆ ಕುಸಿತ ಕಂಡುಬಂದಿದೆ.

ಭಾರತದಲ್ಲಿ ಕೌಶಲ್ಯ ಅಭಿವೃದ್ಧಿ ಅನೇಕ ಅಂಶಗಳನ್ನು ಹೊಂದಿರುವ ಒಂದು ಪರಿಕಲ್ಪನೆಯಾಗಿದೆ. ತಾಂತ್ರಿಕ ಬದಲಾವಣೆಗಳ ಆಗಮನದಲ್ಲಿ ಕೌಶಲ್ಯ ಅಭಿವೃದ್ಧಿ ಅಗತ್ಯವಾಗಿದೆ ಎಂದು ಅಧ್ಯಯನಗಳು ಬಹಿರಂಗಪಡಿಸಿವೆ. ಕೌಶಲ್ಯ ಅಭಿವೃದ್ಧಿಯನ್ನು ಪ್ರೌಢಶಾಲೆ ಶಿಕ್ಷಣದೊಂದಿಗೆ ಸಂಯೋಜಿಸುವ ಅಗತ್ಯವನ್ನು ಒತ್ತಿ ಹೇಳುತ್ತದೆ ಮತ್ತು ದೇಶದ ಮಹಿಳೆಯರನ್ನು ಸಬಲೀಕರಣಗೊಳಿಸಲು ಇದನ್ನು ಪರಿಣಾಮಕಾರಿ ಕ್ರಮವಾಗಿ ಬಳಸಿಕೊಳ್ಳಲಾಗುತ್ತದೆ. ಸಿದ್ಧಾಂತ ಮತ್ತು ಅಭ್ಯಾಸದ ನಡುವೆ ಹೊಂದಾಣಿಕೆ ಇಲ್ಲದಿರುವುದು, ಕಲಿತ ಕೌಶಲ್ಯಗಳ ಕಡಿಮೆ ಗುಣಮಟ್ಟ, ನುರಿತ ಕೌಶಲ್ಯಪೂರ್ಣ ಕಾರ್ಮಿಕ ಬಲದ ಬೇಡಿಕೆ ಮತ್ತು ಪೂರೈಕೆಯ ನಡುವೆ ಹೊಂದಾಣಿಕೆ ಇಲ್ಲದಿರುವುದು, ಕಡಿಮೆ ಮಟ್ಟದ ಮನೆಯೊಳಗಿನ ತರಬೇತಿ, ಪ್ರೋತ್ಸಾಹದ ಕೊರತೆ ಮತ್ತು ಅರ್ಹ ಶಿಕ್ಷಕರ ಕೊರತೆಯಿಂದಾಗಿ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳಿಂದ ಕಡಿಮೆ ಸಹಕಾರ ಮುಂತಾದ ಸವಾಲುಗಳನ್ನು ಜಯಿಸಲು ಕಾರ್ಮಿಕ ಮಾರುಕಟ್ಟೆ ಸುಧಾರಣೆಗಳು ಅಗತ್ಯವಾಗಿವೆ. ಸಾಮಾನ್ಯ ವಿಮರ್ಶೆಯ ಆಧಾರದ ಮೇಲೆ ಕೌಶಲ್ಯ ಅಭಿವೃದ್ಧಿಯ ಕ್ಷೇತ್ರದಲ್ಲಿ ಹೆಚ್ಚಿನ ಅಧ್ಯಯನಗಳು ಸ್ವಯಂ ಉದ್ಯೋಗ ಮತ್ತು ಉದ್ಯೋಗ ನಿಯೋಜನೆ ಎಂಬ ಎರಡು ಅಂಶಗಳ ಮೇಲೆ ಕೇಂದ್ರೀಕರಿಸಿವೆ ಎಂದು ತಿಳಿದುಬಂದಿದೆ. ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಗಮನವನ್ನು ನವೀಕರಿಸಲು ದೃಢವಾದ ಆಧಾರಗಳನ್ನು ನೀಡುವ ಈ ಎರಡು ಅಂಶಗಳ ಮೇಲೆ ಕಾರ್ಯಗತಗೊಳಿಸಬಹುದಾದ ಶಿಫಾರಸ್ಸುಗಳನ್ನು ಮುಂದಿನ ಅಧ್ಯಯನಗಳು ಎತ್ತಿ ತೋರಿಸುತ್ತವೆ.

## 5.3 ಕೌಶಲ್ಯ ಅಭಿವೃದ್ಧಿ ಮತ್ತು ಸ್ವಯಂ ಉದ್ಯೋಗ

| ಕ್ರಮ ಸಂಖ್ಯೆ | ಲೇಖಕ, ವರ್ಷ ಮತ್ತು ಲೇಖನದ ಶೀರ್ಷಿಕೆ | ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶ | ಪ್ರಮುಖ ಫಲಿತಾಂಶಗಳು | ಪ್ರಮುಖ ಶಿಫಾರಸ್ಸುಗಳು |
|---|---|---|---|---|
| 1. | ಕೆ.ಎಲ್. ಡಾಂಗಿ ಮತ್ತು ಎಸ್.ಎಲ್. ಇಂಟೋಡಿಯಾ (2001) ಉದ್ಯಮಶೀಲತೆ – ದಕ್ಷಿಣ ರಾಜಸ್ಥಾನದ ಬುಡಕಟ್ಟು ಮತ್ತು ಬುಡಕಟ್ಟುಯೇತರ ವಿದ್ಯಾವಂತ ಗ್ರಾಮೀಣ ಯುವಕರಲ್ಲಿ ಉದ್ಯೋಗ ಸೃಷ್ಟಿಗೆ ಒಂದು ಮಾರ್ಗ. ಜರ್ನಲ್ ಆಫ್ ಇಂಡಿಯನ್ ಎಜುಕೇಶನ್ ಎನ್‌ಸಿಇಆರ್‌ಟಿ ಸಂಪುಟ 26, ನಂ.4 (ಪುಟಗಳು39–45), 2001. | ಕ್ಷೇತ್ರ ಸಮೀಕ್ಷೆ. ಶಿಕ್ಷಣ ಕಾರ್ಯಕ್ರಮಗಳು ಮತ್ತು ರಾಜಸ್ಥಾನದ ಯುವಕರಿಗೆ ಉದ್ಯೋಗ ಯೋಜನೆಗಳ ಬಗ್ಗೆ ಸರ್ಕಾರಿ ದಾಖಲೆಗಳಿಂದ ದ್ವಿತೀಯ ದತ್ತಾಂಶ | ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಯುವಕರನ್ನು ಕೌಶಲ್ಯಗಳೊಂದಿಗೆ ಸಜ್ಜುಗೊಳಿಸುತ್ತದೆ ಮತ್ತು ಹೀಗಾಗಿ ಅವರು ಉದ್ಯೋಗಾವಕಾಶವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ನಿರುದ್ಯೋಗದಿಂದಾಗಿ ಬುಡಕಟ್ಟು ಯುವಕರನ್ನು ಬಡತನದ ಚಕ್ರಕ್ಕೆ ಮತ್ತಷ್ಟು ತಳ್ಳಲಾಗುತ್ತದೆ. | ವಿದ್ಯಾವಂತ ಯುವಕರನ್ನು ತರಬೇತಿ ಮತ್ತು ಉದ್ಯಮಶೀಲತೆ ಆಧಾರಿತ ವೃತ್ತಿಗಳಲ್ಲಿ ತೊಡಗಿಸಿಕೊಳ್ಳದ ಹೊರತು ನಿರುದ್ಯೋಗವನ್ನು ಪರಿಹರಿಸಲು ಸಾಧ್ಯವಿಲ್ಲ. ಉದ್ಯಮಶೀಲತೆ ಆಧಾರಿತ ಕೋರ್ಸ್‌ಗಳನ್ನು ಶಾಲಾ ಮಟ್ಟದ ಪಠ್ಯಕ್ರಮದಲ್ಲಿ ಸೇರಿಸಿದರೆ ಬುಡಕಟ್ಟು ಮತ್ತು ಬುಡಕಟ್ಟುಯೇತರ ವಿದ್ಯಾವಂತ ಯುವಕರಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಸಹಾಯ ಮಾಡುತ್ತದೆ. |
| 2. | ಡೇವಿಡ್ ಅಲೆನ್ & ವಿಲಿಯಂ ಕ್ಯೂರಿಂಗ್ಟನ್ (2014) ಡಬ್ಲ್ಯೂ.ಪಿ. ಪುರುಷರು ಮತ್ತು ಮಹಿಳೆಯರ ಸ್ವಯಂ ಉದ್ಯೋಗ: ಅವರ ಪ್ರೇರಣೆಗಳು ಯಾವುವು? ಜೆ ಲೇಬರ್ ಆರ್‌ಇಎಸ್ 35, 143– 161,2014. | ಕ್ಷೇತ್ರ ಸಮೀಕ್ಷೆ. | ಸ್ವಯಂ ಉದ್ಯೋಗದಲ್ಲಿ ಅಡಿಯಿರಿಸಲು ಪುರುಷರು ಮತ್ತು ಮಹಿಳೆಯರು ವಿಭಿನ್ನ ಪ್ರೇರಣೆಗಳನ್ನು ಹೊಂದಿದ್ದಾರೆಯೇ ಎಂದು ಅಧ್ಯಯನವು ತನಿಖೆ ಮಾಡುತ್ತದೆ. ಉದ್ಯಮಶೀಲತೆಯನ್ನು ಶಾಸ್ತ್ರೀಯವಾಗಿ ವೈಯಕ್ತಿಕ ಪುರುಷ ಪ್ರಯತ್ನವಾಗಿ ಪರಿಕಲ್ಪನಾತ್ಮಕಗೊಳಿಸಲಾಗಿದ್ದರೂ, ಮಹಿಳಾ ಉದ್ಯಮಿಗಳು | ಪುರುಷರು ಮತ್ತು ಮಹಿಳೆಯರಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ನೀತಿ ಸೂತ್ರೀಕರಣವು ವಿಭಿನ್ನ ನಿಲುವನ್ನು ಅಳವಡಿಸಿಕೊಳ್ಳಬೇಕು ಎಂದು ಲೇಖಕರು ಸಲಹೆ ಮಾಡಿದ್ದಾರೆ. ಮಹಿಳೆಯರು ಸ್ವಯಂ ಉದ್ಯೋಗವನ್ನು ತೆಗೆದುಕೊಳ್ಳಲು ಸಾಮಾಜಿಕ ಬಂಡವಾಳ ಮತ್ತು ಸಮುದಾಯ ಬೆಂಬಲವನ್ನು ಪ್ರೇರೇಪಿಸುವ ಅಗತ್ಯವಿದೆ, ಆದರೆ ಪುರುಷರು |

| | | | | |
|---|---|---|---|---|
| | | | ಉದ್ಯಮಶೀಲತೆಯ ಆ ಮಾದರಿಗೆ ಅಸಂಗತವಾದ ಪ್ರೇರಣೆಗಳನ್ನು ಆಗಾಗ್ಗೆ ಅನುಮೋದಿಸುತ್ತಾರೆ ಎಂದು ಈ ಸಂಶೋಧನೆ ತೋರಿಸುತ್ತದೆ. ಸ್ವಯಂ ಉದ್ಯೋಗವನ್ನು ಆಯ್ಕೆ ಮಾಡುವ ಪುರುಷರು ಮುಖ್ಯವಾಗಿ ಹಣಕಾಸಿನ ಕಾಳಜಿಗಳಿಂದ ಪ್ರಭಾವಿತರಾಗುತ್ತಾರೆ. ಆದರೆ ಮಹಿಳೆಯರು ಮುಖ್ಯವಾಗಿ ಕುಟುಂಬದ ಕಾಳಜಿಗಳಿಂದ ಮತ್ತು ಅವರ ಕುಟುಂಬ, ಸ್ನೇಹಿತರು ಮತ್ತು ಗೆಳೆಯರ ಅಭಿಪ್ರಾಯಗಳಿಂದ ಪ್ರಭಾವಿತರಾಗುತ್ತಾರೆ. | ಸ್ವಯಂ ಉದ್ಯೋಗವನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸಲು ಪ್ರಮುಖ ಆರ್ಥಿಕ ದೃಷ್ಟಿಕೋನಕ್ಕೆ ಕೇಂದ್ರೀಕರಿಸಬೇಕು. ಸ್ವಯಂ ಉದ್ಯೋಗವನ್ನು ಜನಪ್ರಿಯಗೊಳಿಸಲು ನೀತಿಯ ಭಾಷೆ, ಕಾರ್ಯಕ್ರಮಗಳು ಮತ್ತು ಪ್ರಚಾರದಲ್ಲಿ ಅಂತಹ ಆಲೋಚನೆಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಲೇಖಕರು ಒತ್ತಿ ಹೇಳಿದ್ದಾರೆ. ಒಂದು ಗಾತ್ರವು ಎಲ್ಲಾ ನೀತಿ ವಿಧಾನಕ್ಕೆ ಹೊಂದಿಕೊಳ್ಳುತ್ತದೆ ಎಂಬ ಉಪಕ್ರಮ ಫಲಿತಾಂಶಗಳನ್ನು ನೀಡುವುದಿಲ್ಲ. |
| 3. | ನೀತಾ ಎನ್ (2010) ಮಹಿಳೆಯರ ಸ್ವಯಂ ಉದ್ಯೋಗ: ಆದ್ಯತೆ ಅಥವಾ ಬಲವಂತ? ಸಾಮಾಜಿಕ ಬದಲಾವಣೆ, 40(2), 139– 156,2010. | ದತ್ತಾಂಶವು ಎನ್.ಎಸ್.ಎಸ್.ಒ ದ ಮೂರು ಕ್ವಿಂಕ್ವೆನ್ನಿಯಲ್ ಸುತ್ತುಗಳಲ್ಲಿ ಸಂಗ್ರಹಿಸಲಾದ ದೃಢವಾದ ದತ್ತಾಂಶದ ವಿಭಜಿತ ವಿಶ್ಲೇಷಣೆಯನ್ನು ಆಧರಿಸಿದೆ: 50ನೇ (1993–94), 55ನೇ (1999–2000) ಮತ್ತು 61ನೇ (2004–05) ಸುತ್ತುಗಳು. | ಔಪಚಾರಿಕ ಆರ್ಥಿಕತೆಯಿಂದ 'ತಳ್ಳುವಿಕೆ'ಯ ಪರಿಣಾಮವಾಗಿ ಅಥವಾ ಹೆಚ್ಚು ಲಾಭದಾಯಕ ಮತ್ತು ಅನುಕೂಲಕರ ಉದ್ಯೋಗಾವಕಾಶಗಳ ಕಡೆಗೆ 'ಸೆಳೆತ'ದಿಂದಾಗಿ ವ್ಯಕ್ತಿಗಳು ಸ್ವಯಂ ಉದ್ಯೋಗ ತೆಗೆದುಕೊಳ್ಳುತ್ತಾರೆಯೇ ಎಂದು ಈ ಲೇಖನ ವಿಶ್ಲೇಷಿಸುತ್ತದೆ. ಪ್ರಬಂಧದಲ್ಲಿನ ವಿಶ್ಲೇಷಣೆಯು ಉದಾರೀಕರಣದ ನಂತರದ ಅವಧಿಯಲ್ಲಿ | ದತ್ತಾಂಶವು ವರದಿ ಮಾಡಿದ ಸ್ವಯಂ ಉದ್ಯೋಗದ ಹೆಚ್ಚಳದ ಮಾದರಿಯು ಯಾವಾಗಲೂ ಆಶಾದಾಯಕ ಫಲಿತಾಂಶವಲ್ಲ ಎಂದು ಲೇಖಕರ ವಿಶ್ಲೇಷಣೆಗಳು ಸೂಚಿಸುತ್ತವೆ. ವಿವರವಾದ ವಿಶ್ಲೇಷಣೆಯು ಸ್ವಯಂ ಉದ್ಯೋಗಕ್ಕೆ ಆಧಾರವಾಗಿರುವ ಪರಿಸ್ಥಿತಿಗಳನ್ನು ಮತ್ತು ಅದು ಜನರಿಗೆ ಜೀವನೋಪಾಯದ ಸಾಧನಗಳನ್ನು ಒದಗಿಸುತ್ತಿದೆಯೇ ಎಂಬುದನ್ನು ಬಹಿರಂಗಪಡಿಸುತ್ತದೆ. 2005–06ರ ಸ್ವಯಂ |

| | | | | |
|---|---|---|---|---|
| | | | ಸ್ವಯಂ ಉದ್ಯೋಗವು ಹೆಚ್ಚಿನ ಬೆಳವಣಿಗೆಯ ಆರ್ಥಿಕತೆಯ ಫಲಿತಾಂಶವಾದ ಹೊಸ ಉತ್ಪಾದಕ ಅವಕಾಶಗಳಲ್ಲಿ ಒಂದಲ್ಲ, ಆದರೆ ಉದ್ಯೋಗಾವಕಾಶಗಳ ಕೊರತೆಯಿಂದಾಗಿದೆ ಎಂದು ಬಹಿರಂಗಪಡಿಸುತ್ತದೆ. ಹೆಚ್ಚುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟು ವ್ಯಾಪಕವಾದ ಮಹಿಳಾ ಕಾರ್ಮಿಕರ ವರ್ಗಗಳನ್ನು ಕಡಿಮೆ ಆದಾಯಕ್ಕಾಗಿ ಹೆಚ್ಚಿನ ಶ್ರಮದ ಕೆಳಮುಖ ಸುರುಳಿಯಲ್ಲಿ ಬಂಧಿಸುತ್ತಿದೆ. ಇದರ ಪರಿಣಾಮವಾಗಿ ಇಡೀ ಕೆಲಸದ ಜಗತ್ತಿನಲ್ಲಿ ಲಿಂಗ–ಆಧಾರಿತ ಅಸಮಾನತೆಯ ಹೆಚ್ಚಳವಾಗಿದೆ ಎಂದು ಅಧ್ಯಯನವು ತೋರಿಸುತ್ತದೆ. | ಉದ್ಯೋಗ ಏರಿಕೆಯ ಪ್ರವೃತಿಯು ಭಾರತದ ಕಾರ್ಮಿಕ ಮಾರುಕಟ್ಟೆಗಳ ಅನಿಶ್ಚಿತ ಪರಿಸ್ಥಿತಿಗಳನ್ನು ಮತ್ತು ಅಲ್ಲಿ ಸಂಬಳದ ಉದ್ಯೋಗವು ಬೆಳೆಯುತ್ತಿರುವ ಕಾರ್ಮಿಕ ಶಕ್ತಿಯ ಅಗತ್ಯಗಳನ್ನು ಪೂರೈಸುವಷ್ಟು ವೇಗವಾಗಿ ಹೆಚ್ಚುತ್ತಿರಲಿಲ್ಲ ಎಂಬುದನ್ನು ಪ್ರತಿಬಿಂಬಿಸಿದೆ. ಕಡಿಮೆ ಉತ್ಪಾದಕತೆ ಶೋಷಣೆಯ ಪರಿಸ್ಥಿತಿಗಳಲ್ಲಿ ಸಂಬಳವಿಲ್ಲದ ಕಾರ್ಮಿಕರಾಗಿರುವ ಸ್ವಯಂ ಉದ್ಯೋಗ ವಲಯಕ್ಕೆ ಮಹಿಳೆಯರನ್ನು ಒತ್ತಾಯಿಸಿ ತಳ್ಳಲಾಯಿತು. ಸ್ವಯಂ ಉದ್ಯೋಗದ ದತ್ತಾಂಶವು ಕೆಲಸದ ಪರಿಸ್ಥಿತಿಗಳು ಮಾಡಿದ ಗಳಿಕೆ ಮತ್ತು ಆದಾಯದ ನಿಯಮಿತತೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ ಎಂದು ಲೇಖಕರು ಸೂಚಿಸಿದ್ದಾರೆ. |
| 4. | ಡಾ. ವಿ. ಆರ್. ಪಳನಿವೇಲು ಮತ್ತು ಎಂ. ರೆಹ್ಮತ್ ಜಹಾನ್ (2013) ಸ್ವಯಂ ಉದ್ಯೋಗದ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ–ಸೇಲಂ ಜಿಲ್ಲೆಯ ಇಡಾಪಾಡಿ ತಾಲ್ಲೂಕಿನ ವಿಶೇಷ | ಸಂರಚಿತ ಪ್ರಶ್ನಾವಳಿಗಳು ಮತ್ತು ಸಂದರ್ಶನ ಅನುಸೂಚಿಗಳನ್ನು 150 ಮಹಿಳಾ ಉದ್ಯಮಿಗಳ ಮಾದರಿ ಮೇಲೆ ಪ್ರಯೋಗಿಸಲಾಯಿತು. ಸಂಬಂಧಿತ ಪ್ರಕಟಣೆಗಳು ಮತ್ತು | ಅಧ್ಯಯನವು ಸೇಲಂ ಜಿಲ್ಲೆಯ ಇಡಾಪಾಡಿ ಪಟ್ಟಣದಲ್ಲಿ ಮಹಿಳೆಯರ ಸಬಲೀಕರಣವನ್ನು ಪರಿಶೀಲಿಸಿದೆ. ಸ್ವಯಂ ಉದ್ಯೋಗವು ಪ್ರತಿಕ್ರಿಯಿಸಿರುವ ಮಹಿಳೆಯರಿಗೆ ಹೆಚ್ಚುವರಿ ಆದಾಯವನ್ನು | ಮಹಿಳೆಯರ ಸ್ಥಾನಮಾನದಲ್ಲಿ ಮಾತ್ರವಲ್ಲದೆ ಅವರ ಬಗ್ಗೆ ಸಮಾಜದ ಮನೋಭಾವದಲ್ಲಿ ಬದಲಾವಣೆಯನ್ನು ತರಬೇಕಾಗಿದೆ ಎಂದು ಅಧ್ಯಯನವು ಸಲಹೆ ಮಾಡುತ್ತದೆ. ಆದ್ದರಿಂದ ನಿಷ್ಕ್ರಿಯ ವೀಕ್ಷಕರು ಮತ್ತು ಕೇವಲ |

| | | | | |
|---|---|---|---|---|
| | ಉಲ್ಲೇಖದೊಂದಿಗೆ ಒಂದು ಅಧ್ಯಯನ. ಶಾನ್ಲಾಕ್ಸ್ ಇಂಟರ್ ನ್ಯಾಷನಲ್ ಜರ್ನಲ್ ಆಫ್ ಮ್ಯಾನೇಜ್‌ಮೆಂಟ್1(1), ಜುಲೈ 2013. | ಜಾಲತಾಣಗಳಿಂದ ದ್ವಿತೀಯ ದತ್ತಾಂಶವನ್ನು ಸಹ ಸಂಗ್ರಹಿಸಲಾಯಿತು. | ಉತ್ಪಾದಿಸಲು ಸಹಾಯ ಮಾಡುವುದಲ್ಲದೆ, ಆರ್ಥಿಕವಾಗಿ ಸ್ವತಂತ್ರ ಮತ್ತು ಸ್ವಾವಲಂಬಿಯಾಗಲು ಅನುವು ಮಾಡಿಕೊಡುತ್ತದೆ ಎಂದು ವಿಶ್ಲೇಷಣೆ ಸೂಚಿಸುತ್ತದೆ. ಅವರಿಗೆ ಸ್ವಯಂ ಉದ್ಯೋಗದ ಮೊದಲು ಮತ್ತು ನಂತರದ ಆದಾಯ, ವೆಚ್ಚ ಮತ್ತು ಉಳಿತಾಯಗಳು ಗಮನಾರ್ಹವಾಗಿ ಭಿನ್ನವಾಗಿವೆ ಎಂದು ಅಧ್ಯಯನವು ಬಹಿರಂಗಪಡಿಸುತ್ತದೆ. ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಮಹಿಳೆಯರು ಆತ್ಮ ತೃಪ್ತಿ, ಸ್ವಾತಂತ್ರ್ಯವನ್ನು ಹೊಂದಿದ್ದಾರೆ ಮತ್ತು ಅವರ ದೃಢನಿರ್ಧಾರದ ಪ್ರಜ್ಞೆ ಯಶಸ್ಸನ್ನು ಸಾಧಿಸಲು ಸಹಾಯ ಮಾಡುತ್ತದೆ. | ಸ್ವೀಕರಿಸುವಂತಾಗಿರುವವರನ್ನು ಸಕಾರಾತ್ಮಕ ಕೆಲಸಗಾರ ಮತ್ತು ಸಾಧಕರೆಂದು ಮಹಿಳೆಯರ ಚಿತ್ರಣವನ್ನು ಬದಲಾಯಿಸಲು ಆದ್ಯತೆ ನೀಡಬೇಕಾಗಿದೆ. ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದು, ಸ್ವಯಂ ಉದ್ಯೋಗ ತರಬೇತಿಗಳನ್ನು ತೆಗೆದುಕೊಳ್ಳಲು ಅವರನ್ನು ಪ್ರೇರೇಪಿಸುವುದು, ವಿವಿಧ ಮೂಲಗಳಿಂದ ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಅಗತ್ಯವಾದ ಮಾಹಿತಿಗಳನ್ನು ಪಡೆಯಲು ಅವರಿಗೆ ಸಹಾಯ ಮಾಡುವುದು ಮತ್ತು ಸ್ವಯಂ ಉದ್ಯೋಗಿ ಗ್ರಾಮೀಣ ಮಹಿಳೆಯರಿಗೆ ಅವರ ಮಾರುಕಟ್ಟೆಯಲ್ಲಿ ಅವುಗಳನ್ನು ಉಳಿಸಿಕೊಳ್ಳಲು ಅಗತ್ಯ ಅನುಸರಣಾ ನೆರವನ್ನು ಒದಗಿಸುವ ಅಗತ್ಯವಿದೆ. |
| 5. | ಆಂಡರ್‌ಸನ್ ಮತ್ತು ಹ್ಯೂಸ್ (2010): 'ಕಾಳಜಿಯ ವ್ಯವಹಾರ: ಮಹಿಳೆಯರ ಸ್ವಯಂ ಉದ್ಯೋಗ ಮತ್ತು ಕಾಳಜಿಯ ಮಾರುಕಟ್ಟೀಕರಣ. ಲಿಂಗ ಕಾರ್ಯ ಮತ್ತು ಸಂಘಟನೆ', 17(4), 81–105,2010. | ಆರೈಕೆ ಕಾರ್ಯಕರ್ತರಾಗಿ ಕೆಲಸಮಾಡುವ ಕೆನಡಾದ ಇಪ್ಪತ್ತು ಸ್ವಯಂ ಉದ್ಯೋಗಿ ಮಹಿಳೆಯರೊಂದಿಗೆ ಸಂದರ್ಶನಗಳನ್ನು ನಡೆಸಲಾಯಿತು. | ಕೆಲಸದ ಪರಿಸ್ಥಿತಿಗಳು, ವೇತನ ಮತ್ತು ಆರೈಕೆ ಕಾರ್ಯಕರ್ತರಾಗಿ ಸ್ವಯಂ ಉದ್ಯೋಗಿಯಾದ ಮಹಿಳೆಯರ ತೃಪ್ತಿಯ ಮಟ್ಟಗಳ ಬಗ್ಗೆ ತಿಳಿಯುವುದು ಅಧ್ಯಯನದ ಉದ್ದೇಶವಾಗಿತ್ತು. ವೇತನ ಕಾರ್ಮಿಕರಿಗಿಂತ ಅವರು ತಮ್ಮ | ಭವಿಷ್ಯದ ಸಂಶೋಧನೆಯು ಪಾವತಿ ಆರೈಕೆಯ ಬಗ್ಗೆ ಸಂಪೂರ್ಣ ವಿವರ ಒದಗಿಸಲು ಸ್ವಯಂ ಉದ್ಯೋಗಿ ಆರೈಕೆದಾರರ ಮೇಲೆ ಕೇಂದ್ರೀಕರಿಸಬೇಕು. ಖಾಸಗಿ ಸಂಸ್ಥೆಗಳು ಅಥವಾ ಖಾಸಗಿ ಮನೆಗಳಲ್ಲಿ ಅಥವಾ ಶಿಶುಪಾಲನಾ ಕೇಂದ್ರಗಳಲ್ಲಿ ಮಕ್ಕಳ ಆರೈಕೆ ಒದಗಿಸುವ |

| | | | | |
|---|---|---|---|---|
| | | | ಉದ್ಯೋಗಗಳ ಬಗ್ಗೆ ಹೆಚ್ಚು ತೃಪ್ತರಾಗಿದ್ದಾರೆ ಎಂದು ಫಲಿತಾಂಶಗಳು ತೋರಿಸಿವೆ. | ಉದ್ಯೋಗಿಗಳಂತಹ ಇತರ ರೀತಿಯ ಆರೈಕೆ ಕಾರ್ಯಕರ್ತರಿಗೆ ಹೋಲಿಸಿದರೆ ಸ್ವಯಂ ಉದ್ಯೋಗಿ ಆರೈಕೆ ಕಾರ್ಯಕರ್ತರನ್ನು ವ್ಯಾಪಕವಾಗಿ ಅಧ್ಯಯನ ಮಾಡಿಲ್ಲ ಮತ್ತು ಈ ಅಧ್ಯಯನವು ಆ ಅಂತರವನ್ನು ತುಂಬುತ್ತದೆ. ಸಂಶೋಧನಾ ವಿಷಯಗಳು ಮಹಿಳೆಯರಿಗೆ ಹೆಚ್ಚಿನ ಪ್ರಯೋಜನವಾಗುವ ಸ್ವಯಂ ಉದ್ಯೋಗ ಪರಿಸ್ಥಿತಿಗಳ ವಿಧಗಳು ಮತ್ತು ಆರೈಕೆಯನ್ನು ಒದಗಿಸುವ ಮೌಲ್ಯವನ್ನು ಹೆಚ್ಚಿಸಲು ಅವರು ಬಳಸುವ ತಂತ್ರಗಳನ್ನು ಒಳಗೊಂಡಿರಬಹುದು. |
| 6. | ಹಾಪನೆನ್ ಮತ್ತು ಟೆರ್ವೊ (2009) ನಗರ ಮತ್ತು ಗ್ರಾಮೀಣ ಸ್ಥಳಗಳಲ್ಲಿ ಸ್ವಯಂ ಉದ್ಯೋಗದ ಅವಧಿ. ಅಪ್ಲೈಡ್ ಎಕನಾಮಿಕ್ಸ್, 41(19), 2449–2461,2009. | ಅಡ್ಡ ಪರೀಶೀಲನೆ, ಸಮೀಕ್ಷೆ, ದ್ವಿತೀಯ ದತ್ತಾಂಶ ವಿಶ್ಲೇಷಣೆ | ಈ ಲೇಖನವು ಫಿನ್‌ಲ್ಯಾಂಡ್‌ನಲ್ಲಿ ಸ್ವಯಂ ಉದ್ಯೋಗವನ್ನು 1987 ರಿಂದ 2002ರ ಅವಧಿಗೆ ನಿಗದಿಪಡಿಸಿದ ದೊಡ್ಡ ದತ್ತಾಂಶವನ್ನು ಬಳಸಿಕೊಂಡು ವಿಶ್ಲೇಷಿಸಿತು. ಸ್ವಯಂ ಉದ್ಯೋಗದಿಂದ ನಿರ್ಗಮನ ದರಗಳು ಮತ್ತು ಸ್ವಯಂ ಉದ್ಯೋಗದ ವೈಖರಿಗಳ ಉದ್ದವು ಸ್ಥಳ (ನಗರ ಮತ್ತು ಗ್ರಾಮೀಣ ಪ್ರದೇಶ) ಮತ್ತು ಆರ್ಥಿಕತೆಯ ಆವರ್ತಕ ಪ್ರವೃತ್ತಿಗಳನ್ನು ಅವಲಂಬಿಸಿರುತ್ತದೆ ಎಂದು | ಈ ಫಲಿತಾಂಶಗಳು ಗ್ರಾಮೀಣ ಸ್ಥಳಗಳಲ್ಲಿ ತಳ್ಳುವ ಪರಿಣಾಮವು ಬಲವಾಗಿದೆ ಎಂದು ಸೂಚಿಸುತ್ತವೆ. ದುರ್ಬಲ ವೇತನ–ಉದ್ಯೋಗಾವಕಾಶಗಳನ್ನು ಹೊಂದಿರುವ ಕಾರ್ಮಿಕ ಮಾರುಕಟ್ಟೆಗಳು ಕಾರ್ಮಿಕರನ್ನು ಸ್ವಯಂ ಉದ್ಯೋಗಕ್ಕೆ ತಳ್ಳುತ್ತವೆ ಎಂಬ ಅಂಶವನ್ನು ಹೊರತುಪಡಿಸಿ, ಸಂಸ್ಥೆಯು ಮೊದಲನೆಯದಾಗಿ ತುಂಬಾ ಲಾಭದಾಯಕವಾಗಿ ಪರಿಣಮಿಸದಿದ್ದರೂ ಸಹ, ಸ್ವಯಂ ಉದ್ಯೋಗದಲ್ಲಿ ಮುಂದುವರಿಯುವಂತೆ ಅವರು ವ್ಯಕ್ತಿಗಳನ್ನು ಒತ್ತಾಯಿಸುತ್ತಾರೆ. ಸಂಸ್ಥೆಗಳು |

| | | | | |
|---|---|---|---|---|
| | | | ಸಂಶೋಧಕರು ಕಂಡುಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳು ನಗರ ಪ್ರದೇಶಗಳಿಗಿಂತ ಸ್ವಯಂ ಉದ್ಯೋಗದ ಮೊದಲ ವರ್ಷಗಳಲ್ಲಿ ಗಮನಾರ್ಹವಾಗಿ ಕಡಿಮೆ ನಿರ್ಗಮನ ದರಗಳನ್ನು ಹೊಂದಿವೆ. ಸರಾಸರಿ ಬದುಕುಳಿಯುವ ಸಮಯವು ನಗರ ಸ್ಥಳಗಳಿಗಿಂತ ಗ್ರಾಮೀಣ ಪ್ರದೇಶದಲ್ಲಿ ಉದ್ದವಾಗಿದೆ. ಫಿನ್‌ಲ್ಯಾಂಡ್‌ನ ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶಗಳು ದುರ್ಬಲ ಉದ್ಯೋಗ ಪರಿಸ್ಥಿತಿಗಳಿಂದ ನಿರೂಪಿಸಲ್ಪಟ್ಟಿವೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗವೂ ಉನ್ನತ ಮಟ್ಟದಲ್ಲಿದೆ. | ಕಷ್ಟಕರವಾದ ಮೊದಲ ವರ್ಷಗಳಲ್ಲಿ ಬದುಕುಳಿದರೆ, ಅಪಾಯದ ದರಗಳು ನಂತರ ಗಣನೀಯವಾಗಿ ಕಡಿಮೆಯಾಗುತ್ತವೆ. |
| 7. | ಫೀಲ್ಡ್ಸ್, ಜಿ. (2019) ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸ್ವಯಂ ಉದ್ಯೋಗ ಮತ್ತು ಬಡತನ. ಐ.ಜೆಡ್.ಎ ವರ್ಲ್ಡ್ ಆಫ್ ಲೇಬರ್ 60,2019. | ಐಎಲ್‌ಒ ವರದಿಗಳು ಮತ್ತು ನೀತಿ ದಾಖಲೆಗಳ ಪರಿಶೀಲನೆ | ಅಧ್ಯಯನದ ಫಲಿತಾಂಶಗಳು ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ಹೆಚ್ಚಿನ ಕಾರ್ಮಿಕರು ಸ್ವಯಂ ಉದ್ಯೋಗಿಗಳಾಗಿದ್ದಾರೆ ಎಂದು ತೋರಿಸುತ್ತವೆ ಆದರೆ ಆದಾಯವು ಸಾಮಾನ್ಯವಾಗಿ ಹೆಚ್ಚಾಗಿದೆ ಮತ್ತು ವೇತನ | ಬಡವರಿಗೆ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ಮತ್ತು ಉತ್ತಮ ಸಂಬಳ ಕೊಡುವ ವೇತನ ಉದ್ಯೋಗಕ್ಕಾಗಿ ಅವಕಾಶಗಳನ್ನು ವಿಸ್ತರಿಸುವ ಸಾಧನವಾಗಿ ಸರ್ಕಾರಗಳು ಸ್ವಯಂ ಉದ್ಯೋಗವನ್ನು ಬೆಂಬಲಿಸಬೇಕು. ಆಗಾಗ್ಗೆ ಸಾರ್ವಜನಿಕ ನೀತಿಗಳು ಸ್ವಯಂ ಉದ್ಯೋಗಿಗಳಿಗೆ |

| | | | | |
|---|---|---|---|---|
| | | | ಉದ್ಯೋಗದಲ್ಲಿ ಸಾಮಾಜಿಕ ರಕ್ಷಣಾ ಕಾರ್ಯಕ್ರಮಗಳು ಹೆಚ್ಚು ವ್ಯಾಪಕವಾಗಿವೆ. ಹೆಚ್ಚಿನ ಕಾರ್ಮಿಕರು ಸ್ವಯಂ ಉದ್ಯೋಗಿಗಳಾಗಿದ್ದಾರೆ. ಏಕೆಂದರೆ ಅವರಿಗೆ ಬೇರೆ ಆಯ್ಕೆಗಳಿಲ್ಲ. ಸಾರ್ವಜನಿಕ ನೀತಿಯ ಒಂದು ಗುರಿಯೆಂದರೆ ಸ್ವಯಂ ಉದ್ಯೋಗಿಗಳ ಶ್ರಮಕ್ಕೆ ಆದಾಯವನ್ನು ಹೆಚ್ಚಿಸುವುದು. | ಅಡ್ಡಿಪಡಿಸುತ್ತವೆ. ಸರಿಯಾದ ನೀತಿಗಳು ಜಾರಿಯಲ್ಲಿದ್ದರೆ ಸ್ವಯಂ ಉದ್ಯೋಗಿಗಳು ತಮ್ಮ ಗಳಿಕೆಯನ್ನು ಬಡತನದ ಮಟ್ಟಕ್ಕಿಂತ ಹೆಚ್ಚಿಸಬಹುದು. ಈ ಮಧ್ಯೆ ಕೈಗೊಂಡ ನಾಲ್ಕು ಕ್ರಮಗಳು ವಿವಿಧ ಪರಿಸ್ಥಿತಿಗಳಲ್ಲಿ ಪರಿಣಾಮಕಾರಿಯಾಗಿವೆ: (i) ಬಡವರಿಗೆ ಗಳಿಕೆಯ ಅವಕಾಶಗಳನ್ನು ಸುಧಾರಿಸಲು ಆರ್ಥಿಕ ಬೆಳವಣಿಗೆಯನ್ನು ಕೇಂದ್ರೀಕರಿಸುವುದು, (ii) ವ್ಯವಸಾಯ ಸಂಬಂಧವಲ್ಲದ ಉದ್ಯೋಗಗಳನ್ನು ಸೃಷ್ಟಿಸುವುದು, (iii) ವೇತನ ಉದ್ಯೋಗಕ್ಕಾಗಿ ತರಬೇತಿ ಮತ್ತು (iv) ಕಿರುಸಾಲವನ್ನು ಕೈಗೆಟಕುವಂತೆ ಮಾಡುವುದು. |
| 8. | ವಿಲಾಸ್ ಕಡ್ರೋಲ್ಕರ್ (2014)<br><br>ಗ್ರಾಮೀಣ ಆರ್ಥಿಕತೆಯಲ್ಲಿ ಸ್ವಯಂ ಉದ್ಯೋಗ ಸೃಷ್ಟಿ: ಕೌಶಲ್ಯ ಸೃಷ್ಟಿ ಕಾರ್ಯಕ್ರಮದ ಅಧ್ಯಯನ, ತರಬೇತಿ ಮತ್ತು ಅಭಿವೃದ್ಧಿ ನಿಯತಕಾಲಿಕ. 4. 29–36,2014. | ದ್ವಿತೀಯ ದತ್ತಾಂಶವನ್ನು ಬೆಳಗಾವಿಯ ಜಿಲ್ಲಾ ಗ್ರಾಮೀಣಾಭಿವೃದ್ಧಿ ಕಛೇರಿ, ಜಿಲ್ಲಾ ಪಂಚಾಯಿತಿ ಕಛೇರಿ ಬೆಳಗಾವಿ, ಮತ್ತು ಜಿಲ್ಲಾ ಸಾಂಖ್ಯಿಕ ಕಛೇರಿ, ಬೆಳಗಾವಿಯಿಂದ ಸಂಗ್ರಹಿಸಲಾಗಿದೆ;<br><br>1997–98 ರಲ್ಲಿ ಕಾರ್ಯಕ್ರಮದ ಅಡಿಯಲ್ಲಿ ತರಬೇತಿ ಪಡೆದ ಸ್ವಯಂ–ಉದ್ಯೋಗಕ್ಕಾಗಿ ಗ್ರಾಮೀಣ | ಸುಮಾರು 67% ಸ್ವಯಂ ಉದ್ಯೋಗಿಗಳು ಹೊಲಿಗೆ ಕೆಲಸ ಮತ್ತು ಕಸೂತಿ ವ್ಯಾಪಾರಗಳಲ್ಲಿ ಕಂಡುಬಂದಿದ್ದಾರೆ. ಗಣಕಯಂತ್ರ, ಟಿವಿ/ರೇಡಿಯೋ ರಿಪೇರಿ ಮತ್ತು ಮೋಟರ್ ರಿವೈಂಡಿಂಗ್ ನಂತಹ ಹೊಸ ಮತ್ತು ಆಧುನಿಕ ಸ್ವರೂಪವನ್ನು ಹೊಂದಿರುವ ಚಟುವಟಿಕೆಗಳು ಸ್ವಯಂ ಉದ್ಯೋಗಕ್ಕಿಂತ ಹೆಚ್ಚಾಗಿ ವೇತನ ಉದ್ಯೋಗವನ್ನು ಸೃಷ್ಟಿಸುತ್ತವೆ. ಹೂಡಿಕೆಯ ಮೇಲೆ ಹೆಚ್ಚಿನ | ಆಧುನಿಕ ವ್ಯಾಪಾರಗಳಲ್ಲಿ ಸ್ವಯಂ ಉದ್ಯೋಗಕ್ಕೆ ಹೆಚ್ಚಿನ ಹೂಡಿಕೆಯ ಅಗತ್ಯವಿದೆ, ಮತ್ತು ಹಣಕಾಸಿನ ಪ್ರಮುಖ ಭಾಗವು ಸಾಂಸ್ಥಿಕ ಹಣಕಾಸುಗಳಿಂದ ಇರಬೇಕು. ಹೂಡಿಕೆಯು ದೊಡ್ಡದಾಗಿದ್ದರೆ, ಹೂಡಿಕೆಯ ಮೇಲಿನ ಆದಾಯ ಹೆಚ್ಚಾಗಿರುತ್ತದೆ ಮತ್ತು ಇದಕ್ಕೆ ವಿರುದ್ಧವಾದದ್ದು ನಿಜವೇ. ವಾಪಸಾತಿ ದರ ಮತ್ತು ಸಾಲಗಳ ಮರುಪಾವತಿಯ ನಡುವೆ ಸಕಾರಾತ್ಮಕ ಸಂಬಂಧವಿದೆ. ಸ್ವಯಂ ಉದ್ಯೋಗಿ ಘಟಕಗಳಲ್ಲಿ ಕೇವಲ 50% ಮಾತ್ರ 5 ವರ್ಷಗಳಿಂದ |

| | | | | |
|---|---|---|---|---|
| | | ಯುವಕರ ತರಬೇತಿಯ ತರಬೇತಿದಾರರಲ್ಲಿ 80 ಫಲಾನುಭವಿಗಳ ಮಾದರಿಯಿಂದ ಸಂರಚಿತ ಪ್ರಶ್ನಾವಳಿಯ ಮೂಲಕ ಪ್ರಾಥಮಿಕ ದತ್ತಾಂಶವನ್ನು ಸಂಗ್ರಹಿಸಲಾಗಿದೆ. | ಆದಾಯದೊಂದಿಗೆ ಗಣಕಯಂತ್ರ ವ್ಯಾಪಾರ, ಆದಾಯವನ್ನು ಉತ್ಪಾದಿಸುವಲ್ಲಿ ಅತ್ಯಂತ ಯಶಸ್ವಿ ವ್ಯಾಪಾರವಾಗಿ ಕಂಡುಬಂದಿದೆ, ಅದರ ನಂತರ ಟಿವಿ/ರೇಡಿಯೋ ದುರಸ್ತಿ ಮತ್ತು ಮೋಟರ್ ರಿವೈಂಡಿಂಗ್ ಯಶಸ್ವಿಯಾಗಿದೆ. ಮರುಹೂಡಿಕೆಯ ಮೊತ್ತವು ವ್ಯವಹಾರದಿಂದ ಬರುವ ಆದಾಯಕ್ಕೆ ನೇರವಾಗಿ ಸಂಬಂಧಿಸಿದೆ. ಅಧ್ಯಯನ ಪ್ರದೇಶದಲ್ಲಿ ನಿವ್ವಳ ಆದಾಯ ಮತ್ತು ಸಾಲಗಳ ಮರುಪಾವತಿಯ ನಡುವೆ ಧನಾತ್ಮಕ ಸಂಬಂಧವಿದೆ. ಹೀಗಾಗಿ, ಒಂದು ನಿರ್ದಿಷ್ಟ ಚಟುವಟಿಕೆಯಲ್ಲಿ ಉತ್ಪತ್ತಿಯಾಗುವ ಆದಾಯವು ಘಟಕಗಳ ಸುಸ್ಥಿರತೆಯ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಒಟ್ಟಾರೆಯಾಗಿ ಸ್ವಯಂ–ಉದ್ಯೋಗಕ್ಕಾಗಿ ಗ್ರಾಮೀಣ ಯುವಕರ ತರಬೇತಿ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಿದೆ. | ಸುಸ್ಥಿರವಾಗಿವೆ. ಆದ್ದರಿಂದ ನೀತಿ ಸೂತ್ರೀಕರಣವು ಅವುಗಳ ಸುಸ್ಥಿರತೆ ಮತ್ತು ನಿರಂತರ ಬೆಂಬಲದ ಮೇಲೆ ಗಮನ ಹರಿಸಬೇಕಾಗಿದೆ.<br><br>ಹೀಗಾಗಿ ಆಧುನಿಕ ವ್ಯಾಪಾರಗಳು ಹೆಚ್ಚು ಆದಾಯವನ್ನು ಉತ್ಪಾದಿಸುತ್ತವೆ ಆದರೆ ಸಾಂಪ್ರದಾಯಿಕ ವ್ಯಾಪಾರಗಳು ಸ್ವಯಂ ಉದ್ಯೋಗವನ್ನು ಹೆಚ್ಚು ಉತ್ಪಾದಿಸುತ್ತವೆ. |

## 5.4 ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ನಿಯೋಜನೆ

| ಕ್ರಮ ಸಂಖ್ಯೆ | ಲೇಖಕ, ವರ್ಷ ಮತ್ತು ಲೇಖನದ ಶೀರ್ಷಿಕೆ | ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶ | ಪ್ರಮುಖ ಫಲಿತಾಂಶಗಳು | ಪ್ರಮುಖ ಶಿಫಾರಸ್ಸುಗಳು |
|---|---|---|---|---|
| 1. | ಅಯಾ ಒಕಾಡಾ (2012) ಭಾರತದಲ್ಲಿ ಯುವಕರಿಗೆ ಕೌಶಲ್ಯ ಅಭಿವೃದ್ಧಿ: ಸವಾಲುಗಳು ಮತ್ತು ಅವಕಾಶಗಳು. ವಿಶೇಷ ಸಂಚಿಕೆ: ಯುವಕರು, ಶಿಕ್ಷಣ ಮತ್ತು ಕೆಲಸ, 2012 | ಭಾರತದಲ್ಲಿ ಹಲವಾರು ಸುತ್ತಿನ ಕ್ಷೇತ್ರಕಾರ್ಯದ ಮೂಲಕ ಪ್ರಾಥಮಿಕ ದತ್ತಾಂಶ. 2011 ರ ತಾತ್ಕಾಲಿಕ ಜನಗಣತಿ ಮತ್ತು ಸರ್ಕಾರದ ದಾಖಲೆಗಳಿಂದ ಪಡೆದ ದ್ವಿತೀಯ ದತ್ತಾಂಶ. | ಇತ್ತೀಚ್ಚಿನ ತ್ವರಿತ ಆರ್ಥಿಕ ಬೆಳವಣಿಗೆ ಆಧಾರದ ಮೇಲೆ ಕೈಗಾರಿಕೆಗಳು ಏನನ್ನು ಬಯಸುತ್ತವೆ ಎಂಬುದರ ಮತ್ತು ವೃತ್ತಿಪರ ತರಬೇತಿಯ ಮೂಲಕ ಯುವಜನರು ಪಡೆಯುವ ಕೌಶಲ್ಯಗಳ ನಡುವೆ ಭಾರತದಲ್ಲಿ ಅಗಾಧ ಕೌಶಲ್ಯಗಳ ಅಂತರವನ್ನು ಈ ಲೇಖನ ಗುರುತಿಸಿದೆ. ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಉತ್ತಮ ಸಾಂಸ್ಥಿಕಸಾರ್ವಜನಿಕ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ವ್ಯವಸ್ಥೆಗಳು ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಒಳಗೆ ಮತ್ತು ಹೊರಗೆ ಜಾರಿಯಲ್ಲಿವೆ. ಆದರೆ ಅವು ಅನೇಕ ಶಾಲಾ ಪದವೀಧರರಿಗೆ ಸ್ಥಳಾವಕಾಶ ನೀಡುವಷ್ಟು ದೊಡ್ಡದಾಗಿಲ್ಲ ಮತ್ತು ಕೈಗಾರಿಕೆಗಳಿಗೆ ಅಗತ್ಯವಿರುವ ವೃತ್ತಿಪರ ಕೌಶಲ್ಯಗಳನ್ನು ಯುವಜನರಿಗೆ ಒದಗಿಸಲು ಸಾಧ್ಯವಾಗಿಲ್ಲ. ಹೀಗಾಗಿ, ವೃತ್ತಿಪರ ತರಬೇತಿಗೆ ಯುವಕರ ಪ್ರವೇಶವು ಸೀಮಿತವಾಗಿದೆ. | ಅಧ್ಯಯನವು ಈ ಕೆಳಗಿನ ನೀತಿ ಸಲಹೆಗಳನ್ನು ನೀಡುತ್ತದೆ: ಮೊದಲನೆಯದಾಗಿ, ಭಾರತವು ಕೈಗಾರಿಕಾ ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ಸುಸ್ಥಿರ ಬೆಳವಣಿಗೆಯನ್ನು ಸಾಧಿಸಲು ಅದು ಯುವಕರಿಗೆ ಶಿಕ್ಷಣ ಮತ್ತು ತರಬೇತಿಯಲ್ಲಿ ತನ್ನ ಹೂಡಿಕೆಯನ್ನು ಹೆಚ್ಚಿಸಬೇಕು. ವಿಶೇಷವಾಗಿ ಜ್ಞಾನಾಧಾರಿತ ಆರ್ಥಿಕತೆಯೆಡೆಗೆ ಮತ್ತಷ್ಟು ಸಾಗಲು ಮತ್ತು ಮೌಲ್ಯ ಸರಪಳಿಯನ್ನು ಹೆಚ್ಚಿಸಲು, ಪ್ರತಿಯೊಂದು ಹಂತದಲ್ಲೂ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಭಾರತಕ್ಕೆ ಅನಿವಾರ್ಯವಾಗಿದೆ. ಎರಡನೆಯದಾಗಿ, ಭಾರತದ ಕೌಶಲ್ಯ ಅಭಿವೃದ್ಧಿ ವ್ಯವಸ್ಥೆಯ ಗಮನವು ಉದ್ಯಮವು ಒತ್ತಾಯಿಸುವ ಕೌಶಲ್ಯಗಳ ಮಟ್ಟಕ್ಕೆ ಅಥವಾ ಹೆಚ್ಚಿನ ಯುವಜನರ ಒಟ್ಟಾರೆ ಶಿಕ್ಷಣದ ಮಟ್ಟಗಳಿಗೆ ಅನುಗುಣವಾಗಿಲ್ಲ. ಹೀಗಾಗಿ, ಹೆಚ್ಚಿನ ಯುವಕರು ಕನಿಷ್ಠ ಕಿರಿಯ ಪ್ರೌಢಶಾಲೆ ಶಿಕ್ಷಣವನ್ನು (ಅಂದರೆ 10 ನೇ ತರಗತಿ) ಮುಗಿಸುವುದನ್ನು |

| | | | | |
|---|---|---|---|---|
| | | | | ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಮೂರನೆಯದಾಗಿ, ಪ್ರೌಢಶಾಲೆ ಶಿಕ್ಷಣವನ್ನು ಪೂರ್ಣಗೊಳಿಸದ ಯುವಕರಿಗೆ ತರಬೇತಿ ಅವಕಾಶಗಳನ್ನು ತೆರೆಯಲು ಕಡಿಮೆ ಮಟ್ಟದ ಶೈಕ್ಷಣಿಕ ಅವಶ್ಯಕತೆಗಳೊಂದಿಗೆ ಐಟಿಐಗಳಲ್ಲಿ ಹೆಚ್ಚಿನ ಕೋರ್ಸ್‌ಗಳನ್ನು ಸೃಷ್ಟಿಸಲು ಇದು ಸಹಾಯಕವಾಗುತ್ತದೆ. ನಾಲ್ಕನೆಯದಾಗಿ, ಅನೌಪಚಾರಿಕ ವಲಯದ ವಿಶಾಲ ಗಾತ್ರವನ್ನು ಗಮನಿಸಿದರೆ, ಅನೌಪಚಾರಿಕ ವಲಯದಲ್ಲಿ ಕೆಲಸಕ್ಕಾಗಿ ಕೆಲವು ತರಬೇತಿಯನ್ನು ಸಾಂಸ್ಥಿಕಗೊಳಿಸುವುದು ನಿರ್ಣಾಯಕವಾಗಿ ಮುಖ್ಯವಾಗಿದೆ. ಪ್ರಸ್ತುತ ತರಬೇತಿಯ ತಾತ್ಕಾಲಿಕ ವ್ಯವಸ್ಥೆಗಿಂತ ಸಾಂಸ್ಥಿಕ ಮತ್ತು ರಚನಾತ್ಮಕ ಪರಿಸ್ಥಿತಿಗಳು ಅನೌಪಚಾರಿಕ ವಲಯಕ್ಕೆ ಹೆಚ್ಚು ಪರಿಣಾಮಕಾರಿ ಮತ್ತು ಸುವ್ಯವಸ್ಥಿತ ತರಬೇತಿಯನ್ನು ನೀಡಲು ಸಹಾಯ ಮಾಡಬಹುದು. |
| 2. | ಅಸ್ಗರ್ ಹಯ್ಯತ್ ಮತ್ತು ಸಜ್ಜಾದ್ ಹುಸೇನ್ ಚುಗ್ತೈ (2015) ವಿದೇಶಿ ನಿಧಿಗಳನ್ನು ಪರಿಷ್ಕರಿಸುವ ಪಾತ್ರದ | ದಕ್ಷಿಣ ಪಂಜಾಬ್‌ನಲ್ಲಿ 350 ವೃತ್ತಿಪರ ಪದವೀಧರರೊಂದಿಗೆ ನಡೆಸಿದ ಸಮೀಕ್ಷೆಯ ಮೂಲಕ | ಬಡತನ ನಿರ್ಮೂಲನೆಯಲ್ಲಿ ವೃತ್ತಿಪರ ಶಿಕ್ಷಣ ಮತ್ತು ತರಬೇತಿಯ ಮಹತ್ವದ ಕೊಡುಗೆ ಇದೆ ಎಂದು ಫಲಿತಾಂಶಗಳು ಸಾಬೀತುಪಡಿಸಿವೆ. | ತಾಂತ್ರಿಕ ಮತ್ತು ವೃತ್ತಿಪರ ತರಬೇತಿಗಾಗಿ ಅಂತರರಾಷ್ಟ್ರೀಯ ದಾನಿಗಳನ್ನು ಸ್ವಾಗತಿಸಬೇಕು. ಸ್ನಾತಕೋತ್ತರ ಮತ್ತು ಪದವೀಧರ ಹಂತಗಳಂತೆ |

| | | | | |
|---|---|---|---|---|
| | ಮೂಲಕ ಬಡತನ ನಿರ್ಮೂಲನೆಯ ಮೇಲೆ ವೃತ್ತಿಪರ ತರಬೇತಿಯ ಪರಿಣಾಮ: ದಕ್ಷಿಣ ಪಂಜಾಬ್ ನಿಂದ ಪುರಾವೆಗಳು ಮ್ಯಾನೇಜ್‌ಮೆಂಟ್ ಸ್ಟಡೀಸ್ ಮತ್ತು ಎಕನಾಮಿಕ್ಸ್ ಸಿಸ್ಟಮ್ಸ್ 2 (2), 2015 | ದತ್ತಾಂಶವನ್ನು ಸಂಗ್ರಹಿಸಲಾಗಿದೆ. | ಸಾಮಾನ್ಯವಾಗಿ, ಉದ್ಯೋಗದಾತರಿಗೆ ತರಬೇತಿ ಉಪಕ್ರಮಗಳ ಬಗ್ಗೆ ತಿಳಿದಿಲ್ಲ ಹಾಗೂ ವ್ಯಾಪಾರ ಮತ್ತು ಉದ್ಯಮಕ್ಕಾಗಿ ಅವರ ಬೇಡಿಕೆ ಹೊಂದಿಕೆಯಾಗುತ್ತಿಲ್ಲ ಎಂದು ಅಧ್ಯಯನವು ತೋರಿಸಿದೆ. ವೃತ್ತಿಪರ ಪದವೀಧರರು ಕೌಶಲ್ಯ ತರಬೇತಿಗಳನ್ನು ಪಡೆದ ನಂತರ ತ್ವರಿತ ಉದ್ಯೋಗವನ್ನು ನಿರೀಕ್ಷಿಸುತ್ತಿದ್ದಾರೆ. ಗರಿಷ್ಠ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸರ್ಕಾರ ಮತ್ತು ಖಾಸಗಿ ವಲಯಗಳು ಮಾಡಬೇಕಾದ ಕಾರ್ಯತಂತ್ರಗಳ ಅಗತ್ಯವಿದೆ. ಒಬ್ಬ ವ್ಯಕ್ತಿಯು ಒಂದೇ ಸಮಯದಲ್ಲಿ ಎರಡೂ ರೀತಿಯ ಶಿಕ್ಷಣವನ್ನು ಪಡೆಯಬಹುದಾದ ವೃತ್ತಿಪರ ಮತ್ತು ಔಪಚಾರಿಕ ಸಂಸ್ಥೆಗಳ ಅಗತ್ಯವಿದೆ. ತಾಂತ್ರಿಕ ಶಿಕ್ಷಣ ಮತ್ತು ವೃತ್ತಿಪರ ತರಬೇತಿಯ ಮಧ್ಯಂತರ ಮಟ್ಟದಲ್ಲಿ ದಕ್ಷತೆ ಮತ್ತು ಪರಿಣಾಮಕಾರಿತ್ವದ ಅಗತ್ಯವಿದೆ. | ಉನ್ನತ ಮಟ್ಟದ ಔದ್ಯೋಗಿಕ ಮತ್ತು ಶೈಕ್ಷಣಿಕ ತರಬೇತಿಗಳಲ್ಲಿ, ವಿದ್ಯಾರ್ಥಿವೇತನದ ರೂಪದಲ್ಲಿ ಲಿಂಗ ತಾರತಮ್ಯವಿಲ್ಲದೆ ತರಬೇತಿ ಭತ್ತೆಯನ್ನು ಒದಗಿಸಬೇಕು. ವ್ಯಾಪಾರ ಸಂಸ್ಥೆಗಳು ಮತ್ತು ಕೈಗಾರಿಕೆಗಳಿಗೆವಿಷಯ ತಿಳಿಸಬೇಕು ಮತ್ತು ಕಾರ್ಮಿಕ ಮಾರುಕಟ್ಟೆಯ ಅಗತ್ಯಗಳಿಗೆ ಅನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಬೇಕು ಮತ್ತು ಸಂಸ್ಥೆಗಳಲ್ಲಿ ಕಡಿಮೆ ಮಟ್ಟದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅರೆಕಾಲಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಬೇಕು. ಯೋಜನೆ ಮತ್ತು ಮೇಲ್ವಿಚಾರಣೆ ಘಟಕಗಳನ್ನು ರೂಪಿಸಬೇಕು ಮತ್ತು ಭವಿಷ್ಯದ ಅಗತ್ಯಗಳಿಗಾಗಿ ಯೋಜನೆಯ ಮುನ್ಸೂಚನೆ ನೀಡಬೇಕು ಮತ್ತು ಕಾರ್ಯಪಡೆಯ ಪೂರೈಕೆ ಮತ್ತು ಬೇಡಿಕೆಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬೇಕು. |
| 3. | ಶ್ರೀವಾಸ್ತವ ಮತ್ತು ಜಾತವ್ (2017) ಕೌಶಲ್ಯಪೂರ್ಣಗೊಳಿಸುವ ಭಾರತದ ಪ್ರಯೋಜನಗಳು ಮತ್ತು ಸವಾಲುಗಳ ವಿಶ್ಲೇಷಣೆ. 9ನೇ | ದತ್ತಾಂಶವನ್ನು ಪ್ರಮುಖವಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ, ಆಯಾನವೋದ್ಯಮ ಕಂಪನಿಗಳ | ಭಾರತ ಸರ್ಕಾರವು ಪ್ರಾರಂಭಿಸಿದ ವಿವಿಧ ರೀತಿಯ ಕಾರ್ಯಕ್ರಮಗಳು ಹೊಸ ಕೈಗಾರಿಕಾ ಕೌಶಲ್ಯದ ಅವಶ್ಯಕತೆಯೊಂದಿಗೆ ಭಾರತದಲ್ಲಿ ಉದ್ಯೋಗಾವಕಾಶಗಳನ್ನು ಹೇಗೆ | ತರಬೇತಿ ಮೂಲಸೌಕರ್ಯದಲ್ಲಿ ಹೆಚ್ಚಿನ ಹೂಡಿಕೆಯೊಂದಿಗೆ ಸಾಂಸ್ಥಿಕ ಸಂರಚನೆಗೆ ಸರಳೀಕರಣದ ಅಗತ್ಯವಿದೆ ಎಂದು ಅಧ್ಯಯನವು ಸೂಚಿಸುತ್ತದೆ. ಖಾಸಗಿ ವಲಯದ ಪಾಲ್ಗೊಳ್ಳುವಿಕೆಗೆ |

| | | | | |
|---|---|---|---|---|
| | ಐಸಿಎಸ್‌ಟಿಎಂ–17,14ನೇ ಅಕ್ಟೋಬರ್ 2017 ಫೆಡರೇಷನ್ ಆಫ್ ಯುನೈಟೆಡ್ ನೇಷನ್ಸ್ ಅಸೋಸಿಯೇಷನ್, ನವದೆಹಲಿ (ಭಾರತ). | ಜಾಲತಾಣಗಳು, ವಿವಿಧ ಸರ್ಕಾರಿ ನಿಯೋಗಗಳ ಜಾಲತಾಣಗಳು ಮತ್ತು ಅವುಗಳ ವಾರ್ಷಿಕ ವರದಿಗಳಿಂದ ಸಂಗ್ರಹಿಸಲಾಯಿತು. ಭಾರತದಲ್ಲಿ ಕೌಶಲ್ಯ ಅಭಿವೃದ್ಧಿಯ ಭಾರತೀಯ ಅನುಭವವನ್ನು ಅಧ್ಯಯನ ಮಾಡುವುದು, ವಿಶ್ಲೇಷಿಸುವುದು ಮತ್ತು ಎದುರಿಸುತ್ತಿರುವ ಸವಾಲುಗಳನ್ನು ವಿಶ್ಲೇಷಿಸುವುದು ಅಧ್ಯಯನದ ನಿರ್ದಿಷ್ಟ ಉದ್ದೇಶಗಳಾಗಿದ್ದವು. | ಸೃಷ್ಟಿಸಬಹುದು ಎಂಬುದನ್ನು ಅಧ್ಯಯನವು ಬಹಿರಂಗಪಡಿಸಿದೆ. ಲಭ್ಯವಿರುವ ಕೌಶಲ್ಯ ಸಾಮರ್ಥ್ಯ, ಕೌಶಲ್ಯ ಅವಶ್ಯಕತೆ, ಕೌಶಲ್ಯ ಅಂತರ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಉಪಕ್ರಮಗಳ ಒಟ್ಟಾರೆ ಸ್ಥಿತಿಯನ್ನು ಅಧ್ಯಯನವು ಕಂಡುಹಿಡಿದಿದೆ. ಭಾರತದಲ್ಲಿ ಅಸ್ತಿತ್ವದಲ್ಲಿರುವ ಕೌಶಲ್ಯ ಅಭಿವೃದ್ಧಿ ನೀತಿಗೆ ತುರ್ತು ಚಿಕಿತ್ಸೆಯ ಅಗತ್ಯವಿದೆ. | ಪ್ರೋತ್ಸಾಹಕಗಳೊಂದಿಗೆ ಇರಬೇಕಾದ ಸಾಮಾನ್ಯ ಕಾರ್ಮಿಕ ಶಕ್ತಿಯನ್ನು ಬೆಂಬಲಿಸಲು ಒತ್ತು ನೀಡಬೇಕಾಗಿದೆ. |
| 4. | ಕಾಂಚನ್ ಮತ್ತು ಸಾಕ್ಷಿ (2015) ಕೌಶಲ್ಯ ಅಭಿವೃದ್ಧಿ ಉಪಕ್ರಮಗಳು ಮತ್ತು ಕಾರ್ಯತಂತ್ರಗಳು, ಏಷ್ಯನ್ ಜರ್ನಲ್ ಆಫ್ ಮ್ಯಾನೇಜ್‌ಮೆಂಟ್ ರಿಸರ್ಚ್, ಸಂಪುಟ 5 ಸಂಚಿಕೆ 4, 2015. | ನಿಯತಕಾಲಿಕೆಗಳು, ಲೇಖನಗಳು ಮತ್ತು ಮಾಧ್ಯಮ ವರದಿಗಳಂತಹ ದ್ವಿತೀಯ ಮೂಲಗಳಿಂದ ದತ್ತಾಂಶವನ್ನು ಸಂಗ್ರಹಿಸಲಾಯಿತು. | ಭಾರತದಲ್ಲಿ (ಗ್ರಾಮೀಣ ಮತ್ತು ನಗರ) 80% ಉದ್ಯೋಗಿಗಳು ಯಾವುದೇ ಗುರುತಿಸಬಹುದಾದ ಮತ್ತು ಮಾರಾಟದ ಕೌಶಲ್ಯಗಳನ್ನು ಹೊಂದಿಲ್ಲ ಎಂದು ಅಧ್ಯಯನವು ಕಂಡುಕೊಂಡಿದೆ. | ವಿವಿಧ ಕೌಶಲ್ಯ ಅಭಿವೃದ್ಧಿ ಉಪಕ್ರಮಗಳು ಭಾರತವನ್ನು ನುರಿತ ಮಾನವ ಶಕ್ತಿಯ ಜಾಗತಿಕ ಕೇಂದ್ರವನ್ನಾಗಿ ಮಾಡಬಹುದು ಮತ್ತು 2020 ರ ವೇಳೆಗೆ ಸುಮಾರು 47 ಮಿಲಿಯನ್ ನುರಿತ ಮಾನವ ಶಕ್ತಿಯ ಹೆಚ್ಚುವರಿಗೆ ಕಾರಣವಾಗಬಹುದು ಎಂದು ಅಧ್ಯಯನವು ಸೂಚಿಸುತ್ತದೆ. |
| 5. | ಅಭಿಷೇಕ್ & ಆದಿತ್ಯ (2015) ಕೌಶಲ್ಯ ಅಭಿವೃದ್ಧಿ | ಈ ಅಧ್ಯಯನವು ಸಾರ್ವಜನಿಕ ಕ್ಷೇತ್ರಗಳಿಂದ ಪಡೆದ, ಪೋಷಕ | ಭಾರತದಲ್ಲಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ | ಪಿರಮಿಡ್‌ನ್ನು ತಳಮೇಲೆ ಮಾಡುವ ಉಪಕ್ರಮವನ್ನು ಪರಿಗಣಿಸುವುದು ಅಗತ್ಯವಾಗಿದೆ |

| | | | | |
|---|---|---|---|---|
| | ಕಾರ್ಯಕ್ರಮಗಳು: ಒಂದು ಯೋಜನಾ ನಿರ್ವಹಣೆ ದೃಷ್ಟಿಕೋನ, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಹ್ಯುಮಾನಿಟೀಸ್ ಅಂಡ್ ಮ್ಯಾನೇಜ್‌ಮೆಂಟ್ ಸೈನ್ಸ್ (ಐಜೆಎಚ್‌ಎಂಎಸ್) ಸಂಪುಟ 3, ಸಂಚಿಕೆ 5,2015. | ಸಂಸ್ಥೆಯಿಂದ ಪಡೆದ ಖಾಸಗಿ, ಗೌಪ್ಯ ದತ್ತಾಂಶ, ಮೂಲಸೌಕರ್ಯ ಗುತ್ತಿಗೆ ಮತ್ತು ಹಣಕಾಸು ಸೇವೆಗಳ ಕೌಶಲ್ಯಗಳಿಂದಪಡೆದ ದ್ವಿತೀಯ ದತ್ತಾಂಶದ ವಿಶ್ಲೇಷಣೆಯನ್ನು ಆಧರಿಸಿದೆ. | ಸರ್ಕಾರ ಎದುರಿಸುತ್ತಿರುವ ಪ್ರಮುಖ ಸವಾಲು ಪ್ರಸ್ತುತ ಕೌಶಲ್ಯ ಅಭಿವೃದ್ಧಿ ಯೋಜನೆಗಳಿಗೆ ಬೆಂಬಲ ನೀಡಲು ಸಾಕಷ್ಟು ಧನಸಹಾಯವನ್ನು ಕ್ರೋಢೀಕರಿಸುವುದು ಎಂದು ಅಧ್ಯಯನವು ಬಹಿರಂಗಪಡಿಸಿದೆ. ಪ್ರತಿ ವರ್ಷ ಕಾರ್ಯಪಡೆಗೆ ಸೇರುವ 12 ಮಿಲಿಯನ್ ಜನರಲ್ಲಿ ಕೌಶಲ್ಯರಹಿತ ಕಾರ್ಯಪಡೆಯು ಈ ವಿಭಾಗದ ಪ್ರಮುಖ ಭಾಗವನ್ನು ಹೊಂದಿದೆ. ಕೌಶಲ್ಯ ಅಭಿವೃದ್ಧಿಯ ದಾಖಲಾತಿಯಲ್ಲಿ ಬಹಳ ಬಲವಾದ ಲಿಂಗ ಪಕ್ಷಪಾತವಿದೆ ಎಂದು ಅದು ಕಂಡುಕೊಂಡಿದೆ. ಆದ್ದರಿಂದ ಅರ್ಹತೆಯ ಆಧಾರದ ಮೇಲೆ ಪ್ರತಿಭೆಯನ್ನು ಹಾಳುಮಾಡುತ್ತದೆ. | ಏಕೆಂದರೆ ಅದು ಕೌಶಲ್ಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿರಬಹುದು. ವೃತ್ತಿಪರ ಶೈಕ್ಷಣಿಕ ತರಬೇತಿ ಬಗ್ಗೆ ಮಹಿಳೆಯರು ಮತ್ತು ಅವರ ಕುಟುಂಬಗಳಿಗೆ ತಿಳಿಸಲು ಮತ್ತು ಪ್ರಸಕ್ತ ಮಹಿಳಾ ಅಭ್ಯರ್ಥಿಗಳು ಸ್ವಸಹಾಯ ಗುಂಪುಗಳಾಗಿ ಸಂಘಟಿಸಲು ಸಹಾಯ ಮಾಡಲು ಸರ್ಕಾರೇತರ ಸಂಸ್ಥೆಗಳು ಮತ್ತು ಪಂಚಾಯಿತಿಗಳನ್ನು ಸಜ್ಜುಗೊಳಿಸಬೇಕು. |
| 6. | ಎಸ್. ಪಾಂಡೆ (2016) ಭಾರತದಲ್ಲಿ ಉನ್ನತ ಶಿಕ್ಷಣ, ಸಂಶೋಧನೆ ಮತ್ತು ಆವಿಷ್ಕಾರಗಳ ಮೂಲಕ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ಸಾಮರ್ಥ್ಯವನ್ನು ಸುಧಾರಿಸುವುದು.<br>ಇಂಟರ್‌ನ್ಯಾಷನಲ್ ಜರ್ನಲ್ ಆಫ್ | ಸರ್ಕಾರ ಮತ್ತು ಖಾಸಗಿ ಕಾರ್ಯಕ್ರಮಗಳ ನಡುವಿನ ಅಂತರವನ್ನು ಗುರುತಿಸಲು ಮತ್ತು ಕೌಶಲ್ಯ ತರಬೇತಿ ಮತ್ತು ನಿಯೋಜನೆ ಕುರಿತ ಪ್ರಸ್ತುತ ಸನ್ನಿವೇಶದ ಬಗ್ಗೆ ಚರ್ಚಿಸಲು ಕೌಶಲ್ಯ ಅಭಿವೃದ್ಧಿಗಾಗಿ | ಸರ್ಕಾರದ ನೀತಿಗಳಲ್ಲಿನ ಅಂತರಗಳನ್ನು ನಿವಾರಿಸುವಲ್ಲಿ ಖಾಸಗಿ ವಲಯವು ಪ್ರಮುಖ ಪಾತ್ರವಹಿಸುತ್ತದೆ ಎಂದು ಅಧ್ಯಯನವು ತೀರ್ಮಾನಿಸಿದೆ. ಆದಾಗ್ಯೂ, ಅವರ ಉದ್ದೇಶವು ತಮ್ಮದೇ ಆದ ಉದ್ಯಮಗಳನ್ನು ವಿಸ್ತರಿಸುವುದು ಮತ್ತು ಹೆಚ್ಚಿಸುವುದಾಗಿದೆ. ಹೀಗಾಗಿ, ಅವರ ಕೌಶಲ್ಯ ಅಭಿವೃದ್ಧಿಯ ಪ್ರಕ್ರಿಯೆಯು | ಪರಿಸರ ಸಂರಕ್ಷಣೆ, ಜೈವಿಕ ತ್ಯಾಜ್ಯದ ಸೂಕ್ತ ಬಳಕೆ ಮತ್ತು ಜೀವನೋಪಾಯದ ಗಳಿಕೆ, ಎಲ್ಲವೂ ಒಂದೇ ಸಮಯದಲ್ಲಿ ಸಂಭವಿಸುವಂತಹ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ನವೀನವಾಗಿ ರೂಪಿಸಬೇಕು. ನೋಂದಾಯಿತ ಅಭ್ಯರ್ಥಿಗಳಿಗೆ ಸಂಪೂರ್ಣ ಗಮನವನ್ನು ಒದಗಿಸಲು ಸಂಸ್ಥೆಗಳಲ್ಲಿ ಪೂರ್ಣ ಸಮಯ ಸೇವೆ ಸಲ್ಲಿಸಬಲ್ಲ ವಿವಿಧ |

| | | | | |
|---|---|---|---|---|
| | ಇನ್ನೋವೇಟಿವ್ ರಿಸರ್ಚ್ ಇನ್ ಸೈನ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ 5(1),2016. | ರೂಪಿಸಲಾದ ನೀತಿಗಳ ಸಂಬಂಧ ದ್ವಿತೀಯ ದತ್ತಾಂಶವನ್ನು ಇಲ್ಲಿ ಪರಿಶೀಲಿಸಲಾಗಿದೆ. | ಬದಲಾಗಬಹುದು. ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಾವೀನ್ಯತೆಯ ಕೊರತೆ ಇದೆ. ಬಹುತೇಕ ಎಲ್ಲಾ ಕೋರ್ಸ್‌ಗಳು ಮತ್ತು ಪಠ್ಯಕ್ರಮಗಳು ಕೈಗಾರಿಕಾ ಅಗತ್ಯಗಳನ್ನು ಪೂರೈಸುತ್ತಿವೆ. 20ಕ್ಕೂ ಹೆಚ್ಚು ಸಚಿವಾಲಯಗಳು/ಇಲಾಖೆಗಳು ದೇಶದಲ್ಲಿ ಕೌಶಲ್ಯ ಅಭಿವೃದ್ಧಿಗಾಗಿ 70 ಕ್ಕೂ ಹೆಚ್ಚು ಯೋಜನೆಗಳನ್ನು ನಡೆಸುತ್ತವೆ. ಆದರೂ, ತರಬೇತಿ ಮೂಲಸೌಕರ್ಯ ಮತ್ತು ಉತ್ಪಾದನೆಗಳ ಸಾಮರ್ಥ್ಯ ಮತ್ತು ಗುಣಮಟ್ಟದಲ್ಲಿ ಕಾರ್ಯಪಡೆಯ ಆಕಾಂಕ್ಷೆಗಳ ಮೇಲೆ ಸಾಕಷ್ಟು ಗಮನ ಹರಿಸಿಲ್ಲದಿರುವುದು, ಪ್ರಮಾಣೀಕರಣ ಮತ್ತು ಸಾಮಾನ್ಯ ಮಾನದಂಡಗಳ ಕೊರತೆ ಮತ್ತು ಅಸಂಘಟಿತ ವಲಯದ ಮೇಲೆ ಗಮನ ಹರಿಸದಿರುವುದು ಇವುಗಳಲ್ಲಿ ಕೊರತೆಗಳಿವೆ. | ಹಂತಗಳಲ್ಲಿ ತರಬೇತಿ ಪಡೆದ ತರಬೇತುದಾರರ ಬಲವಾದ ಅಗತ್ಯವಿದೆ. ಸರ್ಕಾರದ ಯೋಜನೆಗಳು ಸಾಕಷ್ಟು ಇವೆ. ಆದರೆ ಅವುಗಳಲ್ಲಿ ಹೆಚ್ಚಿನವು ಖಾಸಗಿ ಮೂಲಗಳ ಸಹಯೋಗದೊಂದಿಗಿವೆ, ಅಥವಾ ಪರೋಕ್ಷವಾಗಿ ಉದ್ಯಮಗಳಿಗೆ ಪ್ರಯೋಜನಕಾರಿಯಾಗಿವೆ. |
| 7. | ಡಾ. ಇಶಾ ಶರ್ಮಾ ಮತ್ತು ಸಾಕ್ಷಿ ಸೇಥಿ (2014) ಕೌಶಲ್ಯ ಅಭಿವೃದ್ಧಿ: ಭಾರತದಲ್ಲಿ ಅವಕಾಶಗಳು ಮತ್ತು ಸವಾಲುಗಳು ಜಿಯಾನ್ ಜ್ಯೋತಿ | ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿಯ ದತ್ತಾಂಶ ಮತ್ತು ವಿವಿಧ ರಾಜ್ಯ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನೆ | ದೇಶವು ಒಟ್ಟು 4.3 ಮಿಲಿಯನ್ ತರಬೇತಿ ಸಾಮರ್ಥ್ಯವನ್ನು ಹೊಂದಿದೆ. ಇದರಿಂದಾಗಿ ಪ್ರತಿ ವರ್ಷ ಸುಮಾರು 64% ಹೊಸಬರು ಕೌಶಲ್ಯ ಅಭಿವೃದ್ಧಿ ತರಬೇತಿಯ ಅವಕಾಶದಿಂದ | ತರಬೇತಿ ಸಂಸ್ಥೆಗಳನ್ನು ಅವುಗಳ ಕಾರ್ಯಕ್ಷಮತೆಯನ್ನು ಕೆಲವು ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಬಹುದಾಗಿದೆ. ಉದಾ. ಸ್ವೀಕಾರಾರ್ಹ ವೇತನ |

| | | | | |
|---|---|---|---|---|
| | ಇ–ಜರ್ನಲ್,5(1), 2015. | | ವಂಚಿತರಾಗುತ್ತಿದ್ದಾರೆ. ಹೆಚ್ಚಿನ ತರಬೇತಿ ಸಂಸ್ಥೆಗಳು ಕಡಿಮೆ ಉದ್ಯಮ ಸಂಪರ್ಕವನ್ನು ಹೊಂದಿವೆ. ಇದರ ಪರಿಣಾಮವಾಗಿ ಕೌಶಲ್ಯ ಅಭಿವೃದ್ಧಿ ವಲಯದ ಕಾರ್ಯಕ್ಷಮತೆ ನಿಯೋಜನೆ ದಾಖಲೆಗಳು ಮತ್ತು ನೀಡಲಾಗುವ ಸಂಬಳದ ವಿಷಯದಲ್ಲಿ ಕಳಪೆಯಾಗಿದೆ. ಕೌಶಲ್ಯ ಸಂಸ್ಥೆಗಳ ಕೆಲವು ಕೋರ್ಸ್‌ಗಳ ಕೋರ್ಸ್ ಪಠ್ಯಕ್ರಮವು ಉದ್ಯಮದ ಅವಶ್ಯಕತೆಗಳಿಗೆ ಸರಿಹೊಂದುವ ತರಬೇತಿಯನ್ನು ಒದಗಿಸುವುದಿಲ್ಲ. ಇದರಿಂದಾಗಿ ಅವರು ಕಳಪೆ ನಿಯೋಜನೆ ದಾಖಲೆಗಳನ್ನು ಹೊಂದಿದ್ದಾರೆ. ತರಬೇತಿ ಸಂಸ್ಥೆಗಳ ಅಸಮರ್ಪಕ ನಿಯೋಜನೆ ಅಂಕಿಅಂಶಗಳು ಮತ್ತು ದುರ್ಬಲ ಉದ್ಯಮ ಸಂಪರ್ಕಗಳಿಂದಾಗಿ ವಿದ್ಯಾರ್ಥಿಗಳಿಗೆ ಸರಿಯಾದ ವೃತ್ತಿ ಮಾರ್ಗದರ್ಶನದ ಕೊರತೆ ಕಂಡುಬಂದಿದೆ. | ಪ್ಯಾಕೇಜ್ ಗಳು, ಉದ್ಯಮದೊಂದಿಗೆ ಇರಿಸಲಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ. ಇಂತಹ ಸಂಸ್ಥೆಗಳಿಗೆ ಆರ್ಥಿಕ ನೆರವು ಕೂಡ ನೀಡಬಹುದು. ಕೌಶಲ್ಯಗಳ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವನ್ನು ಕಡಿಮೆ ಮಾಡಲು ಈ ಅಂತರಕ್ಕೆ ಮುಖ್ಯ ಕಾರಣಗಳನ್ನು ಕಂಡು ಹಿಡಿಯುವುದು ಅಗತ್ಯವಾಗಿದೆ. ಉದ್ಯೋಗದಾತರಿಂದ ನಿಖರವಾದ ಕೌಶಲ್ಯದ ಅಗತ್ಯವನ್ನು ಕಂಡುಹಿಡಿಯಲು ಸಮೀಕ್ಷೆಗಳನ್ನು ನಡೆಸಬಹುದು. ವಿದ್ಯಾರ್ಥಿಗಳಿಗೆ ಪ್ರಸ್ತುತ ಇರುವ ತರಬೇತಿ ಸಂಸ್ಥೆಗಳು ನೀಡಲಾಗುವ ಕೋರ್ಸ್‌ಗಳು ಮತ್ತು ಕೋರ್ಸ್ ಪೂರ್ಣಗೊಂಡ ನಂತರ ವೃತ್ತಿ ಅವಕಾಶಗಳ ಬಗ್ಗೆ ಅರಿವು ಮೂಡಿಸಬೇಕು. |

————————

# 6. ಉದ್ದೇಶಗಳು ಮತ್ತು ಮೌಲ್ಯಮಾಪನದ ಸಮಸ್ಯೆಗಳು

ನಡೆಯುತ್ತಿರುವ ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ಪ್ರಸಕ್ತ ಮೌಲ್ಯಮಾಪನ ಅಧ್ಯಯನವನ್ನು ಈ ಕೆಳಗಿನ ಉದ್ದೇಶಗಳು ಮತ್ತು ಸಂಶೋಧನಾ ಪ್ರಶ್ನೆಗಳೊಂದಿಗೆ ಕೈಗೊಳ್ಳಲಾಯಿತು. ಮೌಲ್ಯಮಾಪನ ಅಧ್ಯಯನವು ಮಿಶ್ರ–ವಿಧಾನದ ಉಪಕ್ರಮವನ್ನು ಬಳಸಿಕೊಂಡು ಫಲಾನುಭವಿಗಳು, ಅನುಷ್ಠಾನ ಪಾಲುದಾರರು, ಬ್ಯಾಂಕುಗಳು ಮತ್ತು ರಾಜ್ಯ ಮತ್ತು ಜಿಲ್ಲಾ ಮಟ್ಟದ ಬಳಕೆದಾರರನ್ನು ಒಳಗೊಂಡಿದೆ.

## 6.1 ಮೌಲ್ಯಮಾಪನದ ಉದ್ದೇಶಗಳು:

1. ಕರ್ನಾಟಕದ ನಿರುದ್ಯೋಗಿ ಯುವಕರ ಜನಸಂಖ್ಯಾ ಗುಣಲಕ್ಷಣಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ನಕ್ಷೆ ಮಾಡುವುದು ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರ ಪ್ರವೇಶಾವಕಾಶ ಮತ್ತು ಇಚ್ಛೆ ತಿಳಿಯುವುದು.
2. ಯೋಜನೆಯ ಅನುಷ್ಠಾನದ ಮೊದಲು ಮತ್ತು ನಂತರ ಗ್ರಾಮೀಣ ನಿರುದ್ಯೋಗಿ ಯುವಕರ ಸ್ಥಿತಿಯನ್ನು ವಿಶ್ಲೇಷಿಸುವುದು ಮತ್ತು ದಾಖಲಿಸುವುದು.
3. ಫಲಾನುಭವಿಗಳಲ್ಲಿ ಆದಾಯ ಉತ್ಪಾದನಾ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ ಕಾರ್ಯಕ್ರಮ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ಕೈಗೊಂಡ ತರಬೇತಿ ಚಟುವಟಿಕೆಗಳ ಪರಿಣಾಮಕಾರಿತ್ವವನ್ನು ಪರಿಶೀಲಿಸುವುದು ಮತ್ತು ಸಿಂಧುತ್ವೀಕರಿಸುವುದು.
4. ಫಲಾನುಭವಿ ಕುಟುಂಬಗಳ ಜೀವನೋಪಾಯ ಮತ್ತು ಆದಾಯ ಸ್ಥಿತಿಯ ಮೇಲೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಪ್ರಭಾವವನ್ನು ನಿರ್ಣಯಿಸುವುದು.
5. ಕಳೆದ 3 ವರ್ಷಗಳಲ್ಲಿ ಕೈಗೊಂಡ ಸ್ವಯಂ ಉದ್ಯೋಗ ಮತ್ತು ವೇತನ ಉದ್ಯೋಗ ಉಪಕ್ರಮಗಳ ಸುಸ್ಥಿರತೆಯನ್ನು ಮೌಲ್ಯಮಾಪನ ಮಾಡುವುದು.
6. ಬ್ಯಾಂಕ್ ಸಂಪರ್ಕವನ್ನು ಪಡೆಯುವಲ್ಲಿನ ಅಡಚಣೆಗಳನ್ನು ನಿರ್ಣಯಿಸುವುದು ಮತ್ತು ಪಡೆದ ಬ್ಯಾಂಕ್ ಸಾಲದ ಸಾಲ ಮರುಪಾವತಿ ಸ್ಥಿತಿಯನ್ನು ಅಧ್ಯಯನ ಮಾಡುವುದು.
7. ತರಬೇತಿ ಪಡೆದ ಯುವಕರಿಗೆ ಸೃಷ್ಟಿಸಲಾದ ಉದ್ಯೋಗಾವಕಾಶಗಳು ಮತ್ತು ಉದ್ಯೋಗ ನಿಯೋಜನೆಗಳನ್ನು ಪರಿಶೀಲಿಸುವುದು.
8. ಅನುಷ್ಠಾನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸಲು (ಸಮುದಾಯ ಮಟ್ಟದ ಅಡಚಣೆಗಳು ಮತ್ತು ಯುವಜನ ಸಂಬಂಧಿತ ಸಮಸ್ಯೆಗಳು), ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳ ಪಾತ್ರ ಮತ್ತು ಉಪಯೋಗದ ತಿಳಿಯುವುದು. ಯೋಜನೆಯ ಕಾರ್ಯಸಾಧ್ಯತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಸುಧಾರಣೆಗೆ ಕ್ರಮಗಳನ್ನು ಸೂಚಿಸಲು ಇಲಾಖೆಯಿಂದ ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಕಾರ್ಯಕ್ರಮ ಅನುಷ್ಠಾನ ನಿಯೋಗಗಳ ಆಯ್ಕೆ, ತರಬೇತಿ, ಬೆಂಬಲ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವುದು.

## 6.2 ಮೌಲ್ಯಮಾಪನ ಪ್ರಶ್ನೆಗಳು:

1. ಕಾರ್ಮಿಕ ಮಾರುಕಟ್ಟೆಯಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆ ಮೂಲಕ ಸರ್ಕಾರದ ಹಸ್ತಕ್ಷೇಪದ ಅಗತ್ಯವೇನು? ಹಿಂದಿನ ಇದೇ ರೀತಿಯ ಉದ್ಯೋಗ ಕಾರ್ಯಕ್ರಮಗಳಿಗಿಂತ ಇದು ಹೇಗೆ ಭಿನ್ನವಾಗಿದೆ?
2. ಹಿಂದಿನ ಸ್ವಯಂ ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮಗಳಿಂದ ಪಡೆದ ಅನುಭವ ವೇನು? ಕ್ಷೇತ್ರದಲ್ಲಿ ಸಾಹಿತ್ಯದ ಅವಲೋಕನವನ್ನು ಒದಗಿಸಿ.
3. ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಬಗ್ಗೆ ಫಲಾನುಭವಿಗಳ ಜಾಗೃತಿ ಮಟ್ಟವೇನು? ಇದು ಜಿಲ್ಲೆಗಳು/ ಪ್ರದೇಶಗಳಾದ್ಯಂತ ಭಿನ್ನವಾಗಿದೆಯೇ?
4. ಸ್ವಯಂ ಉದ್ಯೋಗಕ್ಕೆ ದಾಖಲಾಗಿರುವ ಯುವಕರ ಸಂಖ್ಯೆ ಏನು?
5. ಕೌಶಲ್ಯ ಅಭಿವೃದ್ಧಿ ಮತ್ತು ನಿಯೋಜನೆಗಾಗಿ ದಾಖಲಾದ ಯುವಕರ ಸಂಖ್ಯೆ ಏನು? ಕಡಿಮೆ ನಿಯೋಜನೆಗೆ ಕಾರಣಗಳು ಯಾವುವು?
6. ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ಸ್ವಯಂ ಉದ್ಯೋಗದ ಪ್ರವೃತ್ತಿ ಏನು? ಇದು ಪ್ರದೇಶಗಳಾದ್ಯಂತ ಭಿನ್ನವಾಗಿದೆಯೇ?
7. ಯೋಜನೆಯನ್ನು ಅನುಷ್ಠಾನಗೊಳಿಸುವ ಮೊದಲು ಮತ್ತು ನಂತರ ಫಲಾನುಭವಿ ಯುವಕರು ನಡೆಸುವ ಆದಾಯ ಉತ್ಪಾದನಾ ಚಟುವಟಿಕೆಗಳಲ್ಲಿ ಯಾವುದೇ ಬದಲಾವಣೆ ಇದೆಯೇ?
8. ತರಬೇತಿ ಮತ್ತು ನಿಯೋಜನೆಗಳಿಗಾಗಿ ದಾಖಲಾತಿಯಲ್ಲಿ ಮಾರ್ಗಸೂಚಿಗಳನ್ನು ಸೂಕ್ತವಾಗಿ ಅನುಸರಿಸಲಾಗಿದೆಯೇ, ಪ್ರದೇಶಗಳಾದ್ಯಂತ ಯಾವುದೇ ವಿಚಲನೆಗಳನ್ನು ಗಮನಿಸಲಾಗಿದೆಯೇ?
9. ಕೌಶಲ್ಯ ತರಬೇತಿ ಚಟುವಟಿಕೆಗಳ ಪರಿಣಾಮಕಾರಿತ್ವವೇನು, ಉದ್ಯೋಗ ಮಾರುಕಟ್ಟೆ / ಅವಕಾಶಗಳು ಮತ್ತು ನಿಯೋಜನೆ, ಸಮುದಾಯ / ವೈಯಕ್ತಿಕ ಸ್ವೀಕಾರಾರ್ಹತೆ / ಆದ್ಯತೆಗಳು ಮತ್ತು ಆದಾಯ ಉತ್ಪಾದನೆಗೆ ಸರಿಹೊಂದುವ ಪ್ರಾದೇಶಿಕ / ಭೌಗೋಳಿಕ ಸೂಕ್ತತೆ ಏನು?
10. ವಿವಿಧ ಜಿಲ್ಲೆಗಳಲ್ಲಿ ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಯೋಜನೆ ಅನುಷ್ಠಾನ ನಿಯೋಗಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ? ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನ ಪಾಲುದಾರರು ಇಲ್ಲದಿರುವುದಕ್ಕೆ ಕಾರಣಗಳೇನಿರಬಹುದು?
11. ತರಬೇತಿ ಪಠ್ಯಕ್ರಮ ಚಟುವಟಿಕೆಗಳು ಮತ್ತು ಪ್ರಮಾಣೀಕರಣದ ಮಾನ್ಯತೆ ಮತ್ತು ಸಿಂಧುತ್ವೀಕರಣದ ವಿಧಾನಗಳು ಯಾವುವು?
12. ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಉಸ್ತುವಾರಿ ಕಾರ್ಯವಿಧಾನವು ಸಮರ್ಪಕವಾಗಿದೆಯೇ ಮತ್ತು ಪರಿಣಾಮಕಾರಿಯಾಗಿದೆಯೇ?
13. ಈ ಪ್ರದೇಶದಲ್ಲಿ ಇದೇ ರೀತಿಯ ಇತರೆ ಯೋಜನೆಗಳ ಪ್ರಭಾವವನ್ನು ಪರಿಶೀಲಿಸಿ. ಯಾವುದೇ ಒಂದರ ಮೇಲೊಂದರ ಅತಿಕ್ರಮಣ ಪರಿಣಾಮವಿದೆಯೇ?
14. ಸ್ವಯಂ ಉದ್ಯೋಗದ ಅಡಿಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಬ್ಯಾಂಕ್ ಸಾಲವು ಸಾಕಾಗುತ್ತದೆಯೇ? ಹಾಗಾದರೆ, ಸಂಪನ್ಮೂಲ ಅಂತರವನ್ನು ಹೇಗೆ ನಿರ್ವಹಿಸಲಾಗುತ್ತದೆ?

15. ಸ್ವಯಂ ಉದ್ಯೋಗ ಮತ್ತು ಮರುಪಾವತಿ ಮಾದರಿಯ ಅಡಿಯಲ್ಲಿ ದಾಖಲಾದ ಅಭ್ಯರ್ಥಿಗಳಿಗೆ ಸಾಲದ ವಿಳಂಬಕ್ಕೆ ಕಾರಣಗಳನ್ನು ಪರಿಶೀಲಿಸಿ.
16 ರಾಜೀವ್ ಗಾಂಧಿ ಚೈತನ್ಯ ಯೋಜನೆ ತರಬೇತಿ ಯೋಜನೆಯಡಿ ಮಧ್ಯೆ ಬಿಟ್ಟು ಹೋದವರು ಇದ್ದಾರೆಯೇ, ಮತ್ತು ಅದಕ್ಕೆ ಕಾರಣಗಳೇನು?
17. ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಯುವಕರ ವಲಸೆಯನ್ನು ಕಡಿಮೆ ಮಾಡುವುದು ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆ. ಅಧ್ಯಯನ ಪ್ರದೇಶದಲ್ಲಿ ಯೋಜನೆಯ ಅನುಷ್ಠಾನದ ಮೊದಲು ಮತ್ತು ನಂತರ ಯುವಕರ ವಲಸೆಯನ್ನು ಹೋಲಿಸಿ.
18. ಅನುಷ್ಠಾನ ಪಾಲುದಾರರು ಗುಣಮಟ್ಟದ ತರಬೇತಿಯನ್ನು ನೀಡಲು ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಮೂಲಸೌಕರ್ಯ ಮತ್ತು ತರಬೇತಿ ಮಾಡ್ಯೂಲ್‌ಗಳನ್ನು ಹೊಂದಿದ್ದಾರೆಯೇ? ಅಸ್ತಿತ್ವದಲ್ಲಿರುವ ಅಂತರಗಳು, ಮತ್ತು ಮಾಡಿದ ಹೊಂದಾಣಿಕೆಗಳು ಯಾವುವು?
19. ಅನುಷ್ಠಾನ ಪಾಲುದಾರರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು ಯಾವುವು?
20. ನಿಯೋಜನೆ ಕೈಗಾರಿಕೆಗಳು/ ಸಂಸ್ಥೆಗಳೊಂದಿಗೆ ಸಂಪರ್ಕ ಹೇಗಿದೆ?
21. ಯೋಜನೆಯನ್ನು ಮುಂದುವರಿಸಬೇಕೇ? ಇಲ್ಲದಿದ್ದರೆ, ಏಕೆ ಮಾಡಬಾರದು? ಹೌದಾದರೆ, ಯಾವ ಬದಲಾವಣೆಗಳೊಂದಿಗೆ?

-------------

# 7. ಮೌಲ್ಯಮಾಪನ ವಿಧಾನ

ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮವನ್ನು ಸ್ವಯಂ ಉದ್ಯೋಗ ಮತ್ತು ಕೌಶಲ್ಯ ತರಬೇತಿ ಮತ್ತು ನಿಯೋಜನೆ ಎಂಬ ಎರಡು ವಿಭಿನ್ನ ಯೋಜನೆಗಳ ಅಡಿಯಲ್ಲಿ ಜಾರಿಗೆ ತರುವುದರಿಂದ ಫಲಾನುಭವಿಗಳ ಆಯ್ಕೆ ಮಾನದಂಡಗಳನ್ನು ಪ್ರತ್ಯೇಕವಾಗಿ ನಡೆಸಲಾಯಿತು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಮೌಲ್ಯಮಾಪನಕ್ಕಾಗಿ ಎರಡು ಉಪ–ಮಾದರಿಗಳು ಇದ್ದವು ಮತ್ತು ಸಂಗ್ರಹಿಸಿದ ದತ್ತಾಂಶವನ್ನು ವಿಶ್ಲೇಷಿಸಲಾಯಿತು ಮತ್ತು ಸ್ವತಂತ್ರವಾಗಿ ವ್ಯಾಖ್ಯಾನಿಸಲಾಯಿತು.

## 7.1 ಮೌಲ್ಯಮಾಪನ ವಿನ್ಯಾಸ

ಈ ಮೌಲ್ಯಮಾಪನ ಅಧ್ಯಯನವು, ಗುಣಾತ್ಮಕ ಮತ್ತು ಪರಿಮಾಣಾತ್ಮಕ ದತ್ತಾಂಶ ಎರಡನ್ನೂ ಸಮತೋಲನಗೊಳಿಸುವ ತ್ರಿಕೋನ ವಿಧಾನವನ್ನು (ಮಿಶ್ರ ವಿಧಾನ) ಬಳಸಿಕೊಂಡು ನೈದಾನಿಕ ಸಂಶೋಧನಾ ವಿನ್ಯಾಸವನ್ನು ಒಳಗೊಂಡ ಅರೆ–ಪ್ರಾಯೋಗಿಕ ವಿಧಾನ ವಿನ್ಯಾಸವನ್ನು ಅನುಸರಿಸಲಾಗಿದೆ. ಅಧ್ಯಯನವು ಯಾವುದೇ ನಿರ್ದಿಷ್ಟ ಯಾದೃಚ್ಛಿಕ ನಿಯಂತ್ರಣ ಸಮಷ್ಟಿಯಿಲ್ಲದೆ ನಿಯಮಿತ ಸಮಷ್ಟಿಯ ಮೇಲೆ ಕಾರ್ಯಕ್ರಮದ ಪ್ರಭಾವವನ್ನು ಮೌಲ್ಯಮಾಪನ ಮಾಡುವುದರಿಂದ ಇದನ್ನು ಅರೆ–ಪ್ರಾಯೋಗಿಕ ಎನ್ನಲಾಗುತ್ತದೆ. ಆದರೂ ಹೋಲಿಕೆಗಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದ ಒಂದು ಸಣ್ಣ ಗುಂಪನ್ನು ನಿಯಂತ್ರಿತ ಗುಂಪೆಂದು ಆಯ್ಕೆ ಮಾಡಿಕೊಂಡು ಅವರೊಡನೆ ಸಂದರ್ಶನ ನಡೆಸಿ, ರಾಜೀವ್ ಗಾಂಧಿ ಚೈತನ್ಯ ಯೋಜನೆ ವ್ಯಾಪ್ತಿಗೆ ಒಳಪಡದಿರುವವರ ದೃಷ್ಟಿಕೋನ ಹೇಗಿರುತ್ತದೆ ಎಂಬುದನ್ನು ಗ್ರಹಿಸುವ ಪ್ರಯತ್ನ ಮಾಡಲಾಯಿತು. ಗ್ರಾಮೀಣ ನಿರುದ್ಯೋಗ, ಉದ್ಯಮಶೀಲತೆಯ ಅನುಪಸ್ಥಿತಿ ಮತ್ತು ಅಥವಾ ಸ್ವಯಂ ಉದ್ಯೋಗ, ಕೌಶಲ್ಯಗಳನ್ನು ಪಡೆಯಲು ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ಉದ್ಯೋಗವನ್ನು ಹುಡುಕಲು ಇರುವ ಮಿತಿಗಳು ಮತ್ತು ಗ್ರಾಮೀಣ–ನಗರ ವಲಸೆಗೆ ಕಾರಣವಾಗುವ ತಳ್ಳುವ ಅಂಶಗಳಿಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಕಾರಣಗಳನ್ನು ಗುರುತಿಸಿ ಪರಿಹರಿಸುವ ಪ್ರಯತ್ನದಲ್ಲಿ ಈ ಅಧ್ಯಯನದ ವೈಧಾನಿಕ ಗುಣಲಕ್ಷಣವು ಪ್ರತಿಫಲಿಸುತ್ತದೆ. ಈ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಈ ಯೋಜನೆಯು ಪರಿಹರಿಸಲು ಉದ್ದೇಶಿಸಿರುವ ಸಮಸ್ಯೆಗಳೇ ಆಗಿವೆ. ಅಂತಿಮವಾಗಿ ಅಧ್ಯಯನವು ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶದ ವಿಶ್ಲೇಷಣೆಯನ್ನು ಒಳಗೊಂಡಿದ್ದು ದತ್ತಾಂಶ ಸಂಗ್ರಹಣೆಗೆ ಗುಣಾತ್ಮಕ ಮತ್ತು ಪರಿಮಾಣಾತ್ಮಕ ತಂತ್ರಗಳ ಸಂಯೋಜನೆಯನ್ನು ಬಳಸಿಕೊಂಡಿರುವ ವಿಧಾನಾತ್ಮಕ ತ್ರಿಕೋನ ಉಪಕ್ರಮವನ್ನು ಅನುಸರಿಸಲಾಗಿದೆ. ಅಧ್ಯಯನವು ಈ ಕೆಳಗಿನ ಹಂತಗಳನ್ನು ಒಳಗೊಂಡ ಪ್ರಮಾಣಿತ ಕಾರ್ಯವಿಧಾನಗಳನ್ನು ಅನುಸರಿಸಿದೆ.

- ಕ್ಷೇತ್ರದಲ್ಲಿ ಲಭ್ಯವಿರುವ ಸಾಹಿತ್ಯದ ಅವಲೋಕನ.
- ವಿವಿಧ ವರದಿಗಳು ಮತ್ತು ಸಮೀಕ್ಷೆಗಳಿಂದ ಲಭ್ಯವಿರುವ ದ್ವಿತೀಯ ದತ್ತಾಂಶದ ವಿಶ್ಲೇಷಣೆ.
- ಒಂದು ಸಂರಚಿತ ಸಂದರ್ಶನ ಅನುಸೂಚಿಯ ಮೂಲಕ ಪ್ರಾಥಮಿಕ ದತ್ತಾಂಶದ ಸಂಗ್ರಹಣೆ ಮತ್ತು ವಿಶ್ಲೇಷಣೆ
- ಕೇಂದ್ರೀಕೃತ ಗುಂಪು ಚರ್ಚೆಗಳು –ಫಲಾನುಭವಿಗಳು, ಬಳಕೆದಾರರು, ಸರ್ಕಾರಿ ಅಧಿಕಾರಿಗಳು.
- ದತ್ತಾಂಶ ಸಂಕಲನ ಮತ್ತು ಶೇಕಡಾದರ, ಸರಾಸರಿ, ಇತ್ಯಾದಿಗಳ ಹೋಲಿಕೆಗಳಂತಹ ಸರಳ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸುವ ಮೂಲಕ ದತ್ತಾಂಶದ ವಿಶ್ಲೇಷಣೆ

## 7.2 ಮಾದರಿ ಆಯ್ಕೆ ವಿನ್ಯಾಸ:

ಮಾದರಿ ಆಯ್ಕೆಗಾಗಿ ಈ ಕೆಳಗಿನ ಹಂತಗಳನ್ನು ಅಳವಡಿಸಿಕೊಳ್ಳಲಾಗಿದೆ:

ದತ್ತಾಂಶ ಸಂಗ್ರಹಣೆಯ ಗುಣಾತ್ಮಕ ಮತ್ತು ಪರಿಮಾಣಾತ್ಮಕ ತಂತ್ರಗಳ ಸಂಯೋಜನೆಯನ್ನು ಬಳಸಲಾಗಿದೆ৷

1ನೇ ಹಂತ – ರಾಜ್ಯದಲ್ಲಿ ನಾಲ್ಕು ಆಡಳಿತಾತ್ಮಕ ವಿಭಾಗಗಳ ಒಳಗೆ ಬರುವ ಜಿಲ್ಲೆಗಳ ಪಟ್ಟಿ ತಯಾರಿಸುವುದು.

2ನೇ ಹಂತ – ವಿಭಾಗದೊಳಗಿನ ಜಿಲ್ಲೆಗಳ ಆಯ್ಕೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಮತ್ತು ಕರ್ನಾಟಕ ಗ್ರಾಮೀಣ ಜೀವನೋಪಾಯ ಅಭಿಯಾನದಲ್ಲಿ ಲಭ್ಯವಿರುವ ವಾರ್ಷಿಕ ವರದಿಗಳಿಂದ ಸಂಗ್ರಹಿಸಲಾದ ದತ್ತಾಂಶವನ್ನು ಈ ಪ್ರತಿ ಎರಡು ಘಟಕಗಳಲ್ಲಿ (ಸ್ವಯಂ ಉದ್ಯೋಗ ಮತ್ತು ಕೌಶಲ್ಯ ತರಬೇತಿ) ಅವುಗಳ ಕಾರ್ಯಕ್ಷಮತೆಯನ್ನು ಗಮನಿಸಿ ಪ್ರತಿ ವಿಭಾಗದಲ್ಲಿ ಜಿಲ್ಲೆಗಳನ್ನು ಶ್ರೇಣೀಕರಿಸಲು ಬಳಸಲಾಯಿತು. ಇದರ ನಂತರ ಪ್ರತಿ ವಿಭಾಗದಲ್ಲಿ ಸ್ವಯಂ ಉದ್ಯೋಗ ಮತ್ತು ಕೌಶಲ್ಯ ತರಬೇತಿಗಾಗಿ ಗುರುತಿಸಲಾದ ಮತ್ತು ತರಬೇತಿ ಪಡೆದ ಯುವಕರ ಸಂಖ್ಯೆಗೆ ಸಂಬಂಧಿಸಿದಂತೆ ಅತ್ಯಂತ ಕಡಿಮೆ ಮತ್ತು ಅತ್ಯುನ್ನತ ಸಾಧನೆ ಹೊಂದಿರುವ ಒಂದೊಂದು ಜಿಲ್ಲೆಗಳನ್ನು ಮಾದರಿ ಜಿಲ್ಲೆಗಳು ಎಂದು ಪರಿಗಣಿಸಲಾಯಿತು

3ನೇ ಹಂತ – ಜಿಲ್ಲಾ ಮಟ್ಟದಲ್ಲಿ, ಮಾದರಿ ಜಿಲ್ಲೆಗಳಿಂದ ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಯೋಜನಾ ಅನುಷ್ಠಾನ ನಿಯೋಗಗಳು ಒದಗಿಸಿದ ಫಲಾನುಭವಿಗಳ ಪಟ್ಟಿಯಿಂದ ಫಲಾನುಭವಿಗಳು ಮತ್ತು ಫಲಾನುಭವಿಗಳಲ್ಲದವರನ್ನು (ನಿಯಂತ್ರಿತ ಗುಂಪು) ಯಾದೃಚ್ಛಿಕವಾಗಿ (ವ್ಯವಸ್ಥಿತ ಯಾದೃಚ್ಛಿಕ ಮಾದರಿ) ಆಯ್ಕೆ ಮಾಡಲಾಯಿತು.

## 7.3 ಮಾದರಿ ಆಯ್ಕೆ ಪ್ರಕ್ರಿಯೆ:

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು, ಅಲ್ಪಸಂಖ್ಯಾತರು, ದೈಹಿಕ ಅಂಗವಿಕಲರು, ಮಹಿಳಾ ಫಲಾನುಭವಿಗಳ ಸಮರ್ಪಕ ಪ್ರಾತಿನಿಧ್ಯವಿದೆ ಎಂದು ಖಚಿತಪಡಿಸಿಕೊಳ್ಳಲು ಮಾದರಿಗಳ ಆಯ್ಕೆಯಲ್ಲಿ ಗಾತ್ರಕ್ಕೆ ಅನುಗುಣವಾಗಿ ಅನುಪಾತೀಯ ಸಂಭವನೀಯತೆ (ಪಿಪಿಎಸ್) ಮಾದರಿ ಆಯ್ಕೆ ತಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮಾದರಿಗಳಲ್ಲಿ ಒಂದು ಪ್ರತಿಶತಕ್ಕೆ ಸಮನಾಗಿ ಫಲಾನುಭವಿಗಳಲ್ಲದವರನ್ನು ನಿಯಂತ್ರಿತ ಗುಂಪಾಗಿ ಆಯ್ಕೆ ಮಾಡಲಾಯಿತು. ಈ ನಿಯಂತ್ರಿತ ಗುಂಪನ್ನು ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳಿಂದ ನೋಂದಾಯಿಸಿಕೊಂಡಿರುವ ಆದರೆ ಕಾರ್ಯಕ್ರಮದ ಮುಂದಿನ ಹಂತಕ್ಕೆ ಮುಂದುವರಿಯಲಾದವರ ಪಟ್ಟಿಗಳ ಆಧಾರದ ಮೇಲೆ ಆಯ್ಕೆ ಮಾಡಲಾಯಿತು. ಅಳವಡಿಸಿಕೊಳ್ಳಲಾದ ಮಾದರಿ ಆಯ್ಕೆ ಪ್ರಕ್ರಿಯೆಯ ಮತ್ತು ಆಯ್ಕೆ ಮಾಡಿದ ಅಂತಿಮ ಮಾದರಿಯ ವಿವರಗಳನ್ನು ಕೋಷ್ಟಕ 7.1 ರಿಂದ 7.4 ಪ್ರಸ್ತುತಪಡಿಸುತ್ತವೆ.

**ಕೋಷ್ಟಕ ಸಂಖ್ಯೆ 7.1: ಉಲ್ಲೇಖದ ನಿಯಮಗಳ ಪ್ರಕಾರ ಪಡೆದ ಮಾದರಿ ಮಾರ್ಗಸೂಚಿಗಳು ಮತ್ತು ಜಿಲ್ಲೆಗಳು ಹಾಗೂ ಫಲಾನುಭವಿಗಳ ಆಯ್ಕೆ: ಸ್ವಯಂ ಉದ್ಯೋಗ ಘಟಕ**

| ರಾಜ್ಯ | ವಿಭಾಗ | ಜಿಲ್ಲೆಗಳು | ಸ್ವಯಂ ಉದ್ಯೋಗಿ ಯುವಕರ ಸಂಖ್ಯೆ | ಮಾದರಿ |
|---|---|---|---|---|
| ಕರ್ನಾಟಕ | ಬೆಂಗಳೂರು | ಚಿತ್ರದುರ್ಗ (ಎಚ್ *) | 1867 | 276 |
| | | ಬೆಂಗಳೂರು ನಗರ (ಎಲ್*) | 637 | 94 |
| | ಬೆಳಗಾವಿ | ಬಾಗಲಕೋಟೆ (ಎಚ್) | 3646 | 540 |
| | | ಧಾರವಾಡ (ಎಲ್) | 812 | 120 |
| | ಗುಲ್ಬರ್ಗ | ಕಲಬುರಗಿ (ಎಚ್) | 3033 | 448 |
| | | ಯಾದಗಿರಿ (ಎಲ್) | 418 | 63 |
| | ಮೈಸೂರು | ಹಾಸನ (ಎಚ್) | 3250 | 481 |
| | | ಉಡುಪಿ (ಎಲ್) | 159 | 024 |
| | ಒಟ್ಟು | | 13822 | 2046 |

ಮೂಲ : ಉಲ್ಲೇಖದ ನಿಯಮಗಳು

ಸೂಚನೆ: ಎಚ್–ಅಧಿಕ; ಎಲ್– ಕಡಿಮೆ; ಅತಿ ಹೆಚ್ಚು ಮತ್ತು ಕಡಿಮೆ ಸಂಖ್ಯೆಯ ಸ್ವಯಂ ಉದ್ಯೋಗಿ ಯುವಕರು. 95 ಪ್ರತಿಶತ ವಿಶ್ವಾಸ ಮಟ್ಟದಲ್ಲಿ ಮಾದರಿ ಗಾತ್ರ ದೋಷದ ಮಿತಿ 2% = 2046 ಪಿಪಿಎಸ್ ವಿತರಣೆ

**ಕೋಷ್ಟಕ ಸಂಖ್ಯೆ 7.2 ಕೌಶಲ್ಯ ತರಬೇತಿ ಮತ್ತು ನಿಯೋಜನೆಗಾಗಿ ಮಾದರಿ ಆಯ್ಕೆ ಪ್ರಕ್ರಿಯೆ**

| ರಾಜ್ಯ | ವಿಭಾಗ | ಜಿಲ್ಲೆಗಳು | ಸ್ವಯಂ ಉದ್ಯೋಗಿ ಯುವಕರ ಸಂಖ್ಯೆ | ಮಾದರಿ |
|---|---|---|---|---|
| ಕರ್ನಾಟಕ | ಬೆಂಗಳೂರು | ತುಮಕೂರು (ಎಚ್) | 1102 | 439 |
| | | ಬೆಂಗಳೂರು ನಗರ (ಎಲ್) | 2496 | 100 |
| | ಬೆಳಗಾವಿ | ಬೆಳಗಾವಿ (ಎಚ್) | 16804 | 670 |
| | | ಧಾರವಾಡ (ಎಲ್) | 4296 | 172 |
| | ಗುಲ್ಬರ್ಗ | ಕಲಬುರಗಿ (ಎಚ್) | 6164 | 245 |
| | | ರಾಯಚೂರು (ಎಲ್) | 4722 | 188 |
| | ಮೈಸೂರು | ಮಂಡ್ಯ (ಎಚ್) | 10362 | 413 |
| | | ಕೊಡಗು (ಎಲ್) | 1944 | 078 |
| | ಒಟ್ಟು | | 47890 | 2305 |

ಮೂಲ: ಉಲ್ಲೇಖದ ನಿಯಮಗಳು

ಸೂಚನೆ: ಎಚ್–ಅಧಿಕ; ಎಲ್–ಕಡಿಮೆ; ಅತಿ ಹೆಚ್ಚು ಸಂಖ್ಯೆಯ ಮತ್ತು ಕಡಿಮೆ ಸಂಖ್ಯೆಯ ತರಬೇತಿ ಪಡೆದ ಯುವಕರು 95 ಪ್ರತಿಶತ ವಿಶ್ವಾಸಮಟ್ಟದಲ್ಲಿ ಮಾದರಿ ಗಾತ್ರ ದೋಷದ ಮಿತಿ 2%:2305 ಪಿಪಿಎಸ್ ವಿತರಣೆ– ತಾಲ್ಲೂಕುಗಳಾದ್ಯಂತ ಮತ್ತು ಅದಕ್ಕಿಂತ ಕಡಿಮೆ ಮಟ್ಟದಲ್ಲಿ.

**ಕೋಷ್ಟಕ ಸಂಖ್ಯೆ.7.3: ಪರಿಮಾಣಾತ್ಮಕ ದತ್ತಾಂಶಕ್ಕಾಗಿ ಮಾದರಿ:**

| ಕ್ರಮ ಸಂಖ್ಯೆ | ವಿಧಗಳು | ಫಲಾನುಭವಿಗಳು | ಮಾದರಿ ಗಾತ್ರ | ನಿಯಂತ್ರಿತಗುಂಪು |
|---|---|---|---|---|
| 1. | ಸ್ವಯಂ ಉದ್ಯೋಗ | 13822 | 2046 | 21 |
| 2. | ಕೌಶಲ್ಯ ತರಬೇತಿ ಮತ್ತು ನಿಯೋಜನೆ | 57800 | 2305 | 23 |
| | ಒಟ್ಟು | 71622 | 4351 | 44 |
| (ವಿಶ್ವಾಸದ ಮಟ್ಟವು 95% ಮತ್ತು ದೋಷದ ಅಂಚು 2%) | | | | |

ಮೂಲ: ಉಲ್ಲೇಖದ ನಿಯಮಗಳು

**ಕೋಷ್ಟಕ ಸಂಖ್ಯೆ.7.4: ಗುಣಾತ್ಮಕ ದತ್ತಾಂಶ**

| | |
|---|---|
| ಸ್ವಯಂ ಉದ್ಯೋಗಕ್ಕಾಗಿ ಒಟ್ಟು 64 ಕೇಂದ್ರೀಕೃತ ಗುಂಪು ಚರ್ಚೆಗಳು (4 ಕೇಂದ್ರೀಕೃತ ಗುಂಪು ಚರ್ಚೆಗಳು/ಜಿಲ್ಲೆ) ಮತ್ತು ಕೌಶಲ್ಯ ಅಭಿವೃದ್ಧಿಗಾಗಿ (4 ಕೇಂದ್ರೀಕೃತ ಗುಂಪು ಚರ್ಚೆಗಳು /ಜಿಲ್ಲೆ) | • ಕೇಂದ್ರೀಕೃತ ಗುಂಪು ಸಂದರ್ಶನಗಳು ಒಳಗೊಂಡಿರುವ ಅಂಶಗಳು<br>• ಫಲಾನುಭವಿಗಳು ಮತ್ತು ಫಲಾನುಭವಿಗಳಲ್ಲದವರ ಒಂದೊಂದು ಗುಂಪು<br>• ತರಬೇತಿ ಪಾಲುದಾರರೊಂದಿಗೆ 1<br>• ಜಿಲ್ಲಾ ಅಧಿಕಾರಿಗಳೊಂದಿಗೆ 1 |
| ಕೈಗೊಂಡ ಆಳವಾದ ಸಂದರ್ಶನಗಳು | ಫಲಾನುಭವಿಗಳು, ಬಳಕೆದಾರರು, ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಪಂಚಾಯಿತಿ, ಬ್ಯಾಂಕ್‌ಅಧಿಕಾರಿಗಳನ್ನು ಒಳಗೊಂಡಂತೆ |

ಮೂಲ: ಉಲ್ಲೇಖದ ನಿಯಮಗಳು

---------------

# 8. ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆಯ ಸಾಧನಗಳು

ವಿಶ್ಲೇಷಣಾ ಉದ್ದೇಶಗಳಿಗಾಗಿ ತುಲನಾತ್ಮಕ ಕೋಷ್ಟಕಗಳನ್ನು ರಚಿಸಲು ಹೀಗೆ ಸಂಗ್ರಹಿಸಿದ ದತ್ತಾಂಶವನ್ನು ಎಸ್‌ಪಿಎಸ್‌ಎಸ್‌ನ ಸಂಖ್ಯಾಶಾಸ್ತ್ರೀಯ ತಂತ್ರಾಂಶಕ್ಕೆ ಒದಗಿಸಲಾಗಿದೆ. ದತ್ತಾಂಶ ವಿಶ್ಲೇಷಣೆಯಲ್ಲಿ ಹಲವೆಡೆ ಪ್ರಕರಣ ಅಧ್ಯಯನಗಳನ್ನು ಬಳಸಲಾಗಿದೆ ಮತ್ತು ನಿಯಂತ್ರಿತ ಗುಂಪಿನಿಂದ ಸಂಗ್ರಹಿಸಿದ ದತ್ತಾಂಶ ಬಳಸಿಕೊಂಡು ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಅಂತೆಯೇ, ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ಆಳವಾದ ಸಂದರ್ಶನಗಳ ಮೂಲಕ ಸಂಗ್ರಹಿಸಿದ ಶ್ರೀಮಂತ ದತ್ತಾಂಶವನ್ನು ಗುರುತಿಸಿದ ಒಂದು ಅಂಶವನ್ನು ವಿಸ್ತಾರವಾಗಿ ಹೇಳಲು ಅಥವಾ ಕಾರ್ಯಕ್ರಮದ ಪ್ರಭಾವಗಳ ಸೂಚಕವಾಗಿ ಬಳಸಿಕೊಳ್ಳಲಾಗಿದೆ.

## 8.1 ಅಧ್ಯಯನದ ಕೆಲವು ಮಿತಿಗಳು:

ಮುಂದಿನ ಮೌಲ್ಯಮಾಪನಕ್ಕೆ ಶೈಕ್ಷಣಿಕ ಕಾರಣಗಳಾಗಿ ವಿಧಾನಾತ್ಮಕ ಪ್ರಾಮುಖ್ಯತೆಯುಳ್ಳ ಕೆಲವು ಅಂಶಗಳಿಗೆ ಗಮನ ನೀಡಬೇಕು. ಮೊದಲನೆಯದಾಗಿ, ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ತರಬೇತಿ ಪಡೆದ ಫಲಾನುಭವಿಗಳ ಪಟ್ಟಿಯನ್ನು ನಮಗೆ ನೀಡಿದ್ದರೂ ಸಹ, ನಮ್ಮ ಅಧ್ಯಯನದ ಉದ್ದೇಶಗಳಿಗಾಗಿ ಅವರನ್ನು ಪತ್ತೆ ಹಚ್ಚುವಲ್ಲಿ ನಮ್ಮ ಹೆಚ್ಚಿನ ಸಮಯ ಕಳೆದುಹೋಗಿದೆ. ಸ್ವಯಂ ಉದ್ಯೋಗ ಘಟಕದ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಇದು ನಮಗೆ ಸಮಸ್ಯೆಯೆಂದು ಇನ್ನಷ್ಟು ಸ್ಪಷ್ಟವಾಗಿದೆ ಏಕೆಂದರೆ ಹೆಚ್ಚಿನವರು ಸಾಲಗಳನ್ನು ಒಳಗೊಂಡಿರುವುದರಿಂದ ನಮಗೆ ತಪ್ಪು ದಾರಿಗೆಳೆಯುವ ವಿಳಾಸಗಳನ್ನು ನೀಡುವ ಮೂಲಕ ನಮ್ಮಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ನಮ್ಮ ಕ್ಷೇತ್ರ ಮೌಲ್ಯಮಾಪನಕಾರರನ್ನು ತಮ್ಮ ಸ್ವಯಂ–ಉದ್ಯೋಗ ಉದ್ಯಮಗಳನ್ನು ಪ್ರಾರಂಭಿಸಲು ಹಣವನ್ನು ಸಾಲ ನೀಡಿದ ವಾಣಿಜ್ಯ ಬ್ಯಾಂಕುಗಳ ಪ್ರತಿನಿಧಿಗಳು ಎಂದು ತಪ್ಪಾಗಿ ಗ್ರಹಿಸಿಕೊಂಡಿದ್ದಾರೆ. ಅನೇಕ ಸ್ಥಳಗಳಲ್ಲಿ ನಮ್ಮ ದತ್ತಾಂಶ ಸಂಗ್ರಹಣೆಯ ಸಮಯದಲ್ಲಿ ರಾಜ್ಯ ಸರ್ಕಾರದ ನೀತಿಯಾಗಿ ಸಾಲ ಮನ್ನಾ ಮಾಡುವ ಬಗ್ಗೆ ಗೊಂದಲ ಉಂಟಾಗಿದ್ದರಿಂದ ಸಾಲ ಮರುಪಾವತಿ ಬಗ್ಗೆ ನಮ್ಮನ್ನು ಮೌಖಿಕ ವಾದಗಳಿಗೆ ಎಳೆಯಲಾಯಿತು. ಕನಿಷ್ಠ ಎರಡು ಸ್ಥಳಗಳಲ್ಲಿ ನಮ್ಮ ಕ್ಷೇತ್ರ ಮೌಲ್ಯಮಾಪನಕಾರರ ಭೇಟಿಗೆ ಕೆಲವೇ ದಿನಗಳ ಮೊದಲು ಸಾಲ ಮತ್ತು ಬಡ್ಡಿಗಳನ್ನು ಮರುಪಾವತಿಸಲು ಬ್ಯಾಂಕುಗಳಿಂದ ನೋಟಿಸ್‌ಗಳನ್ನು ಪಡೆದಿದ್ದ ವ್ಯಕ್ತಿಗಳ ಗುಂಪಿನಿಂದ ತಮ್ಮ ಮೇಲಿನ ಹಲ್ಲೆಯಿಂದ ಕ್ಷಣ ಮಾತ್ರದಲ್ಲಿ ಪಾರಾಗಿದ್ದಾರೆ.

ಎರಡನೆಯದಾಗಿ, ಫಲಾನುಭವಿಗಳ ವಿಳಾಸಗಳಲ್ಲಿ ನಿರೀಕ್ಷಿತ ಬದಲಾವಣೆಯು ಕಂಡುಬಂದಿದೆ ಮತ್ತು ಅವು ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳಿಂದ ಲಭ್ಯವಿರುವುದಕ್ಕಿಂತ ಭಿನ್ನವಾಗಿವೆ. ಉದ್ಯೋಗದ ಉದ್ದೇಶಗಳಿಗಾಗಿ ನಿಯೋಜನೆಯಲ್ಲಿ ಯಶಸ್ವಿಯಾದವರಲ್ಲಿ ಇದು ವಿಶೇಷವಾಗಿತ್ತು. ಕೆಲವು ಸಂದರ್ಭಗಳಲ್ಲಿ ಬೆಳಗಾವಿಯಲ್ಲಿರುವಂತೆ, ಯೋಜನೆ ಅನುಷ್ಠಾನ ನಿಯೋಗಗಳು ಫಲಾನುಭವಿಗಳನ್ನು ಮಹಾರಾಷ್ಟ್ರದಲ್ಲೂ ಉದ್ಯೋಗದಲ್ಲಿ ನಿಯೋಜಿಸಿದ ಕಾರಣ ನಾವು ನಮ್ಮ ಮಾದರಿಗಳನ್ನು ಕೊನೆಯ ಗಳಿಗೆಯಲ್ಲಿ ಬದಲಾಯಿಸಬೇಕಾಯಿತು.

ಮಹಿಳಾ ಫಲಾನುಭವಿಗಳನ್ನು, ಅದರಲ್ಲೂ ವಿಶೇಷವಾಗಿ ತರಬೇತಿ ಪಡೆದು ಉದ್ಯೋಗದಲ್ಲಿ ನಿಯೋಜನೆಗೊಂಡ ನಂತರ ಅಥವಾ ತಮ್ಮ ಮದುವೆಯನ್ನು ಅನುಸರಿಸಿ ಗಂಡಂದಿರೊಂದಿಗೆ ವಾಸಿಸಲು ವಲಸೆ ಹೋದವರನ್ನು ಪತ್ತೆ

ಹಚ್ಚುವುದು ಕಷ್ಟದ ಕೆಲಸವಾಗಿತ್ತು. ಕೆಲವೇ ಕೆಲವು ಸಂದರ್ಭಗಳಲ್ಲಿ, ಅಂತಹ ಮಹಿಳೆಯರ ಪರವಾಗಿ ಅವರ ಸಂಗಾತಿಯ ನಿವಾಸಗಳಲ್ಲಿ ಅವರನ್ನು ಸಂಪರ್ಕಿಸದಂತೆ ಅವರ ಹೆತ್ತವರು ಮನವಿ ಮಾಡಿದ್ದರು. ಸಮಾಜಕವಾಗಿ, ಕಾರ್ಯಕ್ರಮವು ಅವರ ಜೀವನೋಪಾಯದಲ್ಲಿ ಗಮನಾರ್ಹ ಬದಲಾವಣೆಯನ್ನು ತರುವಲ್ಲಿ ಹೆಚ್ಚು ಸಕಾರಾತ್ಮಕ ಕೊಡುಗೆಯನ್ನು ಹೊಂದಿರಬಹುದು. ಏಕೆಂದರೆ ಅದು ಉತ್ತಮ ಸಂಗಾತಿಯನ್ನು ಹುಡುಕಲು ಮತ್ತು ಮದುವೆ ವೆಚ್ಚವನ್ನು ಪೂರೈಸಲು ಅವರಿಗೆ ದಾರಿ ಮಾಡಿಕೊಡಬಹುದು. ಆದರೆ ನಮ್ಮ ಮೌಲ್ಯಮಾಪನ ಅಧ್ಯಯನದ ನಿರುಪದ್ರವ ಸ್ವಭಾವದಿಂದ ಪೋಷಕರಿಗೆ ನಾವು ಯಶಸ್ವಿಯಾಗಿ ಮನವರಿಕೆ ಮಾಡಿದರೂ ಸಹ, ದೂರದ ವಿಚಾರ ಮತ್ತು ಅವರು ವಾಸಿಸುತ್ತಿರುವ ಚದುರಿದ ಸ್ಥಳಗಳಿಂದ ಅವರನ್ನು ತಲುಪಲು ನಮಗೆ ಕಷ್ಟವಾಯಿತು.

ನಾವು ಎದುರಿಸಿದ ಅತ್ಯಂತ ನಿರ್ಣಾಯಕ ಮಿತಿಯೆಂದರೆ ಕೇಂದ್ರೀಕೃತ ಗುಂಪು ಚರ್ಚೆಗಳು ಅಥವಾ ಆಳವಾದ ಸಂದರ್ಶನಗಳಿಗಾಗಿ ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳ ಪ್ರತಿನಿಧಿಗಳು ಮತ್ತು ಸ್ಥಳೀಯ ಮಟ್ಟದ ಅಧಿಕಾರಿಗಳನ್ನು ಫಲಾನುಭವಿಗಳೊಂದಿಗೆ ಸಂಯೋಜಿಸಿರುವುದು. ಪರಸ್ಪರ ಸ್ವೀಕಾರಾರ್ಹ ಮತ್ತು ಅನುಕೂಲಕರ ಆಧಾರದ ಮೇಲೆ ಈ ವಿಭಿನ್ನ ವ್ಯಕ್ತಿಗಳ ಭಾಗವಹಿಸುವಿಕೆಯನ್ನು ಸಜ್ಜುಗೊಳಿಸುವ ಸವಾಲಿನ ಜೊತೆಗೆ ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ಆಳವಾದ ಸಂದರ್ಶನಗಳು ಮುಕ್ತ ಹಗೆತನವನ್ನು ವ್ಯಕ್ತಪಡಿಸುವ ಮತ್ತೊಂದು ವೇದಿಕೆಯಾದವು. ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳಿಗೆ ಅವರ ಸೇವೆಗಳಿಗೆ ಬಾಕಿ ಪಾವತಿಸದಿರುವುದು, ಸೇವೆಗಳನ್ನು ಸಲ್ಲಿಸುವಲ್ಲಿ ಕಂಡುಬರುವ ದೋಷಗಳು, ತರಬೇತಿ ಅವಧಿಗಳ ಸಂಖ್ಯೆಯ ದಾಖಲೆಗಳನ್ನು ಸುಳ್ಳು ಮಾಡುವ ಆರೋಪಗಳು ಇತ್ಯಾದಿಗಳು ವಿವಾದಗಳಾಗಿವೆ. ಅಧಿಕಾರಿಗಳು ಮತ್ತು ಸಂಬಂಧಪಟ್ಟ ನಿಯೋಗಗಳ ಪ್ರತಿನಿಧಿಗಳ ಕಾರಣದಿಂದಾಗಿ ಫಲಾನುಭವಿಗಳು ತಮಾಷೆಗೊಳಗಾಗಿದ್ದಾರೆ ಎಂದು ವ್ಯಕ್ತಪಡಿಸಿದ್ದಾರೆ. ಅಂತಹ ಕಷ್ಟಗಳು ಕಾರ್ಯಕ್ರಮದ ಅನುಷ್ಠಾನದ ಸ್ವರೂಪದ ಬಗ್ಗೆ ಮುಕ್ತ ಒಳನೋಟಗಳನ್ನು ವ್ಯಕ್ತಪಡಿಸಬಹುದಾದರೂ, ಮೌಲ್ಯಮಾಪಕರು ಅಂತಹ ಪರಿಸ್ಥಿತಿಯನ್ನು ನಿಭಾಯಿಸುವುದು ಕಷ್ಟಕರವಾಗಿರುತ್ತದೆ, ಆದರೆ ಅಪಾಯಕಾರಿಯಲ್ಲ.

____________

# 9. ಮೌಲ್ಯಮಾಪನ ಮಾತೃಕೆ

## 9.1 ಮೌಲ್ಯಮಾಪನ ಪೂರ್ವ ಮಾತೃಕೆ

| ಸಂಖ್ಯೆ.* | ಪ್ರಮುಖ ಮೌಲ್ಯಮಾಪನ ಪ್ರಶ್ನೆ | ನಿರ್ದಿಷ್ಟ ಉಪ–ಪ್ರಶ್ನೆ | ಸೂಚಕ / ಯಶಸ್ಸು / ಮಾನದಂಡಗಳು / ಕೆಪಿಐ | ದತ್ತಾಂಶ ಮೂಲಗಳು | ದತ್ತಾಂಶ ಸಂಗ್ರಹ ವಿಧಾನಗಳು / ವಿಶ್ಲೇಷಣಾತ್ಮಕ ಸಾಧನಗಳು | ವಿಶ್ಲೇಷಣಾತ್ಮಕ ವಿಧಾನ |
|---|---|---|---|---|---|---|
| ಮೌಲ್ಯಮಾಪನ ಮಾನದಂಡ | | | | | | |
| | 1 | 2 | 3 | 4 | 5 | 6 |
| ಪ್ರಸ್ತುತತೆ | | | | | | |
| ಕಾರ್ಯಕ್ರಮದ ಉದ್ದೇಶಗಳು ಮತ್ತು ವಾಸ್ತವ ಅವಶ್ಯಕತೆಗಳು | | | | | | |
| 3 | ತರಬೇತಿ ಚಟುವಟಿಕೆಗಳ ಪರಿಣಾಮಕಾರಿತ್ವ | ತರಬೇತಿ ನಂತರದ ಉದ್ಯೋಗ; ವ್ಯಾಪಾರ | ಪ್ರಸ್ತುತ ಉದ್ಯೋಗ; ಆದಾಯ ವ್ಯತ್ಯಾಸ | ಕ್ಷೇತ್ರ ಸಮೀಕ್ಷೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳು | ಪ್ರಶ್ನಾವಳಿಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆ ತಪಶೀಲು ಪಟ್ಟಿಗಳು | ಸರಳ ಸಹಸಂಬಂಧಗಳು ಮತ್ತು ತೀರ್ಮಾನಗಳು |
| ಪರಿಣಾಮಕಾರಿತ್ವ | | | | | | |
| ಭರಿತಗಳು ಮತ್ತು ಅನುಷ್ಠಾನದ ಪ್ರಕ್ರಿಯೆ | | | | | | |
| 4 | ರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ಫಲಾನುಭವಿಗಳ ಜಾಗೃತಿ ಮಟ್ಟ | ಹೇಗೆ ಅರಿವು ಬಂತು; ಕಾರ್ಯಕ್ರಮಕ್ಕಿಂತ ಮೊದಲು ತಿಳಿದಿತ್ತು | ಫಲಾನುಭವಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳು | ಕ್ಷೇತ್ರ ಸಮೀಕ್ಷೆ | ಪ್ರಶ್ನಾವಳಿಗಳು | ದತ್ತಾಂಶದಿಂದ ತೀರ್ಮಾನಗಳು |
| 5 | ಕೌಶಲ್ಯ ಅಭಿವೃದ್ಧಿ ಮತ್ತು ನಿಯೋಜನೆಗಾಗಿ ದಾಖಲಾದ ಯುವಕರ ಸಂಖ್ಯೆ, ಅವರ ಸಮರ್ಪಕತೆ ಮತ್ತು ಭದ್ರತೆ? ಕಡಿಮೆ ನಿಯೋಜನೆಗೆ ಕಾರಣಗಳು. | ಮಾದರಿ ಫಲಾನುಭವಿಗಳು | ವರದಿ ಮಾಡಿದ ಸಂಖ್ಯೆಗಳು | ಕ್ಷೇತ್ರ ಸಮೀಕ್ಷೆ | ಪ್ರಶ್ನಾವಳಿಗಳು | ಪುರಾವೆ ಆಧಾರಿತ ತೀರ್ಮಾನಗಳು |
| 6 | ಸ್ವಯಂ ಉದ್ಯೋಗದಲ್ಲಿ ಪ್ರವೃತ್ತಿ | ಮಾದರಿ ಫಲಾನುಭವಿಗಳು | ದತ್ತಾಂಶದಿಂದ ಬಹಿರಂಗಗೊಂಡ ಎ.ಎಸ್. | ಕ್ಷೇತ್ರ ಸಮೀಕ್ಷೆ | ಪ್ರಶ್ನಾವಳಿಗಳು | ಪುರಾವೆ ಆಧಾರಿತ ತೀರ್ಮಾನಗಳು |

| | 1 | 2 | 3 | 4 | 5 | 6 |
|---|---|---|---|---|---|---|
| 7 | ಕೌಶಲ್ಯ ತರಬೇತಿ ಚಟುವಟಿಕೆಗಳ ಪರಿಣಾಮಕಾರಿತ್ವ, ಪ್ರಾದೇಶಿಕ / ಭೌಗೋಳಿಕ ಸೂಕ್ತತೆ / ಹೊಂದಾಣಿಕೆ ಇದೆ ಅಥವಾ ಹೊಂದಾಣಿಕೆಯಿಲ್ಲ | ತರಬೇತಿ ಮತ್ತು ನಿಯೋಜನೆಯ ಹೊಂದಾಣಿಕೆ ಅಥವಾ ಹೊಂದಾಣಿಕೆಯಿಲ್ಲದ್ದು; ನಿಯೋಜನೆ ಇಲ್ಲದಿರುವುದು | ಪಡೆದ ತರಬೇತಿ ಮತ್ತು ಉದ್ಯೋಗದ ಸ್ವರೂಪ | ಕ್ಷೇತ್ರ ಸಮೀಕ್ಷೆ | ಪ್ರಶ್ನಾವಳಿಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆ ತಪಶೀಲು ಪಟ್ಟಿಗಳು | ಪುರಾವೆ ಆಧಾರಿತ ತೀರ್ಮಾನಗಳು |
| 8 | ಅನುಷ್ಠಾನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿಶ್ಲೇಷಿಸಿ | ಉದ್ಯೋಗ ನಿಯೋಗಗಳೊಂದಿಗೆ ಎಂಒಎ; ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆ | ವರದಿಯಾಗಿರುವಂತೆ | ಅಧಿಕಾರಿಗಳೊಂದಿಗೆ ಮತ್ತು ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳೊಂದಿಗೆ ಚರ್ಚೆ | ಅಧಿಕಾರಿಗಳು, ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಬ್ಯಾಂಕರ್‌ಗಳೊಂದಿಗೆ ಸಂದರ್ಶನಗಳು | ದತ್ತಾಂಶ ಮತ್ತು ಕೇಂದ್ರೀಕೃತ ಗುಂಪು ಚರ್ಚೆ ವಿಷಯ ವಿಶ್ಲೇಷಣೆ |
| ದಕ್ಷತೆ | | | | | | |
| ವೆಚ್ಚ ಪ್ರಯೋಜನ ವಿಶ್ಲೇಷಣೆ | | | | | | |
| 9 | ಹೊಸ ಕ್ರಮಗಳ ಅಗತ್ಯ ಮತ್ತು ಇದೇ ರೀತಿಯ ಇತರ ಕಾರ್ಯಕ್ರಮಗಳಿಗಿಂತ ಹೇಗೆ ಭಿನ್ನವಾಗಿದೆ | ಇತರ ಸ್ವಯಂ ಉದ್ಯೋಗ, ಕೌಶಲ್ಯ ತರಬೇತಿ ಮತ್ತು ಉದ್ಯೋಗ | ಕಾರ್ಯಕ್ರಮಗಳ ಲಕ್ಷಣ | ಸಾಹಿತ್ಯ | ವಿಷಯ ವಿಶ್ಲೇಷಣೆ | ಹೋಲಿಕೆಯಿಂದ ತೀರ್ಮಾನಗಳು |
| 10 | ಹಿಂದಿನ ಸ್ವಯಂ ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮಗಳಿಂದ ಪಡೆದ ಅನುಭವ | ಇತರ ಸ್ವಯಂ ಉದ್ಯೋಗ, ಕೌಶಲ್ಯ ತರಬೇತಿ ಮತ್ತು ಉದ್ಯೋಗ | ವರದಿಯಾಗಿರುವಂತೆ | ಸಾಹಿತ್ಯ ಮತ್ತು ಅಧಿಕಾರಿಗಳೊಂದಿಗೆ ಚರ್ಚೆಗಳು | | ತುಲನಾತ್ಮಕ ವಿಶ್ಲೇಷಣೆ |

| | 1 | 2 | 3 | 4 | 5 | 6 |
|---|---|---|---|---|---|---|
| ನಿಧಿ ಬಳಕೆ ಮತ್ತು ಸಾಮರ್ಥ್ಯ ವರ್ಧನೆ | | | | | | |
| 11 | ವಿವಿಧ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳ ಕಾರ್ಯ ನಿರ್ವಹಣೆ. ಕೆಲವು ಅನುಷ್ಠಾನ ಪಾಲುದಾರರನ್ನು ಹೊಂದಿರದಿರುವುದಕ್ಕೆ ಕಾರಣಗಳು | ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ಇಲ್ಲದ ಜಿಲ್ಲೆಗಳು | ಫಲಾನುಭವಿಗಳು ವರದಿ ಮಾಡಿರುವಂತೆ ಮತ್ತು ಗ್ರಹಿಸಿದಂತೆ | ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳ ಸಂದರ್ಶನಗಳು ಮತ್ತು ಅಧಿಕಾರಿಗಳೊಂದಿಗೆ ಚರ್ಚೆಗಳು | | ಪುರಾವೆ ಆಧಾರಿತ ತೀರ್ಮಾನಗಳು |
| 12 | ಉಸ್ತುವಾರಿ ಕಾರ್ಯವಿಧಾನದ ಸಮರ್ಪಕತೆ | | ಅಧಿಕಾರಿಗಳು ಮತ್ತು ಯೋಜನೆ ಅನುಷ್ಠಾನ ನಿಯೋಗಗಳ ಅಭಿಪ್ರಾಯಗಳು | ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳ ಸಂದರ್ಶನಗಳು ಮತ್ತು ಅಧಿಕಾರಿಗಳೊಂದಿಗೆ ಚರ್ಚೆಗಳು | | |
| ಹೊರಮೂಡಿದ ಬಾಹ್ಯಾಂಶಗಳು | | | | | | |
| 13 | ರಾಜೀವ್ ಗಾಂಧಿ ಚೈತನ್ಯ ಯೋಜನೆ ತರಬೇತಿ ಯೋಜನೆಯಡಿ ಮಧ್ಯದಲ್ಲಿ ಬಿಟ್ಟವರು ಮತ್ತು ಅದಕ್ಕೆ ಕಾರಣಗಳು ಯಾವುವು | | ವರದಿಯಾಗಿರುವಂತೆ | ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳ ಸಂದರ್ಶನಗಳು ಮತ್ತು ಅಧಿಕಾರಿಗಳೊಂದಿಗೆ ಚರ್ಚೆಗಳು | ಸಂದರ್ಶನ ಮಾರ್ಗದರ್ಶಿಗಳು ಮತ್ತು ತಪಶೀಲು ಪಟ್ಟಿಗಳು | ಕ್ಷೇತ್ರ ದತ್ತಾಂಶದಿಂದ ತೀರ್ಮಾನಗಳು |
| ಪ್ರಭಾವ | | | | | | |
| ತತ್‌ಕ್ಷಣದ ಫಲಿತಾಂಶಗಳು | | | | | | |
| 14 | ಜೀವನೋಪಾಯ ಮತ್ತು ಆದಾಯ ಸ್ಥಿತಿಗತಿಯ ಮೇಲೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಪ್ರಭಾವ | ನಿರೀಕ್ಷಿತ ಆದಾಯ; ಉದ್ಯೋಗ ನಂತರದ ಆದಾಯ | 2 ಮತ್ತು 3 ರಲ್ಲಿರುವಂತೆ | ಕ್ಷೇತ್ರ ಸಮೀಕ್ಷೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆ ಗಳು | ಪ್ರಶ್ನಾವಳಿಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ತಪಶೀಲು ಪಟ್ಟಿಗಳು | ಸಹಸಂಬಂಧಗಳು ಮತ್ತು ತೀರ್ಮಾನಗಳು |
| 15 | ಉದ್ಯೋಗ ನಿಯೋಜನೆಗಳು ಮತ್ತು ಸೃಷ್ಟಿಯಾದ ಉದ್ಯೋಗಾವಕಾಶಗಳು | ತರಬೇತಿ ಮತ್ತು ನಿಯೋಜನೆಯ ಹೊಂದಾಣಿಕೆ ಅಥವಾ ಹೊಂದಾಣಿಕೆ ಇಲ್ಲದ್ದು; ನಿಯೋಜನೆ ಇಲ್ಲದಿರುವುದು | ಉದ್ಯೋಗ ಸ್ಥಿತಿಗತಿ | ಕ್ಷೇತ್ರ ಸಮೀಕ್ಷೆ ಮತ್ತು ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳೊಂದಿಗೆ ಚರ್ಚೆಗಳು | ಪ್ರಶ್ನಾವಳಿಗಳು, ಯೋಜನೆ ಅನುಷ್ಠಾನ ನಿಯೋಗಗಳೊಂದಿಗಿನ ಸಂದರ್ಶನಗಳು | ಪುರಾವೆ ಆಧಾರಿತ ತೀರ್ಮಾನಗಳು |

| | 1 | 2 | 3 | 4 | 5 | 6 |
|---|---|---|---|---|---|---|
| ಫಲಿತಾಂಶಗಳು: ಅಲ್ಪಾವಧಿ | | | | | | |
| | ಅನುಷ್ಠಾನದ ಮೊದಲು ಮತ್ತು ನಂತರದಲ್ಲಿ ಫಲಾನುಭವಿ ಯುವಕರು ನಡೆಸುವ ಆದಾಯ ಉತ್ಪಾದನಾ ಚಟುವಟಿಕೆಗಳಲ್ಲಿ ಬದಲಾವಣೆ | ನಿರೀಕ್ಷಿತ ಆದಾಯ ; ಉದ್ಯೋಗ ನಂತರದ ಆದಾಯ | ನಿರೀಕ್ಷೆಗಳ ಹರವು ಪೂರೈಸಲಾಗಿದೆ | ಕ್ಷೇತ್ರ ಸಮೀಕ್ಷೆ | ಪ್ರಶ್ನಾವಳಿಗಳು | ಪುರಾವೆ ಆಧಾರಿತ ತೀರ್ಮಾನಗಳು |
| ಫಲಿತಾಂಶಗಳು: ದೀರ್ಘಾವಧಿ | | | | | | |
| | ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಯುವಕರ ವಲಸೆಯಲ್ಲಿ ಕಡಿತ. | ವಲಸೆಯ ಆಕಾಂಕ್ಷೆ; ಉದ್ಯಮ / ಉದ್ಯೋಗದ ಸ್ಥಳ | ಗ್ರಾಮೀಣ ಬದ್ಧ ಅಥವಾ ನಗರ ಬದ್ಧ | ಕ್ಷೇತ್ರ ಸಮೀಕ್ಷೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ತಪಶೀಲು ಪಟ್ಟಿಗಳು | ಪ್ರಶ್ನಾವಳಿಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ತಪಶೀಲು ಪಟ್ಟಿಗಳು | ಕ್ಷೇತ್ರ ದತ್ತಾಂಶದಿಂದ ತೀರ್ಮಾನಗಳು |
| ಸುಸ್ಥಿರತೆ | | | | | | |
| ದೀರ್ಘಾವಧಿಯಲ್ಲಿ ಸುಸ್ಥಿರತೆ | | | | | | |
| 5 | ಸ್ವಯಂ ಉದ್ಯೋಗ ಮತ್ತು ವೇತನ ಉದ್ಯೋಗದ ಸುಸ್ಥಿರತೆ | ಪ್ರಸ್ತುತ ಉದ್ಯೋಗ; ಉದ್ಯಮದ ಸ್ಥಿತಿಗತಿ | 2 ಮತ್ತು 3 ರಲ್ಲಿರುವಂತೆ | ಕ್ಷೇತ್ರ ಸಮೀಕ್ಷೆ ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳು | ಪ್ರಶ್ನಾವಳಿಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳ ತಪಶೀಲು ಪಟ್ಟಿಗಳು | ದತ್ತಾಂಶ ತೀರ್ಮಾನಗಳು |
| | ಯೋಜನೆಯನ್ನು ಮುಂದುವರಿಸಬೇಕೇ? | | ಮೇಲಿನ ಎಲ್ಲದರಿಂದ ತೀರ್ಮಾನಗಳು | ಫಲಿತಾಂಶಗಳ ವಿಶ್ಲೇಷಣೆಯಿಂದ ತೀರ್ಮಾನಗಳು | | |

ಸೂಚನೆ: ಸಂಖ್ಯೆಗಳ ಅನುಕ್ರಮವು ಮೌಲ್ಯಮಾಪನ ಮಾತೃಕೆಯಲ್ಲಿರುವ ಉಪ–ಶೀರ್ಷಿಕೆಗಳನ್ನು ಅನುಸರಿಸುತ್ತದೆ ಮತ್ತು ಮೌಲ್ಯಮಾಪನಕ್ಕಾಗಿ ಉಲ್ಲೇಖದ ನಿಯಮಗಳಲ್ಲಿ ಪಟ್ಟಿ ಮಾಡಲಾದ ಉದ್ದೇಶಗಳು ಮತ್ತು ಮೌಲ್ಯಮಾಪನ ಉದ್ದೇಶಗಳಾಗಿ ಅಲ್ಲ.
ಮೌಲ್ಯಮಾಪನದ ಮಾತೃಕೆಯ ಪ್ರಮುಖ ಉದ್ದೇಶಗಳನ್ನು ಪ್ರತಿನಿಧಿಸುತ್ತದೆ. ಕಾಲಂ 1 ರಲ್ಲಿನ ಖಾಲಿ ಕೋಣೆಗಳು ಇತರ ಮೌಲ್ಯಮಾಪನ ಪ್ರಶ್ನೆಗಳಿಗೆ ಸಂಬಂಧಿಸಿವೆ.

# 10. ಮೌಲ್ಯಮಾಪನ ಅಧ್ಯಯನದ ಫಲಿತಾಂಶಗಳು ಮತ್ತು ಚರ್ಚೆ

ಮೊದಲೇ ಸೂಚಿಸಿದಂತೆ, ಇದು ರಾಜೀವ್ ಗಾಂಧಿ ಚೈತನ್ಯ ಯೋಜನೆ ಎಂಬ ಸಂಯೋಜಿತ ಕಾರ್ಯಕ್ರಮದ ಮೌಲ್ಯಮಾಪನವಾಗಿದೆ. ಕಾರ್ಯಕ್ರಮದಲ್ಲಿ ಎರಡು ಅತ್ಯವಶ್ಯಕ ಘಟಕಗಳಿವೆ. ಇವೆರಡರ ಪ್ರಭಾವ ತಿಳಿಯುವುದಕ್ಕಾಗಿ ಮೌಲ್ಯಮಾಪನ ಮಾಡಲಾಗಿದೆ. ಮೊದಲನೆಯ ಘಟಕವೆಂದರೆ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸುವುದು. ಮತ್ತು ಎರಡನೆಯದು ಕೌಶಲ್ಯ ತರಬೇತಿ ಮತ್ತು ಯುವ ಉದ್ಯೋಗ ಪ್ರೋತ್ಸಾಹಿಸುವುದು. ಒಟ್ಟಾರೆಯಾಗಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯು ಚಿಕ್ಕ ಉದ್ಯಮಿಗಳಾಗಲು ಮತ್ತು ಸುಧಾರಿತ ಆದಾಯವನ್ನು ಹೊಂದುವತ್ತ ಸಾಗಲು ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸುವ ಮೂಲಕ ಗ್ರಾಮೀಣ ಯುವಕರಿಗೆ ಜೀವನೋಪಾಯದ ಅವಕಾಶಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಜೊತೆಗೆ ನಿರುದ್ಯೋಗಿಗಳಾಗಿರುವ ಗ್ರಾಮೀಣ ಯುವಕರಿಗೆ ಹೊಸ ಮತ್ತು ಉನ್ನತ ಮಟ್ಟದ ಕೌಶಲ್ಯಗಳನ್ನು ಬೆಳೆಸುವುದು ಮತ್ತು ಉತ್ತಮ ಜೀವನೋಪಾಯಕ್ಕಾಗಿ ಉದ್ಯೋಗವನ್ನು ಪಡೆಯಲು ಅನುವು ಮಾಡಿಕೊಡುವ ಉದ್ದೇಶ ಹೊಂದಿದೆ. ಎರಡು ವಿಭಿನ್ನ ಇಲಾಖೆಗಳು ಈ ಯೋಜನೆಗಳನ್ನು ಜಾರಿಗೆ ತರುತ್ತವೆ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮೂಲಕ ಕೌಶಲ್ಯ ಮತ್ತು ಜೀವನೋಪಾಯ ಅಭಿವೃದ್ಧಿ ಇಲಾಖೆ ರಾಜ್ಯದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಧಿಕೃತ ಜಾಲ ತಾಣದ ಪ್ರಕಾರ, ಫೆಬ್ರವರಿ 28, 2020ರ ವೇಳೆಗೆ, 93,887 ಯುವಕರು ಸ್ವಯಂ ಉದ್ಯೋಗ ಘಟಕದ ಅಡಿಯಲ್ಲಿ ತರಬೇತಿ ಪಡೆದಿದ್ದಾರೆ ಮತ್ತು ನಿಯೋಜಿಸಲ್ಪಟ್ಟಿದ್ದಾರೆ, ಮತ್ತು 3695 ಫಲಾನುಭವಿಗಳಿಗೆ ಯೋಜನೆಯ ಕೌಶಲ್ಯ ಮತ್ತು ಉದ್ಯಮಶೀಲತೆ ಘಟಕದ ಅಡಿಯಲ್ಲಿ ತರಬೇತಿ ನೀಡಲಾಗಿದೆ.[1] ಜಾಗೃತಿ ಕಾರ್ಯಕ್ರಮ, ವೈಯಕ್ತಿಕ ಸಮಾಲೋಚನೆ ಮತ್ತು ವೃತ್ತಿಯ ವಿವಿಧ ಕ್ಷೇತ್ರಗಳಲ್ಲಿ ತರಬೇತಿ ಕಾರ್ಯಕ್ರಮದ ಮೂಲಕ ಫಲಾನುಭವಿಗಳಿಗೆ ತಿಳುವಳಿಕೆ ನೀಡಲಾಗಿದೆ. ಇದಕ್ಕಾಗಿ 41 ಯೋಜನೆ ಬೆಂಬಲಿಸುವ ನಿಯೋಗಗಳನ್ನು ಮತ್ತು 14 ಯೋಜನಾ ಅನುಷ್ಠಾನ ನಿಯೋಗಗಳನ್ನು ಯೋಜನೆಯನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಳ್ಳಲಾಗಿದೆ. ಮೌಲ್ಯಮಾಪನ ಅಧ್ಯಯನ ವರದಿಗಾಗಿ, ಕ್ರಮವಾಗಿ ಸ್ವಯಂ ಉದ್ಯೋಗದ ಬಗ್ಗೆ ಮತ್ತು ಕೌಶಲ್ಯ ತರಬೇತಿ ಹಾಗೂ ನಿಯೋಜನೆ ಯೋಜನೆ ಬಗ್ಗೆ ಫಲಿತಾಂಶಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

## ಭಾಗ–1

### 10.1 ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕ:

ಸ್ವಯಂ ಉದ್ಯೋಗ ಘಟಕದ ಮಾರ್ಗಸೂಚಿಗಳ ಪ್ರಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯು ಯುವಕರನ್ನು ಸಜ್ಜುಗೊಳಿಸುವ ಮತ್ತು ಜಿಲ್ಲೆಯ ಗ್ರಾಮ ಪಂಚಾಯಿತಿಗಳು ಗುರುತಿಸಿರುವ ಯುವಕರಿಗೆ ಅಗತ್ಯ ತರಬೇತಿಯನ್ನು ನೀಡುವ ಸಾಮರ್ಥ್ಯವಿರುವ ವಿಶೇಷ ನಿಯೋಗವನ್ನು ಗುರುತಿಸಿದೆ ಮತ್ತು ನೇಮಿಸಿದೆ. ಇದು ಯೋಜನೆ ಬೆಂಬಲಿಸುವ ನಿಯೋಗ ಎಂದು ಉಲ್ಲೇಖಿಸಲಾದ ಸಂಸ್ಥೆಯಾಗಿದ್ದು, ಔಪಚಾರಿಕವಾಗಿ ತರಬೇತಿ ಪಡೆದ ಫಲಾನುಭವಿಗಳಿಗೆ ವಾಣಿಜ್ಯ ಬ್ಯಾಂಕುಗಳ ಮೂಲಕ ಅಗತ್ಯ ಸಾಲಗಳ ಪ್ರಕ್ರಿಯೆಯನ್ನು ಸುಗಮಗೊಳಿಸುವ ಜವಾಬ್ದಾರಿಯನ್ನು ಹೊಂದಿದೆ. ಹಾಗಾಗಿ, ಗ್ರಾಮ ಪಂಚಾಯಿತಿಯ ಗ್ರಾಮ ಸಭೆ ಶಿಫಾರಸ್ಸು ಮಾಡಿರುವ ಸಂಭಾವ್ಯ ಫಲಾನುಭವಿಗಳಿಗೆ ಸ್ವಯಂ ಉದ್ಯೋಗ ಆಯ್ಕೆ ಮಾಡಿಕೊಂಡ ಕ್ಷೇತ್ರಗಳಲ್ಲಿ ವಸತಿ ತರಬೇತಿ ನೀಡಲಾಗುತ್ತದೆ.

[1] ಮೂಲ: http://koushalya.karnataka.gov.in/KSRLPS/pages/Schemes-rgcy.aspx access on 28 February, 2020

ಫಲಾನುಭವಿಗಳಿಗೆ ಚಿಕ್ಕ ಉದ್ಯಮವನ್ನು ಪ್ರಾರಂಭಿಸಲು ಮತ್ತು ಸ್ವಯಂ ಉದ್ಯೋಗದಲ್ಲಿ ತೊಡಗಲು ಬಯಸುವ ಕ್ಷೇತ್ರಗಳನ್ನು ಆಯ್ಕೆ ಮಾಡುವ ಅವಕಾಶವನ್ನು ನೀಡಬೇಕು. ಆದರೆ ಸದರಿ ಉದ್ದೇಶಕ್ಕಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವ ಮೊದಲು ಯಾವುದೇ ಸರ್ಕಾರಿ ಸಂಸ್ಥೆಗಳಿಂದ ಕೌಶಲ್ಯ–ನಕ್ಷಾ ನಿರೂಪಣೆ ಅಥವಾ ಸ್ಥಳೀಯ ಅಗತ್ಯ ಮೌಲ್ಯಮಾಪನವನ್ನು ಮಾಡಲಾಗಿಲ್ಲ.

**ಕೋಷ್ಟಕ ಸಂಖ್ಯೆ 10.1.1: ಮಾದರಿ ಜಿಲ್ಲೆಗಳಲ್ಲಿ ತರಬೇತಿ ಸಂಸ್ಥೆಗಳು (ಸ್ವಯಂ ಉದ್ಯೋಗ)**

| ವಿಭಾಗ | ಜಿಲ್ಲೆ | ಸಂಖ್ಯೆ | ನಮೂನೆಯಲ್ಲಿ ತರಬೇತಿ ಪಡೆದವರ ಸಂಖ್ಯೆ |
|---|---|---|---|
| ಬೆಂಗಳೂರು | ಬೆಂಗಳೂರು – ನಗರ | 1 | 94 |
| | ಚಿತ್ರದುರ್ಗ | 3 | 276 |
| ಬೆಳಗಾವಿ | ಬಾಗಲಕೋಟೆ | 2 | 540 |
| | ಧಾರವಾಡ | 1 | 121 |
| ಮೈಸೂರು | ಹಾಸನ | 3 | 481 |
| | ಉಡುಪಿ | 2 | 63 |
| ಕಲಬುರಗಿ | ಕಲಬುರಗಿ | 1 | 469 |
| | ಯಾದಗಿರಿ | 1 | 24 |
| ಒಟ್ಟು | | 14 | 2068 |

ಮೂಲ: ಪ್ರಾಥಮಿಕ ದತ್ತಾಂಶ

### 10.1.1 ಜಂಟಿ ಹೊಣೆಗಾರಿಕೆ ಗುಂಪಿನ ರಚನೆ:

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ ಒಂದು ವಿಶಿಷ್ಟ ಲಕ್ಷಣವೆಂದರೆ ಗ್ರಾಮೀಣ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಒಂದು ಗುಂಪು ಉದ್ಯಮವಾಗಿ ಉತ್ತೇಜಿಸಲಾಗುತ್ತದೆ. ಐದು ಜನರನ್ನು ಜಂಟಿ ಹೊಣೆಗಾರಿಕೆ ಗುಂಪು ಎಂದು ಗುಂಪು ಮಾಡಿ, ಅವರು ಒಟ್ಟಿಗೆ ಆಯ್ಕೆ ಮಾಡಿದ ಕ್ಷೇತ್ರದಲ್ಲಿ ತರಬೇತಿಯನ್ನು ನೀಡಲಾಗುತ್ತದೆ ಮತ್ತು ಪ್ರತಿಯೊಬ್ಬರೂ ತಮ್ಮ ಪಾಲಿನ ಕನಿಷ್ಠ 50,000 ರೂ.ಗಳೊಂದಿಗೆ ಆಯ್ಕೆ ಮಾಡಿದ ಕ್ಷೇತ್ರಕ್ಕೆ ಇಳಿಯಬಹುದು ಎಂದು 2.5 ಲಕ್ಷ ರೂ.ಗಳ ಸಾಲವನ್ನು ನೀಡಲಾಗುತ್ತದೆ. ವ್ಯಾಪಾರ ಜಂಟಿ ಮಾಲೀಕತ್ವದಲ್ಲಿ ನಡೆಯಬಹುದಿತ್ತು, ಆದರೆ ವಾಸ್ತವದಲ್ಲಿ ಐದು ಪ್ರತ್ಯೇಕ ಸ್ವಯಂ ಉದ್ಯೋಗ ಉದ್ಯಮಗಳಿಗೆ ಕಾರಣವಾಗಿದೆ ಮತ್ತು ಹೊಣೆಗಾರಿಕೆಯು ಫಲಾನುಭವಿ ಮಟ್ಟದಲ್ಲಿ ಸ್ವತಂತ್ರ ಹೊಣೆಗಾರಿಕೆಯಾಗಿ ಬದಲಾಗಿದೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಸ್ವಯಂ ಉದ್ಯೋಗಕ್ಕಾಗಿ ಪಂಚಾಯಿತಿ ಅಂತಹ ಐದು ವ್ಯಕ್ತಿಗಳು ಅಥವಾ ಬಹು ಗುಂಪುಗಳನ್ನು ಶಿಫಾರಸ್ಸು ಮಾಡಿದ ನಂತರ ನಿಯೋಜಿತ ಇದು ಯೋಜನೆ ಬೆಂಬಲಿಸುವ ನಿಯೋಗ/ತರಬೇತಿ ಸಂಸ್ಥೆ ನಾಮನಿರ್ದೇಶಿತ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡುತ್ತದೆ. ಸುಗಮವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ಸಾಮಾನ್ಯವಾಗಿ ತರಬೇತಿಯನ್ನು ಜಿಲ್ಲಾ ಕೇಂದ್ರದಲ್ಲಿ ಅಥವಾ ಕ್ಷೇತ್ರ ಮಟ್ಟದಲ್ಲಿ ನಡೆಸಲಾಗುತ್ತದೆ. ತರಬೇತಿಯು ಆರು ದಿನಗಳವರೆಗೆ ಇರುತ್ತದೆ. ಈ ಸಮಯದಲ್ಲಿ ತಜ್ಞ ತರಬೇತುದಾರರು ಕ್ಷೇತ್ರಕ್ಕೆ ಸಂಬಂಧಿಸಿದ ಅಗತ್ಯ ಕೌಶಲ್ಯಗಳು ಮತ್ತು ಜ್ಞಾನವನ್ನು ನೀಡುತ್ತಾರೆ. ಇದು ಕನಿಷ್ಠ ನಿಯಮವಾಗಿದೆ. ಆದರೆ ಕಾರ್ಯಾಚರಣೆಯಲ್ಲಿ ಇದು ನಿಗದಿತ ನಿಯಮದಿಂದ ಗಣನೀಯವಾಗಿ ಬದಲಾಗುತ್ತದೆ. ಎಂಟು ಮಾದರಿ ಜಿಲ್ಲೆಗಳಲ್ಲಿ, ಒಂದು ಜಿಲ್ಲೆ ಅಂದರೆ ಚಿತ್ರದುರ್ಗದಲ್ಲಿ ಯೋಜನೆ ಬೆಂಬಲಿಸುವ ನಿಯೋಗ ನಿಯೋಜಿಸಲಾಗಿಲ್ಲ ಎಂದು ಕಂಡುಬಂದಿದೆ. ಎರಡನೆಯದಾಗಿ, ಅನೇಕ ಯೋಜನೆ ಬೆಂಬಲಿಸುವ ನಿಯೋಗಗಳು ಯುವಕರಿಗೆ ತರಬೇತಿ ನೀಡುವ ಜವಾಬ್ದಾರಿಯನ್ನು ಇತರ

ನಿಯೋಗಗಳಿಗೆ ಹೊರಗುತ್ತಿಗೆ ನೀಡಿರುವುದನ್ನು ಗಮನಿಸಲಾಗಿದೆ. ನಿಯೋಜಿತ ಯೋಜನೆ ಬೆಂಬಲಿಸುವ ನಿಯೋಗ ಸ್ವಯಂ ಉದ್ಯೋಗಕ್ಕಾಗಿ ಯುವಕರು ತಮ್ಮ ಕ್ಷೇತ್ರವಾಗಿ ಆಯ್ಕೆ ಮಾಡಿಕೊಂಡ ಎಲ್ಲಾ ವಿಭಿನ್ನ ವ್ಯಾಪಾರಗಳ ಕೌಶಲ್ಯಗಳು ಮತ್ತು ಜ್ಞಾನವನ್ನು ಉತ್ತಮವಾಗಿ ಸಜ್ಜುಗೊಳಿಸಲು ಅಸಮರ್ಥವಾಗಿರುವುದು ಅಂತಹ ಅಭ್ಯಾಸಕ್ಕೆ ಕಾರಣವಾಗಿದೆ. ಇದರಿಂದ ಸಂಬಂಧಪಟ್ಟ ಇಲಾಖೆಯು ಯೋಜನೆ ಬೆಂಬಲಿಸುವ ನಿಯೋಗವನ್ನು ಆಯ್ಕೆ ಮಾಡುವ ಕಾರ್ಯ ವಿಧಾನದ ಬಗ್ಗೆ ಪ್ರಶ್ನೆಗಳು ಏಳುತ್ತವೆ. ಆದರ್ಶವಾಗಿ, ತರಬೇತಿ ಸವಾಲನ್ನು ಎದುರಿಸಲು ಅವರು ಸಾಕಷ್ಟು ನುರಿತ ತರಬೇತುದಾರನನ್ನು ಹೊಂದಿರಬೇಕು. ಆದರೆ ಅದು ವಾಸ್ತವತೆಯಿಂದ ದೂರ ಉಳಿದಿರುವಂತೆ ಕಾಣುತ್ತದೆ.

**10.1.2 ತರಬೇತಿಗಾಗಿ ವಿಷಯ-ನಿರ್ದಿಷ್ಟ ಪಠ್ಯಕ್ರಮ ಮತ್ತು ಬೋಧನಾ ಕ್ರಮದ ಅಗತ್ಯ:**

ಗ್ರಾಮೀಣ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸುವ ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡುವಾಗ ಅದೂ ಭಾರತೀಯ ಪರಿಸ್ಥಿತಿಗಳಲ್ಲಿ ಸಂಭಾವ್ಯ ಫಲಾನುಭವಿಗಳು ತರಬೇತಿ ಪಡೆಯುವ ಉದ್ಯಮದ ಪ್ರಕಾರವು ಕಾರ್ಯಕ್ರಮವನ್ನು ಜಾರಿಗೆ ತಂದ ದಿಕ್ಕಿನ ಉತ್ತಮ ಸೂಚಕವಾಗಿದೆ. ಉದಾಹರಣೆಗೆ, ಕೃಷಿ ಆಧಾರಿತ ಗ್ರಾಮೀಣ ಜೀವನೋಪಾಯಗಳನ್ನು ಗಮನದಲ್ಲಿಟ್ಟುಕೊಂಡು, ಕೃಷಿ ಸಂಬಂಧಿತ ಅಥವಾ ಕೃಷಿ ಆಧಾರಿತ ಉದ್ಯಮಗಳಲ್ಲಿ 'ತರಬೇತಿ' ನೀಡುವುದು ಆದರ್ಶ ಕಾರ್ಯಕ್ರಮ ಚಟುವಟಿಕೆಎಂದು ತೋರುತ್ತದೆ. ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಒಂದು ಸ್ವಯಂ ಉದ್ಯೋಗವನ್ನಾಗಿ ಹೊಸದಾಗಿ ಪರಿಗಣಿಸುವ ಬಗ್ಗೆ ಗಮನಹರಿಸಬೇಕಾದ ಹಲವಾರು ಕ್ಷೇತ್ರಗಳಲ್ಲಿ -ಕೃಷಿ, ಪಶು ಸಂಗೋಪನೆ, ಮೀನುಗಾರಿಕೆ, ರೇಷ್ಮೆ, ತೋಟಗಾರಿಕೆ- ಇಲಾಖೆಗಳ ವಿವಿಧ ವಿಸ್ತರಣಾ ಕಾರ್ಯಕ್ರಮಗಳಿವೆ. ಕೋಷ್ಟಕ 10.1.2ರಿಂದ ಗ್ರಹಿಸಬಹುದಾದಂತೆ, ಬಹುತೇಕ ಎಲ್ಲಾ ಮಾದರಿ ಜಿಲ್ಲೆಗಳಲ್ಲಿ, ಮಾದರಿಯಲ್ಲಿರುವ ವ್ಯಕ್ತಿಗಳಲ್ಲಿ ಸುಮಾರು ಮುಕ್ಕಾಲು ಭಾಗದಷ್ಟು ಜನರು ಪಶು ಸಂಗೋಪನೆ ಸಂಬಂಧಿತ ಕ್ಷೇತ್ರಗಳಲ್ಲಿ ತರಬೇತಿ ಪಡೆದಿದ್ದಾರೆ. ಹೈನುಗಾರಿಕೆ (71.23 ಪ್ರತಿಶತ); ಕುರಿ / ಹಂದಿ ಸಾಕಾಣಿಕೆ (ಪಶು ಸಂಗೋಪನೆ ಎಂದು ಪಟ್ಟಿ ಮಾಡಲಾಗಿದೆ) 1.93 ಪ್ರತಿಶತ; ಅಥವಾ ಕೋಳಿ ಸಾಕಾಣಿಕೆ (2.56 ಪ್ರತಿಶತ). ಇವುಗಳಲ್ಲಿ ಯಾವುದೂ ಅವರಿಗೆ ಹೊಸ ಸ್ವಯಂ ಉದ್ಯೋಗದ ಅವಕಾಶವನ್ನು ಸೃಷ್ಟಿಸುವ ಮೂಲಕ ಗ್ರಾಮೀಣ ಯುವಕರ ಜೀವನವನ್ನು ಪರಿವರ್ತಿಸಿಲ್ಲ. ಹೆಚ್ಚುವರಿ ಮೂಲವನ್ನು ಒದಗಿಸುವ ಅಥವಾ ಮನೆಯ ಜೀವನೋಪಾಯದ ಪ್ರಸ್ತುತ ಮೂಲವನ್ನು ಬಲಪಡಿಸುವ ಬದಲು, ಅವರು ಸದಸ್ಯರಾಗಿರಬಹುದಷ್ಟೇ. ಬಹುತೇಕ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ, ಈ ಚಟುವಟಿಕೆಗಳ ಕ್ಷೇತ್ರಗಳು ಈಗಾಗಲೇ ಅವರ ಜೀವನದ ಒಂದು ಭಾಗವಾಗಿದೆ. ಮೊದಲೇ ಹೇಳಿದಂತೆ, ಸಂಬಂಧಪಟ್ಟ ನಿರ್ದಿಷ್ಟ ಇಲಾಖೆಗಳು ಈ ಚಟುವಟಿಕೆಗಳನ್ನು ಬಲಪಡಿಸಬಹುದಾಗಿದ್ದ ಒಂದಲ್ಲ ಒಂದು ಯೋಜನೆಗಳನ್ನು ಹೊಂದಿರುತ್ತವೆ.

ಹೈನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಹೊರತುಪಡಿಸಿ, ಸಂಭಾವ್ಯ ಫಲಾನುಭವಿಗಳಿಗೆ ತರಬೇತಿ ನೀಡಲು ಯೋಜನೆ ಬೆಂಬಲಿಸುವ ನಿಯೋಗಗಳು ಅನುಕೂಲ ಮಾಡಿಕೊಟ್ಟ ಕ್ಷೇತ್ರವೆಂದರೆ ಚಿಲ್ಲರೆ ಅಂಗಡಿಗಳು ಅಥವಾ ದಿನಸಿ ಅಂಗಡಿಗಳು (8.37 ಪ್ರತಿಶತ). ತರಬೇತಿ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಮ್ಮ ಆಳವಾದ ಸಂದರ್ಶನದಲ್ಲಿ, ಕೋಳಿ ಸಾಕಾಣಿಕೆ, ಚಿಲ್ಲರೆ ಅಂಗಡಿಗಳು ಅಥವಾ ಹೈನುಗಾರಿಕೆ ಕ್ಷೇತ್ರಗಳಲ್ಲಿ ಸಂಭಾವ್ಯ ಫಲಾನುಭವಿಗಳಿಗೆ ನೀಡಲಾದ ತರಬೇತಿಯ ನಿರ್ದಿಷ್ಟ ವಿಷಯಗಳನ್ನು ಕಂಡುಹಿಡಿಯಲು ನಾವು ಪ್ರಯತ್ನಿಸಿದ್ದೇವೆ. ಉದಾಹರಣೆಗೆ, ಹೈನುಗಾರಿಕೆ ಸಹಕಾರಿ ಸಂಘಗಳು, ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಸಹಕಾರಿ ಕಾಯ್ದೆ ಮತ್ತು ಹೈಬ್ರಿಡ್-ಹಸುಗಳಿಗೆ ಬರಬಹುದಾದ ಸಾಮಾನ್ಯ ಕಾಯಿಲೆಗಳ ಬಗ್ಗೆ ಫಲಾನುಭವಿಗಳಿಗೆ ಕಲಿಸಲಾಗಿದೆಯೇ ಎಂದು ಅವರನ್ನು ಕೇಳಲಾಯಿತು.

**ಕೋಷ್ಟಕ 10.1.2: ಮಾದರಿ ಜಿಲ್ಲೆಗಳು ಮತ್ತು ತರಬೇತಿ ಪಡೆದ ಕ್ಷೇತ್ರಗಳು**

| ಉದ್ಯಮದ ಪ್ರಕಾರ | ಬೆಂಗಳೂರು | | | ಬೆಳಗಾವಿ | | | ಕಲಬುರಗಿ | | | ಮೈಸೂರು | | | ಒಟ್ಟು | |
|---|---|---|---|---|---|---|---|---|---|---|---|---|---|---|
| | ಬೆಂಗಳೂರು ನಗರ | ಚಿತ್ರದುರ್ಗ | ಉಪ-ಮೊತ್ತ | ಬಾಗಲಕೋಟೆ | ಧಾರವಾಡ | ಉಪ ಮೊತ್ತ | ಕಲಬುರಗಿ | ಯಾದಗಿರಿ | ಉಪ-ಮೊತ್ತ | ಉಡುಪಿ | ಹಾಸನ | ಉಪ ಮೊತ್ತ | ಸಂಖ್ಯೆ | % |
| ಹೈನುಗಾರಿಕೆ | 44.68 | 82.25 | 72.7 | 85 | 71.9 | 82.6 | 48.86 | 34.92 | 47.24 | 16.67 | 84.65 | 81.34 | 1473 | 71.23 |
| ಕೃಷಿ | 2.13 | | 0.54 | | | | 4.16 | 7.94 | 4.6 | | 1.92 | 1.83 | 36 | 1.74 |
| ಪಶು ಸಂಗೋಪನೆ | | 4.71 | 3.51 | 4.26 | | 3.48 | | | | | 0.85 | 0.81 | 40 | 1.93 |
| ಕೋಳಿ ಸಾಕಾಣಿಕೆ | 5.32 | | 1.35 | | | | 6.44 | 7.94 | 6.62 | 12.5 | 1.92 | 2.43 | 53 | 2.56 |
| ಚಿಲ್ಲರೆ ಅಂಗಡಿ / ದಿನಸಿ ಅಂಗಡಿಗಳು | 17.02 | 5.8 | 8.65 | 3.89 | 12.4 | 5.45 | 11.85 | 31.75 | 14.15 | | 5.97 | 5.68 | 173 | 8.37 |
| ಜವಳಿ ಅಂಗಡಿ | | 3.99 | 2.97 | 4.07 | 0.83 | 3.48 | 1.04 | | 0.92 | 4.17 | | 0.2 | 40 | 1.93 |
| ಹೊಲಿಗೆ ಕೆಲಸ | 27.66 | 1.09 | 7.84 | 0.93 | 11.57 | 2.87 | 6.65 | 9.52 | 6.99 | 20.83 | 3.2 | 4.06 | 106 | 5.13 |
| ಆಟೋ / ಡ್ರೈವರ್ | 1.06 | | 0.27 | 0.37 | | 0.3 | 2.7 | | 2.39 | | 0.21 | 0.2 | 17 | 0.82 |
| ಬ್ಯೂಟಿ ಪಾರ್ಲರ್‌ಗಳು | 1.06 | | 0.27 | | 0.83 | 0.15 | 0.42 | 4.76 | 0.92 | 4.17 | 0.64 | 0.81 | 11 | 0.53 |
| ಗಣಕಯಂತ್ರ ಅಂಗಡಿ | | 1.45 | 1.08 | | 0.83 | 0.15 | 6.65 | 3.17 | 6.25 | | 0.43 | 0.41 | 41 | 1.98 |
| ವಿದ್ಯುತ್ ಸೇವೆಗಳು | | | | 0.37 | | 0.3 | 3.12 | | 2.76 | | | | 17 | 0.82 |
| ಹೋಟೆಲ್/ಟೀ ಅಂಗಡಿ | | | | 0.37 | | 0.3 | 2.7 | | 2.39 | 8.33 | | 0.41 | 17 | 0.82 |
| ಇತರೆ [2] | 1.06 | 0.72 | 0.81 | 0.74 | 1.65 | 0.91 | 5.41 | | 4.78 | 33.33 | 0.21 | 1.83 | 44 | 2.13 |
| ಒಟ್ಟು (ಸಂಖ್ಯೆ) | 94 | 276 | 370 | 540 | 121 | 661 | 481 | 63 | 544 | 24 | 469 | 493 | 2068 | |
| ಸೂಚನೆ: ನಿರ್ದಿಷ್ಟ ಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ | | | | | | | | | | | | | | |

ಮೂಲ : ಪ್ರಾಥಮಿಕ ದತ್ತಾಂಶ

2 ಇತರೆ : (ಸ್ವಯಂ ಉದ್ಯೋಗ ಘಟಕಕ್ಕೆ) ತರಬೇತಿ ಕ್ಷೇತ್ರಗಳಾದ ಪುಸ್ತಕಗಳು ಮತ್ತು ಲೇಖಿನ ಸಾಮಗ್ರಿ, ಕಟ್ಟಡ ನಿರ್ಮಾಣ, ಮೇಣದ ಬತ್ತಿ ಮತ್ತು ಫಿನೈಲ್ ತಯಾರಿಕೆ, ಸಿಮೆಂಟ್ ಮತ್ತು ಯಂತ್ರಾಂಶ ಅಂಗಡಿಗಳು, ಚಪ್ಪಲಿ ಅಂಗಡಿ, ಹಿಟ್ಟಿನ ಗಿರಣಿ, ಕೈಮಗ್ಗ, ಊದುಗಡ್ಡಿ ತಯಾರಿಕೆ, ಬಟ್ಟೆಗಳನ್ನು ಇಸ್ತ್ರಿ ಮಾಡುವುದು, ಬಣ್ಣದ ಕೆಲಸ, ಛಾಯಗ್ರಹಣ, ಉಪ್ಪಿನಕಾಯಿ ತಯಾರಿಕೆ, ಮುದ್ರಣಾಲಯ ಮತ್ತು ಛಾಯಾಪ್ರತಿ ಮಾಡುವುದು – ಇವುಗಳನ್ನು ಒಳಗೊಂಡಿರುತ್ತದೆ.

ತರಬೇತಿಯ ಸಮಯದಲ್ಲಿ ಏನು ವಿಶೇಷ ಜ್ಞಾನವನ್ನು ನೀಡಲಾಯಿತು? ಈ ಪ್ರಶ್ನೆಗೆ, ನಮಗೆ ಅಸ್ಪಷ್ಟ ಉತ್ತರಗಳು ಬಂದವು. ಈ ಮೌಲ್ಯಮಾಪನ ಅಧ್ಯಯನವು ತರಬೇತಿಗಾಗಿ ಹೆಚ್ಚು ವಿಷಯ–ನಿರ್ದಿಷ್ಟ ಪಠ್ಯಕ್ರಮದ ಅಗತ್ಯವನ್ನು ಸೂಚಿಸುತ್ತದೆ. ತರಬೇತಿ ವಿಷಯಗಳನ್ನು ಸಹ ಹೆಚ್ಚಾಗಿ ಸಿದ್ಧಗೊಳಿಸಬೇಕಾಗುತ್ತದೆ. ನಮಗೆ ದೊರೆತ ಪ್ರತಿಕ್ರಿಯೆ ಏನೆಂದರೆ, 'ಗ್ರಾಮೀಣ ಮೂಲದ ಯುವಕರಾಗಿ, ಅವರಲ್ಲಿ ಹೆಚ್ಚಿನವರು ಇವುಗಳ ಬಗ್ಗೆ ಕೆಲವು ಮೂಲಭೂತ ವಿಚಾರಗಳನ್ನು ತಿಳಿದಿದ್ದಾರೆ. ಅಂತಹ ವಿಷಯಗಳಲ್ಲಿ ನಾವು ಅವರಿಗೆ ಪ್ರಸ್ತುತ ಏನು ಮಾಡಲಾಗುತ್ತಿದೆ ಎಂಬುದಕ್ಕಿಂತ ವೃತ್ತಿಪರವಾಗಿ ನಿರ್ದಿಷ್ಟವಾಗಿ ತರಬೇತಿ ನೀಡುವ ಅಗತ್ಯವಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ. ಉತ್ತಮವಾಗಿ ಅಭಿವೃದ್ಧಿಪಡಿಸಿದ ಒಂದು ನಿರ್ದಿಷ್ಟ ಪಠ್ಯಕ್ರಮದ ಅನುಪಸ್ಥಿತಿಯಲ್ಲಿ ಸ್ವಯಂ–ಉದ್ಯೋಗ ಯೋಜನೆಯ ತರಬೇತಿ ಘಟಕವು ವ್ಯರ್ಥವಾಗದಿದ್ದರೂ ಅನಗತ್ಯವಾಗಿ ಪುನರಾವರ್ತಿತವಾಗುತ್ತದೆ.

**ರೇಖಾಚಿತ್ರ 10.1.1**
**ಕೃಷಿಯಲ್ಲದ ಸ್ವಯಂ ಉದ್ಯೋಗ ತರಬೇತಿ ಹಂಚಿಕೆ**




### 10.1.3 ಉದ್ಯಮದ ಸ್ವರೂಪ:

ಕೋಷ್ಟಕ 10.1.2 ಆಡಳಿತಾತ್ಮಕ ವಿಭಾಗಗಳಾದ್ಯಂತ ದತ್ತಾಂಶವನ್ನು ಸಹ ಪ್ರಸ್ತುತಪಡಿಸುತ್ತದೆ. ಹದಿಮೂರು ವಿಭಿನ್ನ ರೀತಿಯ ಉದ್ಯಮಗಳನ್ನು ಎಲ್ಲಾ ವಿಭಾಗಗಳಲ್ಲಿ ಕೃಷಿ ಮತ್ತು ಹೈನುಗಾರಿಕೆ ಸಂಬಂಧಿತ ಉದ್ಯಮಗಳ ಅಗಾಧ ಉಪಸ್ಥಿತಿಯೊಂದಿಗೆ ವಿಭಾಗಗಳಾದ್ಯಂತ ಪ್ರತಿನಿಧಿಸಲಾಗಿದೆ. ಬೆಳಗಾವಿ (82.6 ಪ್ರತಿಶತದೊಂದಿಗೆ) ಮತ್ತು ಮೈಸೂರು (83.17 ಪ್ರತಿಶತದೊಂದಿಗೆ) ಈ ಉದ್ಯಮಗಳ ಅತ್ಯಂತ ವ್ಯಾಪಕ ಉಪಸ್ಥಿತಿಗೆ ಕಾರಣವಾಗಿವೆ. ನಾವು ಉದ್ಯಮಗಳ ಸ್ವರೂಪವನ್ನು ನೋಡಿದರೆ, ಕಲಬುರಗಿ ವಿಭಾಗವು (ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯೊಂದಿಗೆ) 'ವ್ಯವಸಾಯ ರಹಿತ' ಕ್ಷೇತ್ರಗಳಿಗೆ ಅತಿ ಹೆಚ್ಚು ತರಬೇತಿಯನ್ನು ಹೊಂದಿದೆ. ಬೆಳಗಾವಿ ವಿಭಾಗವು 14 ಪ್ರತಿಶತದಷ್ಟಿದ್ದರೆ, ಮೈಸೂರಿನಲ್ಲಿ 16.02 ಪ್ರತಿಶತದಷ್ಟು 'ವ್ಯವಸಾಯ ರಹಿತ' ಉದ್ಯಮಗಳಲ್ಲಿ ತರಬೇತಿ ಇದೆ. ಆಶ್ಚರ್ಯಕರವಾಗಿ, ನಿರೀಕ್ಷೆಗಳಿಗೆ ವಿರುದ್ಧವಾಗಿ, ಬೆಂಗಳೂರು– ಹೆಚ್ಚು ನಗರೀಕರಣಗೊಂಡ ಮತ್ತು ಕೈಗಾರಿಕೀಕರಣಗೊಂಡ ವಿಭಾಗ, ಕೇವಲ 23.24 ಪ್ರತಿಶತ 'ವ್ಯವಸಾಯ ರಹಿತ' ಉದ್ಯಮಗಳನ್ನು ಹೊಂದಿದೆ.

### 10.1.4 ಫಲಾನುಭವಿಗಳ ಆಯ್ಕೆಯಲ್ಲಿ ಗಮನಾರ್ಹ ಲೋಪ:

ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಉದ್ದೇಶಿತ ಫಲಾನುಭವಿಗಳನ್ನು ಅವರ 'ತರಬೇತಿ'ಯ ಸಮಯದಲ್ಲಿ ಜಂಟಿ ಹೊಣೆಗಾರಿಕೆ ಗುಂಪು ಎಂದು ಗುಂಪು ಮಾಡಲಾಗುತ್ತದೆ. ಪ್ರತಿಯಾಗಿ, ಈ ಗುಂಪು ತಮ್ಮ ಸ್ವಯಂ ಉದ್ಯೋಗ ಉದ್ಯಮವನ್ನು ಪ್ರಾರಂಭಿಸಲು ಸಾಲವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಲಾಗಿದೆ. ವಾಣಿಜ್ಯ ಬ್ಯಾಂಕ್ ಅಂತಹ ಸಾಲವನ್ನು ಮಂಜೂರು ಮಾಡುವ ಪೂರ್ವ ಷರತ್ತುಗಳಲ್ಲಿ ಒಂದೆಂದರೆ, ಗುಂಪಿನ ಯಾವುದೇ ಸದಸ್ಯರು

ಇತ್ಯರ್ಥವಾಗದ ಯಾವುದೇ ಬಾಕಿ ಸಾಲಗಳನ್ನು ಹೊಂದಿರಬಾರದು. ಅವರು ಸರ್ಕಾರದ[3] ಇತರ ಯಾವುದೇ ಯೋಜನೆಗಳ ಫಲಾನುಭವಿಗಳಾಗಿರಬಾರದು. ಅಂತಹ ಬಾಕಿ ಇರುವ ಸಾಲಗಳು ಕೇವಲ ಗುರುತಿಸಲಾದ ವಾಣಿಜ್ಯ ಬ್ಯಾಂಕುಗಳೊಂದಿಗೆ ಮಾತ್ರವಲ್ಲ, ಇತರ ಯಾವುದೇ ವಾಣಿಜ್ಯ ಬ್ಯಾಂಕ್‌ನೊಂದಿಗೆ ಸಹ ಇರಬಹುದು. ಸಾಲಗಳು ಮತ್ತು ಇತರ ಹೊಣೆಗಾರಿಕೆಗಳು ಸೇರಿದಂತೆ ಬ್ಯಾಂಕ್ ವಹಿವಾಟುಗಳ ಬಗ್ಗೆ ಮಾಹಿತಿಯ ಡಿಜಿಟಲ್ ಹಂಚಿಕೆಯನ್ನು ಗಮನಿಸಿದರೆ– ಇತ್ತೀಚ್ಚಿನ ದಿನಗಳಲ್ಲಿ ಎರವಲು ಪಡೆಯುವ ಮಾಹಿತಿಯನ್ನು ಮರೆಮಾಡುವುದು ಪ್ರಾಯೋಗಿಕವಾಗಿ ಅಸಾಧ್ಯವಾಗಿದೆ. ಆಗಾಗ್ಗೆ, 'ವಸೂಲಾಗದ ಸಾಲಗಳು' ಅಥವಾ 'ನಿಷ್ಕ್ರಿಯ ಆಸ್ತಿಗಳ' ಬಗ್ಗೆ ಜಾಗರೂಕರಾಗಿರುವ ವಾಣಿಜ್ಯ ಬ್ಯಾಂಕುಗಳು ಈ ನಿಯಮವನ್ನು ಕೇವಲ ಫಲಾನುಭವಿಗೆ ಮಾತ್ರವಲ್ಲದೆ ಇತರ ಫಲಾನುಭವಿ ಗೃಹ ಸದಸ್ಯರಿಗೂ ವಿಸ್ತರಿಸುತ್ತವೆ. ಹೀಗಾಗಿ, ಅನೇಕ ವೇಳೆ ಮಹಿಳೆ ತನ್ನ ಪತಿ ಸಾಲಗಾರನಾಗಿದ್ದರೆ ಸಾಲಕ್ಕೆ ಅನರ್ಹಳಾಗುತ್ತಾಳೆ ಅಥವಾ ತಂದೆ ಸಾಲಗಾರನಾಗಿದ್ದರೆ ಮಗ ಸಾಲಕ್ಕೆ ಅನರ್ಹನಾಗುತ್ತಾನೆ.

ಮಾದರಿಗಳಲ್ಲಿ ಆಡಳಿತಾತ್ಮಕ ವಿಭಾಗಗಳಾದ್ಯಂತ ತರಬೇತಿ ಪಡೆದ ಸಂಭಾವ್ಯ ಫಲಾನುಭವಿಗಳನ್ನು ಪರಿಗಣಿಸಿ, ಕಲಬುರಗಿ ವಿಭಾಗವು (ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳೊಂದಿಗೆ) ಕಳಪೆ ಸನ್ನಿವೇಶವನ್ನು ಪ್ರಸ್ತುತಪಡಿಸುತ್ತದೆ. ತರಬೇತಿ ಪಡೆದ 45 ಪ್ರತಿಶತ ಯುವಕರನ್ನು ನಂತರದಲ್ಲಿ ವಾಣಿಜ್ಯ ಬ್ಯಾಂಕುಗಳು ಅವರನ್ನು ಉದ್ಯಮಗಳನ್ನು ಪ್ರಾರಂಭಿಸಲು ಸಾಲಕ್ಕೆ ಅನರ್ಹರು ಎಂದು ಗುರುತಿಸಿದೆ. ಈ ವಿಭಾಗದ ನಂತರ ಬೆಳಗಾವಿ ಬರುತ್ತದೆ. ಇಲ್ಲಿ 42.81 ಪ್ರತಿಶತದಷ್ಟು ಫಲಾನುಭವಿಗಳು ಸಾಲಕ್ಕೆ ಅನರ್ಹರಾಗಿದ್ದಾರೆ. ತುಲನಾತ್ಮಕವಾಗಿ ಹೇಳುವುದಾದರೆ, ಮೈಸೂರು ವಿಭಾಗವು ಈ ವಿಷಯದಲ್ಲಿ ಹೆಚ್ಚು ಉತ್ತಮವಾಗಿದೆ.

ಕೋಷ್ಟಕ ಸಂಖ್ಯೆ 10.1.3: ಮಾದರಿ ಜಿಲ್ಲೆಗಳು ಮತ್ತು ಬ್ಯಾಂಕ್ ಸಾಲಕ್ಕೆ ಅನರ್ಹರಾದ ತರಬೇತಿ ಪಡೆದ ಯುವಕರು

| ವಿಭಾಗಗಳು | ಜಿಲ್ಲೆ | ಎರವಲು ಪಡೆಯಲಾಗಿಲ್ಲ | | ಒಟ್ಟು |
|---|---|---|---|---|
| | | ಸಂಖ್ಯೆ | % | |
| ಬೆಂಗಳೂರು | ಬೆಂಗಳೂರು – ನಗರ | 33 | 35.11 | 94 |
| | ಚಿತ್ರದುರ್ಗ | 107 | 38.77 | 276 |
| | ಉಪ–ಮೊತ್ತ | 140 | 37.84 | 370 |
| ಬೆಳಗಾವಿ | ಬಾಗಲಕೋಟೆ | 245 | 45.37 | 540 |
| | ಧಾರವಾಡ | 38 | 31.40 | 121 |
| | ಉಪ–ಮೊತ್ತ | 283 | 42.81 | 661 |
| ಕಲಬುರಗಿ | ಕಲಬುರಗಿ | 220 | 45.74 | 481 |
| | ಯಾದಗಿರಿ | 26 | 41.27 | 63 |
| | ಉಪ–ಮೊತ್ತ | 246 | 45.22 | 544 |
| ಮೈಸೂರು | ಹಾಸನ | 154 | 32.84 | 469 |
| | ಉಡುಪಿ | 11 | 45.83 | 24 |
| | ಉಪ–ಮೊತ್ತ | 165 | 33.47 | 493 |
| ಒಟ್ಟು | | 834 | 40.33 | 2068 |

ಮೂಲ : ಪ್ರಾಥಮಿಕ ದತ್ತಾಂಶ

[3] ಕರ್ನಾಟಕ ಸರ್ಕಾರ ಪ್ರಕಟಪಡಿಸಿದ ಮಾರ್ಗಸೂಚಿಗಳ ಪ್ರಕಾರ, ಫಲಾನುಭವಿಯು 'ಪಂಚಾಯಿತಿ ರಾಜ್ ವ್ಯವಸ್ಥೆಯ ಮೂಲಕ ಸರ್ಕಾರಿ ಕಾರ್ಯಕ್ರಮಗಳಿಂದ ಯಾವುದೇ ಸಹಾಯವನ್ನು ಪಡೆಯದ ಗ್ರಾಮೀಣ ಯುವಕನಾಗಿರಬೇಕು' (ಕರ್ನಾಟಕ ಸರ್ಕಾರ, ಪುಟ 2–3)
http://koushalya.karnataka.gov.in/KSRLPS/Documents/operational%20guidelines%20of%20RGCY.pdf
Accessed on 10 October 2019

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನದಲ್ಲಿ ಇದು ಏಕೆ ಅತ್ಯಗತ್ಯ ವಿಷಯವಾಗಿದೆ? ಫಲಾನುಭವಿಯನ್ನು ಗುರುತಿಸುವ ಅಥವಾ ಅವರನ್ನು ತರಬೇತಿಗೆ ಒಳಪಡಿಸುವ ಆರಂಭದಲ್ಲಿಯೇ ಅನರ್ಹತೆಯ ಬಗ್ಗೆ ಮಾಹಿತಿಯನ್ನು ತಿಳಿಸಿದ್ದರೆ ಕಾರ್ಯಕ್ರಮದ ವೆಚ್ಚಗಳನ್ನು ಉಳಿಸಬಹುದಿತ್ತು. ಜಂಟಿ ಹೊಣೆಗಾರಿಕೆ ಗುಂಪಿನಲ್ಲಿರುವ ಸದಸ್ಯರಲ್ಲಿ ಒಬ್ಬರು ಅನರ್ಹರು ಎಂದು ಕಂಡು ಬಂದರೂ, ಇಡೀ ಗುಂಪು ಅನರ್ಹವಾಗುತ್ತದೆ ಎಂಬ ಅಂಶವನ್ನು ಇಲ್ಲಿ ಗಮನಿಸಬಹುದಾಗಿದೆ. ಸರ್ಕಾರೇತರ ಸಂಸ್ಥೆಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ತೊಂದರೆ ಅನುಭವಿಸುತ್ತವೆ ಏಕೆಂದರೆ ಅವರು ಸಾಲಕ್ಕಾಗಿ ಬ್ಯಾಂಕಿನಿಂದ ಅನರ್ಹರಾಗುವಂತಹ ವ್ಯಕ್ತಿಗಳಿಗೆ ತರಬೇತಿ ಪಡೆಯಲು ತಮ್ಮ ಸಂಪನ್ಮೂಲಗಳನ್ನು ಹೂಡಿಕೆ ಮಾಡುತ್ತಿದ್ದರು. ಅಭ್ಯರ್ಥಿಗಳು ಉದ್ಯಮವನ್ನು ಪ್ರಾರಂಭಿಸಲು ಸಾಲವನ್ನು ಪಡೆಯದ ಕಾರಣ ಅವರು ವೆಚ್ಚಗಳನ್ನು ಮರುಪಾವತಿ ಮಾಡಿಲ್ಲ.

ನಕ್ಷೆ 10.1.1ಎ ಮತ್ತು ಕೋಷ್ಟಕ 10.1.3 ರಿಂದ ಗ್ರಹಿಸಬಹುದಾದಂತೆ, ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕವು ಉದ್ದೇಶಿತ ಫಲಾನುಭವಿಗಳಲ್ಲಿ ಮೂರನೇ ಎರಡಕ್ಕಿಂತ ಕಡಿಮೆ ಜನರಿಗೆ ತಲುಪುವ ಪರಿಸ್ಥಿತಿಯನ್ನು ನಾವುಹೊಂದಿದ್ದೇವೆ. ಈಗ 2068 ಜನರ ಮಾದರಿಯಲ್ಲಿ ಸುಮಾರು 834 ಫಲಾನುಭವಿಗಳು ಅನರ್ಹರಾಗಿದ್ದಾರೆ. ಸಾಕಷ್ಟು ಮಾರ್ಗದರ್ಶಿತ ಯುವಕರ ಆಯ್ಕೆ ಇದ್ದಿದ್ದರೆ, ಕರ್ನಾಟಕದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆ ಮೂಲಕ ಸ್ವಯಂ ಉದ್ಯೋಗಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ ಕನಿಷ್ಠ 40 ಪ್ರತಿಶತ ಹೆಚ್ಚು ಜನರು ಇರಬಹುದಿತ್ತು.

**ರೇಖಾಚಿತ್ರ : 10.1.1ಎ ಬ್ಯಾಂಕ್ ಸಾಲಕ್ಕೆ ಅನರ್ಹವಾದ ಮಾದರಿ ಫಲಾನುಭವಿಗಳು**




ಮಾದರಿಯಲ್ಲಿರುವ ವಿವಿಧ ಜಿಲ್ಲೆಗಳಲ್ಲಿ, ಈ ಅನರ್ಹತೆಯ ಪ್ರಸಂಗ ಉಡುಪಿ ಜಿಲ್ಲೆಯ ವಿಷಯದಲ್ಲಿ 45.83 ಪ್ರತಿಶತದೊಂದಿಗೆ ಅತ್ಯಧಿಕವಾಗಿದೆ. ನಂತರದ ಸ್ಥಾನದಲ್ಲಿ ಕಲಬುರಗಿ (45.74%), ಬಾಗಲಕೋಟೆ (45.37%), ಮತ್ತು ಯಾದಗಿರಿ (41.27%). ಅತಿ ಕಡಿಮೆ ಪ್ರಮಾಣ ಧಾರವಾಡ ಮತ್ತು ಹಾಸನದಲ್ಲಿ (ಕ್ರಮವಾಗಿ 31.40 ಮತ್ತು 32.84%) ಆಗಿದ್ದು, ಇದು ತುಂಬಾ ಕಡಿಮೆಯಾಗಿದೆ.

ಕೋಷ್ಟಕ 10.1.3 ಸಾಲಗಳನ್ನು ಪಡೆಯುವಲ್ಲಿ ಯಶಸ್ವಿಯಾಗಲಾಗದ ತರಬೇತಿ ಪಡೆದ ಮತ್ತು ಅದರಿಂದ ಯೋಜನೆಯ ನಂತರದ ಹಂತಗಳ ಮೂಲಕ ಸಾಗುವ ಸಂಭಾವ್ಯ ಫಲಾನುಭವಿಗಳ ವಿತರಣೆಯನ್ನು

ಪ್ರಸ್ತುತಪಡಿಸುತ್ತದೆ. ಧಾರವಾಡ (31.40) ಮತ್ತು ಹಾಸನ (32.84)ದ ಎರಡು ಸರ್ಕಾರೇತರ ಸಂಸ್ಥೆಗಳಲ್ಲಿ ಮಾತ್ರ ಆಯ್ಕೆಯಾದ ಫಲಾನುಭವಿಗಳಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಮಂದಿ ಅನರ್ಹರಾಗಿದ್ದಾರೆ. ಉಳಿದವರೆಲ್ಲರೂ ಸಾಲಕ್ಕೆ ಅನರ್ಹರುಎಂದು ಕಂಡುಬಂದ ಸ್ವಯಂ ಉದ್ಯೋಗ ಕಾರ್ಯಕ್ರಮಕ್ಕೆ ಆಯ್ಕೆಯಾದವರಲ್ಲಿ ಮೂರನೇ ಒಂದು ಭಾಗದಷ್ಟು ಫಲಾನುಭವಿಗಳ ಜಾಡು ದಾಖಲೆ ಹೊಂದಿದ್ದಾರೆ. ಉಡುಪಿಯಲ್ಲಿ (45.83), ಕಲಬುರಗಿ (45.74), ಬಾಗಲಕೋಟೆ (45.37) ಮತ್ತು ಚಿತ್ರದುರ್ಗ (38.77) ದಲ್ಲಿರುವ ಸರ್ಕಾರೇತರ ಸಂಸ್ಥೆಗಳು ಈ ಯೋಜನೆಯಲ್ಲಿ ವಿಫಲರಾದ ತರಬೇತಿ ಪಡೆದ ಯುವಕರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಕೇಂದ್ರೀಕೃತ ಸಮೂಹ ಚರ್ಚೆ ಮತ್ತು ಆಳವಾದ ಸಂದರ್ಶನ ಸಮಯದಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಾವು ನಡೆಸಿದ ಸಂವಾದದಿಂದ ಸಾಧಕ ಸ್ವಯಂ ಉದ್ಯೋಗ ಫಲಾನುಭವಿಗಳನ್ನು ಯಶಸ್ವಿ ವ್ಯಕ್ತಿಗಳಾಗಿ ಪರಿವರ್ತಿಸುವಲ್ಲಿ ಅವರ ವೈಫಲ್ಯವು ಅವರ ತೀರ್ಪಿನ ದೋಷದ ಪರಿಣಾಮವಲ್ಲ ಎಂದು ತಿಳಿದುಬಂದಿದೆ. ಬದಲಾಗಿ, ಫಲಾನುಭವಿಗಳನ್ನು ಆಯ್ಕೆ ಮಾಡುವುದು ಆಯಾ ಗ್ರಾಮ ಪಂಚಾಯಿತಿಗಳಲ್ಲಿದೆ ಮತ್ತು ಅದರಲ್ಲಿ ತಮ್ಮ ಪಾತ್ರವಿಲ್ಲ. ಇದನ್ನು ಮುಂಚಿತವಾಗಿಯೇ ಸೂಚಿಸುವ ಯಾವುದೇ ಪ್ರಯತ್ನವು ರಾಜಕೀಯ ಒತ್ತಡಕ್ಕೆ ಕಾರಣವಾಯಿತು, ಮತ್ತು ಹೀಗೆಂದು ಹೇಳಿ ತಮ್ಮನ್ನು ಸ್ಥಗಿತಗೊಳಿಸಲಾಯಿತು ಎಂದು ತಿಳಿಸಿದರು. "ನೀವು ನಿಮ್ಮ ಕೆಲಸವನ್ನು ಮಾಡಿ. ಅವರು ಸಾಲಕ್ಕಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸುವ ಹೊತ್ತಿಗೆ ಅವರು ಹಳೆಯ ಅಥವಾ ಬಾಕಿ ಇರುವ ಸಾಲಗಳನ್ನು ಬ್ಯಾಂಕಿನಲ್ಲಿ ತೆರವುಗೊಳಿಸಿಕೊಳ್ಳಲಿ'".

ಬೆಂಗಳೂರಿನ ಮತ್ತೊಂದು ಸರ್ಕಾರೇತರ ಸಂಸ್ಥೆಯು ಇತರ ಕುಟುಂಬ ಸದಸ್ಯರ ಹೊಣೆಗಾರಿಕೆಯು ಸಾಲದ ಮಂಜೂರಾತಿ ಪರಿಗಣಿಸಲು ಅಡ್ಡಿಯಾಗುವುದಿಲ್ಲ ಎಂಬ ಊಹೆ ಸಾಲದ ಆಕಾಂಕ್ಷಿಗಳಲ್ಲಿ ಮನೆಮಾಡಿದೆ ಎಂದು ಸೂಚಿಸಿದೆ.

ಅಂತಿಮವಾಗಿ, ಕೆಲವು ಸರ್ಕಾರೇತರ ಸಂಸ್ಥೆಗಳು ಒಂದು ವಾದವನ್ನು ಮಂಡಿಸಿದವು. ಕಳಪೆ ಕಾರ್ಯಕ್ಷಮತೆಯು ಸಂಬಂಧಪಟ್ಟ ಸರ್ಕಾರೇತರ ಸಂಸ್ಥೆಯ ಲಕ್ಷಣವಾಗಿದ್ದರೆ ಅಂತಹ ಜಿಲ್ಲೆಗಳಲ್ಲಿ ಕೆಲಸ ಮಾಡಿದ ಎಲ್ಲಾ ಸರ್ಕಾರೇತರ ಸಂಸ್ಥೆಗಳ ಸರ್ವಾಂಗೀಣ ಕಳಪೆ ಕಾರ್ಯಕ್ಷಮತೆ (ಉದ್ದೇಶಿತ ಫಲಾನುಭವಿಗಳು ಸಾಲಕ್ಕೆ ಅನರ್ಹರಾಗುವ ವಿಷಯದಲ್ಲಿ) ಏಕೆ ಕಂಡು ಬಂದಿದೆ? ಇದು ಫಲಾನುಭವಿಗಳ ಆಯ್ಕೆಯಲ್ಲಿ ಯಾವುದೇ ರೀತಿಯ ರಾಜಕೀಯ ಪ್ರಭಾವ ಅಥವಾ ಬೇರೆ ಯಾವುದೇ ಪ್ರಭಾವವನ್ನು ಕಡಿಮೆ ಮಾಡಬೇಕಂದು ಕರೆ ನೀಡುತ್ತದೆ.

**10.1.5 ಫಲಾನುಭವಿಗಳ ಸಾಮಾಜಿಕ ವಿವರ:**

ಉದ್ದೇಶಿತ ಫಲಾನುಭವಿಗಳಲ್ಲಿ 40 ಪ್ರತಿಶತಕ್ಕೂ ಹೆಚ್ಚು ಫಲಾನುಭವಿಗಳನ್ನು ಪ್ರಾರಂಭದಲ್ಲಿಯೇ ಯೋಜನೆಯಿಂದ ತೆಗೆದುಹಾಕಲಾಗಿದೆ ಎಂದು ಪರಿಗಣಿಸಿದಾಗ, ಈ ಮೌಲ್ಯಮಾಪನವು ಫಲಾನುಭವಿಗಳ ಸಾಮಾಜಿಕ ಗುಣಲಕ್ಷಣಗಳು ಮತ್ತು ತೆಗೆದು ಹಾಕಲ್ಪಟ್ಟವರ ಬಗ್ಗೆ ಗಮನಹರಿಸಿದೆ. ವಯಸ್ಸು, ಲಿಂಗ, ಜಾತಿ ವರ್ಗಗಳು, ಧರ್ಮ ಮತ್ತು ಶಿಕ್ಷಣ ನಾವು ಈ ಐದು ಪ್ರಮುಖ ಸಾಮಾಜಿಕ ಗುಣಲಕ್ಷಣಗಳನ್ನು ಗೌರವಿಸಬೇಕು.

**10.1.5.1. ಆಯ್ಕೆಗೆ ವಯಸ್ಸಿನ ಮಾನದಂಡ:**

ಇವುಗಳಲ್ಲಿ ಮೊದಲನೆಯದು, ಅಂದರೆ ವಯಸ್ಸು, ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಗುರಿ ಪ್ರಕಾರ ಫಲಾನುಭವಿಯು ಯುವಕನೇ ಎಂಬುದನ್ನು ನಿರ್ಧರಿಸುತ್ತದೆ. ಫಲಿತಾಂಶಗಳ ಪ್ರಸ್ತುತಿಯು ಎರಡು ಘಟಕಗಳನ್ನು ಹೊಂದಿದೆ. 1. ಕಾರ್ಯಕ್ರಮದ ಸ್ವಯಂ ಉದ್ಯೋಗ ಘಟಕದ ಮೊದಲ ಹಂತದಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ತರಬೇತಿ ಪಡೆದ ಫಲಾನುಭವಿಗಳ ಸಂಖ್ಯೆ 2. ಅವರಲ್ಲಿ ಯಾರನ್ನು ಅನರ್ಹರೆಂದು ಪರಿಗಣಿಸಲಾಗಿದೆ ಎಂಬುದರ ಪರಿಶೀಲನೆ. ಯುವಕರ ವಯಸ್ಸಿಗೆ ಸಂಬಂಧಿಸಿದಂತೆ ಸಾರ್ವತ್ರಿಕವಾಗಿ ಅಂಗೀಕರಿಸಲಾದ ವ್ಯಾಖ್ಯಾನವಿಲ್ಲದಿದ್ದರೂ, ವಿಶ್ವಸಂಸ್ಥೆಯು 18 ರಿಂದ 25 ವರ್ಷ ವಯಸ್ಸಿನ ವ್ಯಕ್ತಿಗಳನ್ನು ಯುವಕರೆಂದು ಪರಿಗಣಿಸುತ್ತದೆ[4]. ವಿವಿಧ ರಾಷ್ಟ್ರಗಳು ಜನಸಂಖ್ಯೆಯ ಸ್ಥಳೀಯ ಜನಸಂಖ್ಯಾ ಸಂಯೋಜನೆಗೆ ಅನುಗುಣವಾಗಿ ವಿಭಿನ್ನ ವ್ಯಾಖ್ಯಾನಗಳನ್ನು ಅಳವಡಿಸಿಕೊಂಡಿವೆ. ಈ ನಿಟ್ಟಿನಲ್ಲಿ ಭಾರತ ಸ್ಥಿರವಾದ ವಿಧಾನವನ್ನು ಹೊಂದಿಲ್ಲ. ಉದಾಹರಣೆಗೆ, 2003ರ ರಾಷ್ಟ್ರೀಯ ಯುವ ನೀತಿಯು ಯುವಕರನ್ನು 13–35 ವರ್ಷಗಳ ವ್ಯಕ್ತಿಗಳು ಎಂದು ವ್ಯಾಖ್ಯಾನಿಸಿತು. ಆದರೆ, ರಾಷ್ಟ್ರೀಯ ಯುವ ನೀತಿ, 2014 ಅದನ್ನು ಮಾರ್ಪಡಿಸಿತು ಮತ್ತು 15–29 ವರ್ಷದವರನ್ನು 'ಯುವಕರು' ಎಂದು ವ್ಯಾಖ್ಯಾನಿಸಿತು. 2017ರ ಅಂತ್ಯದಲ್ಲಿ, ತನ್ನ ದತ್ತಾಂಶ ವಿಶ್ಲೇಷಣೆ ಮತ್ತು ನೀತಿ ಶಿಫಾರಸ್ಸುಗಳಿಗೆ ಪರಿಗಣಿಸಲಾಗಿರುವ ಭಾರತ ಸರ್ಕಾರವು ಸಿದ್ಧಪಡಿಸಿದ ಒಂದು ಪ್ರಮುಖ ದಾಖಲೆಯು, 15 ರಿಂದ 34 ವರ್ಷ ವಯಸ್ಸಿನವರನ್ನು ಯುವಕರು ಎಂದು ಉಲ್ಲೇಖಿಸಿದೆ.[5] ಕರ್ನಾಟಕ ಸರ್ಕಾರದಲ್ಲಿ ಸಂಬಂಧಿಸಿದ ಇಲಾಖೆಯ ಕಾರ್ಯಾಚರಣೆ ಮಾರ್ಗಸೂಚಿಗಳ ಪ್ರಕಾರ, ಯೋಜನೆಯ ಫಲಾನುಭವಿಗಳ ವಯಸ್ಸು 18–35 ವರ್ಷಗಳ ನಡುವೆ ಇರಬೇಕು ಎಂದಾಗಿದೆ.

ಕೋಷ್ಟಕ ಸಂಖ್ಯೆ 10.1.4: ಪ್ರಯೋಜನ ವರ್ಷ ಮತ್ತು ಫಲಾನುಭವಿಗಳ ವಯಸ್ಸು

| ಪ್ರಯೋಜನದ ವರ್ಷ | % ನಲ್ಲಿ ವಯಸ್ಸು (ಗುಂಪು ಮಾಡಲಾಗಿದೆ) | | | | | ಒಟ್ಟು ಸಂಖ್ಯೆ |
|---|---|---|---|---|---|---|
| | 21 ವರ್ಷಕ್ಕಿಂತ ಕಡಿಮೆ | 22 ರಿಂದ 25 ವರ್ಷಗಳು | 26 ರಿಂದ 30 ವರ್ಷಗಳು | 31 ರಿಂದ 35 ವರ್ಷಗಳು | 36 ವರ್ಷಗಳಿಗಿಂತ ಹೆಚ್ಚು | |
| 2013–14 | 12.39 | 23.89 | 25.66 | 36.28 | 1.77 | 113 |
| 2014–15 | 6.18 | 18.53 | 34.75 | 23.94 | 16.60 | 259 |
| 2015–16 | 9.57 | 21.41 | 39.86 | 20.27 | 8.88 | 439 |
| 2016–17 | 6.36 | 22.51 | 40.18 | 22.91 | 8.04 | 1257 |
| ಎಲ್ಲಾ (%) | 7.35 | 21.86 | 38.64 | 23.21 | 8.95 | |
| ಇಲ್ಲ. | 152 | 452 | 799 | 480 | 185 | 2068 |
| ಸೂಚನೆ: ನಿರ್ದಿಷ್ಟವಾಗಿ ತಿಳಿಸದಿದ್ದಾಗ ಎಲ್ಲಾ ಅಂಕಿಅಂಶಗಳು ಶೇಕಡಾ ದರದಲ್ಲಿವೆ. | | | | | | |

ಮೂಲ: ಪ್ರಾಥಮಿಕ ದತ್ತಾಂಶ

ನಾವು ವಯಸ್ಸಿಗೆ ಸಂಬಂಧಿಸಿದ ಫಲಿತಾಂಶಗಳ ವಿಶ್ಲೇಷಣೆಯನ್ನು ಮೊದಲು ಕಾರ್ಯಕ್ರಮ ಅನುಷ್ಠಾನವು ಸೂಚಿಸಲಾದ ಮಾರ್ಗಸೂಚಿಗಳ ಪ್ರಕಾರ ಇದೆಯೇ ಎಂದು ನೋಡುವ ಮೂಲಕ ಪ್ರಾರಂಭಿಸುತ್ತೇವೆ. ಕಾರ್ಯಾಚರಣೆ ಮಾರ್ಗಸೂಚಿಗಳು ಈ ಯೋಜನೆಯನ್ನು 18 ರಿಂದ 35 ವರ್ಷಗಳಲ್ಲಿ ಇರುವವರಿಗೆ ಉದ್ದೇಶಿಸಲಾಗಿದೆ ಎಂದು

[4] ನೋಡಿ: https://www.un.org/en/sections/issues-depth/youth-0/index.html Accessed on 10 october 2019

[5] ನೋಡಿ : ಭಾರತ ಸರ್ಕಾರ (2017: 2–3)

ಸೂಚಿಸುತ್ತದೆ. ಫಲಾನುಭವಿಗಳ ವಯಸ್ಸಿನ ಬಗ್ಗೆ ಮಾಹಿತಿಯನ್ನು ಮೌಲ್ಯಮಾಪನದ ಸಮಯದಲ್ಲಿ ಅಂದರೆ 2019 ಮತ್ತು ಭಾಗಶಃ 2020 ರಲ್ಲಿ ಸಂಗ್ರಹಿಸಲಾಯಿತು. ನಿಗದಿತ ಅವಧಿ 2016–17 ಆಗಿತ್ತು. ಆದ್ದರಿಂದ ಸುಮಾರು ಎರಡು ವರ್ಷಗಳ ಹಿಂದೆ ಈ ಅಧ್ಯಯನದಲ್ಲಿ ಫಲಾನುಭವಿಗಳ ಕೊನೆಯ ಬ್ಯಾಚ್ 35 ವರ್ಷಗಳಿಗೆ ಮೇಲ್ಪಟ್ಟವರಾಗಿರಬೇಕು ಮತ್ತು ದತ್ತಾಂಶ ಸಂಗ್ರಹಣೆಯ ದಿನಾಂಕದಂದು ಅವರು 37 ವರ್ಷದವರಾಗಿರಬಹುದು. ಆದರೆ ಮಾದರಿಯಲ್ಲಿರುವ 185 ಜನರು 36 ವರ್ಷಗಳಿಗಿಂತ ಹೆಚ್ಚು ವಯಸ್ಸಿನವರೆಂದೂ, ಅವರಲ್ಲಿ 25 ಪ್ರತಿಶತಕ್ಕೂ ಹೆಚ್ಚು ಜನರು ಫಲಾನುಭವಿಗಳಾಗಲು ಅನರ್ಹರಾಗಿದ್ದರೆಂದೂ ಕಂಡುಬಂದಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಫಲಾನುಭವಿಗಳನ್ನು ಗುರುತಿಸುವಾಗ ಮತ್ತು ಶಿಫಾರಸ್ಸು ಮಾಡುವಾಗ ವಯಸ್ಸಿನ ಅಂಶವನ್ನು ವಿವಿಧ ಸಮಿತಿಗಳು, ಗ್ರಾಮ ಸಭೆ ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ಕಟ್ಟುನಿಟ್ಟಾಗಿ ನೋಡಿರಲಿಲ್ಲ. ಅವರನ್ನು ಗುರುತಿಸಲಾಯಿತು, ತರಬೇತಿ ನೀಡಲಾಯಿತು. ಮತ್ತು ಅವರಲ್ಲಿ ಕೆಲವರಿಗೆ ಸ್ವಯಂ ಉದ್ಯೋಗ ಉದ್ಯಮಗಳನ್ನು ತೆಗೆದುಕೊಳ್ಳಲು ಯೋಜನೆಯಡಿ ಸಾಲಗಳನ್ನು ಒದಗಿಸಲಾಯಿತು.

ಕೋಷ್ಟಕ 10.1.5: ವಿಭಾಗಗಳು ಮತ್ತು ಜಿಲ್ಲೆಗಳಾದ್ಯಂತ ಗುರುತಿಸಲಾದ ಮತ್ತು ತರಬೇತಿ ಪಡೆದ ಫಲಾನುಭವಿಗಳ ವಯಸ್ಸು

| ವಿಭಾಗ | ಜಿಲ್ಲೆಗಳು | ವಯಸ್ಸು (ಗುಂಪು ಮಾಡಲಾಗಿದೆ) | | | | | ಒಟ್ಟು (ಸಂ.) |
|---|---|---|---|---|---|---|---|
| | | 21 ವರ್ಷಕ್ಕಿಂತ ಕಡಿಮೆ | 22 ರಿಂದ25 ವರ್ಷಗಳು | 26 ರಿಂದ 30 ವರ್ಷಗಳು | 31 ರಿಂದ 35 ವರ್ಷಗಳು | 36 ವರ್ಷ ಕ್ಕೆ ಹೆಚ್ಚು | |
| ಬೆಂಗಳೂರು | ಬೆಂಗಳೂರು – ನಗರ | 7.45 | 25.53 | 30.85 | 19.15 | 17.02 | 94 |
| | ಚಿತ್ರದುರ್ಗ | 7.61 | 26.09 | 43.84 | 17.03 | 5.43 | 276 |
| | ಉಪ–ಮೊತ್ತ | 7.57 | 25.95 | 40.54 | 17.57 | 8.38 | 370 |
| ಬೆಳಗಾವಿ | ಬಾಗಲಕೋಟೆ | 2.78 | 21.67 | 39.63 | 23.89 | 12.04 | 540 |
| | ಧಾರವಾಡ | 5.79 | 22.31 | 34.71 | 23.14 | 14.05 | 121 |
| | ಉಪ–ಮೊತ್ತ | 3.33 | 21.79 | 38.73 | 23.75 | 12.41 | 661 |
| ಕಲಬುರಗಿ | ಕಲಬುರಗಿ | 9.36 | 23.08 | 41.79 | 21.00 | 4.78 | 481 |
| | ಯಾದಗಿರಿ | 11.11 | 17.46 | 34.92 | 23.81 | 12.70 | 63 |
| | ಉಪ–ಮೊತ್ತ | 52 | 122 | 223 | 116 | 31 | 544 |
| ಮೈಸೂರು | ಹಾಸನ | 10.45 | 18.55 | 33.90 | 29.21 | 7.89 | 469 |
| | ಉಡುಪಿ | 4.17 | 12.50 | 45.83 | 20.83 | 16.67 | 24 |
| | ಉಪ–ಮೊತ್ತ | 50 | 90 | 170 | 142 | 41 | 493 |
| | ಒಟ್ಟು (%) | 7.35 | 21.86 | 38.64 | 23.21 | 8.95 | 2068 |
| | ಸಂಖ್ಯೆ | 152 | 452 | 799 | 480 | 185 | |
| ಬ್ಯಾಂಕ್ ಸಾಲಗಳಿಗೆ ಅನರ್ಹರಾಗಿದ್ದವರ ಶೇಕಡಾದರ | | | | | | | |
| ಬೆಂಗಳೂರು | ಬೆಂಗಳೂರು – ನಗರ | 3.03 | 27.27 | 27.27 | 30.30 | 12.12 | 33 |
| | ಚಿತ್ರದುರ್ಗ | 8.41 | 28.04 | 42.99 | 15.89 | 4.67 | 107 |
| | ಉಪ–ಮೊತ್ತ | 7.14 | 27.86 | 39.29 | 19.29 | 6.43 | 140 |
| ಬೆಳಗಾವಿ | ಬಾಗಲಕೋಟೆ | 3.27 | 19.18 | 40.41 | 26.12 | 11.02 | 245 |
| | ಧಾರವಾಡ | 5.26 | 21.05 | 42.11 | 13.16 | 18.42 | 38 |
| | ಉಪ–ಮೊತ್ತ | 3.53 | 19.43 | 40.64 | 24.38 | 12.01 | 283 |

| | | | | | | | |
|---|---|---|---|---|---|---|---|
| ಕಲಬುರಗಿ | ಕಲಬುರಗಿ | 7.27 | 24.55 | 40.91 | 22.73 | 4.55 | 220 |
| | ಯಾದಗಿರಿ | 11.54 | 15.38 | 15.38 | 38.46 | 19.23 | 26 |
| | ಉಪ–ಮೊತ್ತ | 7.72 | 23.58 | 38.21 | 24.39 | 6.10 | 246 |
| ಮೈಸೂರು | ಹಾಸನ | 9.74 | 22.08 | 33.12 | 25.32 | 9.74 | 154 |
| | ಉಡುಪಿ | | 27.27 | 27.27 | 27.27 | 18.18 | 11 |
| | ಉಪ–ಮೊತ್ತ | 9.09 | 22.42 | 32.73 | 25.45 | 10.30 | 165 |
| ಒಟ್ಟು | % | 6.47 | 22.66 | 38.13 | 23.74 | 8.99 | |
| | ಇಲ್ಲ. | 54 | 189 | 318 | 198 | 75 | 834 |
| ಸೂಚನೆ: ನಿರ್ದಿಷ್ಟವಾಗಿ ತಿಳಿಸದಿದ್ದಾಗ ಎಲ್ಲಾ ಅಂಕಿಅಂಶಗಳು ಶೇಕಡಾ ದರದಲ್ಲಿವೆ. | | | | | | | |

ಮೂಲ: ಪ್ರಾಥಮಿಕ ದತ್ತಾಂಶ

ನಾವು ತರಬೇತಿ ಪಡೆದಿದ್ದರೂ ಅವರು ಬ್ಯಾಂಕಿನಲ್ಲಿ ಇತರ ಸಾಲಗಳನ್ನು ಹೊಂದಿದ್ದರು ಅಥವಾ ಪಂಚಾಯಿತಿ/ ಸರ್ಕಾರದ ಮೂಲಕ ಇತರ ಕಾರ್ಯಕ್ರಮಗಳ ಫಲಾನುಭವಿಗಳಾಗಿದ್ದರು ಎಂಬ ಕಾರಣಕ್ಕಾಗಿ ಅಗತ್ಯ ಸಾಲಗಳನ್ನು ಪಡೆಯಲು ಅನರ್ಹರಾಗಿ ವಿಫಲರಾದವರ ಕಡೆಗೆ ಗಮನಹರಿಸಬೇಕು. ಮಾದರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ನಾವು ಈ ದತ್ತಾಂಶವನ್ನು ನೋಡೋಣ.

**ರೇಖಾಚಿತ್ರ 10.1.2: ಮಾದರಿ ಜಿಲ್ಲೆಯಾದ್ಯಂತ ವಯಸ್ಸು ಮತ್ತು ಅನರ್ಹತೆಯ ದರ**




ಉಡುಪಿ, ಯಾದಗಿರಿ ಮತ್ತು ಬೆಂಗಳೂರು ನಗರ ಜಿಲ್ಲೆಗಳನ್ನು ಹೊರತುಪಡಿಸಿ, ತರಬೇತಿ ಪಡೆದ ಫಲಾನುಭವಿಗಳ ಪ್ರಧಾನ ಯುವಕರಲ್ಲಿ, ಅಂದರೆ 26 ರಿಂದ 30 ವರ್ಷಗಳಲ್ಲಿ ಸಾಲಕ್ಕೆ ಅನರ್ಹತೆಯ ಪ್ರಮಾಣವು ಅತ್ಯಧಿಕವಾಗಿದೆ ಎಂದು ಕಂಡುಬಂದಿದೆ. ಈ ಆರು ಜಿಲ್ಲೆಗಳಲ್ಲಿ, ಚಿತ್ರದುರ್ಗ, ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳು 26 ರಿಂದ 30 ವರ್ಷ ವಯಸ್ಸಿನವರ ಅನರ್ಹತೆ ಪ್ರಮಾಣದಲ್ಲಿ ಅಗ್ರ ಸ್ಥಾನದಲ್ಲಿವೆ: ಅದು ಆ ವಯಸ್ಸಿನ ಫಲಾನುಭವಿಗಳಲ್ಲಿ 40 ಪ್ರತಿಶತವನ್ನು ಮೀರುತ್ತದೆ. 31 ರಿಂದ 35 ವರ್ಷ ವಯಸ್ಸಿನವರಿಗೆ ಸಂಬಂಧಿಸಿದಂತೆ, ಯಾದಗಿರಿ ಮತ್ತು ಬೆಂಗಳೂರು–ನಗರ ಕ್ರಮವಾಗಿ 38.6 ಮತ್ತು 30 ಪ್ರತಿಶತದೊಂದಿಗೆ ಅನರ್ಹತೆ ದರಗಳಲ್ಲಿ ಅಗ್ರಸ್ಥಾನದಲ್ಲಿವೆ.

ಹೆಚ್ಚಿನ ಗ್ರಾಮೀಣ ವ್ಯಕ್ತಿಗಳು ಪಂಚಾಯಿತಿಮೂಲಕ ಒಂದಲ್ಲ ಒಂದು ಕಾರ್ಯಕ್ರಮಗಳ ಫಲಾನುಭವಿಯಾಗುವಲ್ಲಿ ಯಶಸ್ವಿಯಾಗುತ್ತಿದ್ದರು ಎಂದು ಪರಿಗಣಿಸಿ ಗುರುತಿಸುವ ಜವಾಬ್ದಾರಿ ಹೊಂದಿರುವ ನಿಯೋಗಗಳು ವಯೋಮಾನದಲ್ಲಿ ಹಿರಿಯರಿಗಿಂತ ಹೆಚ್ಚು ಕಿರಿಯ ಯುವಕರಿಗೆ ಒತ್ತು ನೀಡಿರಬಹುದು. ಏಕೆಂದರೆ ಯೌವ್ವನದ ಕೊನೆಯ

ವರ್ಷಗಳಲ್ಲಿರುವ ಯುವಕರು ಈಗಾಗಲೇ ವಾಣಿಜ್ಯ ಬ್ಯಾಂಕುಗಳಿಂದ ಹಣವನ್ನು ಎರವಲು ಪಡೆದಿರಬಹುದು ಅಥವಾ ಇತರ ಕಲ್ಯಾಣ ಕಾರ್ಯಕ್ರಮಗಳ ನೇರ ಫಲಾನುಭವಿಗಳಾಗಿರಬಹುದು. 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮತ್ತು 21 ರಿಂದ 25 ವರ್ಷಗಳ ನಡುವಿನ ಕಿರಿಯ ವಯೋಮಾನದ ಫಲಾನುಭವಿಗಳಲ್ಲಿ ಅನರ್ಹತೆಯ ಪ್ರಮಾಣವು ಬಹಳ ಕಡಿಮೆ ಎಂದು ಗಮನಿಸಲಾಗಿದೆ.

**10.1.5.2 ಫಲಾನುಭವಿಗಳ ಲಿಂಗ ಆಯಾಮ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿಗಳು ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಮಹಿಳಾ ಪರವಾಗಿರುವ ಅಗತ್ಯವನ್ನು ಸೂಚಿಸುತ್ತದೆ. ಆದಾಗ್ಯೂ, ಲಿಂಗ ವಿತರಣೆಗೆ ಸಂಬಂಧಿಸಿದಂತೆ ಆಯ್ಕೆಯು ಮುಖ್ಯವಾಗಿ ಪುರುಷ–ಆಧಾರಿತವಾಗಿದೆ ಎಂದು ಕಂಡು ಬಂದಿದೆ. ಕೇವಲ 30 ಪ್ರತಿಶತ ಫಲಾನುಭವಿಗಳು ಮಹಿಳೆಯರಿದ್ದಾರೆ. ಗ್ರಾಮೀಣ ಮಹಿಳೆಯರು 'ಮನೆ' ನಿರ್ವಹಣೆಯಲ್ಲಿ ನಿರತರಾಗಿರುತ್ತಾರೆ. ಒಂದು ವಾರದ ತರಬೇತಿ ಕಾರ್ಯಕ್ರಮದ ಅಗತ್ಯವು ಅವರಿಗೆ ಪ್ರತಿಬಂಧಕವಾಗಿದೆ. ಕೇಂದ್ರೀಕೃತ ಸಮೂಹ ಚರ್ಚೆಯ ಸಮಯದಲಿ, ಮಹಿಳಾ ಸ್ಪರ್ಧಿಗಳು ಮಾಡಿದ ಬೇಡಿಕೆಗಳಲ್ಲಿ ಒಂದು ವಾರದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಬೇಕಾದ ಕಡ್ಡಾಯ ಅಗತ್ಯವನ್ನು ತಪ್ಪಿಸಬಹುದು ಎಂಬುದು ಒಂದಾಗಿದೆ. ಏಕೆಂದರೆ ಅವರು ಸ್ವಯಂ ಉದ್ಯೋಗದ ಹೆಚ್ಚಿನ ವ್ಯಾಪಾರಗಳಲ್ಲಿ – ಹೈನುಗಾರಿಕೆ, ಹೊಲಿಗೆ ಕೆಲಸ, ಉಪ್ಪಿನಕಾಯಿ ತಯಾರಿಕೆ, ಇತ್ಯಾದಿ – ಕೌಶಲ್ಯಗಳನ್ನು ಹೊಂದಿದ್ದಾರೆ. ಒಬ್ಬ ಮಹಿಳೆ "ನಮ್ಮ ಬಾಲ್ಯದಿಂದ ನಾವು ಕಲಿತ ಯಾವುದಕ್ಕಾದರೂ ಔಪಚಾರಿಕ ತರಬೇತಿಯ ಅಗತ್ಯವಿಲ್ಲ!" ಎಂದು ಸೂಚಿಸಿದ್ದಾರೆ.

ಕಾರ್ಯಕ್ರಮದ ಸ್ವಯಂ ಉದ್ಯೋಗ ಘಟಕದ ನಂತರದ ಹಂತಗಳಿಗೆ ಅನರ್ಹರಾಗಲು ಮಹಿಳೆಯರು ಯಾವುದೇ ದುರ್ಬಲತೆಯನ್ನು ಪ್ರದರ್ಶಿಸಿದ್ದಾರೆಯೇ? ಹೌದಾದರೆ, ಇದು ಪುರುಷ ಫಲಾನುಭವಿಗಳಿಗಿಂತ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ? ಕೋಷ್ಟಕ 10.1.6 ಈ ವಿಷಯದಲ್ಲಿ ಪುರಾವೆಗಳನ್ನು ಪ್ರಸ್ತುತಪಡಿಸುತ್ತದೆ.

ಕೋಷ್ಟಕ ಸಂಖ್ಯೆ 10.1.6: ಮಾದರಿಯಲ್ಲಿರುವ ಫಲಾನುಭವಿಗಳ ಲಿಂಗ ಮತ್ತು ಬ್ಯಾಂಕ್ ಸಾಲಗಳಿಗೆ ಅವರ ಅನರ್ಹತೆಯ ಪಾಲು

| ಜಿಲ್ಲೆ | ಲಿಂಗ (%) | | | ಅದರಲ್ಲಿ ಸಾಲಕ್ಕೆ ಅನರ್ಹರು (%) | | |
|---|---|---|---|---|---|---|
| | ಪುರುಷ | ಹೆಣ್ಣು | ಒಟ್ಟು (ಸಂ.) | ಪುರುಷ | ಹೆಣ್ಣು | ಒಟ್ಟು (ಸಂಖ್ಯೆ) |
| ಬಾಗಲಕೋಟೆ | 70.74 | 29.26 | 540 | 70.61 | 29.39 | 245 |
| ಬೆಂಗಳೂರು – ನಗರ | 40.43 | 59.57 | 94 | 48.48 | 51.52 | 33 |
| ಚಿತ್ರದುರ್ಗ | 75.72 | 24.28 | 276 | 73.83 | 26.17 | 107 |
| ಧಾರವಾಡ | 73.55 | 26.45 | 121 | 68.42 | 31.58 | 38 |
| ಹಾಸನ | 55.86 | 44.14 | 469 | 57.79 | 42.21 | 154 |
| ಕಲಬುರಗಿ | 82.74 | 17.26 | 481 | 83.18 | 16.82 | 220 |
| ಉಡುಪಿ | 16.67 | 83.33 | 24 | 27.27 | 72.73 | 11 |
| ಯಾದಗಿರಿ | 88.89 | 11.11 | 63 | 92.31 | 7.69 | 26 |
| ಒಟ್ಟು % | 69.54 | 30.46 | | 71.10 | 28.90 | |
| ಇಲ್ಲ. | 1438 | 630 | 2068 | 593.00 | 241.00 | 834 |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಾಗಿವೆ | | | | | | |

ಮೂಲ: ಪ್ರಾಥಮಿಕ ದತ್ತಾಂಶ

ಅನರ್ಹತೆ ವಿಷಯದಲ್ಲಿ ಮಹಿಳೆಯರು ಯಾವುದೇ ಹೆಚ್ಚಿನ ದುರ್ಬಲತೆಯನ್ನು ತೋರಿಸುವುದಿಲ್ಲ. ಸಾಲಕ್ಕೆ ಅನರ್ಹರಾಗಿದ್ದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದಲ್ಲಿ ನಂತರ ಪಾಲ್ಗೊಳ್ಳಬೇಕಾಗಿದ್ದ ಮಹಿಳೆಯರು 28.90 ಪ್ರತಿಶತವಿದ್ದು ಯೋಜನೆಯಲ್ಲಿ ಅವರ ಪ್ರಾತಿನಿಧ್ಯ ಅನುಪಾತದಲ್ಲಿ ಸ್ವಲ್ಪ ಕಡಿಮೆಯಾಗಿದೆ. ಫಲಾನುಭವಿಗಳ ಲಿಂಗ ವಿತರಣೆಗೆ ಸಂಬಂಧಿಸಿದಂತೆ ಈ ಫಲಿತಾಂಶಗಳಿಂದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಯೋಜನೆಯಲ್ಲಿ ಮಹಿಳೆಯರ ಸೇರ್ಪಡೆ ತುಂಬಾ ಕಡಿಮೆಯಾಗಿದ್ದರೂ (30.46 ಪ್ರತಿಶತ) ಸೇರಿದವರಿಗೆ ಇದು ರಾಜ್ಯ ಪ್ರಾಯೋಜಿತ ಕಾರ್ಯಕ್ರಮದ ಮೊದಲ ಬಾರಿ ಫಲಾನುಭವಿಗಳಾಗಿರುವುದು ಅತ್ಯುತ್ತಮ ಆರಂಭವಾಗಿತ್ತು ಎಂದು ತೋರುತ್ತದೆ.

**10.1.5.3 ಮಂಗಳಮುಖಿ ಫಲಾನುಭವಿಗಳ ಸೇರ್ಪಡೆ ಕುರಿತು:**

ಈ ಯೋಜನೆಯು ಮಂಗಳಮುಖಿ ಫಲಾನುಭವಿಗಳಿಗೆ ಸಂಬಂಧಿಸಿದಂತೆ ದಯನೀಯವಾಗಿ ವಿಫಲವಾಗಿದೆ. ಈ ಯೋಜನೆಯು ಮಂಗಳಮುಖಿ ಫಲಾನುಭವಿಗಳಿಗೆ ಸ್ವಯಂ ಸೇರ್ಪಡೆ ಆಯ್ಕೆಯನ್ನು ಹೊಂದಿದ್ದರೂ, ನಮ್ಮ ಕ್ಷೇತ್ರ ಉಪಕ್ರಮವು ಒಬ್ಬ ಮಂಗಳಮುಖಿ – ವ್ಯಕ್ತಿಯನ್ನು ಕಂಡುಹಿಡಿಯಲು ವಿಫಲವಾಗಿದೆ. ಇಲಾಖೆ ಕೂಡ ಈ ವಿಷಯದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಲು ಸಾಧ್ಯವಾಗಲಿಲ್ಲ. ಹೆಚ್ಚಿನ ವಿಚಾರಣೆಯ ನಂತರ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಶಿಷ್ಟಾಚಾರವು ಫಲಾನುಭವಿಗಳನ್ನು ಗ್ರಾಮ ಮಟ್ಟದಲ್ಲಿ ಆಯ್ಕೆ ಮಾಡಲು ಒತ್ತಾಯಿಸುತ್ತದೆ ಎಂದು ನಾವು ಕಂಡುಕೊಂಡಿದ್ದೇವೆ. ಆದರೆ ಭಾರತದಲ್ಲಿ ಪ್ರಚಲಿತದಲ್ಲಿರುವ ಸಾಮಾಜಿಕ–ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ, ಒಬ್ಬ ಮಂಗಳಮುಖಿ – ವ್ಯಕ್ತಿಯು ಪ್ರಯೋಜನಗಳನ್ನು ಪಡೆದುಕೊಳ್ಳಲು ಗುರುತನ್ನು ಬಹಿರಂಗಪಡಿಸಲು ಕುಟುಂಬದಿಂದ ಸಹಾಯ ಸಾಧ್ಯವಾಗುವುದಿಲ್ಲ ಅಥವಾ ಅನುಮತಿಸಲಾಗುವುದಿಲ್ಲ. ಆದ್ದರಿಂದ, ಈ ಯೋಜನೆಯು ಅವರು ಆಯ್ಕೆ ಮಾಡಿದ ಸ್ಥಳದಿಂದ ಪ್ರಯೋಜನಗಳನ್ನು ಪಡೆಯಲು ಅವಕಾಶ ನೀಡಬೇಕು.

**10.1.5.4 ಫಲಾನುಭವಿಗಳ ಜಾತಿ ಆಯಾಮ**

ವೈವಿಧ್ಯಮಯ ಹಿನ್ನೆಲೆ ಹೊಂದಿರುವ ವ್ಯಕ್ತಿಗಳ ಸಮರ್ಪಕ ಸಾಮಾಜಿಕ ಸೇರ್ಪಡೆಯನ್ನು ಖಚಿತಪಡಿಸಿಕೊಳ್ಳಲು ರಾಜೀವ್ ಗಾಂಧಿ ಚೈತನ್ಯ ಯೋಜನೆ ಉದ್ದೇಶಿಸಿದೆ. ನಮ್ಮಂತಹ ಸಾಂಸ್ಕೃತಿಕವಾಗಿ ಮತ್ತು ಜನಾಂಗೀಯವಾಗಿ ಬಹು ಸಂಖ್ಯಾ ಸಮಾಜದಲ್ಲಿ ಈ ಗುರಿ ಇನ್ನೂ ಹೆಚ್ಚು ಸವಾಲಿನದಾಗಿದೆ. ಆದಾಗ್ಯೂ, ರಾಜೀವ್ ಗಾಂಧಿ ಚೈತನ್ಯ ಯೋಜನೆಯ ವಿಮರ್ಶಾತ್ಮಕ ದೃಷ್ಟಿಕೋನವನ್ನು ಗಮನಿಸಿದರೆ ಜಾತಿಗೆ ಸಂಬಂಧಿಸಿದಂತೆ ಹೆಚ್ಚು ಸಮಗ್ರ ಸಾಮಾಜಿಕ ಸೇರ್ಪಡೆಯ ಗುರಿಯನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಕಾಳಜಿವಹಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ. ಕಾರ್ಯಾಚರಣೆ ಮಾರ್ಗಸೂಚಿಗಳು ಕನಿಷ್ಠ ಶೇಕಡಾ 20ರಷ್ಟು ಫಲಾನುಭವಿಗಳು ಪರಿಶಿಷ್ಟ ಜಾತಿಗೂ ಮತ್ತು 9 ಪ್ರತಿಶತ ಪರಿಶಿಷ್ಟ ಪಂಗಡಕ್ಕೂ ಸೇರಿದ ಯುವಕರಾಗಿರುವುದನ್ನು ಜಾರಿಗೆ ತರಲು ಬಯಸುತ್ತವೆ.

ವಾರ್ಷಿಕ ಪ್ರಗತಿ ವರದಿಗಳು ಪರಿಶಿಷ್ಟ ಜಾತಿಗಳಿಗೆ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಭಾವಶಾಲಿ ಕಾರ್ಯಕ್ಷಮತೆಯನ್ನು ತೋರಿಸುತ್ತವೆ. ಆದರೆ ಪರಿಶಿಷ್ಟ ಪಂಗಡಗಳಿಗೆ ಅಲ್ಲ.  ಆದಾಗ್ಯೂ, ಕೆಲವು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಕ್ಕೆ ಆಯ್ಕೆಮಾಡಿದ ನಂತರ ಅನರ್ಹರಾಗಲು ಪರಿಶಿಷ್ಟ ಜಾತಿಗಳು ಇತರರಿಗಿಂತ ಹೆಚ್ಚು ದುರ್ಬಲರಾಗಿದ್ದಾರೆ ಎಂದು ನಾವು ಕಾಣುತ್ತೇವೆ (ನಕ್ಷೆ 10.1.3 ನೋಡಿ).

**ರೇಖಾಚಿತ್ರ 10.1.3 ಸಾಮಾಜಿಕ ಗುಂಪುಗಳ ದುರ್ಬಲತೆ (ಸ್ವಯಂ ಉದ್ಯೋಗ ಘಟಕ)**




ನಕ್ಷೆಯಲ್ಲಿರುವ ನಕಾರಾತ್ಮಕ (–) ದರಗಳು ಸಂಬಂಧಪಟ್ಟ ಜಿಲ್ಲೆಗಳು ಯೋಜನೆಗೆ ಆಯ್ಕೆಯಾಗಿರುವ ತಮ್ಮ ಪಾಲನ್ನು ಹೋಲಿಸಿದರೆ ಅನರ್ಹರಾಗುವಲ್ಲಿ ಕಡಿಮೆ ಪಾಲನ್ನು (ಶೇಕಡಾವಾರು ಬಿಂದುಗಳಲ್ಲಿ) ತೋರಿಸಿವೆ ಎಂದು ಸೂಚಿಸುತ್ತವೆ. ಒಂದು ಧನಾತ್ಮಕ (+) ಅಂಕಿಅಂಶವು ಆ ವರ್ಗದಲ್ಲಿ ಆಯ್ಕೆಯಾದ ಫಲಾನುಭವಿಗಳ ಗಾತ್ರದಲ್ಲಿ ಅವರ ಪಾಲಿಗಿಂತ ಅನರ್ಹತೆ ಬಗ್ಗೆ ಹೆಚ್ಚಿನ ಪ್ರತಿಶತ ಸಂಖ್ಯೆಯನ್ನು ಸೂಚಿಸುತ್ತದೆ. ಜಿಲ್ಲೆಗಳ ಮಾದರಿಯಲ್ಲಿ ಸಾಲ ಮಂಜೂರಾತಿ ನಂತರದ ಹಂತಗಳಿಗೆ ಪರಿಶಿಷ್ಟ ಜಾತಿ ಫಲಾನುಭವಿಗಳನ್ನು ಕೈಬಿಡುವುದು ಯಾದಗಿರಿಯಲ್ಲಿ (11.54 ಪ್ರತಿಶತ) ಅತ್ಯಧಿಕವಾಗಿದ್ದು, ಚಿತ್ರದುರ್ಗ (6.54 ಪ್ರತಿಶತ) ಮತ್ತು ಬಾಗಲಕೋಟೆ (6.53 ಪ್ರತಿಶತ) ಯಲ್ಲಿ ತುಲನಾತ್ಮಕವಾಗಿ ಹೆಚ್ಚಾಗಿದೆ, ನಂತರದಲ್ಲಿ ಹಾಸನ (5.84 ಪ್ರತಿಶತ), ಧಾರವಾಡ (5.26 ಪ್ರತಿಶತ) ಮತ್ತು ಕಲಬುರಗಿ (5 ಪ್ರತಿಶತ)ಗಳು ನಿಲ್ಲುತ್ತವೆ. ಅತ್ಯಂತ ಕಡಿಮೆ ಬೆಂಗಳೂರು – ನಗರ ಜಿಲ್ಲೆಯಲ್ಲಿದೆ, 3.03 ಪ್ರತಿಶತ ಪರಿಶಿಷ್ಟ ಜಾತಿ ಫಲಾನುಭವಿಗಳು ಸಾಲ ಮಂಜೂರಾತಿಗೆ ಅನರ್ಹರಾಗಿದ್ದಾರೆ. ಒಟ್ಟಾರೆ ಎಲ್ಲಾ ವಿಭಾಗಗಳಿಂದ ತರಬೇತಿ ಪಡೆದ ಒಟ್ಟು ಪರಿಶಿಷ್ಟ ಜಾತಿಯ ಶೇಕಡಾ 38.8ರಷ್ಟು ಫಲಾನುಭವಿಗಳು ಮುಂದಿನ ಹಂತಗಳಲ್ಲಿ ಅನರ್ಹರಾಗಿದ್ದಾರೆ. ಪರಿಶಿಷ್ಟ ಪಂಗಡ ಫಲಾನುಭವಿಗಳ ಮೀಸಲಾತಿ ಉದ್ದೇಶಿತ ಮೀಸಲಾತಿಗಿಂತ ಕಡಿಮೆ ಇದೆ. ಸುಮಾರು 3 ಪ್ರತಿಶತ ಬಿಂದುಗಳ ಕೊರತೆ ಇದೆ. ಯೋಜನೆಯ ಪ್ರಯೋಜನಗಳು ರಾಜ್ಯದ ಪರಿಶಿಷ್ಟ ಪಂಗಡಗಳ ಯುವಕರಿಗೆ ತಲುಪಿಲ್ಲ.

ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯದ ಕಡೆಗೆ ನಮ್ಮ ಗಮನವನ್ನು ಕೇಂದ್ರೀಕರಿಸಿದಾಗ, ಅದು ಮಾದರಿಯಲ್ಲಿ ಶೇಕಡಾ 27.66 ರಷ್ಟಿದೆ ಎಂದು ನಾವು ಕಂಡುಬಂದಿದೆ. ಈ ಗುರಿಯನ್ನು 7.5 ಪ್ರತಿಶತಕ್ಕೂ ಹೆಚ್ಚು ಬಿಂದುಗಳಿಂದ ಮೀರಿಸಿರುವುದು ಸ್ವಾಗತಾರ್ಹವಾಗಿದೆ. ಆದರೆ ಮೂರು ಜಿಲ್ಲೆಗಳು ಈ ವಿಷಯದಲ್ಲಿ ಕೊರತೆಯನ್ನು ತೋರಿಸುತ್ತವೆ ಧಾರವಾಡ (9.92 ಪ್ರತಿಶತ), ಚಿತ್ರದುರ್ಗ (17.03 ಪ್ರತಿಶತ), ಮತ್ತು ಯಾದಗಿರಿ (19.05 ಪ್ರತಿಶತ). ಪರಿಶಿಷ್ಟ ಜಾತಿ ಕೈಬಿಡುವ ದರದಲ್ಲಿ ಅತಿ ಕಡಿಮೆ ಪಾಲು ಧಾರವಾಡದಲ್ಲಿದೆ. ಮೊದಲನೆಯದಾಗಿ ಅವರ ಆಯ್ಕೆಯ ದರಕ್ಕಿಂತ 4.5 ಪ್ರತಿಶತ ಬಿಂದುಗಳಷ್ಟು ಕಡಿಮೆಯಾಗಿದೆ. ಕೈಬಿಡುವಲ್ಲಿ ಕಡಿಮೆ ಪ್ರಮಾಣವನ್ನು ಹೊಂದಿರುವ ಮತ್ತೊಂದು ಜಿಲ್ಲೆ ಹಾಸನ ಆಯ್ಕೆಯಾದವರಿಗಿಂತ 0.45 ಪ್ರತಿಶತ ಬಿಂದುಗಳಷ್ಟು ಅಲ್ಪ ವ್ಯತ್ಯಾಸವಿದೆ.

| ಕೋಷ್ಟಕ 10.1.7: ಮಾದರಿ ಜಿಲ್ಲೆಗಳಾದ್ಯಂತ ಫಲಾನುಭವಿಗಳ ಜಾತಿ | | | | | | |
|---|---|---|---|---|---|---|
| ಜಿಲ್ಲೆ | ಜಾತಿ ವರ್ಗಗಳು (%) | | | | | ಒಟ್ಟು (ಸಂಖ್ಯೆ) |
| | ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ | ಇತರ ಹಿಂದುಳಿದ ಸಮೂಹ | ಇತರರು | |
| ಬಾಗಲಕೋಟೆ | 19.44 | 25.37 | 7.78 | 36.48 | 10.93 | 540 |
| ಬೆಂಗಳೂರು –ನಗರ | | 46.81 | 8.51 | | 44.68 | 94 |
| ಚಿತ್ರದುರ್ಗ | 36.59 | 17.03 | 6.52 | 22.46 | 17.39 | 276 |
| ಧಾರವಾಡ | 65.29 | 9.92 | 3.31 | 15.70 | 5.79 | 121 |
| ಹಾಸನ | 56.72 | 27.72 | 5.12 | 3.20 | 7.25 | 469 |
| ಕಲಬುರಗಿ | 6.03 | 38.25 | 5.41 | 41.79 | 8.52 | 481 |
| ಉಡುಪಿ | 20.83 | 25.00 | | 50.00 | 4.17 | 24 |
| ಯಾದಗಿರಿ | 28.57 | 19.05 | 6.35 | 30.16 | 15.87 | 63 |
| ಒಟ್ಟು % | 29.16 | 27.66 | 6.09 | 25.39 | 11.70 | |
| ಸಂಖ್ಯೆ | 603 | 572 | 126 | 525 | 242 | 2068 |
| ಅವರಲ್ಲಿ ಅನರ್ಹರ ಪಾಲು | | | | | | |
| ಬಾಗಲಕೋಟೆ | 19.59 | 26.12 | 6.53 | 35.51 | 12.24 | 245 |
| ಬೆಂಗಳೂರು– ನಗರ | | 54.55 | 3.03 | | 42.42 | 33 |
| ಚಿತ್ರದುರ್ಗ | 35.51 | 17.76 | 6.54 | 24.30 | 15.89 | 107 |
| ಧಾರವಾಡ | 73.68 | 5.26 | 5.26 | 13.16 | 2.63 | 38 |
| ಹಾಸನ | 56.49 | 27.27 | 5.84 | 1.95 | 8.44 | 154 |
| ಕಲಬುರಗಿ | 6.36 | 39.09 | 5.00 | 40.91 | 8.64 | 220 |
| ಉಡುಪಿ | 18.18 | 27.27 | | 45.45 | 9.09 | 11 |
| ಯಾದಗಿರಿ | 34.62 | 19.23 | 11.54 | 23.08 | 11.54 | 26 |
| ಒಟ್ಟು % | 27.10 | 28.66 | 5.88 | 26.62 | 11.75 | |
| ಸಂಖ್ಯೆ | 226 | 239 | 49 | 222 | 98 | 834 |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ | | | | | | |

ಮೂಲ: ಪ್ರಾಥಮಿಕ ದತ್ತಾಂಶ.

ನೀತಿ ಮಾರ್ಗಸೂಚಿಗಳ ಮೀಸಲಾತಿ ಆಯಾಮದ ಪ್ರಕಾರ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಾವು ಯಾವ ತೀರ್ಮಾನಗಳಿಗೆ ಬರುತ್ತೇವೆ? ನಾವು ಎರಡು ಅವಲೋಕನಗಳನ್ನು ಮಾಡಬಹುದು. ಮೊದಲನೆಯದಾಗಿ ನಿಗದಿಪಡಿಸಿದ ಗುರಿಗೆ ಹೋಲಿಸಿದರೆ ಕೆಲವು ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳನ್ನು ಗುರುತಿಸುವಲ್ಲಿ ಕೊರತೆ ಇದೆ. ಆ ಮಟ್ಟಿಗೆ ಸಾಮಾಜಿಕವಾಗಿ ದುರ್ಬಲ ವರ್ಗಗಳಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯಕಡಿಮೆ ಇದೆ . ಎರಡನೆಯದಾಗಿ ಮತ್ತು ಅದಕ್ಕಿಂತ ಮುಖ್ಯವಾಗಿ ಯಾವುದೇ ರಾಜ್ಯ ಅಥವಾ

ಪಂಚಾಯಿತಿಯ ಮೊದಲ ಬಾರಿ ಫಲಾನುಭವಿಗಳಿಗೆ ಮಾತ್ರ ಯೋಜನೆಯ ಪ್ರಯೋಜನವನ್ನು ನಿರ್ಬಂಧಿಸುವ ಕಠಿಣ ನಿಯಮವನ್ನು ಪಾಲಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದು ಪ್ರಶ್ನೆಯಾಗಿದೆ. ಮಾದರಿ ಜಿಲ್ಲೆಗಳಲ್ಲಿ ಪಂಚಾಯಿತಿಗಳಾದ್ಯಂತ ನಡೆಸಲಾದ ಬಹುತೇಕ ಎಲ್ಲಾ ಕೇಂದ್ರೀಕೃತ ಸಮೂಹ ಚರ್ಚೆಗಳಲ್ಲಿ ಈ ಅಂಶವು ಹೊರಹೊಮ್ಮಿದೆ. ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ಅಧಿಕಾರಿಗಳು ಸಹ ಇದನ್ನು ಸೂಚಿಸಿದ್ದಾರೆ ಅವರಲ್ಲಿ ಕೆಲವರು ಈ ನಿಯಮವನ್ನು ಅವಾಸ್ತವಿಕ ಎಂದು ಬಣ್ಣಿಸಿದ್ದಾರೆ.

**10.1.5.5 ಧಾರ್ಮಿಕ ಅಲ್ಪ ಸಂಖ್ಯಾತರ ಬಗ್ಗೆ:**

ಆಯ್ಕೆಯಾದ ಮತ್ತು ಅಂತಿಮ ಫಲಾನುಭವಿಗಳ ಧಾರ್ಮಿಕ ಸಂಯೋಜನೆಗೆ ಸಂಬಂಧಿಸಿದಂತೆ ಬಹುತೇಕ ಒಂದೇ ರೀತಿಯ ತೀರ್ಮಾನಗಳಿಗೆ ಬರಬಹುದಾಗಿದೆ. ಅಲ್ಪಸಂಖ್ಯಾತರಿಗೆ ಸೇರಿದ ಯುವಕರಿಗೆ ಆದ್ಯತೆ ನೀಡಲಾಗುವುದು. ಎಂಬ ನಿಯಮವಿದ್ದರೂ ಆಯ್ದ ಫಲಾನುಭವಿಗಳ ಧಾರ್ಮಿಕ ವಿತರಣಾ ಮಾದರಿಯು ಇದಕ್ಕೆ ಸಾಕ್ಷಿಯಾಗುವುದಿಲ್ಲ. ಫಲಾನುಭವಿಗಳಲ್ಲಿ 95 ಪ್ರತಿಶತ ಹಿಂದೂಗಳು, ಕೇವಲ 3.4% ಮುಸ್ಲಿಮರು ಮತ್ತು 1.5% ಕ್ರಿಶ್ಚಿಯನ್ನರು ಇದ್ದಾರೆ. ಇದರ ಏಕೈಕ ಸಕಾರಾತ್ಮಕ ಭಾಗವೆಂದರೆ ಇತರ ಯಾವುದೇ ಕಾರ್ಯಕ್ರಮಗಳ ಫಲಾನುಭವಿಗಳಾಗಿರುವುದರಿಂದ ಅವರನ್ನು ಕೈಬಿಡುವ ವಿಷಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಸ್ವಲ್ಪ ಕಡಿಮೆ ದರವನ್ನು ಹೊಂದಿರುವುದಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ ನಂತರದ ಹಂತಗಳ ಮೂಲಕ ಅವರು ಯಶಸ್ವಿಯಾಗಿ ಹಾದುಹೋಗುವುದು ಸ್ವತಃ ಹಿಂದೂಗಳಿಗಿಂತ ಉತ್ತಮವಾಗಿದೆ. ಇದು ಸರ್ಕಾರದ ಬೆಂಬಲಿತ ವಿವಿಧ ಯೋಜನೆಗಳಿಗೆ ಅವರ ಪ್ರವೇಶಾತಿಯನ್ನು ವಿಲೋಮವಾಗಿ ಪ್ರತಿಬಿಂಬಿಸುತ್ತದೆ.

**10.1.5.6 ಫಲಾನುಭವಿಗಳ ಶೈಕ್ಷಣಿಕ ಹಿನ್ನೆಲೆ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ ಮುಖ್ಯ ಗುರಿಗಳಲ್ಲಿ ಒಂದೆಂದರೆ ಗ್ರಾಮೀಣ ಯುವಕರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟುವುದು. ಇದನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗಳಿಗೆ 8ನೇ ತರಗತಿಯವರೆಗೆ ಶಿಕ್ಷಣ ನೀಡಬೇಕು ಎಂದು ನೀತಿಯಲ್ಲಿ ಚಿಂತಿಸಲಾಗಿದೆ. ಪ್ರಸ್ತುತ ಫಲಾನುಭವಿಗಳ ಶೈಕ್ಷಣಿಕ ಮಟ್ಟದ ಮೇಲೆ ಗಮನ ಹರಿಸಿ, ನಿರ್ದಿಷ್ಟ ಶೈಕ್ಷಣಿಕ ಹಿನ್ನೆಲೆ ಹೊಂದಿರುವ ವಿರುದ್ಧಯಾವುದೇ ಪಕ್ಷಪಾತವಿದೆಯೇ ಎಂದು ಪರಿಶೀಲಿಸಲಾಗಿದೆ. ಪ್ರಾರಂಭದಲ್ಲಿ ಅವರು ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಲಿ ಅಥವಾ ಇಲ್ಲದಿರಲಿ ಪ್ರತಿಯೊಬ್ಬರೂ ಮೊದಲ ಸ್ಥಾನದಲ್ಲಿ ಅರ್ಹರಾಗಲು 8ನೇ ತರಗತಿಯನ್ನು ದಾಟಿರಬೇಕು. ಕೋಷ್ಟಕ 10.1.8 ಮತ್ತು ನಕ್ಷೆ 10.1.4 ರಲ್ಲಿ ಅತ್ಯಂತ ಕಡಿಮೆ ಶಿಕ್ಷಣ ಮಟ್ಟದವರನ್ನು ಪ್ರೌಢ ಶಾಲೆ ಮಟ್ಟದಲ್ಲಿ ಗುಂಪು ಮಾಡಲಾಗಿದೆ. ಇದರಲ್ಲಿ 8ನೇ ತರಗತಿ 9ನೇ ಮತ್ತು 10ನೇ ತರಗತಿ (ಎಸ್ಎಸ್ಎಲ್ಸಿ)ಗಳಲ್ಲಿ ಉತ್ತೀರ್ಣರಾಗಿರುವ ಎಲ್ಲರೂ ಸೇರಿದ್ದಾರೆ. ಈ ವ್ಯಕ್ತಿಗಳ ಗುಂಪು 836 ಜನರನ್ನು (ಅಂದರೆ 40.4 ಪ್ರತಿಶತ) ಹೊಂದಿದೆ, ಇದು ದೊಡ್ಡದಾದ ಏಕೈಕ ಗುಂಪು ಕೂಡ ಹಾಗಿದೆ.

ಕುತೂಹಲಕಾರಿ ಸಂಗತಿಯೆಂದರೆ ಮಹಿಳೆಯರ ಬದಲಿಗೆ 'ಪ್ರೌಢಶಾಲೆ' ಮತ್ತು 'ಪಿಯುಸಿ' ಅನ್ನು ತಮ್ಮ ಶೈಕ್ಷಣಿಕ ಮಟ್ಟವೆಂದು ವರದಿ ಮಾಡುವವರಲ್ಲಿ ಪುರುಷರು ಸ್ವಲ್ಪ ಮಟ್ಟಿಗೆ ಹೆಚ್ಚಿನವರಾಗಿದ್ದಾರೆ. ಈ ವಿಷಯದಲ್ಲಿ ಪುರುಷರು ಮತ್ತು ಮಹಿಳೆಯರ ನಡುವಿನ ವ್ಯತ್ಯಾಸವು ಅತ್ಯಲ್ಪವಾಗಿದೆ. ಆಸಕ್ತಿದಾಯಕ ಸಂಗತಿಯೆಂದರೆ ನಂತರದ ಶಿಕ್ಷಣದ ಪ್ರತಿಯೊಂದು ಹಂತದಲ್ಲೂ ಮಹಿಳೆಯರು ಸ್ವಲ್ಪ ಹೆಚ್ಚಿನ ಪಾಲನ್ನು ಹೊಂದಿದ್ದಾರೆ. ಫಲಾನುಭವಿಗಳು ಸೇರಿದಂತೆ

ಇದರಲ್ಲಿ ಭಾಗವಹಿಸುವ ವಿವಿಧ ಕ್ಷೇತ್ರಗಳ ಮಹಿಳೆಯರು ಮತ್ತು ಪುರುಷರೊಂದಿಗೆ ಆಳವಾದ ಸಂದರ್ಶನಗಳು ಅಥವಾ ವಿವರವಾದ ಕೇಂದ್ರೀಕೃತ ಸಮೂಹ ಚರ್ಚೆಗಳು ಈ ಫಲಿತಾಂಶಗಳ ಹಿಂದಿನ ಕೆಲವು ನಿರ್ಣಾಯಕ ಲಕ್ಷಣಗಳನ್ನು ಬಹಿರಂಗಪಡಿಸಿವೆ.

**ರೇಖಾಚಿತ್ರ 10.1. 4: ಮಾದರಿಯಲ್ಲಿರುವ ಫಲಾನುಭವಿಗಳ ಲಿಂಗ ಮತ್ತು ಶಿಕ್ಷಣ**




ಮಹಿಳೆಯರ ಉನ್ನತ ಶೈಕ್ಷಣಿಕ ಮಟ್ಟಕ್ಕೆ ಸಂಬಂಧಿಸಿದ ವಿಷಯವನ್ನು ಚರ್ಚಿಸುವಾಗ, ಅನೇಕ ಸ್ಥಳಗಳಲ್ಲಿ ಪೋಷಕರು ಸ್ವಯಂ ಉದ್ಯೋಗ ಕಾರ್ಯಕ್ರಮದ ಫಲಾನುಭವಿಗಳಾಗಲು ಯುವತಿಯರ ಹೆಸರನ್ನು ಶಿಫಾರಸ್ಸು ಮಾಡುವ ಪ್ರವೃತ್ತಿ ಇತ್ತು ಎಂದು ಸೂಚಿಸಲಾಗಿದೆ. ಏಕೆಂದರೆ ಹೆಚ್ಚಾಗಿ ಅವರು ಮಾತ್ರ ಪಂಚಾಯಿತಿ ಅಥವಾ ರಾಜ್ಯದ ಮೂಲಕ ಯಾವುದೇ ಹಿಂದಿನ ಪ್ರಯೋಜನವನ್ನು ಪಡೆದಿಲ್ಲದವರಾಗಿರುತ್ತಾರೆ. ತನ್ನ ಹೆಸರನ್ನು ಅನುಮೋದಿಸುವಲ್ಲಿ ಯಶಸ್ವಿಯಾಗದ ಒಬ್ಬ ಮಹಿಳೆ ಕೇಂದ್ರೀಕೃತ ಸಮೂಹ ಚರ್ಚೆಯಲ್ಲಿ ಹಾಜರಿದ್ದ ಇತರರೊಂದಿಗೆ ಸರಿಹೋಗದ ಅಂಶವನ್ನು ತಿಳಿಸಿದಳು. 'ಅಧಿಕಾರದಲ್ಲಿರುವ ಹೆಚ್ಚಿನ ಪುರುಷರು ವಿವಾಹಯೋಗ್ಯ ವಯಸ್ಸಿನ ಯುವತಿಯರ ಹೆಸರುಗಳನ್ನು ಪ್ರಸ್ತಾಪಿಸಿ, ಸೂಕ್ತ ಸಂಬಂಧ ಬಂದಾಗ ಅವರ ಮದುವೆಯ ವೆಚ್ಚಗಳನ್ನು ಪೂರೈಸಲು ನೀಡಿದ ಸಾಲವನ್ನು ಬಳಸಿಕೊಳ್ಳುವ ಸಂಚು ರೂಪಿಸಿದ್ದಾರೆ' ಎಂದು ಅವಳು ಆರೋಪಿಸಿದ್ದಾಳೆ. ಮತ್ತೊಂದು ಕೇಂದ್ರೀಕೃತ ಸಮೂಹ ಚರ್ಚೆಯಲ್ಲಿ ಮೂರನೆಯ ಅಂಶ ಹೊರಬಿದ್ದಿದೆ. ಒಮ್ಮೆ ಈ ಯೋಜನೆ ಬಂದ ನಂತರ, ನಮ್ಮ ವಿದ್ಯಾವಂತ ಹುಡುಗಿಯರಿಗೆ ಸ್ವತಂತ್ರವಾಗಿ ಏನನ್ನಾದರೂ ಪ್ರಯತ್ನಿಸಲು ಅವಕಾಶ ಒದಗಿದೆ. ಒಂದಲ್ಲ ಒಂದು ಕ್ಷೇತ್ರದಲ್ಲಿ ಸ್ವಯಂ ಉದ್ಯೋಗ ಇರುವುದರಿಂದ ಉತ್ತಮ ನಿರೀಕ್ಷೆಗಳ ವೈವಾಹಿಕ ಸಂಬಂಧಗಳು ಬರಲು ಸಾಧ್ಯವಾಗಿದೆ.

| ಕೋಷ್ಟಕ ಸಂಖ್ಯೆ 10.1.8: ಜಿಲ್ಲೆಗಳಾದ್ಯಂತ ಮಾದರಿಯಲ್ಲಿರುವ ಫಲಾನುಭವಿಗಳ ಶೈಕ್ಷಣಿಕ ಮಟ್ಟ | | | | | | |
|---|---|---|---|---|---|---|
| ಶಿಕ್ಷಣ (ಪ್ರತಿಶತ) | | | | | | |
| ಜಿಲ್ಲೆ | ಪ್ರೌಢಶಾಲೆ | ಪಿ.ಯು.ಸಿ. | ಪದವಿ | ಸ್ನಾತಕೋತ್ತರ | ಡಿಪ್ಲೋಮೊ | ಒಟ್ಟು (ಸಂಖ್ಯೆ) |
| ಬಾಗಲಕೋಟೆ | 74.44 | 17.96 | 5.93 | 0.56 | 1.11 | 540 |
| ಬೆಂಗಳೂರು – ನಗರ | 4.26 | 28.72 | 26.60 | 26.60 | 13.83 | 94 |
| ಚಿತ್ರದುರ್ಗ | 72.46 | 19.20 | 6.88 | 0.72 | 0.72 | 276 |
| ಧಾರವಾಡ | 51.24 | 24.79 | 15.70 | 3.31 | 4.96 | 121 |
| ಹಾಸನ | 10.45 | 39.45 | 24.09 | 18.55 | 7.46 | 469 |
| ಕಲಬುರಗಿ | 13.31 | 37.63 | 23.28 | 18.09 | 7.69 | 481 |
| ಉಡುಪಿ | 83.33 | 16.67 | | | | 24 |
| ಯಾದಗಿರಿ | 55.56 | 28.57 | 11.11 | 4.76 | | 63 |
| ಒಟ್ಟು | 40.43 | 28.77 | 15.81 | 10.20 | 4.79 | |
| ಸಂಖ್ಯೆ | 836 | 595 | 327 | 211 | 99 | 2068 |
| ಅದರಲ್ಲಿ ಸಾಲಕ್ಕೆ ಅನರ್ಹರಾದವರ ಪಾಲು (%) | | | | | | |
| ಬಾಗಲಕೋಟೆ | 71.43 | 22.86 | 4.49 | 1.22 | | 245 |
| ಬೆಂಗಳೂರು – ನಗರ | 9.09 | 24.24 | 33.33 | 30.30 | 3.03 | 33 |
| ಚಿತ್ರದುರ್ಗ | 75.70 | 18.69 | 4.67 | 0.93 | | 107 |
| ಧಾರವಾಡ | 50.00 | 26.32 | 13.16 | 5.26 | 5.26 | 38 |
| ಹಾಸನ | 9.74 | 37.66 | 26.62 | 19.48 | 6.49 | 154 |
| ಕಲಬುರಗಿ | 13.18 | 36.36 | 22.27 | 20.00 | 8.18 | 220 |
| ಉಡುಪಿ | 81.82 | 18.18 | | | | 11 |
| ಯಾದಗಿರಿ | 65.38 | 23.08 | 7.69 | 3.85 | | 26 |
| ಒಟ್ಟು | 41.73 | 28.78 | 14.87 | 10.91 | 3.72 | |
| ಇಲ್ಲ | 348 | 240 | 124 | 91 | 31 | 834 |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ<br>ಮೂಲ: ಪ್ರಾಥಮಿಕ ದತ್ತಾಂಶ | | | | | | |

ಜಿಲ್ಲೆಗಳಾದ್ಯಂತ ಒಟ್ಟಾರೆ ಪರಿಗಣಿಸಿದ ಮಾದರಿಯಲ್ಲಿರುವ ವ್ಯಕ್ತಿಗಳು ಫಲಾನುಭವಿಗಳಾಗಿ ಆಯ್ಕೆಯಾದ ಮತ್ತು ಅವರನ್ನು ಕೈ ಬಿಡುವ ಶೇಕಡಾ ಪಾಲಿಗೆ ಸಂಬಂಧಿಸಿದಂತೆ ಹೆಚ್ಚು ಕಡಿಮೆ ಒಂದೇ ರೀತಿಯ ಸೇರ್ಪಡೆ ನಮೂನೆಯನ್ನು ಪ್ರಕಟಪಡಿಸಿದ್ದಾರೆ. ಶಿಕ್ಷಣ ಮಟ್ಟ ಹೆಚ್ಚಾದಂತೆ ಫಲಾನುಭವಿಗಳನ್ನು ಕೈಬಿಡುವ ಸಂಖ್ಯೆ ಕಡಿಮೆಯಾಗುತ್ತದೆ. ನಿರ್ದಿಷ್ಟ ಶೈಕ್ಷಣಿಕ ಅರ್ಹತೆಯೊಂದಿಗೆ ತರಬೇತಿ ಪಡೆದ ಫಲಾನುಭವಿಗಳ ಒಟ್ಟು ಸಂಖ್ಯೆಯನ್ನು ತೋರಿಸುವ ಕಾಲಂ ವಿರುದ್ಧ ಸಾಲಕ್ಕೆ ಅರ್ಹರಲ್ಲದ ಒಟ್ಟು ಫಲಾನುಭವಿಗಳ ಸಂಖ್ಯೆಯನ್ನು ಕೋಷ್ಟಕ 10.1.8ರಲ್ಲಿನ

ಕಾಲಂಗಳಿಂದ ಗಮನಿಸಬಹುದಾಗಿದೆ. ಪದವಿ ಅಥವಾ ಡಿಪ್ಲೋಮೊ ಹೊಂದಿರುವ ಫಲಾನುಭವಿಗಳು ಇತರ ಶಿಕ್ಷಣ ಮಟ್ಟಗಳನ್ನು ಹೊಂದಿರುವವರಿಗಿಂತ ಸ್ವಲ್ಪ ಕಡಿಮೆ ಪಾಲನ್ನು ಹೊಂದಿದ್ದಾರೆ. ಕನಿಷ್ಠ ಮಟ್ಟದ ಶಿಕ್ಷಣ ಹೊಂದಿರುವವರ ಅಂದರೆ ಪ್ರೌಢ ಶಾಲೆಮಟ್ಟದವರ ಪಾಲು ಸ್ವಲ್ಪ ದೊಡ್ಡದಾಗಿದೆ. ಹೀಗೆ ಕೈ ಬಿಟ್ಟವರು ಆಯ್ಕೆಗೊಂಡ ಮತ್ತು ತರಬೇತಿ ಪಡೆದವರಿಗಿಂತ 1.3 ಪ್ರತಿಶತ ಬಿಂದುಗಳಷ್ಟು ಹೆಚ್ಚಾಗಿದ್ದಾರೆ. ಮಾದರಿ ಜಿಲ್ಲೆಗಳನ್ನು ಹೋಲಿಸಿ ನೋಡಿದರೆ ಯಾದಗಿರಿಯಲ್ಲಿ ಪ್ರೌಢಶಾಲಾ ವಿದ್ಯಾವಂತ ಫಲಾನುಭವಿಗಳು ಈ ವಿಷಯದಲ್ಲಿ 9.83 ಪ್ರತಿಶತ ಬಿಂದುಗಳೊಂದಿಗೆ ಅತಿ ಹೆಚ್ಚಾಗಿದ್ದಾರೆ ಎಂದು ಕಂಡುಬರುತ್ತದೆ. ನಂತರದಲ್ಲಿರುವ ಬೆಂಗಳೂರು ನಗರ ಪ್ರೌಢಶಾಲೆ ಮಟ್ಟಕ್ಕೆ 4.84 ಪ್ರತಿಶತ ಬಿಂದುಗಳು ಮತ್ತು ಪದವೀಧರರಿಗೆ 6.74 ಪ್ರತಿಶತ ಬಿಂದುಗಳನ್ನು ಮತ್ತು ಸ್ನಾತಕೋತ್ತರ ಪದವೀಧರರಿಗೆ ಸಹ 3.71 ಪ್ರತಿಶತದಷ್ಟು ಹೆಚ್ಚುವರಿ ಪಾಲನ್ನು ಹೊಂದಿದೆ.

ಫಲಾನುಭವಿಗಳ ಜನಸಂಖ್ಯಾ ವಿವರಗಳಿಗೆ ಸಂಬಂಧಿಸಿದಂತೆ ಕೆಳಕಂಡಂತೆ ತೀರ್ಮಾನಿಸಬಹುದಾಗಿದೆ:

- ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ 'ಕಾರ್ಯಾಚರಣೆ ಮಾರ್ಗಸೂಚಿಗಳು' ರೂಪಿಸಿರುವ ಎಲ್ಲಾ ತತ್ವಗಳನ್ನು ಅನುಸರಿಸಲಾಗಿಲ್ಲ.
- ವಿವಿಧ ಸಮಿತಿಗಳಲ್ಲಿ ಮತ್ತು ವಿವಿಧ ಹಂತಗಳಲ್ಲಿ, ಯಾರನ್ನು ಆಯ್ಕೆ ಮಾಡಬೇಕು ಎಂಬುದನ್ನು ನಿರ್ಧರಿಸುವಲ್ಲಿ ತಾಲ್ಲೂಕು ಮಟ್ಟದ ರಾಜಕೀಯ ನಾಯಕರ ಪಾತ್ರವು ಸಾಕಷ್ಟು ಪ್ರಬಲವಾಗಿದೆ ಎಂದು ತೋರುತ್ತದೆ.
- ರಾಜೀವ್ ಗಾಂಧಿ ಚೈತನ್ಯ ಯೋಜನೆಸಹಾಯದಿಂದ ಕೃಷಿಯೇತರ ವ್ಯಾಪಾರಗಳನ್ನು ಪ್ರಾರಂಭಿಸಿದ್ದೇವೆ ಎಂದು ಹೇಳಿಕೊಂಡ ಹೆಚ್ಚಿನವರಿಗೆ 'ಗ್ರಾಮೀಣ'ಎಂಬುದಕ್ಕೆ ಒತ್ತು ಅಷ್ಟೊಂದು ಪ್ರಮುಖವಾಗಿಲ್ಲ ಎಂದು ತೋರುತ್ತದೆ.
- ಛಾಯಚಿತ್ರ ಸ್ಟುಡಿಯೋಗಳು, ಛಾಯಪ್ರತಿ ಅಂಗಡಿಗಳು, ಮುದ್ರಣಾಲಯ, ಯಂತ್ರಾಂಶ ಅಂಗಡಿಗಳು, ಮುಂತಾದವುಗಳಲ್ಲಿ ಅವರ ಕಾರ್ಯಾಚರಣೆಯು ಆರ್ಥಿಕವಾಗಿ ಕಾರ್ಯಸಾಧ್ಯವಾಗಿರಲು ಒಂದು ಸ್ಥಳವಾದ ಹಳ್ಳಿಗಳು ಚಿಕ್ಕದಾಗಿದ್ದವು.
- ಅವರಲ್ಲಿ ಅನೇಕರು ಇಂದಲ್ಲ ನಾಳೆ ವಲಸೆಯ ಬಗ್ಗೆ ಒಲವು ಹೊಂದಿದ್ದು ವ್ಯಾಪಾರ ಮತ್ತು ಅವರ ಗ್ರಾಮೀಣ ವಾಸದ ನೆಲೆಯ ನಡುವೆ ಪ್ರಯಾಣಿಸುತ್ತಿದ್ದರು.
- ಅಂತಿಮವಾಗಿ, ಬ್ಯಾಂಕುಗಳಿಂದ ಸಾಲಕ್ಕೆ ಅರ್ಹರಾಗದ ಫಲಾನುಭವಿಗಳ ತರಬೇತಿಗಾಗಿ ಹೆಚ್ಚಿನ ಸಮಯ ಮತ್ತು ಸಂಪನ್ಮೂಲಗಳನ್ನು ಖರ್ಚು ಮಾಡಲಾಗಿದೆ. ಪರಿಣಾಮವಾಗಿ, ಸಂಪನ್ಮೂಲಗಳ ವ್ಯರ್ಥ ಮತ್ತು ಹತಾಶೆ ಮತ್ತು ಕಾರ್ಯಕ್ರಮದ ಬಗ್ಗೆ ವಿಶ್ವಾಸದ ಕೊರತೆ ಇದೆ.

### 10.1.6. ಉದ್ಯೋಗಸ್ಥ ಅಥವಾ ನಿರುದ್ಯೋಗಿ ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗ:

ಗ್ರಾಮೀಣ ಯುವಕರನ್ನು ಸ್ವಯಂ ಉದ್ಯೋಗಿಗಳೆಂದು ಉತ್ತೇಜಿಸಲ್ಪಡುತ್ತಿರುವ ವ್ಯಾಪಾರಗಳು ಅಥವಾ ಉದ್ಯೋಗಗಳು ನಿಜವಾಗಿಯೂ ಅವರಿಗೆ ಹೊಸ ಉದ್ಯಮವೇ ಅಥವಾ ಅಲ್ಲವೇ? ಅಥವಾ ಈ ಯೋಜನೆಯು ಈಗಾಗಲೇ ಉದ್ಯೋಗದಲ್ಲಿರುವವರಿಗೆ ಸ್ವಲ್ಪ ಆರ್ಥಿಕ ನೆರವನ್ನು ನೀಡಿದೆಯೇ? ಎಂಬುದುಈ ಮೌಲ್ಯಮಾಪನದ ದೃಷ್ಟಿಕೋನದಿಂದ ನಿರ್ಣಾಯಕವಾದ ಅಂಶ. ಕಾರ್ಯಕ್ರಮದ ಮೌಲ್ಯಮಾಪಕರಾಗಿ ಮತ್ತು ಸಂದರ್ಶನಗಳು ಮತ್ತು ಕೇಂದ್ರೀಕೃತ ಸಮೂಹ ಚರ್ಚೆಗಳನ್ನು ನಡೆಸುತ್ತಿದ್ದ ಕ್ಷೇತ್ರ ಸಿಬ್ಬಂದಿಯಾಗಿ ಅನೇಕ ಫಲಾನುಭವಿಗಳು ಈಗಾಗಲೇ

ಉದ್ಯೋಗದಲ್ಲಿರುವವರು ಅಥವಾ ಆಸ್ತಿ ಹೊಂದಿರುವವರಿಗೆ (ನರ್ಸರಿ, ಸಾವಯವ ಕೃಷಿ, ಹಿಟ್ಟಿನ ಗಿರಣಿ, ಪ್ರಾಣಿಗಳು, ಮೊಬೈಲ್ ಅಂಗಡಿಗಳು) ಸಾಲಗಳನ್ನು ನೀಡಲಾಗಿದೆ ಎಂದು ಆರೋಪಿಸಿದ್ದಾರೆ. ಇದು ಕೋಷ್ಟಕ 10.1.9 ರಲ್ಲಿ ತೋರಿಸಲಾದ ದತ್ತಾಂಶದಿಂದ ಮತ್ತಷ್ಟು ಪುಷ್ಟೀಕರಿಸಲ್ಪಟ್ಟಿದೆ. ಜಿಲ್ಲೆಗಳಾದ್ಯಂತ ಯೋಜನೆಯ ಪ್ರಯೋಜನವನ್ನು ಪಡೆಯುವಾಗ ಕೇವಲ 40 ಪ್ರತಿಶತ ಫಲಾನುಭವಿಗಳು ಮಾತ್ರ ನಿರುದ್ಯೋಗಿಗಳಾಗಿದ್ದಾರೆ ಎಂದು ಇದು ತೋರಿಸುತ್ತದೆ. ಉಳಿದವರು ಒಂದಲ್ಲ ಒಂದು ರೀತಿಯ ಉದ್ಯೋಗದಲ್ಲಿ ತೊಡಗಿದ್ದಾರೆ. ಕೃಷಿ 'ಸಾಂಪ್ರದಾಯಿಕ ಅಥವಾ ಗೃಹ ಸಂಬಂಧಿ ಉದ್ಯೋಗ' ಎಂದು ವರದಿ ಮಾಡಿದ ಮಹಿಳೆಯರಲ್ಲಿ ಮೂರನೇ ಒಂದು ಭಾಗವನ್ನು ನಾವು ಬಿಡಬಹುದು. ಅವುಗಳಲ್ಲಿ ಹೆಚ್ಚಿನವು ಸಂಬಳವಿಲ್ಲದ ಕೆಲಸವಾಗಿರುತ್ತವೆ. ಸುಮಾರು ಅರ್ಧದಷ್ಟು ಫಲಾನುಭವಿಗಳು ಈಗಾಗಲೇ ಕೆಲಸ ಮಾಡುತ್ತಿರುವುದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ ಉದ್ದೇಶಗಳನ್ನು ಸಾದಿಸುವಲ್ಲಿಹಿಂದುಳಿದಿದೆ ಎಂದು ಕಂಡು ಬರುತ್ತದೆ.

ಜಿಲ್ಲೆಯಾದ್ಯಂತ ಯೋಜನೆಗೆ ಮೊದಲು ನಿರುದ್ಯೋಗಿಎಂದು ಹೇಳಿಕೊಳ್ಳುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಬಾಗಲಕೋಟೆ ಅತ್ಯುನ್ನತ ಸ್ಥಾನದಲ್ಲಿದೆ. 71.67 ಪ್ರತಿಶತ ಪ್ರಾಸಂಗಿಕವಾಗಿ ಪ್ರಯೋಜನಗಳನ್ನು ಪಡೆಯುವ ಸಮಯದಲ್ಲಿ ಉದ್ಯೋಗಗಳಿಗೆ ನೇಮಕಗೊಂಡಿರುವ ಫಲಾನುಭವಿಗಳ ಬಗ್ಗೆ ಗರಿಷ್ಠ ದೂರುಗಳು ಸಹ ಬಾಗಲಕೋಟೆ ಜಿಲ್ಲೆಯಲ್ಲಿವೆ. ಆದಾಗ್ಯೂ, ಅಂತಹ ದೂರುಗಳ ಸಿಂಧುತ್ವವನ್ನು ಪರಿಶೀಲಿಸಲು ಸಾಕಷ್ಟು ಸಮಯ ಅಥವಾ ಪುರಾವೆಗಳು ಇರಲಿಲ್ಲ. ಒಬ್ಬ ಹಿರಿಯ ವ್ಯಕ್ತಿಯು ಅವನ ಮಗ ಫಲಾನುಭವಿಯಾಗಿರಲಿಲ್ಲ. ಪಂಚಾಯಿತಿ ಮಟ್ಟದಲ್ಲಿ ವೈಯಕ್ತಿಕ ಅಥವಾ ರಾಜಕೀಯ ಪೈಪೋಟಿಗಳಿಂದಾಗಿ ಅಂತಹ ಕೆಲವು ಆರೋಪಗಳನ್ನು ಹೊರಿಸಲಾಗಿದೆ ಎಂದು ತಿಳಿಸಿದ್ದಾರೆ. ಒಬ್ಬ ಹೆಂಗಸು ಶಿರೋಲಾದ (ಬಾಗಲಕೋಟೆ) ಕೇಂದ್ರೀಕೃತ ಸಮೂಹ ಚರ್ಚೆಯಲ್ಲಿ ಬಲವಂತದಿಂದ ಹೀಗೆ ಸೂಚಿಸಿದ್ದಾಳೆ.

"ಒಂದು ಹಳ್ಳಿಯಲ್ಲಿ ನಿರುದ್ಯೋಗಿಯಾಗಿರುವುದು ನೀವು ನಗರ ಅಥವಾ ಬೆಂಗಳೂರಿನಲ್ಲಿ ನೋಡಬಹುದಾದಂತೆಯೇ ಅಲ್ಲ. ಮಹಿಳೆಯರಾಗಿ ಇದು ವಿಶೇಷವಾಗಿ ನಮಗೆ ಅನ್ವಯಿಸುತ್ತದೆ. ಮನೆಯಲ್ಲಿ ಮತ್ತು ನಮ್ಮ ಹೊಲಗಳಲ್ಲಿ ನಾವು ನಿರಂತರವಾಗಿ ಒಂದಲ್ಲ ಒಂದು ಕೆಲಸ ಮಾಡುತ್ತೇನೆ. ನೀವು ನಮ್ಮನ್ನು 'ನಿರುದ್ಯೋಗಿ' ಎಂದು ವ್ಯಾಖ್ಯಾನಿಸಬಹುದು ಆದರೆ ನಾನು ಮನೆ ಕೆಲಸಗಾರಳಾಗಿ ಅಥವಾ ಕೃಷಿಕಳಾಗಿ ಉದ್ಯೋಗ ಮಾಡುತ್ತೇನೆ/ ತೊಡಗಿಸಿಕೊಂಡಿದ್ದೇನೆ ಎಂದು ಹೇಳುತ್ತೇನೆ. ಈ ಮಹಿಳೆಯನ್ನು (ಅವಳ ಪಕ್ಕದಲ್ಲಿ ಕುಳಿತಿರುವವಳನ್ನು ತೋರಿಸುತ್ತಾ) ಗಮನಿಸಿ, ಪಕ್ಕದ ಸ್ಥಳದಿಂದ ಬಂದು ಇಷ್ಟು ವರ್ಷ ಅವಳು ಹಳೆಯ ಹೊಲಿಗೆ ಯಂತ್ರದೊಂದಿಗೆ ಕೆಲಸ ಮಾಡುತ್ತಿದ್ದಳು, ಬ್ಲೌಸ್ ಮತ್ತು ಮಕ್ಕಳ ಉಡುಪನ್ನು ಹೊಲಿಯುತ್ತಿದ್ದಳು. ಈ ದುಡಿಮೆಯಿಂದ ಒಂದೆರಡು ಹೊಸ ಯಂತ್ರಗಳನ್ನು ಖರೀದಿಸಲು ಸಾಧ್ಯವಾಯಿತು ಮತ್ತು ಈ ಗ್ರಾಮದಲ್ಲಿ ಅಂಗಡಿಯನ್ನು ಪ್ರಾರಂಭಿಸಿದಳು. ಈಗ ನೀವು ಇದನ್ನು ಯಾರಿಗಾದರೂ ಹಿಂದಿನ ವ್ಯವಹಾರಕ್ಕೆ ಮಾಡಿದ ಸಹಾಯ ಎಂದು ಹೇಗೆ ಕರೆಯಬಹುದು?" – ಫಲಾನುಭವಿ ಸಂಖ್ಯೆ 80, ಶಿರೋಲ ಪಂಚಾಯಿತಿ, ಬಾಗಲಕೋಟೆ ಜಿಲ್ಲೆ.

| ಕೋಷ್ಟಕ ಸಂಖ್ಯೆ 10.1.9: ಮಾದರಿಯಲ್ಲಿರುವ ಜಿಲ್ಲೆಗಳಲ್ಲಿ ಫಲಾನುಭವಿಗಳ ಸ್ವಯಂ ಉದ್ಯೋಗದ ಮುಂಚಿನ ಕ್ಷೇತ್ರಗಳು | | | | | |
|---|---|---|---|---|---|
| ಜಿಲ್ಲೆ | ಸ್ವಯಂ ಉದ್ಯೋಗಕ್ಕೆ ಮೊದಲಿನ ಕ್ಷೇತ್ರ | | | | ಒಟ್ಟು ಸಂ. |
| | ಕೃಷಿ | ಸಾಂಪ್ರದಾಯಿಕ / ಗೃಹ ಉದ್ಯೋಗ | ನಿರುದ್ಯೋಗಿಗಳು | ಇತರೆ | |
| ಬಾಗಲಕೋಟೆ | 9.07 | 16.85 | 71.67 | 2.41 | 540 |
| ಬೆಂಗಳೂರು – ನಗರ | 21.28 | 40.43 | 29.79 | 8.51 | 94 |
| ಚಿತ್ರದುರ್ಗ | 23.91 | 43.48 | 21.74 | 10.87 | 276 |
| ಧಾರವಾಡ | 24.79 | 25.62 | 35.54 | 14.05 | 121 |
| ಹಾಸನ | 50.32 | 19.19 | 29.00 | 1.49 | 469 |
| ಕಲಬುರಗಿ | 49.69 | 19.75 | 28.69 | 1.87 | 481 |
| ಉಡುಪಿ | 20.83 | 50.00 | 29.17 | | 24 |
| ಯಾದಗಿರಿ | 23.81 | 47.62 | 28.57 | | 63 |
| ಒಟ್ಟು | 31.91 | 24.52 | 39.51 | 4.06 | |
| ಸಂಖ್ಯೆ | 660 | 507 | 817 | 84 | 2068 |

ಮೂಲ: ಪ್ರಾಥಮಿಕ ದತ್ತಾಂಶ.
ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ

ಮೇಲೆ ಉಲ್ಲೇಖಿಸಲಾದ ಪ್ರಕೃತಿದತ್ತ ಆಪಾದನೆಯು ಒಂದು ಕಡೆ ಹಿಂದಿನ ಉದ್ಯೋಗದ ಸ್ಥಿತಿಗತಿಗಳ ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆ ಮೂಲಕ ಸಕ್ರಿಯಗೊಳಿಸಲಾದ ಅಥವಾ ಗುರಿಯಿಟ್ಟ ಸ್ವಯಂ ಉದ್ಯೋಗದ ಸ್ವರೂಪದ ನಡುವಿನ 'ಅಂತರ'ವನ್ನು ನೋಡಲು ಮೌಲ್ಯಮಾಪಕರಾದ ನಮ್ಮನ್ನು ಪ್ರೇರೇಪಿಸುತ್ತದೆ.

| ಕೋಷ್ಟಕ ಸಂಖ್ಯೆ 10.1.10: ಹಿಂದಿನ ಉದ್ಯೋಗ ಮತ್ತು ಯೋಜನೆ ಸುಗಮಗೊಳಿಸಿದ ಸ್ವಯಂ ಉದ್ಯೋಗ | | | | | |
|---|---|---|---|---|---|
| ಸ್ವಯಂ ಉದ್ಯೋಗಕ್ಕಿಂತ ಮೊದಲಿನ ಕ್ಷೇತ್ರ | | | | | |
| ಉದ್ಯಮಗಳ ಪ್ರಕಾರ | ಕೃಷಿ | ಸಾಂಪ್ರದಾಯಿಕ /ಗೃಹ ಉದ್ಯೋಗ | ನಿರುದ್ಯೋಗಿಗಳು | ಇತರೆ | ಒಟ್ಟು (ಸಂ.) |
| ಹೈನುಗಾರಿಕೆ | 30.96 | 23.83 | 40.94 | 4.28 | 1473 |
| ಕೃಷಿ | 50.00 | 27.78 | 22.22 | | 36 |
| ಪಶು ಸಂಗೋಪನೆ | 22.50 | 12.50 | 62.50 | 2.50 | 40 |
| ಕೋಳಿ ಸಾಕಾಣಿಕೆ | 32.08 | 39.62 | 28.30 | | 53 |
| ಚಿಲ್ಲರೆ ಅಂಗಡಿ/ದಿನಸಿ ಅಂಗಡಿಗಳು | 32.95 | 23.12 | 36.99 | 6.94 | 173 |
| ಜವಳಿ ಅಂಗಡಿ | 17.50 | 27.50 | 52.50 | 2.50 | 40 |
| ಹೊಲಿಗೆ ಕೆಲಸ | 26.42 | 33.02 | 37.74 | 2.83 | 106 |
| ಆಟೋ / ಚಾಲಕ | 58.82 | | 35.29 | 5.88 | 17 |
| ಬ್ಯೂಟಿ ಪಾರ್ಲರ್ | 27.27 | 45.45 | 9.09 | 18.18 | 11 |
| ಗಣಕಯಂತ್ರ ಅಂಗಡಿ | 48.78 | 21.95 | 29.27 | | 41 |
| ವಿದ್ಯುತ್ ಸೇವೆಗಳು | 52.94 | 11.76 | 35.29 | | 17 |
| ಹೋಟೆಲ್ / ಟೀ ಅಂಗಡಿ | 35.29 | 35.29 | 23.53 | 5.88 | 17 |
| ಇತರೆ | 45.45 | 27.27 | 27.27 | | 44 |
| ಒಟ್ಟು (%) | 31.91 | 24.52 | 39.51 | 4.06 | 2068 |
| ಸಂಖ್ಯೆ | 660 | 507 | 817 | 84 | |

ಮೂಲ: ಪ್ರಾಥಮಿಕ ದತ್ತಾಂಶ ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ
'ಇತರೆ' ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣಿ ಸಂಖ್ಯೆ 5 ಅನ್ನು ನೋಡಿ

ಈ ಹಿಂದಿನ ಕೋಷ್ಟಕ 10.1.2 ರಲ್ಲಿ ಸ್ವಯಂ ಉದ್ಯೋಗಕ್ಕಾಗಿ ಕೃಷಿ ಆಧಾರಿತ ಅಥವಾ ಕೃಷಿ ಜೀವನೋಪಾಯ ಸಂಬಂಧಿತ ಉದ್ಯೋಗಗಳ ಪರವಾಗಿ ಸಂಭಾವ್ಯ ಫಲಾನುಭವಿಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ಮಾಡಿದ ಪ್ರಮುಖ ಆಯ್ಕೆಯ ಬಗ್ಗೆ ಉಲ್ಲೇಖಿಸಲಾಗಿದೆ. ಫಲಾನುಭವಿಗಳು ಯಾವ ಕ್ಷೇತ್ರ ಎಂಬ ಅರಿವಿಲ್ಲದೆ ಆಯ್ಕೆ ಮಾಡುವ ಮೊದಲು ಯಾರೋ ಈ ಒಂದು ಕ್ಷೇತ್ರ ದೊಡ್ಡದು ಎಂದು ಹೇಳಿದ್ದಕ್ಕೆ ಅವರು ಅದೇ ಕ್ಷೇತ್ರ ಆಯ್ಕೆ ಮಾಡಿದ ಕಾರಣ ಅವರು 'ನಿರುದ್ಯೋಗಿ'ಗಳಾಗಿದ್ದಾರೆ ಎಂದು 2068 ರಲ್ಲಿ 817 ಜನರು ಅಂದರೆ 39.5 ಪ್ರತಿಶತ ಹೇಳಿದ್ದಾರೆ. ಆದರೆ ನಮ್ಮ ಕ್ಷೇತ್ರಕಾರ್ಯದ ಕೇಂದ್ರೀಕೃತ ಸಮೂಹ ಚರ್ಚೆಗಳಲ್ಲಿ ಅಂತಹ ಫಲಾನುಭವಿಗಳೊಂದಿಗೆ ಮಾತನಾಡಿದಾಗ ಮತ್ತು ಅವರು ಅರ್ಜಿಗಳನ್ನು ಸಲ್ಲಿಸಿದಾಗ ಒದಗಿಸಿದ ದಾಖಲೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ಅವರು ಕೃಷಿ ಅಥವಾ ಇತರ ಕುಟುಂಬ ಉದ್ಯೋಗಗಳಲ್ಲಿ ತೊಡಗಿದ್ದರು ಎಂದು ತಿಳಿದುಬಂದಿದೆ. ಮೇಲೆ ಉಲ್ಲೇಖಿಸಿದ ಬಾಗಲಕೋಟೆಯ ಕೇಂದ್ರೀಕೃತ ಸಮೂಹ ಚರ್ಚೆ ಒಂದರಲ್ಲಿ ಭಾಗಿಯಾಗಿದ್ದ ಒಬ್ಬನ ಟೀಕೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. "ಕೃಷಿ ಹಿನ್ನೆಲೆಯಿರುವ 80 ಪ್ರತಿಶತಕ್ಕೂ ಹೆಚ್ಚು ಫಲಾನುಭವಿಗಳಲ್ಲಿ ಸುಮಾರು 75 ಪ್ರತಿಶತ ಜನರು ಹೆಚ್ಚು ಕಡಿಮೆ ಅದೇ ಕ್ಷೇತ್ರದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆ ಮೂಲಕ ಸ್ವಯಂ ಉದ್ಯೋಗವನ್ನು ಮುಂದುವರೆಸಿದ್ದಾರೆ. ಯೋಜನೆ ಜಾರಿಗೂ ಮುನ್ನ ನಿರುದ್ಯೋಗಿಗಳಾಗಿದ್ದವರೂ ಈಗ ಸಂಬಂಧಿತ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ನಡೆಸುತ್ತಿದ್ದಾರೆ (ಐಡಿಐ ಪ್ರತಿಕ್ರಿಯೆ).

ಈ ಫಲಿತಾಂಶಗಳನ್ನು ಗಮನಿಸಿದರೆ ಈ ಮೌಲ್ಯಮಾಪನವು ಗ್ರಾಮೀಣ ಯುವಕರನ್ನು ಸ್ವಯಂ ಉದ್ಯೋಗಾವಕಾಶಗಳೊಂದಿಗೆ ಸಶಕ್ತಗೊಳಿಸುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವು ಸೀಮಿತ ಯಶಸ್ಸನ್ನು ಕಂಡಿದೆ ಎನ್ನಬಹುದು. ಮೇಲಿನ ತೀರ್ಮಾನಕ್ಕೆ ಬರಲು ಒಂದು ನಿರ್ಣಾಯಕ ಕಾರಣವೆಂದರೆ, ಹೇಳಲಾದ ಸ್ವಯಂ ಉದ್ಯೋಗ ಉದ್ಯಮಗಳನ್ನು ಕೈಗೆತ್ತಿಕೊಂಡ ಅನೇಕ ಫಲಾನುಭವಿಗಳ ಬಗ್ಗೆ ಸಾಕಷ್ಟು ಪುರಾವೆಗಳನ್ನು ಕಂಡುಹಿಡಿಯಲು ನಾವು ಅಸಮರ್ಥರ ಕೆಲವು ಅಪವಾದಗಳನ್ನು ಹೊರತುಪಡಿಸಿ, ಅವರಲ್ಲಿ ಹೆಚ್ಚಿನ ಸಂಖ್ಯೆಯಜನರು ಅವರು ಅವಲಂಬಿಸಿದ ಉದ್ಯಮಗಳು ಹೈನುಗಾರಿಕೆ ಉದ್ಯಮಗಳು ಅಥವಾ ಜವಳಿ ಚಿಲ್ಲರೆ ವ್ಯಾಪಾರ ಅಥವಾ ಇತರ ಚಿಲ್ಲರೆ ಅಂಗಡಿಗಳೇಎಂದು ಸೂಚಿಸಲು ಕೇಳಿದಾಗ ತಪ್ಪಿಸಿಕೊಳ್ಳುವ ಉತ್ತರಗಳನ್ನು ನೀಡಿದರು. ಹೈನುಗಾರಿಕೆ ಮಾಡುವ ಪ್ರಾಣಿಗಳನ್ನು ನಮಗೆ ತೋರಿಸಲು ಕೇಳಿದಾಗ, ಅವುಗಳನ್ನು ಖರೀದಿಸಿದ ಕೆಲವು ತಿಂಗಳುಗಳು ಅಥವಾ ಒಂದು ವರ್ಷದ ನಂತರ ಪ್ರಾಣಿಗಳ ಸಾವು ಸಂಭವಿಸಿವೆ ಎಂದು ಸಾಮಾನ್ಯವಾಗಿ ಹೇಳಲಾಯಿತು.

ಫಲಾನುಭವಿಗಳು ಸ್ವಯಂ ಉದ್ಯೋಗಿಗಳಾಗಲು ಬಯಸಬಹುದಾದ ಉದ್ಯೋಗಗಳ ಆಯ್ಕೆಯು ಸಂಬಂಧಪಟ್ಟ ಸರ್ಕಾರೇತರ ಸಂಸ್ಥೆಯಿಂದ ಸೌಮ್ಯ ಮನವೊಲಿಕೆಯ ಫಲಿತಾಂಶವೂ ಆಗಿರಬಹುದು. ಬಹುಸಂಖ್ಯೆಯ ಕ್ಷೇತ್ರಗಳಲ್ಲಿ ವ್ಯಕ್ತಿಗಳಿಗೆ ತರಬೇತಿ ನೀಡಲು ಮಾನವ ಸಂಪನ್ಮೂಲಗಳು ಯಾವಾಗಲೂ ಅನುಕೂಲಕರವಾಗಿರುವುದಿಲ್ಲ. ಆದ್ದರಿಂದ ಆಯ್ಕೆಗಳನ್ನು ಒಂದಕ್ಕೆ ಅಲ್ಲದಿದ್ದರೂ ಕೆಲವು ಕ್ಷೇತ್ರಗಳಿಗೆ ಸೀಮಿತಗೊಳಿಸಿರಬಹುದು. ಇದು ಸಂಭಾವ್ಯ ಸ್ಪರ್ಧೆಯನ್ನು ಕಡಿಮೆ ಮಾಡಬಹುದೆಂಬ ಒಂದು ಕಾರಣಕ್ಕಾಗಿ ಈ ಮೌಲ್ಯಮಾಪನವು ಕನಿಷ್ಠ ತರಬೇತಿಯ ಅಗತ್ಯವಿರುವ ತರಬೇತಿದಾರರ ಕನಿಷ್ಠ ಸಂಖ್ಯೆಯನ್ನು ನಿಗದಿಪಡಿಸಲು ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಕೊಂಡಿದೆ.

### 10.1.7 ಪಡೆದ ತರಬೇತಿಯ ಬಗ್ಗೆ ಗ್ರಹಿಕೆ:

ಕಾರ್ಯಾಚರಣೆಯ ಮಾರ್ಗಸೂಚಿಗಳು ತರಬೇತಿಯನ್ನು ಹೇಗೆ ನೀಡಬೇಕು ಎಂಬುದರ ವಿಧಾನಗಳನ್ನು ನಿರ್ದಿಷ್ಟಪಡಿಸುತ್ತವೆ[6]. ತರಬೇತಿಯ ಅವಧಿ 3 ರಿಂದ 6 ದಿನಗಳ ನಡುವೆ ಇರಬೇಕೆಂದು ನಿಗದಿಪಡಿಸಲಾಗಿದೆ. ಸಾಧ್ಯವಾದಲ್ಲಿ ಸ್ಪರ್ಧಿಗಳಿಗೆ ವಸತಿ ನೀಡಬೇಕು. ಮತ್ತು ಎಲ್ಲಾ ಮೂರು ದಿನಗಳವರೆಗೆ ಆಹಾರವನ್ನು ಪೂರೈಸಬೇಕು. ತರಬೇತಿ ಪಡೆದವರಿಗೆ ಜ್ಞಾನವನ್ನು ನೀಡುವ ಮತ್ತು ಸ್ಪರ್ಧಾತ್ಮಕ ಹಾಗೂ ಯಶಸ್ವಿ ಕ್ಷೇತ್ರದಲಿ ತೊಡಗಿರುವಂತಹ ವಿವಿಧ ವ್ಯಾಪಾರಗಳು ಅಥವಾ ಸ್ವಯಂ ಉದ್ಯೋಗ ಉದ್ಯಮಗಳಿಗೆ ಕೋರ್ಸ್ ಸಾಮಗ್ರಿಗಳನ್ನು ಕಡ್ಡಾಯವಾಗಿ ಅನುಮೋದಿಸಬೇಕು. ತರಬೇತಿಯು ಉಪಗ್ರಹ ತಂತ್ರಜ್ಞಾನದ ಬಳಕೆಯಿಂದ ಆನ್-ಲೈನ್ ಕೋರ್ಸ್ ಸಾಮಗ್ರಿ ಮತ್ತು ಇ-ಕಲಿಕೆಯನ್ನು ಬಳಸಿಕೊಳ್ಳಬೇಕು. "ಸಂಜೀವಿನಿ" – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಉತ್ತೇಜನ ಸಂಘಕ್ಕೆ (ಕೆಎಸ್ಆರ್ಎಲ್ಪಿಎಸ್) ವಿವಿಧ ಉದ್ಯೋಗಗಳಿಗೆ ಸಿದ್ಧತೆ ಶಿಕ್ಷಣ ಮತ್ತು ಮಾಹಿತಿ ಸಾಮಗ್ರಿಗಳನ್ನು ಒದಗಿಸುವ ಹೊಣೆಗಾರಿಕೆ ವಹಿಸಲಾಯಿತು. ಅಗತ್ಯವಿದ್ದೆಡೆ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಗತ್ಯವಾದ ಸರಳ ಮತ್ತು ಸುಲಭವಾಗಿ ಅರ್ಥವಾಗುವ ಚಲನಚಿತ್ರಗಳನ್ನು ಸಹ ಬಳಸಲಾಗುತ್ತಿತ್ತು. ಇದಲ್ಲದೆ "ಸಂಜೀವಿನಿ" ಪ್ರತಿ ಗ್ರಾಮ ಪಂಚಾಯಿತಿಯಿಂದ 40 ಯುವಕರನ್ನು ಒಳಗೊಂಡ 5627 ಗ್ರಾಮ ಪಂಚಾಯಿತಿಗಳ 2,25,080 ಅಭ್ಯರ್ಥಿಗಳಿಗೆ ಉಪಗ್ರಹ ಆಧಾರಿತ ಉದ್ಯಮಶೀಲ ಪ್ರೇರಣೆ ಕಾರ್ಯಕ್ರಮವನ್ನು ಆಯೋಜಿಸಬೇಕು. ಆದರೆ ಬಾಗಲಕೋಟೆ ಜಿಲ್ಲೆ ಹೊರತುಪಡಿಸಿ ಉಳಿದೆಲ್ಲಾ ಮಾದರಿ ಜಿಲ್ಲೆಗಳು ಫಲಾನುಭವಿಗಳಿಗೆ ತರಬೇತಿ ನೀಡಲು ಉಪಗ್ರಹ ತಂತ್ರಜ್ಞಾನವನ್ನು ಬಳಸಿಕೊಂಡಿವೆ ಎಂದು ವರದಿಯಾಗಿದೆ. ಇದಲ್ಲದೆ, ಅವರು ಈ ಸೌಲಭ್ಯವನ್ನು 'ತುಂಬಾ ಚೆನ್ನಾಗಿದೆ' (28.82%), ಅಥವಾ 'ಚೆನ್ನಾಗಿದೆ' (26.89%) ಎಂದು ಕಂಡುಕೊಂಡಿದ್ದರು. ಉಳಿದವುಗಳು 'ಸೌಲಭ್ಯಗಳು ಲಭ್ಯವಿಲ್ಲ'ಎಂದು ತಿಳಿಸಿವೆ (ಬಾಗಲಕೋಟೆ).

ನಕ್ಷೆ 10.1.5 ತರಬೇತಿ ಗುಣಮಟ್ಟದ ಶ್ರೇಣೀಕರಣ




ಮಾದರಿ ಒಳಗೊಂಡಿರುವ ಫಲಾನುಭವಿಗಳನ್ನು ಯೋಜನೆ ಬೆಂಬಲಿಸುವ ನಿಯೋಗಗಳಿಂದ ಪಡೆದ ತರಬೇತಿಯ ಗುಣಮಟ್ಟದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕೇಳಲಾಯಿತು. 55 ಪ್ರತಿಶತಕ್ಕೂ ಹೆಚ್ಚು ಮಂದಿ ಇದು

[6] From http://koushalya.karnataka.gov.in/KSRLPS/Documents/operational%20guidelines%20of%20RGCY.pdf. Accessed on 10 october 2019. Page 12

'ಚೆನ್ನಾಗಿದೆ' ಅಥವಾ 'ಬಹಳ ಚೆನ್ನಾಗಿದೆ' ಎಂದು ನಂಬಿದ್ದರು. ಆದರೂ, ತರಬೇತಿ ಪಡೆದ ಫಲಾನುಭವಿಗಳಲ್ಲಿ ಸುಮಾರು 45 ಪ್ರತಿಶತದಷ್ಟು ಮಂದಿ ತರಬೇತಿಯ ಗುಣಮಟ್ಟವನ್ನು ಸರಾಸರಿ ಅಥವಾ ಸರಾಸರಿಗಿಂತ ಕಡಿಮೆ ಎಂದು ಶ್ರೇಣೀಕರಿಸಿದ್ದಾರೆ. ಎಂಬುದು ಕಳವಳಕಾರಿ ಅಂಶವಾಗಿದೆ. ಹಾಸನ, ಕಲಬುರಗಿ ಮತ್ತು ಬೆಂಗಳೂರು–ನಗರ ಕ್ರಮವಾಗಿ 35 ಪ್ರತಿಶತಕ್ಕೂ ಹೆಚ್ಚು ಶ್ರೇಯಾಂಕವನ್ನು ಪಡೆದಿದ್ದು, 'ಬಹಳ ಚೆನ್ನಾಗಿದೆ' (ನಕ್ಷೆ10.1.5 ಮತ್ತು ಕೋಷ್ಟಕ10.1.11) ಎಂದು ತಿಳಿಸಲಾಗಿದೆ.

ಬಾಗಲಕೋಟೆ ಜಿಲ್ಲೆಯು ತರಬೇತಿ ಪಡೆದವರಲ್ಲಿ ಅನುಕೂಲಕರ ಅಭಿಪ್ರಾಯವನ್ನು ಹೊಂದಿಲ್ಲ, ಏಕೆಂದರೆ ಆ ಜಿಲ್ಲೆಯ ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ಅದನ್ನು 'ಸರಾಸರಿ' ಅಥವಾ ಅದಕ್ಕಿಂತ ಕಡಿಮೆ ಎಂದು ಶ್ರೇಣೀಕರಿಸಿದ್ದಾರೆ. ಧಾರವಾಡದಲ್ಲಿಯೂ ಶೇಕಡಾ 53ಕ್ಕೂ ಹೆಚ್ಚಿನವರಲ್ಲಿ ಇದೇ ರೀತಿಯ ಅಭಿಪ್ರಾಯ ಇದೆ. ನಮಗೆ ತಿಳಿದಿರುವಂತೆ, ಕೆಲವು ಜಿಲ್ಲೆಗಳಲ್ಲಿ ಒಂದಕ್ಕಿಂತ ಹೆಚ್ಚು ಸರ್ಕಾರೇತರ ಸಂಸ್ಥೆಗಳು ತರಬೇತಿಯ ಜವಾಬ್ದಾರಿಯನ್ನು ಹೊಂದಿದ್ದವು. ಸರ್ಕಾರೇತರ ಸಂಸ್ಥೆಗಳು ಫಲಾನುಭವಿಗಳಿಗೆ ನೀಡಿದ ತರಬೇತಿಗಾಗಿ ಪಡೆದ ಶ್ರೇಯಾಂಕದಲ್ಲಿ ವ್ಯತ್ಯಾಸವಿದೆಯೇ? ಕೋಷ್ಟಕ 10.1.11 ಈ ನಿಟ್ಟಿನಲ್ಲಿ ದತ್ತಾಂಶವನ್ನು ಪ್ರಸ್ತುತಪಡಿಸುತ್ತದೆ.

ಈ ಫಲಿತಾಂಶಗಳ ಬಗ್ಗೆ ನಾವು ದೂರವಾಣಿ ಸಮಾಲೋಚನೆ ನಡೆಸಿದ ಕೆಲವು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಆಸಕ್ತಿದಾಯಕ ವಿವರಣೆಯನ್ನು ನೀಡಿದ್ದಾರೆ. ಮುಖ್ಯವಾಗಿ ಸಾಲ ಪಡೆಯುವಲ್ಲಿ ಯಶಸ್ವಿಯಾಗದ ತರಬೇತಿದಾರರಿಂದ ನಕಾರಾತ್ಮಕ ಅಥವಾ ಅಷ್ಟು ಅನುಕೂಲಕರವಲ್ಲದ ಅಭಿಪ್ರಾಯ ಬಂದಿದೆ. ಒಬ್ಬ ವ್ಯಕ್ತಿಯು ಅನಾಮಧೇಯತೆಯ ಷರತ್ತಿನ ಮೇಲೆ ಮಾತನಾಡುತ್ತಾ ಹೇಳಿದ್ದಾನೆ.' ಅವರ ಸಾಲದ ಅರ್ಜಿಗಳನ್ನು ಅನುಮೋದಿಸಲು ನಾವು ಜವಾಬ್ದಾರರಾಗಿದ್ದೇವೆ ಎಂಬಂತೆ ಅವರು ಮಾತನಾಡುತ್ತಾರೆ!'

| ಕೋಷ್ಟಕ ಸಂಖ್ಯೆ 10.1.11: ತರಬೇತಿಯ ಗುಣಮಟ್ಟದ ಶ್ರೇಣೀಕರಣ | | | | | | | |
|---|---|---|---|---|---|---|---|
| ವಿಭಾಗ | ಜಿಲ್ಲೆ | ತರಬೇತಿಯ ಗುಣಮಟ್ಟ | | | | | ಒಟ್ಟು (ಸಂ.) |
| | | ತುಂಬಾ ಕಳಪೆ | ಕಳಪೆ | ಸರಾಸರಿ | ಒಳ್ಳೆಯದು | ತುಂಬಾ ಒಳ್ಳೆಯದು | |
| ಬೆಂಗಳೂರು | ಬೆಂಗಳೂರು – ನಗರ | | | 35.11 | 27.66 | 37.23 | 94 |
| | ಚಿತ್ರದುರ್ಗ | | | 38.41 | 42.03 | 19.57 | 276 |
| | ಉಪ–ಮೊತ್ತ | | | 37.57 | 38.38 | 24.05 | 370 |
| ಬೆಳಗಾವಿ | ಬಾಗಲಕೋಟೆ | 2.41 | 3.15 | 61.30 | 14.81 | 18.33 | 540 |
| | ಧಾರವಾಡ | | 0.83 | 52.07 | 25.62 | 21.49 | 121 |
| | ಉಪ–ಮೊತ್ತ | 1.97 | 2.72 | 59.61 | 16.79 | 18.91 | 661 |
| ಕಲಬುರಗಿ | ಕಲಬುರಗಿ | | 0.42 | 33.68 | 27.86 | 38.05 | 481 |
| | ಯಾದಗಿರಿ | | | 38.10 | 42.86 | 19.05 | 63 |
| | ಉಪ–ಮೊತ್ತ | | 0.37 | 34.19 | 29.60 | 35.85 | 544 |
| ಮೈಸೂರು | ಹಾಸನ | | | 33.05 | 27.93 | 39.02 | 469 |
| | ಉಡುಪಿ | | | 37.50 | 45.83 | 16.67 | 24 |
| | ಉಪ–ಮೊತ್ತ | | | 33.27 | 28.80 | 37.93 | 493 |
| ಒಟ್ಟು | % | 0.63 | 0.97 | 42.70 | 26.89 | 28.82 | 2068 |
| | ಸಂಖ್ಯೆ | 13 | 20 | 883 | 556 | 596 | |
| ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ | | | | | | | |

ಮೂಲ: ಪ್ರಾಥಮಿಕ ದತ್ತಾಂಶ

ಏನೇ ಆಗಲಿ, ಈ ಮೌಲ್ಯಮಾಪನವು ಫಲಾನುಭವಿಗಳಿಗೆ ತರಬೇತಿಯನ್ನು ನೀಡುವ ಯೋಜನೆ ಬೆಂಬಲಿಸುವ ನಿಯೋಗಗಳು ಅಥವಾ ಅದರ ಪ್ರಾಯೋಜಿತ ಸರ್ಕಾರೇತರ ಸಂಸ್ಥೆಗಳು ಒದಗಿಸುವ ಸಾಮರ್ಥ್ಯ ಬಳಸಿದ ವಿಧಾನ ಮತ್ತು ಸೌಲಭ್ಯಗಳನ್ನು ಮರುಪರಿಶೀಲಿಸುವ ಅಗತ್ಯವನ್ನು ಸೂಚಿಸಲು ಸಾಕಷ್ಟು ಪುರಾವೆಗಳನ್ನು ಕಂಡುಕೊಳ್ಳುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ತರಬೇತಿಯ ಅವಧಿ ಮತ್ತು ವಿಷಯವನ್ನು ಸ್ವಯಂ ಉದ್ಯೋಗದ ಅಂತಹ ಉದ್ಯೋಗಗಳು/ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸ್ವಲ್ಪ ಮಟ್ಟಿಗೆ ಪ್ರಸ್ತುತಗೊಳಿಸಬೇಕು ಆದರೆ, ಪುನರುಚ್ಚರಿತವಾಗಬಾರದು. ಇದು ಜಿಲ್ಲೆಗಳಾದ್ಯಂತ ನಮ್ಮ ಕೇಂದ್ರೀಕೃತ ಸಮೂಹ ಚರ್ಚೆಗಳಲ್ಲಿನ ನಿಜವಾದ ಫಲಾನುಭವಿಗಳು ಆಗಾಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯವಾಗಿದೆ.

ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಅಭಿಪ್ರಾಯದ ವಿನ್ಯಾಸ ಇದಾಗಿದ್ದರೆ, ಒದಗಿಸಲಾದ ವಸತಿ ಸೌಲಭ್ಯ ಮತ್ತು ಆಹಾರದ ಶ್ರೇಣೀಕರಣ ಹೇಗಿದೆ? ವಸತಿ ಗುಣಮಟ್ಟದ ಬಗ್ಗೆ ಒಬ್ಬ ತರಬೇತಿದಾರರೂ ಉತ್ತಮ ವಿಷಯ ಹೇಳಿಲ್ಲ ಎಂದು ಕಂಡುಬಂದಿದೆ. ಈ ಸೌಲಭ್ಯವನ್ನು ಬಳಸಿಕೊಂಡವರಲ್ಲಿ 52.1 ಪ್ರತಿಶತದಷ್ಟು ಜನರು ಅದನ್ನು 'ಕಳಪೆ' (45%) ಅಥವಾ 'ತುಂಬಾ ಕಳಪೆ' (55%) ಎಂದು ಹೇಳಿದ್ದಾರೆ. ತರಬೇತಿ ಫಲಾನುಭವಿಗಳಿಗೆ ನೀಡಲಾಗುವ ಆಹಾರದ ಗುಣಮಟ್ಟದ ಬಗ್ಗೆ ಪ್ರತಿಕ್ರಿಯೆಗಳ ವಿನ್ಯಾಸ ಭಿನ್ನವಾಗಿರಲಿಲ್ಲ. ಒಬ್ಬ ಫಲಾನುಭವಿಯಾದರೂ ಅದನ್ನು 'ಸರಾಸರಿ' ಚೆನ್ನಾಗಿದೆ ಅಥವಾ ತುಂಬಾ ಚೆನ್ನಾಗಿದೆ ಎಂದು ಹೇಳಲಿಲ್ಲ. ಬದಲಾಗಿ 'ತುಂಬಾ ಕಳಪೆ' ಎನ್ನುವಲ್ಲಿ ಹೆಚ್ಚಿನ ಪಾಲು ಇತ್ತು.

ಹೀಗಾಗಿ ಮೌಲ್ಯಮಾಪನವು ತರಬೇತಿಯ ಮೂರು ಅಂಶಗಳನ್ನು ಗಮನಿಸಿದೆ – ತರಬೇತಿಯ ಗುಣಮಟ್ಟ, ವಸತಿ ಮತ್ತು ಬಡಿಸಿದ ಆಹಾರ.ಈ ಬಗ್ಗೆ ಫಲಾನುಭವಿಗಳು ಬಹಳಷ್ಟು ಬಯಸಿದ್ದರು.  ಆದ್ದರಿಂದ ತರಬೇತಿ ವಿಷಯ, ವಸತಿ ಮತ್ತು ತರಬೇತಿದಾರರಿಗೆ ಒದಗಿಸಲಾಗುತ್ತಿರುವ ಆಹಾರದ ವಿಷಯಕ್ಕೆ ಬಂದಾಗ ಗಣನೀಯ ಸುಧಾರಣೆಗಳ ಅಗತ್ಯವಿದೆ ಎಂದು ಸೂಚಿಸಲು ಅಧ್ಯಯನವು ಒಂದು ಕಾರಣವನ್ನು ಕಂಡುಕೊಳ್ಳುತ್ತದೆ.  ಕೇಂದ್ರೀಕೃತ ಸಮೂಹ ಚರ್ಚೆಗಳು ತರಬೇತಿಯ ಬಗ್ಗೆ ಒಂದು ನಿರ್ಣಾಯಕ ಲಕ್ಷಣವನ್ನು ಹೊರತಂದಿವೆ. ಎಲ್ಲಾ ವ್ಯಾಪಾರಗಳಿಗೆ ಒಂದೇ ರೀತಿಯ ತರಬೇತಿ ಅಥವಾ ಅದನ್ನು ನಡೆಸುವ ದಿನಗಳ ಸಂಖ್ಯೆಯ ಅಗತ್ಯವಿಲ್ಲ[7].

| ಕೋಷ್ಟಕ ಸಂಖ್ಯೆ 10.1.12 : ಜಿಲ್ಲೆ ಮತ್ತು ವಸತಿ ಸೌಲಭ್ಯದ ಗುಣಮಟ್ಟ | | | | |
|---|---|---|---|---|
| ಜಿಲ್ಲೆ | ವಸತಿ ಸೌಲಭ್ಯದ ಗುಣಮಟ್ಟ | | | ಒಟ್ಟು |
| | ತುಂಬಾ ಕಳಪೆ | ಕಳಪೆ | ಅನ್ವಯಿಸುವುದಿಲ್ಲ | |
| ಬಾಗಲಕೋಟೆ | 35.37 | 21.30 | 43.33 | 540 |
| ಬೆಂಗಳೂರು – ನಗರ | 25.53 | 28.72 | 45.74 | 94 |
| ಚಿತ್ರದುರ್ಗ | 14.86 | 22.83 | 62.32 | 276 |
| ಧಾರವಾಡ | 19.83 | 23.97 | 56.20 | 121 |
| ಹಾಸನ | 29.42 | 23.88 | 46.70 | 469 |

[7] ಮೌಲ್ಯಮಾಪನ ವರದಿ ನಿಷ್ಪಕ್ಷಪಾತವಾಗಿರಬೇಕಾದರೆ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಕೆಲವು ಕೇಂದ್ರೀಕೃತ ಸಮೂಹ ಚರ್ಚೆಗಳಲ್ಲಿ, ಅಲ್ಲಲ್ಲಿ ಕೆಲವು 'ಕಾಗದದ ಮೇಲಿನ ತರಬೇತಿಗಳಿದ್ದವು' ಎಂಬ 'ಗುಸುಗುಸು' ಅಥವಾ ದಾಖಲೆಗೆ ಒಳಗಾಗದ / ಸಮರ್ಥಿಸಲಾಗದ ವ್ಯಕ್ತಿಗಳ ಹೇಳಿಕೆಗಳನ್ನು ವರದಿಮಾಡಬೇಕು. ಸ್ಪಷ್ಟತೆಗಾಗಿ ಒತ್ತಾಯಿಸಿದಾಗ, ಸಾಲ ಪಡೆಯಲಾಗದ ಹತಾಶೆಯಿಂದ ಅಥವಾ ಯಾವುದಾದರೂ ರಾಜಕೀಯ ಪಕ್ಷಕ್ಕೆ ಸೇರಿರುವುದರಿಂದ ಇಂತಹ ದೂರು ಬಂದಿದೆ ಎಂಬ ಕಟುವಾದ ದೋಷಾರೋಪ ಗುಂಪಿನ ಮಧ್ಯದಿಂದಲ್ಲೇ ಕೇಳಿ ಬಂದಿದೆ. ಈ ಮೊದಲೇ ಇದು ಕೇಳಿ ಬಂದಿತ್ತು ಆದರೆ, ಮತ್ತೊಮ್ಮೆ ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು.

| ಜಿಲ್ಲೆ | ವಸತಿ ಸೌಲಭ್ಯದ ಗುಣಮಟ್ಟ | | | ಒಟ್ಟು |
|---|---|---|---|---|
| | ತುಂಬಾ ಕಳಪೆ | ಕಳಪೆ | ಅನ್ವಯಿಸುವುದಿಲ್ಲ | |
| ಕಲಬುರಗಿ | 30.15 | 26.61 | 43.24 | 481 |
| ಉಡುಪಿ | 25.00 | 29.17 | 45.83 | 24 |
| ಯಾದಗಿರಿ | 22.22 | 22.22 | 55.56 | 63 |
| ಒಟ್ಟು % | 28.19 | 23.94 | 47.87 | 2068 |
| ಸಂಖ್ಯೆ | 583 | 495 | 990 | |

ಮೂಲ: ಪ್ರಾಥಮಿಕ ದತ್ತಾಂಶ.
ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ

**10.1.8 ತರಬೇತಿಯ ನಂತರ: ಸ್ವಯಂ ಉದ್ಯೋಗದ ಕಡೆಗೆ:**

ತರಬೇತಿ ಪೂರ್ಣಗೊಂಡ ನಂತರ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರತಿ ಪಂಚಾಯಿತಿಗಳಿಂದ ಐದು ಜನರ ಗುಂಪುಗಳಿಗೆ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಅವರು ಯೋಜನಾ ಪ್ರಸ್ತಾಪವನ್ನು ಸಿದ್ಧಪಡಿಸಿ ಸ್ಥಳೀಯ ಮಟ್ಟದಲ್ಲಿ ಪಂಚಾಯಿತಿ ಮತ್ತು ನಂತರ ತಾಲ್ಲೂಕು ಸಮಿತಿಗಳ ಅನುಮೋದನೆಗಾಗಿ ಸಲ್ಲಿಸುತ್ತಾರೆ. ನಂತರ ಇವುಗಳನ್ನು ಗುರುತಿಸಲಾದ ವಾಣಿಜ್ಯ ಬ್ಯಾಂಕುಗಳಿಗೆ ಸಾಲದ ಅನುಮೋದನೆಗಾಗಿ ಕಳುಹಿಸಲಾಗುತ್ತದೆ.

**10.1.8.1 ಬ್ಯಾಂಕಿನ ಪಾತ್ರ:** ಪ್ರತಿ ಫಲಾನುಭವಿಯು ಯೋಜನೆಯ ಪ್ರಸ್ತಾಪದ ಆಧಾರದ ಮೇಲೆ 50,000 ರೂ.ಗಳವರೆಗೆ ಸಾಲವನ್ನು ಪಡೆಯುತ್ತಾನೆ. ಸಾಲವನ್ನು ಸರಿಯಾಗಿ ಮರುಪಾವತಿ ಮಾಡಿದ ನಂತರ ಅವಳು ಅಥವಾ ಅವನು ರೂ. 10,000 (20%) ಸಹಾಯಧನ ಪಡೆಯುತ್ತಾರೆ. ಕಾರ್ಯವಿಧಾನದ ಪ್ರಕಾರ ಮರುಪಾವತಿ ಮಾಡಬೇಕಾದ ಅಸಲು ರೂ. 10,000 ಕ್ಕೆ ತಲುಪಿದಾಗ ಬ್ಯಾಂಕುಗಳು ಪೂರ್ಣ ಅನುಮೋದಿತ ಮೊತ್ತವಾದ ರೂ. 50,000 ಅನ್ನು ಬಿಡುಗಡೆ ಮಾಡಬೇಕು. ಬಾಕಿಯನ್ನು ಸಹಾಯಧನವಾಗಿ ಪರಿವರ್ತಿಸಲಾಗುತ್ತದೆ ಮತ್ತು ಅದನ್ನು ಮನ್ನಾ ಮಾಡಲಾಗುತ್ತದೆ. ಇದು ವಾಣಿಜ್ಯ ಬ್ಯಾಂಕುಗಳು ಫಲಾನುಭವಿಗಳಿಗೆ ಹಣವನ್ನು ನೀಡುವಾಗ ಅನುಸರಿಸುವ ತತ್ವವಾಗಿದೆ.ಆದರೂ ನಾವು ಕೆಲವು ಫಲಾನುಭವಿಗಳಿಂದ ಕಲಿತಂತೆ ಸಾಲ ನೀಡಿದ ನಿಜವಾದ ಮೊತ್ತವು ಸಹಾಯಧನ ಮೊತ್ತವಾದ 10,000 ರೂ.ಗಳನ್ನು ತಡೆಹಿಡಿದಿತ್ತು. ಬದಲಾಗಿ ಈ ಮೊತ್ತವನ್ನು ನಿಶ್ಚಿತ ಠೇವಣಿಯಾಗಿ ಉಳಿಸಿಕೊಂಡು, ಅದಕ್ಕೆ ಬಂದ ಬಡ್ಡಿಯನ್ನು ಸಾಲದ ವಿರುದ್ಧ ಜಮಾ ಮಾಡಬಹುದಾಗಿದೆ. ಈ ಕಾರ್ಯವಿಧಾನವನ್ನು ಅನುಸರಿಸುವುದರಿಂದ ಬ್ಯಾಂಕಿಂಗ್ ಅಧಿಕಾರಿಗಳು ತಾವು ನೀಡಲಾಗಿದ್ದ ಸಾಲಗಳನ್ನು ಪೂರೈಸುವ ಉತ್ತಮ ದಾಖಲೆಯನ್ನು ನಿರ್ವಹಿಸಲು ಸಾಧ್ಯವಾಗಿದೆ.

ಕರ್ನಾಟಕದಲ್ಲಿ 'ಸಾಲ ಮನ್ನಾ'ದ ಕೆಲವು ಜನಪ್ರಿಯ ನೀತಿಗಳಿಂದಾಗಿ ಸಾಲ ಮರುಪಾವತಿ ಸ್ಥಿತಿಯ ಬಗ್ಗೆ ಗೊಂದಲವಿತ್ತು. ತದನಂತರ 2018 ಮತ್ತು 2019 ರ ಅವಧಿಯಲ್ಲಿ ರಾಜ್ಯದಾದ್ಯಂತ ತೀವ್ರ ಪ್ರವಾಹದಿಂದಾಗಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಒಬ್ಬ ಬ್ಯಾಂಕರ್ ಸೂಚಿಸಿದಂತೆ.

'ಸರ್ಕಾರದ ಯೋಜನೆಗಳ ವಿರುದ್ಧ ಸಾಲ ಮರುಪಾವತಿ ಎಂದಿಗೂ ಸಕಾಲಿಕ ಆಗಿರುವುದಿಲ್ಲ. ಏಕೆಂದರೆ ಜನರು ಸಾಲ ಮನ್ನಾದ ನಿರೀಕ್ಷೆಯಲ್ಲಿ ಸಾಲ ಪಡೆಯುತ್ತಾರೆ. ಮನ್ನಾ ಘೋಷಿಸಿದಾಗ ವಿಷಾದಿಸುವುದಕ್ಕಾಗಿ ಅವರು ಸಾಲವನ್ನು ಮರುಪಾವತಿಸುವ ಮೂಲಕ ಅಥವಾ ಬಡ್ಡಿಯನ್ನು ಪೂರೈಸುವ ಮೂಲಕ ಕಪ್ಪು ಕುರಿಯಾಗಲು ಬಯಸುವುದಿಲ್ಲ!'[8].

ಆದಾಗ್ಯೂ, ಮನ್ನಾ ನೀತಿಯು ರೈತರಿಗೆ ಸಹಾಯ ಮಾಡಲು ಮಾತ್ರ ಸ್ವಯಂ ಉದ್ಯೋಗಿ ಉದ್ಯಮಿಗಳಿಗೆ ಆಳವಾಗಿರುವುದರಿಂದ ಸಾಲ ಮನ್ನಾ ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಫಲಾನುಭವಿಗಳಿಗೆ ಅನ್ವಯಿಸುವುದಿಲ್ಲ. ಆದರೂ ಹೈನುಗಾರಿಕೆ, ಪಶು ಸಂಗೋಪನೆ, ಕೋಳಿ ಇತ್ಯಾದಿಗಳಿಗೆ ತಮ್ಮ ಸಾಲಗಳನ್ನು ಕೃಷಿ ಉದ್ದೇಶಗಳಿಗಾಗಿ ಸಾಲ ನೀಡಿದ ಹಣವೆಂದು ಪರಿಗಣಿಸಬಾರದೇಕೆ ಎಂಬ ಸಾಲಗಾರರ ಪ್ರಶ್ನೆಗಳಿಂದ ಬ್ಯಾಂಕುಗಳು ಮುಳುಗಿವೆ ಎಂದು ತಿಳಿದುಬಂದಿದೆ.

ಆರಂಭಿಕ ವಿಶ್ಲೇಷಣೆಯಿಂದ 2068 ಮಾದರಿ ಫಲಾನುಭವಿಗಳಲ್ಲಿ 834 ಜನರು (40.3 ಪ್ರತಿಶತ) ಅನರ್ಹರು ಎಂದು ತಿಳಿದುಬಂದಿದೆ. ಅವರು ಸಾಲವನ್ನು ಪಡೆಯುವಲ್ಲಿ ಯಶಸ್ವಿಯಾಗಲಿಲ್ಲ ಮತ್ತು ಯೋಜನೆಯ ಅಡಿಯಲ್ಲಿ ಯಾವುದೇ ಸ್ವಯಂ ಉದ್ಯೋಗ ಚಟುವಟಿಕೆ ತೆಗೆದುಕೊಳ್ಳಲಾಗಿಲ್ಲ ಎಂಬ ಕಾರಣಕ್ಕಾಗಿ ಇನ್ನು ಮುಂದೆ ನಮ್ಮ ವಿಶ್ಲೇಷಣೆಯಲ್ಲಿ ಈ ಗುಂಪನ್ನು ಹೊರಗಿಡಲಾಗಿದೆ. ಯೋಜನಾ ನಿಧಿಗಳ ವೆಚ್ಚದಲ್ಲಿ ತರಬೇತಿ ನೀಡಲು ವ್ಯಕ್ತಿಗಳು ಅಥವಾ ಗುಂಪುಗಳನ್ನು ಆಯ್ಕೆ ಮಾಡುವಲ್ಲಿ ಸೂಕ್ತ ಹಂತಗಳ ಕ್ರಮದ ಅನುಪಸ್ಥಿತಿ ಹೇಗಿತ್ತು ಎಂಬುದನ್ನು ಎತ್ತಿ ತೋರಿಸಲು ನಮ್ಮ ವಿಶ್ಲೇಷಣೆಯಲ್ಲಿ ಅವರನ್ನು ಪರಿಗಣಿಸಲಾಗಿದೆ.

ಯಾವುದೇ ವಿನಾಯಿತಿಯಿಲ್ಲದೆ ಮಾದರಿಯಲ್ಲಿರುವ ಪ್ರತಿಯೊಬ್ಬ ಫಲಾನುಭವಿಯು ಎರವಲು ಪಡೆದ ಮೊತ್ತವು ರೂ. 50,000 ಎಂದು ತಿಳಿಸಿದ್ದರು. ಇದಲ್ಲದೆ ಅವರಲ್ಲಿ ಯಾರೊಬ್ಬರೂ ಸ್ವಯಂ ಉದ್ಯೋಗ ಉದ್ಯಮವನ್ನು ಪ್ರಾರಂಭಿಸಲು ಜಂಟಿ ಹೊಣೆಗಾರಿಕೆ ಗುಂಪು ಎಂದು ರಚಿಸಲಾದ ಗುಂಪಿನ ಇತರ ನಾಲ್ಕು ಸದಸ್ಯರ ಸ್ಥಿತಿಯನ್ನು ನೆನಪಿಸಿಕೊಳ್ಳಲಾಗಲಿಲ್ಲ ಅಥವಾ ವರದಿ ಮಾಡಲು ಸಾಧ್ಯವಾಗಲಿಲ್ಲ. ವೈಯಕ್ತಿಕವಾಗಿ ಸಾಲ ನೀಡುವ ಆಯ್ಕೆ ಇದ್ದ ಕಾರಣ, ಜಂಟಿ ಹೊಣೆಗಾರಿಕೆ ಗುಂಪನ್ನು ರಚಿಸುವ ಪ್ರಯತ್ನಗಳು ಕಾರ್ಯಕ್ರಮದ ಫಲಿತಾಂಶಗಳಿಗೆ ಯಾವುದೇ ಮೌಲ್ಯವರ್ಧನೆ ಇಲ್ಲದ ಸಮಯ ವ್ಯರ್ಥವಾಗುವ ಒಂದು ಆಚರಣೆಯಾಗಿದೆ.

ಆದಾಗ್ಯೂ, ಈ ಮೌಲ್ಯಮಾಪನವು ಫಲಾನುಭವಿಗಳು ಆಯ್ಕೆ ಮಾಡಿದ ಸ್ವಯಂ ಉದ್ಯೋಗ ಕ್ಷೇತ್ರದ ಪ್ರಕಾರವನ್ನು ಲೆಕ್ಕಿಸದೆ ಎರವಲು ಪಡೆದ ಏಕರೂಪದ ಮೊತ್ತವನ್ನು ಆಧರಿಸಿ ಮಾಡುವ ಒಂದು ಪ್ರಮುಖ ಅವಲೋಕನವಾಗಿದೆ.

- (ಈ ಸಂದರ್ಭದಲ್ಲಿ, ರೂ. 50,000) ಗರಿಷ್ಠ ಮಿತಿಯು ವಿವಿಧ ಚಟುವಟಿಕೆಗಳ ನಿರ್ದಿಷ್ಟ ಅಗತ್ಯಗಳಿಗಿಂತ ಸ್ವಯಂ ಉದ್ಯೋಗ ಉದ್ಯಮಕ್ಕಾಗಿ ಬಂಡವಾಳ ಹೂಡಿಕೆಯನ್ನು ನಿರ್ಧರಿಸಿದಂತೆ ತೋರುತ್ತದೆ.
- ಹೀಗಾಗಿ, ಅದು ತರಕಾರಿ ಮಾರಾಟ ಅಂಗಡಿಯಾಗಿರಲಿ ಅಥವಾ ಛಾಯಾಚಿತ್ರ ಅಂಗಡಿಯಾಗಿರಲಿ ಅವರೆಲ್ಲರೂ ಆ ಮೊತ್ತಕ್ಕೆ ಯೋಜನಾ ವರದಿಯನ್ನು ಸಿದ್ಧಪಡಿಸಿದ್ದಾರೆ. ಮತ್ತು ಆ ಮೊತ್ತವನ್ನು ವಾಸ್ತವವಾಗಿ ಆ ಉದ್ಯಮಕ್ಕೆ ಅಗತ್ಯವಿರುವ ಮೊತ್ತದಂತೆ ಎರವಲು ಪಡೆದಿದ್ದಾರೆ. ಇಲ್ಲಿಯೇ ಫಲಾನುಭವಿಗಳ ಅನೇಕ ಉದ್ಯಮಗಳು ಹೆಚ್ಚುವರಿಯಾಗಿ ಮೊದಲೇ ಸೂಚಿಸಿದವುಗಳನ್ನು ಹೊರತುಪಡಿಸಿ ಅನುಮಾನಾಸ್ಪದವಾಗುತ್ತವೆ.

[8] ಆಳವಾದ ಸಂದರ್ಶನದಿಂದ ಕಂಡುಬಂದ ಅಂಶಗಳು

| ಕೋಷ್ಟಕ ಸಂಖ್ಯೆ 10.1.13: ಉದ್ಯಮದ ವಿಧ ಮತ್ತು ಬಳಸಿದ ಸಾಲದ ವ್ಯಾಪ್ತಿ | | | | | | | | | |
|---|---|---|---|---|---|---|---|---|---|
| | ಬಳಸಿದ ಸಾಲದ ವ್ಯಾಪ್ತಿ (ಶೇಕಡಾ ಅಂಕಿಅಂಶಗಳು) | | | | | | | | ಒಟ್ಟು (ಸಂ.) |
| | 25% ಕ್ಕಿಂತ ಕಡಿಮೆ | 25 ರಿಂದ 50% | 50 ರಿಂದ 75% | 75 ರಿಂದ 99% | ಸಂಪೂರ್ಣ ಬಳಸಲಾಗಿದೆ | ಹೆಚ್ಚುವರಿ, 25% ವರೆಗೆ | ಹೆಚ್ಚುವರಿ, 25 ರಿಂದ 50% | ಹೆಚ್ಚುವರಿ 50% ಕ್ಕಿಂತ ಹೆಚ್ಚು | |
| ಹೈನುಗಾರಿಕೆ | 3.19 | 0.46 | 5.02 | 4.90 | 5.82 | 18.59 | 21.78 | 40.25 | 877 |
| ಕೃಷಿ | 4.76 | | | | 9.52 | 28.57 | 23.81 | 33.33 | 21 |
| ಪಶುಸಂಗೋಪನೆ | | | 13.33 | 10.00 | 10.00 | 16.67 | 16.67 | 33.33 | 30 |
| ಕೋಳಿ ಸಾಕಾಣಿಕೆ | 7.14 | | | | 7.14 | 21.43 | 25.00 | 39.29 | 28 |
| ಚಿಲ್ಲರೆ / ದಿನಸಿ ಅಂಗಡಿಗಳು | 10.28 | 0.93 | 2.80 | 7.48 | 12.15 | 12.15 | 16.82 | 37.38 | 107 |
| ಜವಳಿ ಅಂಗಡಿ | | 4.00 | 4.00 | 16.00 | 8.00 | 24.00 | 24.00 | 20.00 | 25 |
| ಹೊಲಿಗೆ ಕೆಲಸ | 26.56 | | 3.13 | 4.69 | 6.25 | 21.88 | 15.63 | 21.88 | 64 |
| ಆಟೋ / ಚಾಲಕ | | | | | | 11.11 | 44.44 | 44.44 | 9 |
| ಬ್ಯೂಟಿ ಪಾರ್ಲರ್ | 12.50 | | | 12.50 | 25.00 | 12.50 | 12.50 | 25.00 | 8 |
| ಗಣಕಯಂತ್ರ ಅಂಗಡಿ | | 4.35 | 4.35 | 4.35 | | 13.04 | 17.39 | 56.52 | 23 |
| ವಿದ್ಯುತ್ ಸೇವೆಗಳು | | | | | | 40.00 | 10.00 | 50.00 | 10 |
| ಹೋಟೆಲ್ / ಟೀ ಅಂಗಡಿ | | | | | 10.00 | 20.00 | 40.00 | 30.00 | 10 |
| ಇತರೆ | 4.55 | | 4.55 | 4.55 | 4.55 | 18.18 | 31.82 | 31.82 | 22 |
| ಒಟ್ಟು % | 4.94 | 0,57 | 4.54 | 5.19 | 6.56 | 18.48 | 21.31 | 38.41 | |
| ಸಂಖ್ಯೆ | 61 | 07 | 56 | 64 | 81 | 228 | 263 | 474 | 1234 |

ಮೂಲ: ಪ್ರಾಥಮಿಕ ದತ್ತಾಂಶ.
ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ
'ಇತರೆ' ವಿವರಗಳಿಗಾಗಿ ಅಡಿ ಟಿಪ್ಪಣಿ 5 ಗಮನಿಸಿ

### 10.1.9: ನಿರ್ದಿಷ್ಟ ಉದ್ದೇಶಕ್ಕಾಗಿ ಸಾಲದ ಬಳಕೆ

ಮೌಲ್ಯಮಾಪನ ಅಧ್ಯಯನವು ತಮ್ಮ ಸ್ವಯಂ ಉದ್ಯೋಗ ಉದ್ಯಮವನ್ನು ಸ್ಥಾಪಿಸಲು ಬಳಸಲಾಗುತ್ತಿರುವ ಸಾಲಗಳ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡಿದೆ. ಈ ನಿಟ್ಟಿನಲ್ಲಿ ಫಲಿತಾಂಶಗಳ ವಿಶ್ಲೇಷಣೆಯು ಯೋಜನೆಯ ಭವಿಷ್ಯದ ವಿಸ್ತರಣೆಗೆ ಒಂದು ಗುರುತು, ಯಾವುದಾದರೂ ಇದ್ದರೆ ಆಗಬಹುದು. ಕೇವಲ ಬೆಂಬಲವನ್ನು ರೂ. 50,000 ಎಂದು ನಿಗದಿಪಡಿಸುವುದಕ್ಕಿಂತ ಹೆಚ್ಚಾಗಿ ಅಂತಹ ಹಣಕಾಸಿನ ಅವಶ್ಯಕತೆಯ ಹೆಚ್ಚು ವೈಜ್ಞಾನಿಕ ಮಾಪನವನ್ನು ಕಂಡುಕೊಳ್ಳಲಾಗಿದೆ. ಈ ಅವಲೋಕನಗಳ ಸಮೂಹಕ್ಕೆ ಪುರಾವೆಗಳನ್ನು ಪ್ರದರ್ಶಿಸಲು, ಕೋಷ್ಟಕ 10.1.13 ಅನ್ನು ಪ್ರಸ್ತುತಪಡಿಸಲಾಗಿದೆ. ಮಂಜೂರಾದ ಸಾಲವು ಅಸಮರ್ಪಕವಾಗಿದೆ ಎಂದು ಭಾವಿಸಿದ ಒಬ್ಬ ಫಲಾನುಭವಿಯೂ

ಇರಲಿಲ್ಲ. ಬದಲಾಗಿ ಸ್ವಯಂ ಉದ್ಯೋಗ ಉದ್ಯಮವನ್ನು ಪ್ರಾರಂಭಿಸಲು ಇದು ಸಮರ್ಪಕವಾಗಿದೆ ಎಂಬುದು ಒಮ್ಮತದ ಅಭಿಪ್ರಾಯವಾಗಿದೆ.

ಸಾಲಗಳನ್ನು (ರೂ. 50,000) ಪಡೆದ ಸುಮಾರು 15 ಪ್ರತಿಶತ ಫಲಾನುಭವಿಗಳು ಸ್ವಯಂ ಉದ್ಯೋಗ ಉದ್ಯಮಗಳಲ್ಲಿ ಹೂಡಿಕೆ ಮಾಡಲಾದ ಸಂಪೂರ್ಣ ಸಾಲದಿಂದ ವಿವಿಧ ಮೊತ್ತವನ್ನು ಉಳಿಸಿದ್ದಾರೆ. ಸಾಲ ಪಡೆದ ಹಣದಲ್ಲಿ ಕೇವಲ 25 ಪ್ರತಿಶತದವರೆಗೆ ಬಳಸಿದವರಲ್ಲಿ ಹೆಚ್ಚಿನ ಪಾಲು ಹೊಲಿಗೆ ಕೆಲಸ ಅವಲಂಬಿಸಿದವರಾಗಿದ್ದಾರೆ. ಜವಳಿ ಅಂಗಡಿಯನ್ನು ಪ್ರಾರಂಭಿಸಿದ 16 ಪ್ರತಿಶತಜನರು ಪಡೆದ ಸಾಲದ 75 ರಿಂದ 99 ಪ್ರತಿಶತವನ್ನು ಬಳಸಿದ್ದಾರೆ.

ಫಲಾನುಭವಿಗಳ ಮಾದರಿಯಲ್ಲಿರುವ 1234 ರಲ್ಲಿ ಕೇವಲ 81 ಜನರು (6.56) ಪೂರ್ಣ ಪ್ರಮಾಣದಲ್ಲಿ ಪಡೆದ ಸಾಲವನ್ನು ಬಳಸಿದ್ದರು. ಈ ವರ್ಗದಲ್ಲಿ ಅತಿ ದೊಡ್ಡ ಪಾಲು ಬ್ಯೂಟಿ ಪಾರ್ಲರ್ ಪ್ರಾರಂಭಿಸಿವರು ನಂತರ ದಿನಸಿ ಅಂಗಡಿಗಳನ್ನು ತೆರೆದವರದ್ದಾಗಿದೆ. ತಲಾ 10 ಪ್ರತಿಶತದಷ್ಟು ಕಾಫಿ ಅಂಗಡಿ ಪ್ರಾರಂಭಿಸಿದವರು ಮತ್ತು ಪಶು ಸಂಗೋಪನೆಯಲ್ಲಿ ತೊಡಗಿರುವವರಾಗಿದ್ದಾರೆ. ಅಂತಿಮವಾಗಿ, 78 ಪ್ರತಿಶತಕ್ಕಿಂತ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ಸಾಲವಾಗಿ ಪಡೆದುದ್ದಕ್ಕಿಂತ ಹೆಚ್ಚಿನ ಹೂಡಿಕೆ ಮಾಡಲು ತಮ್ಮ ಇತರ ಸಂಪನ್ಮೂಲಗಳನ್ನು ಬಳಸಿದ್ದಾರೆ ಎಂದು ಕಂಡುಬಂದಿದೆ. ಉದಾಹರಣೆಗೆ, ವಿದ್ಯುತ್ ಸೇವೆಯಲ್ಲಿ ತೊಡಗಿರುವವರಲ್ಲಿ 40 ಪ್ರತಿಶತದಷ್ಟು ಜನರು ಎರವಲು ಪಡೆದ ಮೊತ್ತಕ್ಕಿಂತ 25 ಪ್ರತಿಶತಕ್ಕಿಂತ ಹೆಚ್ಚು ಹೂಡಿಕೆ ಮಾಡಿದ್ದಾರೆ. ಅದೇ ಪ್ರತಿಶತದಷ್ಟು ಕಾಫಿ / ಚಹಾ ಅಂಗಡಿಗಳಲ್ಲಿ ತೊಡಗಿರುವ ವ್ಯಕ್ತಿಗಳು ಅವರು ಎರವಲು ಪಡೆದ ಮೊತ್ತದಲ್ಲಿ 50 ರಷ್ಟು ಹೆಚ್ಚುವರಿ ಹೂಡಿಕೆಯಾಗಿ ಖರ್ಚು ಮಾಡಿದ್ದಾರೆ. ಹೆಚ್ಚಿನ ಪಾಲು 44 ಪ್ರತಿಶತದಷ್ಟು ಆಟೋ ಚಾಲಕರು ಎರವಲು ಪಡೆದ ಹಣದಲ್ಲಿ 24 ರಿಂದ 50% ಕ್ಕಿಂತ ಹೆಚ್ಚು ಖರ್ಚು ಮಾಡಿದ್ದಾರೆ.

**10.1.10 : ಸಾಲ ಮಂಜೂರು ಮತ್ತು ಉದ್ಯೋಗ ಉದ್ಯಮಗಳ ಪ್ರಾರಂಭದ ನಡುವಿನ ಕಾಲಾವಧಿ ಲೋಪ :**

ಯಾವುದೇ ಅಭಿವೃದ್ಧಿ ಯೋಜನೆಯ ನಿರ್ಣಾಯಕ ಆಯಾಮಗಳಲ್ಲಿ ಸಮಾಜದ ಆರ್ಥಿಕ ಯೋಗಕ್ಷೇಮದ ಯಾವುದೇ ವಿಭಾಗವನ್ನು ಉತ್ತೇಜಿಸುವಾಗ ಅವರು ಫಲಾನುಭವಿಗಳಲ್ಲಿ ಒಬ್ಬರಾಗಲು ಪ್ರಯತ್ನಿಸುವ ಸಮಯ ಮತ್ತು ಈ ಸಂದರ್ಭದಲ್ಲಿ ಉದ್ಯಮದ ಅನುದಾನ ಅಥವಾ ಪ್ರಾರಂಭದ ಅಂತಿಮ ಸ್ವೀಕೃತಿಯ ನಡುವಿನ ಕಾಲಾವಧಿ ಲೋಪ ಒಂದಾಗಿದೆ. ಆರಂಭದಲ್ಲಿ ಆರು ದಿನಗಳ ತರಬೇತಿಯನ್ನು ನೀಡಲಾಗುತ್ತದೆ. ಅದರ ಮೂಲಕ ಪಡೆದ ಜ್ಞಾನವನ್ನು ಮರೆತುಹೋಗುವ ಮೊದಲು ಅದನ್ನು ಬಳಕೆಗೆ ತರಬೇಕಾಗುತ್ತದೆ. ಗ್ರಾಮೀಣ ಯುವಕರು ತಮ್ಮ ಭವಿಷ್ಯವನ್ನು ನಿರ್ಧರಿಸಬೇಕಾಗಿರುವುದರಿಂದ ಇದು ಅವರಿಗೆ ವಿಶೇಷವಾಗಿ ಅಗತ್ಯವಿದೆ ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಅನುಮೋದನೆಯ ಯಾವುದೇ ವಿಳಂಬ ಮತ್ತು ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ದೀರ್ಘಕಾಲದ ಕಾಯುವಿಕೆ ಮತ್ತು ಪುನರಾವರ್ತಿತ ಅನುಸರಣಾ ಭೇಟಿಗಳನ್ನು ಸೂಚಿಸುತ್ತದೆ. ಫಲಾನುಭವಿಗಳು ಸಾಕಷ್ಟು ಹಣಕಾಸಿನ ವೆಚ್ಚಗಳನ್ನು ಅನುಭವಿಸಬೇಕಾಗುತ್ತದೆ ಮತ್ತು ತಮ್ಮ ಅರ್ಜಿಯ ಭವಿಷ್ಯವನ್ನು ತಿಳಿಯಲು ತಮ್ಮ ನಿವಾಸದಿಂದ ವಿವಿಧ ಕಛೇರಿಗಳು ಮತ್ತು ಬ್ಯಾಂಕುಗಳಿಗೆ ಓಡಾಡಲು ಸಮಯವನ್ನು ಕಳೆಯಬೇಕಾಗುತ್ತದೆ. ಬಹಳಷ್ಟು ಮಟ್ಟಿಗೆ ಅವರಲ್ಲಿ ಕೆಲವರು ಅನುದಾನವು ತಮಗೆ ಬರುವ ನಿರೀಕ್ಷೆಯಲ್ಲಿ ದುಬಾರಿ ಬಡ್ಡಿದರದ ಮೇಲೆ ಹಣವನ್ನು ಎರವಲು ಪಡೆದಿರುತ್ತಾರೆ. ಕೆಲವರು ಸೂಚಿಸಿದಂತೆ ತಮ್ಮ ಕೆಲಸವನ್ನು ತ್ವರಿತವಾಗಿ ಮಾಡಿಸಬೇಕಾದ ಕಾರಣದಿಂದಾಗಿ ವೆಚ್ಚಗಳೂ ಹೆಚ್ಚಾಗಿರುತ್ತವೆ! ಪರಿಣಾಮವಾಗಿ, ಪರಿಶೀಲನೆಯಲ್ಲಿರುವ ಸ್ವಯಂ ಉದ್ಯೋಗ ಕಾರ್ಯಕ್ರಮ, ಉದ್ಯಮಕ್ಕೆ

ಪಡೆದ ಹಣವನ್ನು ಮೊದಲು ಪ್ರಯೋಜನಗಳ ಮಂಜೂರಾತಿ ಮತ್ತು ಸ್ವೀಕೃತಿಯನ್ನು ಸುಗಮಗೊಳಿಸಲು ಈ ಹಿಂದೆ ಮಾಡಿದ ಸಾಲಗಳ ಮರುಪಾವತಿಗೆ ಖರ್ಚು ಮಾಡುವ ಲೋಪದಿಂದ ಪ್ರಾರಂಭವಾಗುತ್ತದೆ.

ಕೋಷ್ಟಕ ಸಂಖ್ಯೆ 10.1.14: ತರಬೇತಿಯ ನಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ತೆಗೆದುಕೊಂಡ ಸಮಯ

| ವಿಭಾಗ | ಜಿಲ್ಲೆ | ತರಬೇತಿಯ ನಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ತೆಗೆದುಕೊಂಡ ಸಮಯ | | | ಒಟ್ಟು ಸಂಖ್ಯೆ. | ಅನ್ವಯವಾಗುವುದಿಲ್ಲ % | ಒಟ್ಟು ಮಾದರಿ (ಸಂಖ್ಯೆ.) |
|---|---|---|---|---|---|---|---|
| | | 3 ತಿಂಗಳವರೆಗೆ | 3 ರಿಂದ 6 ತಿಂಗಳುಗಳು | 6 ರಿಂದ 12 ತಿಂಗಳುಗಳು | | | |
| ಬೆಂಗಳೂರು | ಬೆಂಗಳೂರು – ನಗರ | | 100.00 | | 61 | 35.10 | 94 |
| | ಚಿತ್ರದುರ್ಗ | 12.43 | 37.28 | 50.30 | 169 | 38.80 | 276 |
| ಬೆಳಗಾವಿ | ಧಾರವಾಡ | 45.78 | 37.35 | 16.87 | 83 | 31.40 | 121 |
| | ಬಾಗಲಕೋಟೆ | | 100.00 | | 295 | 45.40 | 540 |
| ಕಲಬುರಗಿ | ಕಲಬುರಗಿ | | 100.00 | | 261 | 45.70 | 481 |
| | ಯಾದಗಿರಿ | 24.32 | 45.95 | 29.73 | 37 | 41.30 | 63 |
| ಮೈಸೂರು | ಹಾಸನ | | 100.00 | | 315 | 32.80 | 469 |
| | ಉಡುಪಿ | 30.77 | 69.23 | | 13 | 45.80 | 24 |
| ಒಟ್ಟು | % | 5.83 | 85.25 | 8.91 | 1234 | 40.30 | 2068 |
| | ಸಂಖ್ಯೆ | 72 | 1052 | 110 | | 834 | |

ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ

ಮೂಲ: ಪ್ರಾಥಮಿಕ ದತ್ತಾಂಶ

ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಹೊರತುಪಡಿಸಿ, ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಹೆಚ್ಚಿನ ಫಲಾನುಭವಿಗಳು ತರಬೇತಿ ಪಡೆದ ನಂತರ 3 ರಿಂದ 6 ತಿಂಗಳೊಳಗೆ ತಮ್ಮ ಸ್ವಯಂ ಉದ್ಯೋಗವನ್ನು ಪ್ರಾರಂಭಿಸಿದ್ದಾರೆ. ಎಂಬುದು ಕೋಷ್ಟಕ 10.1.14 ರಿಂದ ತಿಳಿದುಬಂದಿದೆ. ಬೆಂಗಳೂರು ನಗರ, ಬಾಗಲಕೋಟೆ, ಕಲಬುರಗಿ ಮತ್ತು ಹಾಸನ ಜಿಲ್ಲೆಗಳಲ್ಲಿ 100 ಪ್ರತಿಶತ ಜನರು ತರಬೇತಿ ಅವಧಿಯ ನಂತರ ತಮ್ಮ ಸ್ವಯಂ ಉದ್ಯೋಗ ಉದ್ಯಮಗಳನ್ನು ಪ್ರಾರಂಭಿಸಲು 3 ರಿಂದ 6 ತಿಂಗಳುಗಳು ಬೇಕಾಯಿತು ಎಂದು ವ್ಯಕ್ತಪಡಿಸಿದ್ದಾರೆ. ಆದರೆ ಚಿತ್ರದುರ್ಗದಿಂದ ತರಬೇತಿ ಪಡೆದ ಫಲಾನುಭವಿಗಳಲ್ಲಿ ಶೇಕಡಾ 50.30 ರಷ್ಟು ಜನರು 6 ರಿಂದ 12 ತಿಂಗಳುಗಳ ವಿಳಂಬವಾಗಿ ತಮ್ಮ ಉದ್ಯಮವನ್ನು ಪ್ರಾರಂಬಿಸಿದ್ದಾರೆ. ಕುತೂಹಲಕಾರಿ ಸಂಗತಿಯೆಂದರೆ ಧಾರವಾಡವು ಉತ್ತರಿಸಿರುವ ಫಲಾನುಭವಿಗಳಲ್ಲಿ 45.78 ಪ್ರತಿಶತ ದಷ್ಟು ಜನರು 3 ತಿಂಗಳ ತರಬೇತಿಯೊಂದಿಗೆ ತಮ್ಮ ಉದ್ಯಮವನ್ನು ಪ್ರಾರಂಭಿಸಿದ ಏಕೈಕ ಜಿಲ್ಲೆಯಾಗಿದೆ. ಒಟ್ಟಾರೆ 85.25 ಪ್ರತಿಶತ ಫಲಾನುಭವಿಗಳು ತಮ್ಮ ಅರ್ಜಿಗಳನ್ನು ಸಲ್ಲಿಸಿದ ನಂತರ ಸಾಲವನ್ನು ಪಡೆಯುವಲ್ಲಿ ಇತರ ಕೆಲವು ರೀತಿಯ ವಿಳಂಬವನ್ನು ಅನುಭವಿಸಿದ್ದಾರೆ ಎಂದು ಹೇಳಿದ್ದಾರೆ. ಬೆಂಗಳೂರು–ನಗರ, ಬಾಗಲಕೋಟೆ, ಹಾಸನ ಮತ್ತು ಕಲಬುರಗಿ ಜಿಲ್ಲೆಗಳಿಂದ ಅರ್ಹರಾದ ಮತ್ತು ಸ್ಪಂದಿಸಿದ ಎಲ್ಲಾ ಮಾದರಿ ಫಲಾನುಭವಿಗಳು ಈ ಅನುಭವವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಧಾರವಾಡ (45.78) ಚಿತ್ರದುರ್ಗ, ಉಡುಪಿ ಮತ್ತು ಯಾದಗಿರಿಯಿಂದ 'ವಿಳಂಬವಿಲ್ಲ' ಎಂದು ವ್ಯಕ್ತಪಡಿಸಿದ್ದಾರೆ. ಆದರೆ ಈ ಮಾಹಿತಿಯು

ಎಷ್ಟು ವಿಳಂಬವಾಗಿದೆ ಅಥವಾ ಸಕಾಲದಲ್ಲಿ ಸಾಲ ವಿತರಣೆಯಾಗಿದೆ ಎಂಬುದನ್ನು ತಿಳಿಸುವುದಿಲ್ಲ. ಕೋಷ್ಟಕ 10.1.14 ಈ ವಿಷಯದಲ್ಲಿ ದತ್ತಾಂಶವನ್ನು ಸೆರೆಹಿಡಿದಿದೆ. ಕೇವಲ 5.83 ಪ್ರತಿಶತ ಫಲಾನುಭವಿಗಳು ಮಾತ್ರ ತಮ್ಮ ಸಾಲವನ್ನು ಪಡೆದು, ತರಬೇತಿ ಪೂರ್ಣಗೊಂಡ ಮೂರು ತಿಂಗಳೊಳಗೆ ತಮ್ಮ ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸಿರುವುದರಿಂದ, ಕಾರ್ಯಕ್ರಮದ ಮುಂದಿನ ಅನುಷ್ಠಾನಕ್ಕೆ ಈ ಫಲಿತಾಂಶಗಳು ಅತ್ಯಗತ್ಯವಾಗಿವೆ. ಬೆಳಗಾವಿ (45.78) ಮತ್ತು ಮೈಸೂರು (30.77) ವಿಭಾಗಗಳು ಈ ವಿಷಯದಲ್ಲಿ ಮುನ್ನಡೆ ಸಾಧಿಸಿವೆ. ಇದು ಅಲ್ಪಾವಧಿ ಎಂಬುದು ಸಮಂಜಸವಾಗಿದೆ, ಆದರೆ ಪ್ರಯೋಜನ ಪಡೆಯುತ್ತಿರುವ ವ್ಯಕ್ತಿಗಳ ಸಂಖ್ಯೆ ತುಂಬಾ ಕಡಿಮೆಯಾಗಿದೆ. ಬಹಳಷ್ಟು ಮಂದಿ ಅಂದರೆ 85.25 ಪ್ರತಿಶತದಷ್ಟು ಜನರು ಮೂರರಿಂದ ಆರು ತಿಂಗಳ ನಡುವೆ ಸಾಲಗಳನ್ನು ಪಡೆದಿದ್ದಾರೆ. ಕೋಷ್ಟಕ 10.1.15 ಮತ್ತು ನಕ್ಷೆ 10.1.6 ವಿವಿಧ ವ್ಯಾಪಾರಗಳಲ್ಲಿ ಉದ್ಯಮಗಳ ಪ್ರಾರಂಭಕ್ಕೆ ಮೊದಲು ತೆಗೆದುಕೊಂಡ ಸಮಯವನ್ನು ಪ್ರಸ್ತುತಪಡಿಸುತ್ತವೆ.

100 ಪ್ರತಿಶತ ಫಲಾನುಭವಿಗಳು ಆಟೋ ರಿಕ್ಷಾಗಳನ್ನು ನಡೆಸುವಲ್ಲಿ ಮತ್ತು ವಿದ್ಯುತ್ ಸೇವೆಗಳನ್ನು ಸ್ಥಾಪಿಸುವಲ್ಲಿ ತಮ್ಮ ಸ್ವಯಂ ಉದ್ಯೋಗವನ್ನು 3 ರಿಂದ 6 ತಿಂಗಳುಗಳಲ್ಲಿ ಪ್ರಾರಂಭಿಸಿದ್ದಾರೆ. 86 ಮತ್ತು 95 ಪ್ರತಿಶತದಷ್ಟು ಜನರು ಕ್ರಮವಾಗಿ ಹೈನುಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿದ್ದು, ಈ ಹಿಂದೆ ಹಲವಾರು ಬಾರಿ ಸೂಚಿಸಿದಂತೆ ಈ ಉದ್ಯಮಗಳನ್ನು ಅನುಮಾನಿಸುವಂತಾಗಿದೆ. ತರಬೇತಿ ಪೂರ್ಣಗೊಂಡ ನಂತರ ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವವರಲ್ಲಿ ಅತ್ಯಂತ ವಿಸ್ತೃತವಾಗಿ ನಾವು ಪರಿಗಣಿಸಿದರೆ 20%ಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿರುವ ಎರಡು ಕ್ಷೇತ್ರಗಳಿವೆ: ಗಣಕಯಂತ್ರ ಅಂಗಡಿಗಳು ಮತ್ತು 'ಪಶು ಸಂಗೋಪನೆ.' ಬ್ಯೂಟಿ ಪಾರ್ಲರ್ (25%) ಸ್ಥಾಪಿಸಲು ತೆಗೆದುಕೊಂಡ ಸಮಯ ಅತ್ಯಂತ ಕಡಿಮೆಯಾಗಿದೆ.

**ರೇಖಾಚಿತ್ರ 10.1.6:**
**ತರಬೇತಿ ಪಡೆದ ನಂತರ ಉದ್ಯಮವನ್ನು ಪ್ರಾರಂಭಿಸಲು ತೆಗೆದುಕೊಂಡ ಸಮಯ**



ಕೋಷ್ಟಕ ಸಂಖ್ಯೆ 10.1.15: ಉದ್ಯಮದ ವಿಧ ಮತ್ತು ತರಬೇತಿಯ ನಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ತೆಗೆದುಕೊಂಡ ಸಮಯ

| ಉದ್ಯಮದ ವಿಧ | ತರಬೇತಿಯ ನಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ತೆಗೆದುಕೊಂಡ ಸಮಯ | | | ಒಟ್ಟು (ಸಂ.) |
|---|---|---|---|---|
| | 3 ತಿಂಗಳವರೆಗೆ | 3 ರಿಂದ 6 ತಿಂಗಳುಗಳು | 6 ರಿಂದ 12 ತಿಂಗಳುಗಳು | |
| ಪಶುಸಂಗೋಪನೆ | 13.3 | 66.7 | 20.0 | 877 |
| ಬ್ಯೂಟಿ ಪಾರ್ಲರ್ | 25.0 | 75.0 | | 21 |
| ಚಿಲ್ಲರೆ / ದಿನಸಿ ಅಂಗಡಿಗಳು | 7.5 | 77.6 | 15.0 | 30 |
| ಗಣಕಯಂತ್ರ ಅಂಗಡಿ | | 78.3 | 21.7 | 28 |
| ಜವಳಿ ಅಂಗಡಿ | 8.0 | 80.0 | 12.0 | 107 |
| ಹೊಲಿಗೆ ಕೆಲಸ | 6.3 | 84.4 | 9.4 | 25 |
| ಹೈನುಗಾರಿಕೆ | 5.5 | 86.3 | 8.2 | 64 |
| ಹೋಟೆಲ್ / ಟೀ ಅಂಗಡಿ | 10.0 | 90.0 | | 9 |
| ಕೋಳಿ ಸಾಕಾಣಿಕೆ | 7.1 | 92.9 | | 8 |
| ಕೃಷಿ | | 95.2 | 4.8 | 23 |
| ಆಟೋ / ಚಾಲಕ | | 100.0 | | 10 |
| ವಿದ್ಯುತ್ ಸೇವೆಗಳು | | 100.0 | | 10 |
| ಇತರೆ | 4.5 | 90.9 | 4.5 | 22 |
| ಒಟ್ಟು % | 5.8 | 85.3 | 8.9 | 1234 |
| ಸಂಖ್ಯೆ | 72 | 1052 | 110 | |

ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ.
'ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 5 ಅನ್ನು ನೋಡಿ.

ಮೂಲ: ಪ್ರಾಥಮಿಕ ದತ್ತಾಂಶ

ತರಬೇತಿಯ ಪೂರ್ಣತೆ ಮತ್ತು ಉದ್ಯಮದ ಪ್ರಾರಂಭದ ನಡುವೆ ತೆಗೆದುಕೊಂಡ ಸಮಯವನ್ನು ಕಡಿಮೆ ಮಾಡಲು ಪ್ರಯತ್ನಗಳನ್ನು ಮಾಡಬೇಕಾಗಿದೆ ಏಕೆಂದರೆ 3 ರಿಂದ 6 ತಿಂಗಳುಗಳು ಸಹ ಆಗಾಗ್ಗೆ ನಿರಾಶಾದಾಯಕ ಮತ್ತು ಸಂಪನ್ಮೂಲಗಳ ವ್ಯರ್ಥಕ್ಕೆ ಕಾರಣವಾಗಬಹುದು. ಪಂಚಾಯಿತಿ ಅಧಿಕಾರಿಗಳೊಂದಿಗೆ ಮತ್ತು ಬ್ಯಾಂಕರ್ ಗಳೊಂದಿಗೆ ಸಮಾಲೋಚನೆಗಳು ಅನೇಕ ಸಮಿತಿಗಳು ಮತ್ತು ಉಪ ಸಮಿತಿಗಳಿವೆ ಆದರೆ ಫಲಾನುಭವಿಗಳ ಆಯ್ಕೆಯ ನಿಜವಾದ ನಿರ್ಧಾರವನ್ನು ವಿಧಾನಸಭೆಯ ಕ್ಷೇತ್ರಮಟ್ಟದ ಚುನಾಯಿತ ನಾಯಕರು ಮಾಡುತ್ತಾರೆ ಎಂದು ಸೂಚಿಸಲು ನಮ್ಮನ್ನು ಪ್ರೇರೇಪಿಸುತ್ತದೆ. ಇದಲ್ಲದೆ ಸಾಲದ ಅರ್ಹತೆಯನ್ನು ನಿರ್ಣಯಿಸಲು ತೆಗೆದುಕೊಂಡ ಸಮಯವನ್ನು ಸಹ ಕಡಿಮೆ ಮಾಡಬೇಕು.

### 10.1.11 ಸ್ವಯಂ ಉದ್ಯೋಗದ ನಿರೀಕ್ಷಿತ ಮತ್ತು ವಾಸ್ತವ ಆದಾಯ:

'ಗ್ರಾಮೀಣ ಯುವಕರ ಆಂತರಿಕ ಸಾಮರ್ಥ್ಯ ಬೆಳೆಸುವುದರಿಂದ ಮತ್ತು ಲಾಭದಾಯಕ ಉದ್ಯಮಗಳನ್ನು ಸ್ಥಾಪಿಸಲು ಸಹಾಯ ಮಾಡುವುದರಿಂದ ಸಾವಿರಾರು ಗ್ರಾಮೀಣ ಯುವಕರ ಜೀವನದ ಗುಣಮಟ್ಟವನ್ನು ಅಭಿವೃದ್ಧಿಗೊಳಿಸುವುದು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆ. ಈ ಉದ್ದೇಶದ ಒಳ ಅರ್ಥವೆಂದರೆ ಅವರ ಜೀವನೋಪಾಯವನ್ನು ಆರ್ಥಿಕ ದೃಷ್ಟಿಗಿಂತ ಹೆಚ್ಚಿನ ವಿಷಯಗಳಲ್ಲಿ ಬೆಂಬಲಿಸುವ ಒಂದು ಸ್ವತಂತ್ರ್ಯ ಆದಾಯ ಮೂಲವನ್ನು ಒದಗಿಸುವುದಾಗಿದೆ. ಈ ಮೌಲ್ಯಮಾಪನ ಅಧ್ಯಯನವು ಅವರ ಆದಾಯ ಎಷ್ಟರ ಮಟ್ಟಿಗೆ

ವೃದ್ಧಿಯಾಗಲು ಪ್ರಾರಂಭಿಸಿದೆ. ಎಂಬ ಪ್ರಶ್ನೆಯನ್ನು ಕೇಳಲಾಗಿ ಫಲಾನುಭವಿಗಳು ನೀಡಿದ ಉತ್ತರಗಳನ್ನು ಕೆಳಗಿನ ಕೋಷ್ಟಕದಲ್ಲಿ ಪ್ರಸ್ತುತಪಡಿಸಲಾಗಿದೆ.

| ಕೋಷ್ಟಕ ಸಂಖ್ಯೆ 10.1.16: ಉದ್ಯಮದ ವಿಧ ಮತ್ತು ನಿರೀಕ್ಷಿತ ಮಾಸಿಕ ಆದಾಯ | | | | | |
|---|---|---|---|---|---|
| ಉದ್ಯಮದ ವಿಧ | ನಿರೀಕ್ಷಿತ ಮಾಸಿಕ ಆದಾಯ | | | | ಒಟ್ಟು (ಸಂಖ್ಯೆ.) |
| | ಉದ್ಯಮ ಇಲ್ಲ | 12,000 ರೂ. ವರೆಗೆ | 12,001 ರಿಂದ 15,000 ರೂ. | 15,001 ರಿಂದ 20.000 ರೂ. | |
| ಹೈನುಗಾರಿಕೆ | 2.51 | 21.32 | 32.16 | 44.01 | 877 |
| ಕೃಷಿ | 4.76 | 33.33 | 14.29 | 47.62 | 21 |
| ಪಶು ಸಂಗೋಪನೆ | | 6.67 | 36.67 | 56.67 | 30 |
| ಕೋಳಿ ಸಾಕಾಣಿಕೆ | 10.71 | 21.43 | 32.14 | 35.71 | 28 |
| ಚಿಲ್ಲರೆ / ದಿನಸಿ ಅಂಗಡಿಗಳು | 5.61 | 25.23 | 32.71 | 36.45 | 107 |
| ಜವಳಿ ಅಂಗಡಿ | | 32.00 | 24.00 | 44.00 | 25 |
| ಹೊಲಿಗೆ ಕೆಲಸ | 18.75 | 21.88 | 23.44 | 35.94 | 64 |
| ಆಟೋ / ಚಾಲಕ | | 22.22 | 44.44 | 33.33 | 9 |
| ಬ್ಯೂಟಿ ಪಾರ್ಲರ್ | 12.50 | 25.00 | 25.00 | 37.50 | 8 |
| ಗಣಕಯಂತ್ರ ಅಂಗಡಿ | | 13.04 | 43.48 | 43.48 | 23 |
| ವಿದ್ಯುತ್ ಸೇವೆಗಳು | | 10.00 | 30.00 | 60.00 | 10 |
| ಹೋಟೆಲ್ / ಟೀ ಅಂಗಡಿ | 10.00 | 10.00 | 60.00 | 20.00 | 10 |
| ಇತರೆ | 4.55 | 27.27 | 27.27 | 40.91 | 22 |
| ಒಟ್ಟು ಸಂಖ್ಯೆ. | 3.81 | 21.56 | 31.77 | 42.87 | |
| % | 47 | 266 | 392 | 529 | 1234 |
| ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ. 'ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 5 ಅನ್ನು ನೋಡಿ | | | | | |

ಮೂಲ: ಪ್ರಾಥಮಿಕ ದತ್ತಾಂಶ

ಅಧ್ಯಯನದ ಫಲಿತಾಂಶಗಳ ಆಘಾತಕಾರಿ ಆಯಾಮಗಳಲ್ಲಿ ಒಂದು ಸಹ ಕೋಷ್ಟಕ 10.1.16ರಲ್ಲಿ ಸ್ಪಷ್ಟವಾಗಿದೆ. ಸುಮಾರು 4 ಪ್ರತಿಶತ ಫಲಾನುಭವಿಗಳು ಯಾವುದೇ ಸ್ವಯಂ ಉದ್ಯೋಗ ಚಟುವಟಿಕೆಯನ್ನು ಪ್ರಾರಂಬಿಸಿಲ್ಲ. ಇದಲ್ಲದೆ ಮೌಲ್ಯಮಾಪನ ನಡೆಸುವ ಹೊತ್ತಿಗೆ ಇನ್ನೂ ಹಲವಾರು ಮುಚ್ಚಲ್ಪಟ್ಟಿದ್ದವು. ಈ ಎರಡನೆಯ ಗುಂಪಿನ ಬಗ್ಗೆ ಮುಂದಿನ ವಿಭಾಗದಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲಾಗಿದೆ. ಈ ವಿಷಯದಲ್ಲಿ ಧಾರವಾಡ ಜಿಲ್ಲೆಯ ಒಂದು ಕ್ಷೇತ್ರದ ಒಬ್ಬ ಬ್ಯಾಂಕರ್ ನಮ್ಮೊಂದಿಗೆ ಮಾಹಿತಿಯಾಗಿ ಹಂಚಿಕೊಂಡಿದ್ದನ್ನು ಇಲ್ಲಿ ಗಮನಿಸಬೇಕಾಗಿದೆ. ಅವನ ಪ್ರಕಾರ: "ಯೋಜನೆಯಡಿ ಸಾಲ ಪಡೆದ ಅನೇಕ ಫಲಾನುಭವಿಗಳು ಇದ್ದರು. ಸಾಲ ಮಂಜೂರಾದ ಒಂದು ತಿಂಗಳೊಳಗೆ ಆ ದಿನಾಂಕದವರೆಗೆ ಎಲ್ಲಾ ಬಾಕಿಗಳನ್ನು ಇತ್ಯರ್ಥಪಡಿಸುವ ಮೂಲಕ ಖಾತೆಯನ್ನು ಮುಚ್ಚಲು ಅವರು ಬ್ಯಾಂಕ್‌ಗೆ ಬಂದರು. ಅವರು ಅರ್ಹರಾಗಿರುವ ಸಹಾಯಧನ ಸಂಪೂರ್ಣ ಮೊತ್ತವನ್ನು ಅವರು ಪಡೆದರು ಮತ್ತು ಅದು ಯೋಜನೆಯಿಂದ ಅವರ ಪ್ರಮುಖ ಪ್ರಯೋಜನವಾಗಿತ್ತು. ಈ ಕಾರ್ಯಕ್ರಮವನ್ನು ಮತ್ತು ಇತರ ಅನೇಕ ರಾಜ್ಯ ಪ್ರಾಯೋಜಿತ ಯೋಜನೆಗಳನ್ನು ಜಾರಿಗೆ ತರುವ ಏಕೈಕ ಯೋಜನೆ ಇದಾಗಿತ್ತು. (ರಾಜೀವ್ ಗಾಂಧಿ ಚೈತನ್ಯ

ಯೋಜನೆ)ಎಂದಲ್ಲ ಸಬ್ಸಿಡಿ ಮೊತ್ತವು ಇದಕ್ಕಿಂತ ಹೆಚ್ಚು ಗಣನೀಯವಾಗಿದ್ದರೆ ಈ ಅಭ್ಯಾಸವು ಇನ್ನೂ ಹೆಚ್ಚಾಗಿರಬೇಕಿತ್ತು" (ಆಳವಾದ ಸಂದರ್ಶನ ಪ್ರತಿಕ್ರಿಯೆ).

ಈ ಬ್ಯಾಂಕರ್ ಪ್ರಕಾರ, ಆಗಾಗ್ಗೆ ಘೋಷಿಸಲಾದ ಸಾಲ ಮನ್ನಾ ಅಥವಾ ಬಡ್ಡಿ ಸ್ಥಗಿತತೆಯೊಂದಿಗೆ, ಅಂತಹ ಅಭ್ಯಾಸಗಳು ಕುಸಿಯುತ್ತಿವೆ. ಏನೇ ಆಗಲಿ, ಬೆಂಗಳೂರು – ನಗರ ಈ ಅಭ್ಯಾಸವನ್ನು ವರದಿ ಮಾಡಲಾದ ಒಂದು ಜಿಲ್ಲೆಯಾಗಿದೆ ಮತ್ತು ಇನ್ನೂ ಮೂರು ಬಾಗಲಕೋಟೆಯಲ್ಲಿ ಕಂಡುಬಂದಿವೆ. ಇತರ ಮಾದರಿ ಜಿಲ್ಲೆಗಳಲ್ಲಿಯೂ ಇಂತಹ ಘಟನೆಗಳು ನಡೆದಿವೆಯೇ ಎಂಬುದು ಖಚಿತವಾಗಿಲ್ಲ, ಏಕೆಂದರೆ ಬೇರೆಡೆಯಲ್ಲಿರುವ ಇತರರು ಈ ಸಂಗತಿ ಸಂಭವಿಸಿದ್ದರೂ ಬಹಿರಂಗಪಡಿಸದೇ ಇರುವುದು ಅಸಂಭವವಲ್ಲ. ಈ ಮೌಲ್ಯಮಾಪನದಲ್ಲಿ ಮೇಲೆ ಚರ್ಚಿಸಿದಂತೆ, ವಿವಿಧ ಉದ್ಯಮಗಳಿಗೆ ಪಡೆದ ಸಾಲದ ಮೊತ್ತವನ್ನು ವಿಭಿನ್ನವಾಗಿ ಬಳಸುವ ಅಭ್ಯಾಸದ ಒಂದು ರೂಪಾಂತರಎಂದು ಇದನ್ನು ಕರೆಯಲಾಗುತ್ತದೆ.

ಮೇಲಿನ ಕೋಷ್ಟಕ 10.1.16, ಸುಮಾರು 42.87% ಫಲಾನುಭವಿಗಳು ತಮ್ಮ ಸ್ವಯಂ ಉದ್ಯೋಗ ಉದ್ಯಮಗಳಿಂದ ಹೆಚ್ಚಿನ ಆದಾಯದ, ತಿಂಗಳಿಗೆ ರೂ. 15,000/– ಮತ್ತು ರೂ. 20,000/–ಗಳ ನಿರೀಕ್ಷೆಗಳನ್ನು ಹೊಂದಿದ್ದಾರೆ ಎಂದು ಬಹಿರಂಗಪಡಿಸುತ್ತದೆ. ನಿರೀಕ್ಷಿತ ಆದಾಯವು ರೂ.12,000/– ಮತ್ತು ರೂ.15,000/– ಇರುವ ಆಟೋ ಚಾಲನೆ (44.44 ಪ್ರತಿಶತ) ಮತ್ತು ಹೋಟೆಲ್ ಉದ್ಯಮ (60 ಪ್ರತಿಶತ) ಗಳಲ್ಲಿ ವಿನಾಯಿತಿಯನ್ನು ಸೂಚಿಸಲಾಗಿದೆ. ಈ ಉದ್ಯಮಗಳಿಂದ ಅವರ ವರದಿಯಾದ ನಿಜವಾದ ಆದಾಯವನ್ನು ಅಧ್ಯಯನ ಮಾಡಿದಾಗ, ಗಣನೀಯ ವ್ಯತ್ಯಾಸಗಳು ಇದ್ದುದರಿಂದ ಅಲ್ಲಿ ಅವರ ನಿರೀಕ್ಷೆಗಳು ವಾಸ್ತವಿಕವಾಗಿದ್ದವು ಎಂದು ಹೇಳುವುದು ಕಷ್ಟವಾಗಿದೆ.

(ಕೋಷ್ಟಕ ಒದಗಿಸಿಲ್ಲ) – ಚಿತ್ರದುರ್ಗ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸ್ವಯಂ ಉದ್ಯೋಗಿಗಳು 15,000 ರೂ.ಗಳಿಗಿಂತ ಹೆಚ್ಚಿನ ಪಾಲನ್ನು ನಿರೀಕ್ಷಿಸಿದ್ದರು. ಮಾದರಿಯಿಂದ 266 ಕ್ಕೂ ಹೆಚ್ಚು ಜನರು 12,000 ರೂ.ಗಳಿಗಿಂತ ಕಡಿಮೆಯಾದ ಸಾಧಾರಣ ಆದಾಯವನ್ನು ನಿರೀಕ್ಷಿಸಿದ್ದಾರೆ. ಯಾದಗಿರಿ (ಸುಮಾರು 30%) ಮತ್ತು ಹಾಸನ (25%) ಮುಂಚೂಣಿಯಲ್ಲಿರುವ ಪ್ರಮುಖ ಜಿಲ್ಲೆಗಳಾಗಿವೆ.

ನಕ್ಷೆ 10.1.7 ವರದಿ ಮಾಡಿದ ಆದಾಯ ಮತ್ತು ಅವರ ನಿರೀಕ್ಷಿತ ಆದಾಯದ ನಡುವಿನ ವ್ಯತ್ಯಾಸದ ಬಗ್ಗೆ ಫಲಿತಾಂಶಗಳನ್ನು ಪ್ರಸ್ತುತಪಡಿಸುತ್ತದೆ. ಕೋಷ್ಟಕದಲ್ಲಿ, ಉತ್ತರಿಸಿದ ಫಲಾನುಭವಿಗಳ ಮೂರು ಗುಂಪುಗಳಿವೆ. ಅವರ ಆದಾಯವು ಅವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಕಡಿಮೆ ಒಂದೇ ಆಗಿರುವವರು, ಆದಾಯ ನಿರೀಕ್ಷೆಗಿಂತ ಕಡಿಮೆಯಿರುವವರು ಮತ್ತು ಅವರ ನಿರೀಕ್ಷೆಗಿಂತ ಹೆಚ್ಚಿನ ಆದಾಯ ಹೊಂದಿರುವವರು. ಉತ್ತಮ ಪರಿಣಾಮ ಬೀರುವ ದೃಷ್ಟಿಕೋನದಿಂದ, ಸ್ವಯಂ–ಉದ್ಯೋಗ ಘಟಕದಲ್ಲಿ ಮೊದಲ ಮತ್ತು ಮೂರನೇ ರೀತಿಯ ಪ್ರತಿಕ್ರಿಯೆಗಳನ್ನು ವರದಿ ಮಾಡುವವರ ಸಂಖ್ಯೆ ಹೆಚ್ಚಾಗಿರಬೇಕು ಎಂದು ನಿರೀಕ್ಷಿಸುತ್ತದೆ. ಅಂದರೆ ಅವರ ಆದಾಯವು ನಿರೀಕ್ಷಿಸಿದಂತೆ ಅಥವಾ ಅದಕ್ಕಿಂತ ಹೆಚ್ಚಾಗಿ ಇರಬೇಕು ಎಂದಾಗುತ್ತದೆ.

ಕೋಷ್ಟಕ 10.1.17 ನಿರೀಕ್ಷಿತ ಮಟ್ಟದ ಆದಾಯದ ವಿರುದ್ಧ ಗಳಿಸಿದ ಆದಾಯದ ಬಗ್ಗೆ ಅಭಿಪ್ರಾಯಗಳನ್ನು ಸೂಚಿಸುತ್ತದೆ. ಕೋಷ್ಟಕವನ್ನು ಆಯಾ ಉದ್ಯಮಗಳಿಂದ ಗಳಿಸಿದ ಆದಾಯದ ಬಗ್ಗೆ ತೃಪ್ತಿಯ ಮಟ್ಟವೆಂದು ಪರಿಗಣಿಸಬಹುದು. ಹೆಚ್ಚಿನ ಫಲಾನುಭವಿಗಳು ತಮ್ಮ ಆದಾಯವು 56.67 ಪ್ರತಿಶತ ಜನರು ತಮ್ಮ ಆದಾಯವು

ನಿರೀಕ್ಷೆಗಿಂತ ಕಡಿಮೆ ಎಂದು ಹೇಳಿರುವ ಪಶು ಸಂಗೋಪನೆಯನ್ನು ಹೊರತುಪಡಿಸಿ ಬಹುತೇಕ ಎಲ್ಲಾ ಉದ್ಯಮಗಳಲ್ಲಿ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿದೆ ಎಂದು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ಸಂಖ್ಯೆ 10.1.17: ಉದ್ಯಮದ ವಿಧ ಮತ್ತು ನಿರೀಕ್ಷೆ ಪ್ರಕಾರ ಆದಾಯ

| ಉದ್ಯಮದ ವಿಧ | ಉದ್ಯಮ ಇಲ್ಲ | ನಿರೀಕ್ಷೆಗಿಂತ ಕಡಿಮೆ | ನಿರೀಕ್ಷಿಸಿದಂತೆ | ನಿರೀಕ್ಷೆಗಿಂತ ಹೆಚ್ಚು | ಒಟ್ಟು |
|---|---|---|---|---|---|
| ಹೈನುಗಾರಿಕೆ | 2.51 | 34.32 | 6.96 | 56.21 | 877 |
| ಕೃಷಿ | 4.76 | 28.57 | | 66.67 | 21 |
| ಪಶುಸಂಗೋಪನೆ | | 56.67 | 6.67 | 36.67 | 30 |
| ಕೋಳಿ ಸಾಕಾಣಿಕೆ | 10.71 | 21.43 | 10.71 | 57.14 | 28 |
| ಚಿಲ್ಲರೆ/ ದಿನಸಿ ಅಂಗಡಿಗಳು | 5.61 | 37.38 | 3.74 | 53.27 | 107 |
| ಜವಳಿ ಅಂಗಡಿ | | 28.00 | 8.00 | 64.00 | 25 |
| ಹೊಲಿಗೆ ಕೆಲಸ | 18.75 | 26.56 | 6.25 | 48.44 | 64 |
| ಆಟೋ / ಚಾಲಕ | | 11.11 | | 88.89 | 9 |
| ಬ್ಯೂಟಿ ಪಾರ್ಲರ್ | 12.50 | 25.00 | 12.50 | 50.00 | 8 |
| ಗಣಕಯಂತ್ರ ಅಂಗಡಿ | | 17.39 | 13.04 | 69.57 | 23 |
| ವಿದ್ಯುತ್ ಸೇವೆಗಳು | | 40.00 | | 60.00 | 10 |
| ಹೋಟೆಲ್ / ಟೀ ಅಂಗಡಿ | 10.00 | 40.00 | | 50.00 | 10 |
| ಇತರೆ | 4.55 | 40.91 | 9.09 | 45.45 | 22 |
| ಒಟ್ಟು % | 3.81 | 33.87 | 6.65 | 55.67 | 1234 |
| ಸಂಖ್ಯೆ | 47 | 418 | 82 | 687 | |

ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ
'ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 5 ಅನ್ನು ನೋಡಿ

ಮೂಲ: ಪ್ರಾಥಮಿಕ ದತ್ತಾಂಶ




ರೇಖಾಚಿತ್ರ 10.1.7 : ಸ್ವಯಂ ಉದ್ಯೋಗದ ಮೂಲಕ ನಿರೀಕ್ಷಿತ ಮತ್ತು ವಾಸ್ತವಿಕ ಆದಾಯ ನಡುವಿನ ವ್ಯತ್ಯಾಸ

ಆದಾಯವು ನಿರೀಕ್ಷೆಗಿಂತ ಹೆಚ್ಚಾಗಿದೆ ಎಂದು ವ್ಯಕ್ತಪಡಿಸಿದ ಫಲಾನುಭವಿಗಳಲ್ಲಿ – ಆಟೋ ಚಾಲನೆ (88.8 ಪ್ರತಿಶತ) ಅತಿ ಹೆಚ್ಚಿನ ಪ್ರತಿಕ್ರಿಯೆಗಳನ್ನು ಸೂಚಿಸುತ್ತದೆ. ನಂತರ ಗಣಕಯಂತ್ರ ಅಂಗಡಿ (69.57 ಪ್ರತಿಶತ) ಮತ್ತು ಕೃಷಿ (66.67 ಪ್ರತಿಶತ). 33.87 ಪ್ರತಿಶತ ಜನರು ತಮ್ಮ ಆದಾಯವು ನಿರೀಕ್ಷೆಗಿಂತ ಕಡಿಮೆ ಎಂದು ವ್ಯಕ್ತಪಡಿಸಿದ್ದಾರೆ. ಉದ್ಯಮವನ್ನು ಪ್ರಾರಂಭಿಸದಿರುವ ಸಂಗತಿ ಹೊಲಿಗೆ ಕೆಲಸ, ಬ್ಯೂಟಿ ಪಾರ್ಲರ್‌ಗಳು, ಕೋಳಿ ಸಾಕಾಣಿಕೆ ಮತ್ತು ಕಾಫಿ/ಟೀ ಅಂಗಡಿಗಳಂತಹ ಉದ್ಯಮಗಳಲ್ಲಿ ಅತ್ಯಧಿಕವಾಗಿವೆ ಎಂಬುದನ್ನು ಗಮನಿಸಲಾಗಿದೆ. 'ನಿರೀಕ್ಷೆಗಿಂತ ಕಡಿಮೆ' ಆದಾಯದ ಘಟನೆಗಳು ಪಶುಸಂಗೋಪನೆಯಲ್ಲಿ ಹೆಚ್ಚಿನ ಪ್ರತಿಶತ ಪಾಲನ್ನು ಹೊಂದಿದೆ. ನಂತರ ವಿದ್ಯುತ್ ಸೇವೆಗಳು, ಹೋಟೆಲ್

/ ಚಹಾ ಅಂಗಡಿಗಳು ಮತ್ತು ಇತರೆ ಉದ್ಯಮಗಳು ಬರುತ್ತವೆ.'ಆಟೋ ಚಾಲಕ ಫಲಾನುಭವಿಗಳಲ್ಲಿ ತುಲನಾತ್ಮಕವಾಗಿ ಹೆಚ್ಚಿನ ಯಶಸ್ಸು (88 ಪ್ರತಿಶತ) ನಂತರ ಕೃಷಿ (66.7%) ಗಣಕಯಂತ್ರ ಅಂಗಡಿ (69.57%), ಜವಳಿ ಅಂಗಡಿಗಳು (64%), ಮತ್ತು ವಿದ್ಯುತ್ ಸೇವೆಗಳು (60%) ಎಂದು ವರದಿಯಾಗಿದೆ. ಕೃಷಿ ಸಂಬಂಧಿತ ಉದ್ಯಮಗಳು ಉತ್ತಮ ಆದಾಯವನ್ನು ತೋರಿಸುವ ಫಲಾನುಭವಿ ನ್ಯಾಯಯುತ ಪಾಲನ್ನು ತೋರಿಸಿದ್ದರೂ, ಕೃಷಿಯೇತರ ಉದ್ಯಮಗಳು ಈ ವಿಷಯದಲ್ಲಿ ಉತ್ತಮ ಪಾಲನ್ನು ಹೊಂದಿವೆ ಎಂಬುದನ್ನು ಗಮನಿಸಲಾಗಿದೆ.

ರೇಖಾ ಚಿತ್ರ 10.1.8: ಉದ್ಯಮಗಳಾದ್ಯಂತ ನಿರೀಕ್ಷಿತ ಮತ್ತು ವ್ಯಕ್ತಪಡಿಸಿರುವ ಆದಾಯ




ನಿರೀಕ್ಷೆಗಳಿಗೆ ಅನುಗುಣವಾಗಿ ಆದಾಯದ ದತ್ತಾಂಶ ವಿತರಣೆಯನ್ನು ನೋಡಿದಾಗ (ನಕ್ಷೆ 10.1.8, ಮತ್ತು ಕೋಷ್ಟಕ 10.1.18), ಧಾರವಾಡ (48.19%), ಚಿತ್ರದುರ್ಗ (45.56%), ಮತ್ತು ಉಡುಪಿ (38.46%) ಜಿಲ್ಲೆಗಳಲ್ಲಿ ವಾಸ್ತವಿಕವಾಗಿ ಉದ್ಯಮಗಳಿಂದ ಆದಾಯದ ನಿರೀಕ್ಷೆಗಳು ಉಳಿದ ಜಿಲ್ಲೆಗಳಿಗಿಂತ ಕಡಿಮೆಯಿದೆ ಎಂದು ಕಾಣಬಹುದು. ಆದರೆ ಆದಾಯ ನಿರೀಕ್ಷೆಮೀರಿದೆ ಎಂದು ವರದಿ ನೀಡಿದವರ ಪಾಲು ಯಾದಗಿರಿ ಜಿಲ್ಲೆಯಲ್ಲಿ (72.97%) ಅತ್ಯಧಿಕವಾಗಿದ್ದು, ನಂತರ ಬಾಗಲಕೋಟೆ ಜಿಲ್ಲೆಯಲ್ಲಿ 62.03 ರಷ್ಟು ಇದೆ. ಬೆಂಗಳೂರು – ನಗರದಲ್ಲಿ ಫಲಾನುಭವಿಗಳ ಆದಾಯವು ಅವರ ನಿರೀಕ್ಷೆಗಳನ್ನು ಮೀರಿದೆ ಎಂಬುದು ಕನಿಷ್ಠವಾಗಿದೆ.

ರೇಖಾಚಿತ್ರ 10.1.9ಎ: ಬ್ಯಾಂಕ್‌ನಿಂದ ಎರವಲು ಪಡೆದವರಲ್ಲಿ ನಿರೀಕ್ಷಿತ ಮತ್ತು ವಾಸ್ತವಿಕ ಆದಾಯ



**ರೇಖಾಚಿತ್ರ : 10.1.9. ಬಿ. ಆಡಳಿತ ವಿಭಾಗಗಳಾದ್ಯಂತ ನಿರೀಕ್ಷಿತ ಮತ್ತು ವಾಸ್ತವಿಕ ಆದಾಯದ ನಡುವಿನ ವ್ಯತ್ಯಾಸ**




ರಾಜ್ಯದ ಆಡಳಿತಾತ್ಮಕ ವಿಭಾಗಗಳಾದ್ಯಂತ ಮಾದರಿ ಫಲಾನುಭವಿಗಳು ನಿರೀಕ್ಷಿಸಿದಂತೆ ಆದಾಯದ ಈಡೇರಿಕೆಯನ್ನು ಪರಿಶೀಲಿಸಿದರೆ, ಬೆಂಗಳೂರು ವಿಭಾಗವನ್ನು ಹೊರತುಪಡಿಸಿ ಉಳಿದ ಎಲ್ಲಾ ಭಾಗಗಳಲ್ಲಿ ಸುಮಾರು 50 ಪ್ರತಿಶತದಷ್ಟು ಜನರು ತಮ್ಮ ನಿರೀಕ್ಷೆಗಳನ್ನು ಮೀರಿಸಿದ್ದಾರೆ ಎಂದು ತಿಳಿದು ಬರುತ್ತದೆ. ಕಲಬುರಗಿ ವಿಭಾಗದಲ್ಲಿ 62 ಪ್ರತಿಶತಕ್ಕೂ ಹೆಚ್ಚು ಜನರು ತಮ್ಮ ಸ್ವಯಂ ಉದ್ಯೋಗದ ಮೂಲಕ ಆದಾಯವು ತಮ್ಮ ಆರಂಭಿಕ ನಿರೀಕ್ಷೆಗಳನ್ನು ಮೀರಿದೆ ಎಂದು ವರದಿ ಮಾಡಿದ್ದಾರೆ. ಇದು ಸಂತಸದಾಯಕ ಫಲಿತಾಂಶ. ಬೆಳಗಾವಿ ಮತ್ತು ಮೈಸೂರು ವಿಭಾಗವು 57 ಪ್ರತಿಶತಕ್ಕಿಂತ ಹೆಚ್ಚು ಪ್ರಭಾವಶಾಲಿ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿವೆ. ಬೆಂಗಳೂರಿನಲ್ಲಿ 41.30 ಪ್ರತಿಶತ ಜನರು ತಮ್ಮ ನಿರೀಕ್ಷೆಯನ್ನು ಮೀರಿದ ನಿಜವಾದ ಆದಾಯವನ್ನು ವರದಿ ಮಾಡಿದ್ದಾರೆ. ಇದು ಬ್ಯಾಂಕ್ ಸಾಲವನ್ನು ಯಶಸ್ವಿಯಾಗಿ ಪಡೆದ ಫಲಾನುಭವಿಗಳ ಕಡೆಯಿಂದ ಎಂದು ಗುರುತಿಸಬಹುದಾಗಿದೆ.

**ರೇಖಾಚಿತ್ರ 10.1.10: ಜಿಲ್ಲೆಯಲ್ಲಿ ನಿರೀಕ್ಷಿಸಿದಂತೆ ಸ್ವಯಂ ಉದ್ಯೋಗ ಆದಾಯ**



| ಕೋಷ್ಟಕ ಸಂಖ್ಯೆ 10.1.18: ಜಿಲ್ಲೆಗಳು ಮತ್ತು ನಿರೀಕ್ಷೆಗಳ ಪ್ರಕಾರ ಆದಾಯ | | | | | |
|---|---|---|---|---|---|
| ಜಿಲ್ಲೆ | ಉದ್ಯಮಯಿಲ್ಲ | ನಿರೀಕ್ಷೆಗಿಂತ ಕಡಿಮೆ | ನಿರೀಕ್ಷಿಸಿದಂತೆ | ನಿರೀಕ್ಷೆಗಿಂತ ಹೆಚ್ಚು | ಒಟ್ಟು ಸಂ. |
| ಬಾಗಲಕೋಟೆ | 1.02 | 33.22 | 3.73 | 62.03 | 295 |
| ಬೆಂಗಳೂರು–ನಗರ | 67.21 | 9.84 | 1.64 | 21.31 | 61 |
| ಚಿತ್ರದುರ್ಗ | | 45.56 | 5.92 | 48.52 | 169 |
| ಧಾರವಾಡ | | 48.19 | 8.43 | 43.37 | 83 |
| ಹಾಸನ | | 29.52 | 13.02 | 57.46 | 315 |
| ಕಲಬುರಗಿ | 1.15 | 34.48 | 3.83 | 60.54 | 261 |
| ಉಡುಪಿ | | 38.46 | 7.69 | 53.85 | 13 |
| ಯಾದಗಿರಿ | | 24.32 | 2.70 | 72.97 | 37 |
| ಒಟ್ಟು % | 3.81 | 33.87 | 6.65 | 55.67 | 1234 |
| ಸಂಖ್ಯೆ | 47 | 418 | 82 | 687 | |
| ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ | | | | | |

ಮೂಲ: ಪ್ರಾಥಮಿಕ ದತ್ತಾಂಶ

### 10.1.12 ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ ಯಶಸ್ಸಿನ ಅಥವಾ ವೈಫಲ್ಯದ ಪ್ರಮುಖ ಸೂಚಕ:

ಇಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕವು ಸಮರ್ಪಕ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿದೆಯೆ ಅಥವಾ ವಿಫಲವಾಗಿದೆಯೆ ಎಂಬುದರ ಬಗೆಗೆ ಪ್ರಮುಖ ಸೂಚಕವನ್ನು ಚರ್ಚಿಸಲಾಗಿದೆ. ಇದನ್ನು ವಿಶ್ಲೇಷಣೆಯ ಕೊನೆಯಲ್ಲಿ ಪರಿಗಣಿಸಲಾಗಿದೆ. ಏಕೆಂದರೆ ಕಾರ್ಯಕ್ರಮದ ಅನುಷ್ಠಾನದ ಇತರ ಪ್ರಕ್ರಿಯಾತ್ಮಕ ಅಂಶಗಳ ಬಗ್ಗೆ ವಿಚಾರ ಮಾಡುವುದರ ಮೂಲಕ ಅಂತಿಮ ಫಲಿತಾಂಶಗಳ ಮೌಲ್ಯಮಾಪನಕ್ಕೆ ಸರಿಯಾದ ದೃಷ್ಟಿಕೋನವನ್ನು ಪ್ರಸ್ತುತಪಡಿಸುತ್ತದೆ. ಉದಾಹರಣೆಗೆ ಕಾರ್ಯಕ್ರಮದ ಆರಂಭದಲ್ಲಿ ಫಲಾನುಭವಿಗಳನ್ನು ಗುರುತಿಸಿ, ಅವರು ಕಾರ್ಯಕ್ರಮದ ಪ್ರಮುಖ ಅಂಶವಾದ ಸ್ವಯಂ ಉದ್ಯೋಗ ಉದ್ಯಮವನ್ನು ಪ್ರಾರಂಭಿಸಲು ಹಣವನ್ನು ಸಾಲ ಪಡೆಯಲು ಅರ್ಹರಾಗುತ್ತಾರೆಯೇ ಎಂದು ಸಮರ್ಪಕವಾಗಿ ಮೌಲ್ಯಮಾಪನ ಮಾಡದೆ ಅವರಿಗೆ ತರಬೇತಿ ನೀಡಿರುವುದು ತಿಳಿದ ವಿಷಯವಾಗಿದೆ. ಗ್ರಾಮೀಣ ಯುವಕರಿಗೆ ತರಬೇತಿ ನೀಡುವುದೆ ಕಾರ್ಯಕ್ರಮದ ಮುಖ್ಯ ಗುರಿಯಾಗಿರಲಿಲ್ಲ, ಆದರೆ ಗ್ರಾಮೀಣ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸುವ ಒಂದು ಅನುಕೂಲಕರ ಅಂಶ ಮಾತ್ರವಾಗಿತ್ತು.

| ಕೋಷ್ಟಕ 10.1.19: ಮಾದರಿ ಜಿಲ್ಲೆಗಳಲ್ಲಿ ಸ್ವಯಂ ಉದ್ಯೋಗ ಉದ್ಯಮದ ಪ್ರಸ್ತುತ ಸ್ಥಿತಿಗತಿ | | | | |
|---|---|---|---|---|
| ಜಿಲ್ಲೆ | ಸ್ವಯಂ ಉದ್ಯೋಗ ಉದ್ಯಮದ ಪ್ರಸ್ತುತ ಸ್ಥಿತಿಗತಿ | | | ಒಟ್ಟು ಸಂಖ್ಯೆ |
| | ಕಾರ್ಯಾಚರಣೆಯಲ್ಲಿದೆ | ಮುಚ್ಚಲಾಗಿದೆ | ಆರಂಭಿಸಲಾಗಿಲ್ಲ | |
| ಬಾಗಲಕೋಟೆ | 40.68 | 58.31 | 1.02 | 295 |
| ಬೆಂಗಳೂರು – ನಗರ | 8.20 | 24.59 | 67.21 | 61 |
| ಚಿತ್ರದುರ್ಗ | 33.14 | 66.86 | | 169 |
| ಧಾರವಾಡ | 43.37 | 56.63 | | 83 |
| ಹಾಸನ | 41.27 | 58.73 | | 315 |
| ಕಲಬುರಗಿ | 37.93 | 60.92 | 1.15 | 261 |
| ಉಡುಪಿ | 46.15 | 53.85 | | 13 |
| ಯಾದಗಿರಿ | 35.14 | 64.86 | | 37 |
| ಒಟ್ಟು % | 37.68 | 58.51 | 3.81 | 1234 |
| ಸಂಖ್ಯೆ | 465 | 722 | 47 | |
| ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | |

ಮೂಲ: ಪ್ರಾಥಮಿಕ ದತ್ತಾಂಶ

Graph 10.1. 11: ಜಿಲ್ಲೆಯಾದ್ಯಂತ ಉದ್ಯಮಗಳ ಪ್ರಸ್ತುತ ಸ್ಥಿತಿಗತಿ




ಗ್ರಾಮೀಣ ನಿರುದ್ಯೋಗಿ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ಸಕ್ರಿಯಗೊಳಿಸುವ ಪ್ರಮುಖ ಸೂಚಕವೆಂದರೆ ಅವರು ವಿವಿಧ ಉದ್ಯಮಗಳನ್ನು ಪ್ರಾರಂಭಿಸುತ್ತಾರೆಅದನ್ನು ಹೆಚ್ಚು ಕಡಿಮೆ ಸುಸ್ಥಿರವಾಗಿ ಇರಿಸುತ್ತಾರೆ. ಆದ್ದರಿಂದ ಒಂದು ಉದ್ಯಮವು ಪ್ರಾರಂಭವಾದ ಕೆಲವು ವರ್ಷಗಳ ನಂತರ ಕಾರ್ಯನಿರ್ವಹಿಸುತ್ತದೆಯೋ ಇಲ್ಲವೋಆದರೆ ಇತರ ಅಂಶಗಳೊಂದಿಗೆ ಇದು ಕಾರ್ಯಕ್ರಮದ ಯಶಸ್ಸನ್ನು ಸೂಚಿಸುತ್ತದೆ.

ಕೇವಲ 37.68 ಪ್ರತಿಶತದಷ್ಟು ನಿಜವಾದ ಫಲಾನುಭವಿಗಳ ಉದ್ಯಮಗಳು ಮೌಲ್ಯಮಾಪನ ಅಧ್ಯಯನದ ಸಮಯದಲ್ಲಿ ನಡೆಯುತ್ತಿದವು ಅಥವಾ ಕಾರ್ಯಾಚರಣೆಯಲ್ಲಿದ್ದವು. ಫಲಾನುಭವಿಗಳ ಸ್ವಯಂ ಉದ್ಯೋಗ ಉದ್ಯಮಗಳ ಪ್ರಸ್ತುತ ಸ್ಥಿತಿಗತಿಯ ಒಟ್ಟಾರೆ ಚಿತ್ರಣವನ್ನು ಕೋಷ್ಟಕ 10.1.19ರಲ್ಲಿ ನೀಡಲಾಗಿದೆ. ತುಲನಾತ್ಮಕವಾಗಿ ಫಲಾನುಭವಿಗಳು ತೆಗೆದುಕೊಳ್ಳುವ ಉದ್ಯಮಗಳಲ್ಲಿ ಹೆಚ್ಚಿನ ಶೇಕಡಾದರ 'ಮುಚ್ಚಲಾಗಿದೆ' (58.5 ಪ್ರತಿಶತ). ಆದರೂ 37.68 ಪ್ರತಿಶತ ಫಲಾನುಭವಿಗಳು ತಮ್ಮ ಉದ್ಯಮಗಳು ಇನ್ನೂ ಕಾರ್ಯ ನಿರ್ವಹಿಸುತ್ತಿವೆ ಎಂದು ವ್ಯಕ್ತಪಡಿಸಿದ್ದಾರೆ. ಚಿತ್ರದುರ್ಗದಲ್ಲಿ ಅತಿ ಹೆಚ್ಚು ಮುಚ್ಚಿದ ಉದ್ಯಮಗಳು ಕಂಡುಬರುತ್ತವೆ (66.86 ಪ್ರತಿಶತ) ಮತ್ತು ಅತಿ ಹೆಚ್ಚು ಕಾರ್ಯಾಚರಣೆ ಉದ್ಯಮಗಳು ಉಡುಪಿಯಲ್ಲಿ ಕಂಡುಬರುತ್ತವೆ (46.15 ಪ್ರತಿಶತ). ಇನ್ನೂ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ಸಣ್ಣ ಶೇಕಡಾದರ ಜನರು ಸಾಲಗಳನ್ನು ಪಡೆಯುವಲ್ಲಿ ಯಶಸ್ವಿಯಾದ ಅರ್ಹ ಫಲಾನುಭವಿಗಳಲ್ಲಿ ಸೇರಿದ್ದಾರೆ. ಪಂಚಾಯಿತಿ ಗ್ರಾಮ ಸಭೆಯು ಶಿಫಾರಸ್ಸು ಮಾಡಿದಂತೆ 'ಫಲಾನುಭವಿಗಳು' ಎಂಬ ವಿಶಾಲ ಪರಿಕಲ್ಪನೆಯನ್ನು ಸೇರಿಸಿದರೆ ವಿವಿಧ ಸಮಿತಿಗಳಿಂದ ಅನುಮೋದಿಸಲ್ಪಟ್ಟು ನಂತರ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ಪಡೆದರೆ 'ಯಶಸ್ವಿ' ಎಂಬುವರ ಅನುಪಾತ ಇನ್ನೂ ಕಡಿಮೆಯಾಗಿರುತ್ತದೆ – ಕೇವಲ 22.49 ಪ್ರತಿಶತ, ಅಥವಾ ಸಂಖ್ಯೆಗಳಲ್ಲಿ (2068ರ ಮಾದರಿಯಲ್ಲಿ 465). ಸಾಲವನ್ನು ಯಶಸ್ವಿಯಾಗಿ ಪಡೆದ ಮತ್ತು ಅವರು ಪ್ರಾರಂಭಿಸಿದ ತಮ್ಮ ಉದ್ಯಮಗಳನ್ನು ನಿಲ್ಲಿಸಿದ ಫಲಾನುಭವಿಗಳು ಶೇಕಡಾ 58.51ರಷ್ಟಿದ್ದಾರೆ. ಹೀಗಾಗಿ, 62.32 ಪ್ರತಿಶತ ಫಲಾನುಭವಿಗಳಲ್ಲಿ, ಕಾರ್ಯಕ್ರಮವು ಪ್ರಾರಂಭವಾಗಿದೆ ಅಥವಾ ಸುಸ್ಥಿರ ಪರಿಣಾಮ ಬೀರಲು ವಿಫಲವಾಗಿದೆ.

ಕೋಷ್ಟಕ ಸಂಖ್ಯೆ 10.1.20: ಉದ್ಯಮದ ವಿಧ ಮತ್ತು ಸ್ವಯಂ ಉದ್ಯೋಗ ಉದ್ಯಮದ ಪ್ರಸ್ತುತ ಸ್ಥಿತಿಗತಿ

| ಉದ್ಯಮದ ವಿಧ | ಸ್ವಯಂ ಉದ್ಯೋಗದ ಪ್ರಸ್ತುತ ಸ್ಥಿತಿಗತಿ (ಶೇ.ಅಂಕಿಅಂಶಗಳಲ್ಲಿ) | | | ಒಟ್ಟು (ಸಂ.) |
|---|---|---|---|---|
| | ಕಾರ್ಯಾಚರಣೆಯಲ್ಲಿದೆ | ಮುಚ್ಚಲಾಗಿದೆ | ಆರಂಭಿಸಲಾಗಿಲ್ಲ | |
| ಹೈನುಗಾರಿಕೆ | 37.74 | 59.75 | 2.51 | 877 |
| ಕೃಷಿ | 61.90 | 33.33 | 4.76 | 21 |
| ಪಶು ಸಂಗೋಪನೆ | 36.67 | 63.33 | | 30 |
| ಕೋಳಿ ಸಾಕಾಣಿಕೆ | 25.00 | 64.29 | 10.71 | 28 |
| ಚಿಲ್ಲರೆ/ದಿನಸಿ ಅಂಗಡಿಗಳು | 32.71 | 61.68 | 5.61 | 107 |
| ಜವಳಿ ಅಂಗಡಿ | 40.00 | 60.00 | | 25 |
| ಹೊಲಿಗೆ ಕೆಲಸ | 31.25 | 50.00 | 18.75 | 64 |
| ಆಟೋ / ಚಾಲಕ | 77.78 | 22.22 | | 9 |
| ಬ್ಯೂಟಿ ಪಾರ್ಲರ್ | | 87.50 | 12.50 | 8 |
| ಗಣಕಯಂತ್ರ ಅಂಗಡಿ | 52.17 | 47.83 | | 23 |
| ವಿದ್ಯುತ್ ಸೇವೆಗಳು | 70.00 | 30.00 | | 10 |
| ಹೋಟೆಲ್ / ಟೀ ಅಂಗಡಿ | 10.00 | 80.00 | 10.00 | 10 |
| ಇತರೆ | 50.00 | 45.45 | 4.55 | 22 |
| ಒಟ್ಟು | 37.68 | 58.51 | 3.81 | 1234 |
| | 465 | 722 | 47 | |

ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ
'ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 5 ಅನ್ನು ನೋಡಿ.

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ 10.1.20 ಮತ್ತು ನಕ್ಷೆ 10.1.12, ಆಟೋ ರಿಕ್ಷಾಗಳು ಮತ್ತು ವಿದ್ಯುತ್ ಸೇವೆಗಳು ಉಳಿದ ಉದ್ಯಮಗಳಿಗಿಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ (ಕ್ರಮವಾಗಿ 77 ಮತ್ತು 70 ಪ್ರತಿಶತ). ಮುಚ್ಚಿದ ಉದ್ಯಮಗಳಲ್ಲಿ ಬ್ಯೂಟಿ ಪಾರ್ಲರ್‌ಗಳು (87.5%), ಹೋಟೆಲ್/ಚಹಾ ಅಂಗಡಿಗಳು (80%), ಮತ್ತು ಕೋಳಿ ಸಾಕಾಣಿಕೆ ಮತ್ತು ಪಶು ಸಂಗೋಪನೆಗಳು (ತಲಾ 63 ಪ್ರತಿಶತಕ್ಕಿಂತ ಹೆಚ್ಚು) ಹೆಚ್ಚಿನ ಸಂಖ್ಯೆಯಲ್ಲಿವೆ. ಚಿಲ್ಲರೆ ಮತ್ತು ಜವಳಿ ಅಂಗಡಿಗಳು ಸಹ ಯಶಸ್ವಿಯಾಗಲಿಲ್ಲ.

ರೇಖಾ ಚಿತ್ರ 10.1.12: ಉದ್ಯಮಗಳ ವಿಧ ಮತ್ತು ಪ್ರಸ್ತುತ ಸ್ಥಿತಿಗತಿ




ಉದ್ಯಮವು ಕಾರ್ಯಾಚರಣೆಯಲ್ಲಿ ಉಳಿದಿದೆಯೇ ಅಥವಾ ಕೆಲವು ಸಮಯದಿಂದ ಮುಚ್ಚಲ್ಪಟ್ಟಿದೆಯೇ ಅಥವಾ ಎಂಬುದರ ಬಗ್ಗೆ ಉದ್ಯಮದ ವಿಧಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆಯೇ? ಕೋಷ್ಟಕ 10.1.20 ಮತ್ತು ನಕ್ಷೆ 10.1.12 ಗಳ ಪ್ರಕಾರ ಕಾರ್ಯಾಚರಣೆಯಲ್ಲಿರುವ ಉದ್ಯಮಗಳ ಶೇಕಡಾದರ (ಉದ್ಯಮದ ವಿಧವನ್ನು ಪರಿಗಣಿಸದೆ) ಗಮನಿಸಿದರೆ ಆಟೋ ರಿಕ್ಷಾಗಳು ಮತ್ತು ವಿದ್ಯುತ್ ಸೇವೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ (ಕ್ರಮವಾಗಿ 77 ಮತ್ತು 70 ಪ್ರತಿಶತ).

ಕೋಷ್ಟಕ 10.1.21: ಸ್ವಯಂ ಉದ್ಯೋಗ ಉದ್ಯಮದ ಪ್ರಯೋಜನ ಮತ್ತು ಪ್ರಸ್ತುತ ಸ್ಥಿತಿಗತಿಯ ವರ್ಷ

| ಪ್ರಯೋಜನದ ವರ್ಷ | ಸ್ವಯಂ ಉದ್ಯೋಗ ಉದ್ಯಮದ ಪ್ರಸ್ತುತ ಸ್ಥಿತಿಗತಿ (% ಅಂಕಿಅಂಶಗಳು) | | | ಒಟ್ಟು (ಸಂ.) |
|---|---|---|---|---|
| | ಕಾರ್ಯಾಚರಣೆಯಲ್ಲಿದೆ | ಮುಚ್ಚಲಾಗಿದೆ | ಆರಂಭಿಸಲಾಗಿಲ್ಲ | |
| 2013–14 | 32.89 | 67.11 | | 76 |
| 2014–15 | 31.06 | 43.48 | 25.47 | 161 |
| 2015–16 | 33.94 | 66.06 | | 274 |
| 2016–17 | 41.08 | 58.09 | 0.83 | 723 |
| ಒಟ್ಟು % | 37.68 | 58.51 | 3.81 | 1234 |
| ಸಂಖ್ಯೆ | 465 | 722 | 47 | |

ಸೂಚನೆ: ಬೇರೆ ರೀತಿಯಲ್ಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ

ಮೂಲ: ಪ್ರಾಥಮಿಕ ದತ್ತಾಂಶ

**ರೇಖಾಚಿತ್ರ 10.1.13: ಲಾಭದ ವರ್ಷ ಮತ್ತು ಉದ್ಯಮಗಳ ಪ್ರಸ್ತುತ ಸ್ಥಿತಿಗತಿ**




**10.1.13 ಸ್ವಯಂ ಉದ್ಯೋಗ ಘಟಕಗಳನ್ನು ಮುಚ್ಚಲು ಕಾರಣಗಳು:**

ಸಣ್ಣ ವ್ಯವಹಾರಗಳಲ್ಲಿಯ ಸಂಚಿತ ಸಮಸ್ಯೆಗಳಿಂದಾಗಿ ಉದ್ಯಮವು ಹಳೆಯದಾದಷ್ಟು ಅದರ ಮುಚ್ಚುವಿಕೆ ಸಂಭವ ಹೆಚ್ಚಾಗಿರುತ್ತದೆ ಎಂದು ಒಬ್ಬರು ನಿರೀಕ್ಷಿಸುತ್ತಾರೆ. ಪರ್ಯಾಯವಾಗಿ ಹಳೆಯವುಗಳು ಬದುಕುಳಿಯುತ್ತವೆ, ಆದರೆ ಹೊಸ ಉದ್ಯಮಗಳು ಆಘಾತಗಳು ಮತ್ತು ಮಾರುಕಟ್ಟೆಯ ಏರಿಳಿತಗಳಿಗೆ ಹೆಚ್ಚು ಒಳಗಾಗುತ್ತವೆ. ಕೋಷ್ಟಕ 10.1.21 ಮತ್ತು ನಕ್ಷೆ 10.1.13 ರಲ್ಲಿ ಪ್ರಸ್ತುತಪಡಿಸಿರುವಂತೆ, ದತ್ತಾಂಶದ ವಿಶ್ಲೇಷಣೆಯು ಎರಡೂ ಊಹೆಗಳನ್ನು ಧಿಕ್ಕರಿಸುತ್ತದೆ. ಮುಚ್ಚಲಾಗಿರುವ ಉದ್ಯಮಗಳೊಂದಿಗೆ ಇನ್ನೂ ಪ್ರಾರಂಭವಾಗದ ಉದ್ಯಮಗಳನ್ನು ಸಹ ಸೇರಿಸುವ ಅಗತ್ಯವಿದೆ ಮತ್ತು ಅವು ಹಳೆಯ ಅಥವಾ ಹೊಸ ಫಲಾನುಭವಿಗಳ ಗುಂಪಿಗೆ ಸೇರಿವೆಯೇ ಎಂದು ಗುರುತಿಸಬೇಕಾಗಿದೆ. ಮುಚ್ಚುವಿಕೆಯು ಬಹುತೇಕವಾಗಿ ಸಮರೂಪದಲ್ಲಿದೆ. 2016–17ರ ಇತ್ತೀಚಿನ ವರ್ಷಗಳಲ್ಲಿ 'ಕಾರ್ಯಾಚರಣೆ' ಉದ್ಯಮಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಹೊಸ ಉದ್ಯಮಗಳು ಉಳಿದವುಗಳಿಗಿಂತ ಉತ್ತಮವಾಗಿ ಬದುಕುಳಿಯುತ್ತವೆ ಅಥವಾ ಆಘಾತಗಳನ್ನು ಸಹಿಸಿಕೊಳುತ್ತವೆ ಎಂಬುದನ್ನು ಸೂಚಿಸುತ್ತವೆ. ಆದರೆ ವ್ಯತ್ಯಾಸವು ಗಮನಾರ್ಹವಾಗಿಲ್ಲ.

**10.1.14 ತಮ್ಮ ವೈಫಲ್ಯದ ಬಗ್ಗೆ ಫಲಾನುಭವಿಗಳ ವಿವರಣೆ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗದ ಗುರಿ ಅಂದರೆ ವಿದ್ಯಾವಂತ ಮತ್ತು ನಿರುದ್ಯೋಗಿ ಗ್ರಾಮೀಣ ಯುವಕರನ್ನು ನಗರ ಪ್ರದೇಶಗಳಿಂದ ದೂರವಿರಿಸುವ ಆದರೆ ಲಾಭದಾಯಕ ಉದ್ಯೋಗದಲ್ಲಿ ತೊಡಗಿಸುವ ಉದ್ದೇಶ ಶ್ಲಾಘನಾರ್ಹವಾಗಿದ್ದರೂ ಕೆಲವೊಮ್ಮೆ ಅಂತಹ ಪ್ರಯತ್ನಗಳ ಯಶಸ್ಸು ಸ್ವತಃ ವಲಸೆಗೆ ಕಾರಣವಾಗುತ್ತದೆ. ಒಮ್ಮೆ ಸ್ವಯಂ ಉದ್ಯೋಗಿಗಳು ಸ್ವಲ್ಪ ಲಾಭಗಳಿಸಿದರೆ ತಮ್ಮ ಉದ್ಯಮವನ್ನು ಅವರು ವಾಸಿಸುವ ಹಳ್ಳಿಗಳ ಸಂಕುಚಿತ ಪರಿಧಿಯನ್ನು ಮೀರಿ ವಿಸ್ತರಿಸುವ ಬಯಕೆ ಇರುತ್ತದೆ. ತತ್ಪರಿಣಾಮವಾಗಿ ಸಣ್ಣ ಅಂಗಡಿಯನ್ನು (ಕಿರಾಣಿ ಅಂಗಡಿಯಾಗಿರಬಹುದು ಅಥವಾ ಬ್ಯೂಟಿ ಪಾರ್ಲರ್ ಆಗಿರಬಹುದು) ಮುಚ್ಚಿ, ತಮ್ಮ ಹಳ್ಳಿಯ ಪರಿಧಿಯಲ್ಲಿ ಅದೇ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಹೆಚ್ಚು ಪ್ರಮುಖವಾದದ್ದನ್ನು ಪ್ರಾರಂಭಿಸಲು ಇಚ್ಚಿಸುತ್ತಾರೆ.

- ಒಬ್ಬ ಯುವತಿ ಉದ್ಯಮವನ್ನು ಯಶಸ್ವಿಯಾಗಿ ನಡೆಸುವಾಗ, ಅದು ವೈವಾಹಿಕ ಮೈತ್ರಿಯುಂಟಾಗಲು ಆಧಾರವಾಗುತ್ತದೆ; ನಂತರ ಅವಳ ದೀರ್ಘಕಾಲೀನ ವೈವಾಹಿಕ ಜೀವನಕ್ಕೆ ಆದ್ಯತೆ ನೀಡಿ ಸ್ಥಳೀಯವಾಗಿದ್ದ ಯಶಸ್ವಿ ಉದ್ಯಮವು ಮುಚ್ಚಲ್ಪಡುತ್ತದೆ.

- 21 ಅಥವಾ 25 ವರ್ಷಗಳಿಗಿಂತ ಕಡಿಮೆ ವಯಸ್ಸಿನವರು ಗ್ರಾಮೀಣ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ತುಂಬಾ ಬೇಗ ಎನಿಸುತ್ತದೆ. ಹೆಚ್ಚಿನ ಯುವಕರು ನಗರದ ಕನಸಿನೊಂದಿಗೆ ಬೆಳೆಯುತ್ತಾರೆ ಮತ್ತು ತಮ್ಮ ಪೋಷಕರು ಸಾಧಿಸಬಹುದಾದುದಕ್ಕಿಂತ ಹೆಚ್ಚಿನ ಔದ್ಯೋಗಿಕ ಮತ್ತು ಸಾಮಾಜಿಕ ಚಲನಶೀಲತೆಯ ಆಕಾಂಕ್ಷೆಗಳನ್ನು ಹೊಂದಿರುತ್ತಾರೆ. ಕೇವಲ 50,000 ರೂ.ಗಳ ಸಹಾಯಧನ ಘೋಷಿತ ಸಾಲ ಪಡೆದ ಸ್ವಯಂ ಉದ್ಯೋಗವು ಅವರ ದೀರ್ಘಕಾಲೀನ ಕನಸುಗಳನ್ನು ಸಾಧಿಸಲುಬಹಳ ಕಡಿಮೆಯಾಗುತ್ತದೆ. ಪರಿಣಾಮವಾಗಿ ಅನೇಕ ಯುವಕರು ಅಂತಹ ಉದ್ಯಮಗಳಿಂದ ಬರುವ ಆದಾಯವನ್ನು (ಸಾಲಗಳಾಗಿ ಪಡೆದ ಸಂಪೂರ್ಣ ಮೊತ್ತವನ್ನು ಹೂಡಿಕೆ ಮಾಡಲು ಉಳಿಸಿದ ಹಣವೂ ಸೇರಿದಂತೆ) ಹೆಚ್ಚಿನ ಅಧ್ಯಯನಗಳಿಗೆ ಅಥವಾ ಉತ್ತಮ ನಗರ ಅವಕಾಶಗಳನ್ನು ಅನ್ವೇಷಿಸಲು ಬಳಸಿಕೊಳ್ಳುತ್ತಾರೆ. ಇದು ತಮ್ಮ ಹೆತ್ತವರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಾಗಿರುತ್ತದೆ.

- ಸಾಲಗಳನ್ನು ಮುಂದುವರಿಸುವ ಮೂಲಕ ಮತ್ತು 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳನ್ನು ಬೆಂಬಲಿಸುವ ಮೂಲಕ ಈ ಯೋಜನೆಯು ಗ್ರಾಮೀಣ ಪ್ರದೇಶಗಳಲ್ಲಿ ವ್ಯಕ್ತಿಯ ಬೆಳವಣಿಗೆಯನ್ನು ಕುಂಟಿತಗೊಳಿಸುತ್ತದೆ.

- ಒಂದು ಯೋಜನೆಯು ಸ್ವಯಂ ಉದ್ಯೋಗಕ್ಕಾಗಿ ಉದ್ಯಮಗಳನ್ನು ಬೆಂಬಲಿಸುತ್ತದೆಯಾದರೂ ಉದ್ಯಮವು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ನಡೆಸಬಹುದಾಗಿರುತ್ತದೆ. ಪರಿಣಾಮವಾಗಿ ದೀರ್ಘಾವಧಿಯಲ್ಲಿ ಕಾರ್ಯಾಚರಣೆಗಳ ವೆಚ್ಚಗಳು ದುಬಾರಿಯಾಗುತ್ತವೆ ಮತ್ತು ಅದರಿಂದ ಇಂದಲ್ಲ ನಾಳೆ ಫಲಾನುಭವಿ ಗ್ರಾಮದಿಂದ ಹೊರಗೆ ಹೋಗಲು ಪ್ರಯತ್ನಿಸುತ್ತಾನೆ. ಅವರಿಗೆ ಸಾಲ ನೀಡಬಹುದಾದ ಉದ್ಯಮವು ಅಂತಹ ಹೊಸ ಕ್ಷೇತ್ರಗಳಲ್ಲಿ ಸ್ವತಂತ್ರ ಜೀವನೋಪಾಯವನ್ನು ಬೆಂಬಲಿಸುವಷ್ಟು ಸ್ಪರ್ಧಾತ್ಮಕವಾಗಿಲ್ಲದಿರಬಹುದು.

- ಮೊದಲ ಬಾರಿಗೆ ಉದ್ಯಮಶೀಲರಾದಂತಹ ವ್ಯಕ್ತಿಗಳ ಯಾವುದೇ ಮೌಲ್ಯಮಾಪನ ಮಾಡಲು ಒಂದು ಅಥವಾ ಎರಡು ವರ್ಷಗಳು ಬಹಳ ಕಡಿಮೆ ಎನಿಸುತ್ತದೆ. ಕೆಲವೊಮ್ಮೆ ಅವರು ಶ್ರಮ ಅಥವಾ ಬೆಂಬಲಕ್ಕಾಗಿ ಕುಟುಂಬದ ಅಗತ್ಯವನ್ನು ಪೂರೈಸಲು ವ್ಯವಹಾರವನ್ನು ಮುಚ್ಚಬೇಕಾಗಬಹುದು. ಅಂತಹ ತಾತ್ಕಾಲಿಕ ಮುಚ್ಚುವಿಕೆಯನ್ನು ಶಾಶ್ವತವಾಗಿ ಮುಚ್ಚುವಿಕೆ ಎಂದು ಪರಿಗಣಿಸಬಾರದು.

- ಹೊಸ ಉದ್ಯಮವನ್ನು ಪ್ರಾರಂಭಿಸಲು ಮತ್ತು ಸ್ವಯಂ ಉದ್ಯೋಗವನ್ನು ಯಶಸ್ವಿಯಾಗಿ ಪ್ರಾರಂಭಿಸಲು ಸಾಲ ನೀಡಿದರೆ ಸಾಕು ಎಂದು ಸರ್ಕಾರದ ಯೋಜನೆಗಳು ಊಹಿಸುತ್ತವೆ. ಸಾಲಗಳು ಬಾಕಿ ಇರುವವರೆಗೂ ಬ್ಯಾಂಕುಗಳಿಂದ ಯಾವುದೇ ಹೊಸ ಸಾಲಗಳು ಲಭ್ಯವಿಲ್ಲದಿರುವುದರಿಂದ ಖಾಸಗಿ ಲೇವಾದೇವಿದಾರರ ಮೇಲಿನ ಅವರ ಅವಲಂಬನೆಯಿಂದಾಗಿ ಉದ್ಯಮವನ್ನು ಮುಚ್ಚಬೇಕಾಗುತ್ತದೆ ಅಥವಾ ಭಾರಿ ಬಡ್ಡಿಗಳನ್ನು ಪಾವತಿಸಬೇಕಾಗುತ್ತದೆ.

- ನಮ್ಮ ಆದಾಯವು ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚಾಗಿದೆಯೇ ಅಥವಾ ಇಲ್ಲವೇ ಎಂಬುದು ಮಾತ್ರವಲ್ಲ. ನಮ್ಮ ಹಳ್ಳಿಗಳಲ್ಲಿನ ಇತರ ಉತ್ತಮ ವಿದ್ಯಾವಂತ, ನಗರ ಉದ್ಯೋಗದಲ್ಲಿರುವ ಯುವಕರು ಸಾಧಿಸಿದ್ದಕ್ಕಿಂತ, ನಾವು ಯಶಸ್ಸನ್ನು ಪ್ರದರ್ಶಿಸಬೇಕೆಂಬ ಪೋಷಕರ ನಿರೀಕ್ಷೆಗಳು ನಮಗೆ ಒತ್ತಾಸೆಯಾಗುತ್ತವೆ.

- ಯಶಸ್ವಿ ಉದ್ಯಮಿಗಳಾಗಿರುವ ಯುವಕರಿಗೂ ಸಹ ವೈವಾಹಿಕ ಮೈತ್ರಿಗಳು ಬರುವುದು ಕಷ್ಟ. ಉತ್ತಮ ವೈವಾಹಿಕ ಮೈತ್ರಿಗಳನ್ನು ಆಕರ್ಷಿಸಲು ಪೋಷಕರೇ ನಮ್ಮನ್ನು ಹೊರಗೆ ತಳ್ಳುತ್ತಾರೆ. ಹಳ್ಳಿಗಳಲ್ಲಿನ ಯುವತಿಯರು ಹಳ್ಳಿಯ ಹೊರಗಿನ ಯಶಸ್ವಿ ಪುರುಷರನ್ನು ಮದುವೆಯಾಗಲು ಬಯಸುತ್ತಾರೆ. ನಗರ ಪ್ರದೇಶದ ಹುಡುಗಿಯರು ಗ್ರಾಮೀಣ ಪುರುಷರನ್ನು ಶ್ರೀಮಂತರಾಗಿರಲಿ ಅಥವಾ ಬಡವರಾಗಿರಲಿ ಬಯಸುವುದಿಲ್ಲ. ಪ್ರತಿಯೊಬ್ಬರೂ ಸರ್ಕಾರದ ಉದ್ಯಮಗಳಲ್ಲಿ ಅಥವಾ ಬಹುರಾಷ್ಟ್ರೀಯ ನಿಗಮಗಳಲ್ಲಿ ಕೆಲಸ ಮಾಡಬೇಕು ಎಂಬುದು ಬೇಡಿಕೆಯಾಗಿರುತ್ತದೆ.

# ಭಾಗ 2

## 10.2.1 ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯಗಳು ಮತ್ತು ಉದ್ಯೋಗ ಘಟಕದ ಫಲಿತಾಂಶಗಳು

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ಉದ್ಯೋಗ ಘಟಕವನ್ನು 2013–14ರಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ. ರಾಜೀವ್ ಗಾಂಧಿ ಚೈತನ್ಯ ಯೋಜನೆ ಮಾರ್ಗಸೂಚಿಗಳ ಪ್ರಕಾರ ರಾಜ್ಯದ ಪ್ರತಿ ಪಂಚಾಯಿತಿಗಳಿಂದ ಈ ಕಾರ್ಯಕ್ರಮಕ್ಕೆ 18 ರಿಂದ 35 ವರ್ಷ ವಯಸ್ಸಿನ ಮತ್ತು 8 ನೇ ತರಗತಿಯವರೆಗಿನ ಕನಿಷ್ಠ ಶಿಕ್ಷಣವನ್ನು ಪಡೆದಿರುವ 40 ಯುವಕರನ್ನು ವಾರ್ಷಿಕವಾಗಿ ಆಯ್ಕೆ ಮಾಡಲಾಗುತ್ತದೆ. ಮೀಸಲಾತಿ ನೀತಿಯನ್ನುಅನುಸರಿಸುವ ಈ ಯೋಜನೆಯಡಿ ಪರಿಶಿಷ್ಟ ಜಾತಿಯ 20% ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಲ್ಲಿ 9% ಅನ್ನು ಆಯ್ಕೆ ಮಾಡಬೇಕು. ದೈಹಿಕ ವಿಕಲಚೇತನರು, ಬುಡಕಟ್ಟು ಯುವಕರು, ಮಹಿಳೆಯರು, ಮಂಗಳಮುಖಿಯರು ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಅಡಿಯಲ್ಲಿ 100 ದಿನಗಳ ಕೆಲಸವನ್ನು ಪೂರ್ಣಗೊಳಿಸಿದವರನ್ನು ಸಹ ಸ್ವಯಂ ಸೇರ್ಪಡೆ ನೀತಿಯ ಮೂಲಕ ಸೇರಿಸಲಾಗುತ್ತದೆ.

**ಕೋಷ್ಟಕ 10.2.1: ಆಡಳಿತಾತ್ಮಕ ವಿಭಾಗ, ಜಿಲ್ಲೆಗಳು ಮತ್ತು ಪ್ರಯೋಜನದ ವರ್ಷದ ಪ್ರಕಾರ ಫಲಾನುಭವಿ ಮಾದರಿಗಳು**

| ವಿಭಾಗ | ಜಿಲ್ಲೆ | ಮಾದರಿ ಫಲಾನುಭವಿಗಳು ಮತ್ತು ಪ್ರಯೋಜನ ವರ್ಷದ ಶೇಕಡಾದರ | | | | | ಒಟ್ಟು ಮಾದರಿ ಫಲಾನುಭವಿಗಳು |
|---|---|---|---|---|---|---|---|
| | | **2013** | **2014** | **2015** | **2016** | **2017** | |
| ಬೆಂಗಳೂರು | ಬೆಂಗಳೂರು – ನಗರ | 48.83 | 51.17 | | | | 469 |
| | ತುಮಕೂರು | | 30.61 | 26.53 | 42.86 | | 98 |
| | ಉಪ–ಮೊತ್ತ | 40.39 | 47.62 | 4.59 | 7.41 | | 567 |
| ಬೆಳಗಾವಿ | ಬೆಳಗಾವಿ | 26.25 | | 53.13 | 20.63 | | 160 |
| | ಧಾರವಾಡ | 0.43 | 68.40 | 17.03 | 13.56 | 0.58 | 693 |
| | ಉಪ–ಮೊತ್ತ | 5.28 | 55.57 | 23.80 | 14.89 | 0.47 | 853 |
| ಕಲಬುರಗಿ | ಕಲಬುರಗಿ | 2.07 | 57.47 | 10.80 | 17.47 | 12.18 | 435 |
| | ರಾಯಚೂರು | | 100.00 | | | | 32 |
| | ಉಪ–ಮೊತ್ತ | 1.93 | 60.39 | 10.06 | 16.27 | 11.35 | 467 |
| ಮೈಸೂರು | ಕೊಡಗು | 25.32 | | 53.57 | 21.10 | | 308 |
| | ಮಂಡ್ಯ | 0.91 | 50.91 | 2.73 | 39.09 | 6.36 | 110 |
| | ಉಪ–ಮೊತ್ತ | 18.90 | 13.40 | 40.19 | 25.84 | 1.67 | 418 |
| ಒಟ್ಟು | ಮಾದರಿ ಫಲಾನುಭವಿಗಳ ಶೇ. | 15.70 | 46.94 | 19.26 | 15.31 | 2.78 | 2305 |
| | **ಸಂಖ್ಯೆ** | 362 | 1082 | 444 | 353 | 64 | |
| ಸೂಚನೆ: ಬೇರೆ ರೀತಿಯಲಿ ಹೇಳಿದಾಗ ಹೊರತುಪಡಿಸಿ ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿ | | | | | | | |

ಮೂಲ: ಪ್ರಾಥಮಿಕ ದತ್ತಾಂಶ

## 10.2.2 ಮಾದರಿ ಫಲಾನುಭವಿಗಳ ಕೌಶಲ್ಯ ತರಬೇತಿ ಮತ್ತು ವೇತನ– ಉದ್ಯೋಗದ ಜನಸಂಖ್ಯಾ ಸಂಕ್ಷಿಪ್ತ ವಿವರ:

ಒಟ್ಟಾರೆಯಾಗಿ ರಾಜ್ಯಕ್ಕೆ 14 ಯೋಜನಾ ಅನುಷ್ಠಾನ ಸಂಸ್ಥೆಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ನಿರತವಾಗಿವೆ ಎಂದು ವರದಿಯಾಗಿದೆ. ಈ ಮೌಲ್ಯಮಾಪನದಲ್ಲಿ ಕೌಶಲ್ಯ ತರಬೇತಿಯ 2305 ಫಲಾನುಭವಿಗಳ ಮಾದರಿ ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಉದ್ಯೋಗ ಘಟಕವನ್ನು 8 ಜಿಲ್ಲೆಗಳ ಕರ್ನಾಟಕ ರಾಜ್ಯದ ನಾಲ್ಕು ಆಡಳಿತ ವಲಯಗಳಿಂದ ತಲಾ ಎರಡರಂತೆ ಮಾದರಿಯನ್ನು ಪಡೆಯಲಾಗಿದೆ. ಆಯ್ಕೆಯಾದವರು 2013 ರಿಂದ 2017ರವರೆಗಿನ ಫಲಾನುಭವಿಗಳಾಗಿದ್ದಾರೆ. ಕೋಷ್ಟಕ 10.2.1 ಈ ಮೌಲ್ಯಮಾಪನಕ್ಕಾಗಿ ಆಯ್ಕೆ ಮಾಡಿದ ಫಲಾನುಭವಿಗಳ ಸಂಕ್ಷಿಪ್ತ ಹಿನ್ನೆಲೆಯನ್ನು ಪ್ರಸ್ತುತಪಡಿಸುತ್ತದೆ.

ಹಿಂದಿನ ವರ್ಷಗಳಿಂದ ಫಲಾನುಭವಿಗಳಿಗೆ ಒತ್ತು ನೀಡಲು ಮಾದರಿ ಚೌಕಟ್ಟನ್ನು ವಿನ್ಯಾಸಗೊಳಿಸಲಾಗಿದೆ. ಇದು ಮಾಪನ ಮಾಡಲು ಗಮನಾರ್ಹ ಪರಿಣಾಮ ಬೀರುತ್ತದೆ. ಅದರಂತೆ 2014 ರಲ್ಲಿ ಈ ಯೋಜನೆಯಿಂದ ಪ್ರಯೋಜನ ಪಡೆದವರು ಸುಮಾರು 46.94 ಪ್ರತಿಶತದಷ್ಟು ಇದ್ದಾರೆ. ಕನಿಷ್ಠ ಮಾದರಿ ಸಂಖ್ಯೆ 2017 (2.78%) ರಲ್ಲಿದೆ.

ಕೋಷ್ಟಕ 10.2.2, ವಿವಿಧ ಜಿಲ್ಲೆಗಳಿಂದ ಮಾದರಿಗಳ ಲಿಂಗ ಮತ್ತು ವಯಸ್ಸಿನ ವಿತರಣೆಯನ್ನು ಪ್ರಸ್ತುತಪಡಿಸುತ್ತದೆ.

**ಕೋಷ್ಟಕ ಸಂಖ್ಯೆ 10.2.2: ಜಿಲ್ಲೆಗಳಾದ್ಯಂತ ಫಲಾನುಭವಿಗಳ ಲಿಂಗ ಮತ್ತು ವಯಸ್ಸಿನ ಗುಂಪು**

| ವಿಭಾಗ | ಜಿಲ್ಲೆ | ಲಿಂಗ | | ವಯಸ್ಸು (ಗುಂಪು ಮಾಡಲಾಗಿದೆ) | | | ಒಟ್ಟು (ಸಂ.) |
|---|---|---|---|---|---|---|---|
| | | ಪುರುಷ | ಹೆಣ್ಣು | 18–25 ವರ್ಷಗಳು. | 25–30 ವರ್ಷಗಳು. | 30–35 ವರ್ಷಗಳು. | |
| ಬೆಂಗಳೂರು | ಬೆಂಗಳೂರು – ನಗರ | 50.53 | 49.47 | 43.92 | 42.22 | 13.86 | 469 |
| | ತುಮಕೂರು | 19.39 | 80.61 | 45.92 | 46.94 | 7.14 | 98 |
| | ಉಪ–ಮೊತ್ತ | 45.15 | 54.85 | 44.27 | 43.03 | 12.70 | 567 |
| ಬೆಳಗಾವಿ | ಬೆಳಗಾವಿ | 57.5 | 42.5 | | 73.13 | 26.88 | 160 |
| | ಧಾರವಾಡ | 64.5 | 35.5 | 45.6 | 46.46 | 7.94 | 693 |
| | ಉಪ–ಮೊತ್ತ | 63.19 | 36.81 | 37.05 | 51.47 | 11.49 | 853 |
| ಕಲಬುರಗಿ | ಕಲಬುರಗಿ | 78.39 | 21.61 | 28.97 | 60.46 | 10.57 | 435 |
| | ರಾಯಚೂರು | 87.5 | 12.5 | | 87.5 | 12.5 | 32 |
| | ಉಪ–ಮೊತ್ತ | 79.01 | 20.99 | 26.98 | 62.31 | 10.71 | 467 |
| ಮೈಸೂರು | ಕೊಡಗು | 54.87 | 45.13 | 44.16 | 41.88 | 13.96 | 308 |
| | ಮಂಡ್ಯ | 48.18 | 51.82 | 56.36 | 40.91 | 2.73 | 110 |
| | ಉಪ–ಮೊತ್ತ | 53.11 | 46.89 | 47.37 | 41.63 | 11.00 | 418 |
| ಒಟ್ಟು | ಒಟ್ಟು % | 60.13 | 39.87 | 38.66 | 49.8 | 11.54 | 2305 |
| | ಸಂಖ್ಯೆ | 1386 | 919 | 891 | 1148 | 266 | |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | | | |

ಮೂಲ: ಪ್ರಾಥಮಿಕ ದತ್ತಾಂಶ

**ಫಲಾನುಭವಿಗಳ ಲಿಂಗ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದಂತೆ ಕೌಶಲ್ಯ ಮತ್ತು ಉದ್ಯೋಗ ಘಟಕವು ಪುರುಷ ಫಲಾನುಭವಿಗಳ ಪ್ರಾಬಲ್ಯವನ್ನು ಹೊಂದಿದೆ. ಮಹಿಳೆಯರ ಪ್ರಮಾಣ ಸುಮಾರು 40 ಪ್ರತಿಶತ ಇದೆ. ಮಹಿಳಾ

ಫಲಾನುಭವಿಗಳಲ್ಲಿ ಅತ್ಯಂತ ಕಡಿಮೆ ಪಾಲು ರಾಯಚೂರಿನಲ್ಲಿದೆ(12.50 ಪ್ರತಿಶತ), ನಂತರ ಕಲಬುರಗಿ 21.61 ಪ್ರತಿಶತ ಹೊಂದಿದೆ. ತುಮಕೂರಿನಲ್ಲಿ ಅತಿ ಹೆಚ್ಚು ಮಹಿಳೆಯರ ಪಾಲು (80.61 ಪ್ರತಿಶತ), ಮಂಡ್ಯದಲ್ಲಿ 51.82 ಪ್ರತಿಶತ ಮಹಿಳೆಯರಿದ್ದಾರೆ. ಅದೇ ರೀತಿ ಅತ್ಯಂತ ಹೆಚ್ಚಿನ ಪುರುಷ ಫಲಾನುಭವಿಗಳನ್ನು ಹೊಂದಿರುವ ಜಿಲ್ಲೆಗಳು ರಾಯಚೂರು (87.50 ಪ್ರತಿಶತ), ಕಲಬುರಗಿ (78.39 ಪ್ರತಿಶತ), ಮತ್ತು ಧಾರವಾಡ (64.50 ಪ್ರತಿಶತ). ಸ್ವಯಂ ಉದ್ಯೋಗ ಯೋಜನೆಯಂತೆ ಇಲ್ಲಿಯೂ ಮಂಗಳಮುಖಿ ಫಲಾನುಭವಿಗಳ ಅನುಪಸ್ಥಿತಿ ಎದ್ದು ಕಾಣುತ್ತದೆ.

**ಫಲಾನುಭವಿಗಳ ವಯಸ್ಸಿನ ಘಟಕ:** ವಯಸ್ಸಿನ ಪ್ರಕಾರ, ಸುಮಾರು 50 ಪ್ರತಿಶತದಷ್ಟು ಫಲಾನುಭವಿಗಳು 25 ರಿಂದ 30 ವರ್ಷ ವಯಸ್ಸಿನವರಾಗಿದ್ದಾರೆ. ಸುಮಾರು 38.66 ಪ್ರತಿಶತದಷ್ಟು 18–25 ವಯಸ್ಸಿನವರು ಮತ್ತು ಸುಮಾರು 11.54 ಪ್ರತಿಶತದಷ್ಟು 30 ವಯಸ್ಸಿನವರಿದ್ದಾರೆ. ಮಂಡ್ಯ ಜಿಲ್ಲೆ (56.36 ಪ್ರತಿಶತ)ಯಲ್ಲಿ ಬಹಳಷ್ಟು ಫಲಾನುಭವಿಗಳು ಕಿರಿಯ ವಯಸ್ಸಿನವರಿದ್ದರೆ ರಾಯಚೂರು (87.5 ಪ್ರತಿಶತ) ಜಿಲ್ಲೆಯಲ್ಲಿ 25 ರಿಂದ 30 ವರ್ಷ ವಯಸ್ಸಿನ ಫಲಾನುಭವಿಗಳು ಅತಿ ಹೆಚ್ಚಾಗಿದ್ದಾರೆ.

**ಕೋಷ್ಟಕ ಸಂಖ್ಯೆ 10.2.3: ಮಾದರಿ ಜಿಲ್ಲೆಗಳಾದ್ಯಂತ ಫಲಾನುಭವಿಗಳ ಜಾತಿ ವರ್ಗಗಳು**

| ವಿಭಾಗ | ಜಿಲ್ಲೆ | ಜಾತಿ ವರ್ಗಗಳು | | | | ಒಟ್ಟು (ಸಂ.) |
|---|---|---|---|---|---|---|
| | | ಸಾಮಾನ್ಯ | ಹಿಂದುಳಿದವರು | ಎಸ್.ಸಿ. | ಎಸ್.ಟಿ. | |
| ಬೆಂಗಳೂರು | ಬೆಂಗಳೂರು – ನಗರ | 55.86 | 2.13 | 38.59 | 3.41 | 469 |
| | ತುಮಕೂರು | 34.69 | 16.33 | 48.98 | | 98 |
| | ಉಪ–ಮೊತ್ತ | 52.20 | 4.59 | 40.39 | 2.82 | 567 |
| ಬೆಳಗಾವಿ | ಬೆಳಗಾವಿ | 43.75 | 23.75 | 22.5 | 10 | 160 |
| | ಧಾರವಾಡ | 49.35 | 22.94 | 13.85 | 13.85 | 693 |
| | ಉಪ–ಮೊತ್ತ | 48.30 | 23.09 | 15.47 | 13.13 | 853 |
| ಕಲಬುರಗಿ | ಕಲಬುರಗಿ | 21.84 | 41.61 | 34.71 | 1.84 | 435 |
| | ರಾಯಚೂರು | 12.5 | 40.63 | 31.25 | 15.63 | 32 |
| | ಉಪ–ಮೊತ್ತ | 21.20 | 41.54 | 34.48 | 2.78 | 467 |
| ಮೈಸೂರು | ಕೊಡಗು | 70.78 | 8.12 | 17.21 | 3.9 | 308 |
| | ಮಂಡ್ಯ | 59.09 | 20 | 17.27 | 3.64 | 110 |
| | ಉಪ–ಮೊತ್ತ | 67.70 | 11.24 | 17.22 | 3.83 | 418 |
| ಒಟ್ಟು | ಒಟ್ಟು % | 47.29 | 20.13 | 25.77 | 6.81 | 2305 |
| | ಸಂಖ್ಯೆ | 1090 | 464 | 594 | 157 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | | |

ಮೂಲ: ಪ್ರಾಥಮಿಕ ದತ್ತಾಂಶ

**ಫಲಾನುಭವಿಗಳ ಜಾತಿ ಮತ್ತು ಧಾರ್ಮಿಕ ಘಟಕ:**

ಕೋಷ್ಟಕ 10.2.3 ಫಲಾನುಭವಿಗಳ ಸಾಮಾಜಿಕ ಹಿನ್ನೆಲೆಯನ್ನು ಜಾತಿ ವರ್ಗಗಳ ದೃಷ್ಟಿಯಿಂದ ಪ್ರಸ್ತುತಪಡಿಸುತ್ತದೆ. ನಿಗದಿಪಡಿಸಿದ ಕನಿಷ್ಠ 20 ಪ್ರತಿಶತದ ವಿರುದ್ಧ ಪರಿಶಿಷ್ಟ ಜಾತಿಯ ಫಲಾನುಭವಿಗಳು ಸ್ವಲ್ಪ ಹೆಚ್ಚಿನ (25% ) ಅನುಪಾತದಲ್ಲಿ ಪಾಲ್ಗೊಂಡಿದ್ದಾರೆ. ಯೋಜನೆಯು ವಿಶೇಷವಾಗಿ ಒಂದು ಸಾಮಾಜಿಕ ಅಂಚಿನ ಸಮುದಾಯವನ್ನು ತಲುಪಿರುವ ಈ ಗುರಿ ಶ್ಲಾಘನೀಯವಾದುದು. ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಇದನ್ನು ಹೇಳಲಾಗುವುದಿಲ್ಲ. ನಿಗದಿತ ಕನಿಷ್ಠ 9 ಪ್ರತಿಶತವಾಗಿದ್ದರೆ ಫಲಾನುಭವಿಗಳ ಮಾದರಿಯಲ್ಲಿ ಅವರ ಉಪಸ್ಥಿತಿ ಕೇವಲ 6.81 ಪ್ರತಿಶತ, ಈ

ಜಿಲ್ಲೆಗಳಲ್ಲಿ ಅಗತ್ಯ ಅರ್ಹತೆಗಳನ್ನು ಪೂರೈಸುವ ಸಾಕಷ್ಟು ಎಸ್‌ಟಿಗಳು ಇಲ್ಲ ಅಥವಾ ಕಾರ್ಯಕ್ರಮದ ಪ್ರಚಾರವು ಸಾಕಷ್ಟು ಎಸ್‌ಟಿಗಳನ್ನು ತಲುಪಿರಲಿಲ್ಲ. ಬಹುಶಃ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ದಿಷ್ಟವಾಗಿ ಎಸ್‌ಟಿ ಯುವಕರನ್ನು ಸೇರಿಸಲು ಗುರಿಯಾಗಿಸುವ ಅಗತ್ಯವಿದೆ. ಯುವಕರ ಸಾಮಾನ್ಯ ವರ್ಗವು 47 ಪ್ರತಿಶತಕ್ಕೂ ಹೆಚ್ಚು ಫಲಾನುಭವಿಗಳೊಂದಿಗೆ ಪ್ರಾಬಲ್ಯವನ್ನು ಮುಂದುವರಿಸಿದೆ ಹಿಂದುಳಿದ ಜಾತಿಗಳ ಯುವಕರು ಕೇವಲ 20 ಪ್ರತಿಶತದಷ್ಟು ಇದ್ದಾರೆ. ಫಲಾನುಭವಿಗಳ ಸಾಮಾನ್ಯ ವರ್ಗದಲ್ಲಿ ಅತ್ಯಂತ ಕಡಿಮೆ ಪಾಲನ್ನು ರಾಯಚೂರಿನಲ್ಲಿ (12.5%), ನಂತರದಲ್ಲಿ ಕಲಬುರಗಿ (21.84%) ಯಲ್ಲಿ ಕಾಣಬಹುದು. ಈ ಎರಡೂ ಜಿಲ್ಲೆಗಳಲ್ಲಿ ಎಸ್‌ಸಿಗಳ ಉತ್ತಮ ಪ್ರಾತಿನಿಧ್ಯವಿದೆ ಪ್ರತಿಯೊಂದರಲ್ಲಿಯೂ ಶೇಕಡಾ 31 ಕ್ಕಿಂತ ಹೆಚ್ಚು ಎಸ್ಸಿಗಳಲ್ಲಿ ಅತಿ ಹೆಚ್ಚು ಭಾಗ ತುಮಕೂರು ಜಿಲ್ಲೆಯಲ್ಲಿ ಕಂಡುಬರುತ್ತದೆ. ಧಾರ್ಮಿಕ ಹಂಚಿಕೆಯ ವಿಷಯದಲ್ಲಿ ಹಿಂದೂಗಳು (92.5 ಪ್ರತಿಶತ) ಅಗಾಧವಾಗಿ ಪ್ರಧಾನವಾಗಿದ್ದರೆ. ಮುಸ್ಲಿಮರು ಕೇವಲ 6.8 ಪ್ರತಿಶತ ಇದ್ದಾರೆ. ಇಡೀ ಮಾದರಿಯಲ್ಲಿ ಕೇವಲ ಎಂಟು ಕ್ರಿಶ್ಚಿಯನ್ನರು, ಮತ್ತು ಒಬ್ಬ ಜೈನ ಫಲಾನುಭವಿಗಳು ಇದ್ದಾರೆ.

**ಕೌಶಲ್ಯ ತರಬೇತಿ ಮತ್ತು ವೇತನ ಉದ್ಯೋಗಕ್ಕಾಗಿ ಫಲಾನುಭವಿಗಳ ಶೈಕ್ಷಣಿಕ ಹಿನ್ನೆಲೆ:**

ವಿವಿಧ ವ್ಯಾಪಾರಗಳು ಅಥವಾ ಉದ್ಯೋಗಗಳಲ್ಲಿ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ಫಲಾನುಭವಿಗಳ ಶೈಕ್ಷಣಿಕ ಹಿನ್ನೆಲೆಯನ್ನು ನೋಡುವುದು ಅತ್ಯಗತ್ಯ. ಕೋಷ್ಟಕ 10.2.4 ಮಾದರಿ ಜಿಲ್ಲೆಗಳಲ್ಲಿ ವಿತರಿಸಲಾದ ಶೈಕ್ಷಣಿಕ ಹಿನ್ನೆಲೆಯ ದತ್ತಾಂಶವನ್ನು ಪ್ರಸ್ತುತಪಡಿಸುತ್ತದೆ. ಕಾರ್ಯಕ್ರಮದ ವಿನ್ಯಾಸದಂತೆ ಫಲಾನುಭವಿಗಳ ಕನಿಷ್ಠ ಶೈಕ್ಷಣಿಕ ಅರ್ಹತೆಗಳು 8ನೇ ತರಗತಿಯಾಗಿರಬೇಕು. ಅದರಂತೆ ಪಂಚಾಯಿತಿ ಮಟ್ಟದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಇದಕ್ಕಿಂತ ಕಡಿಮೆ ಶಿಕ್ಷಣ ಇರುವವರು ಯಾರೂ ಕಂಡುಬಂದಿಲ್ಲ. 8ನೇ ತರಗತಿಯವರೆಗೆ ಶಿಕ್ಷಣ ಹೊಂದಿರುವವರು ಕೇವಲ 7.4 ಪ್ರತಿಶತದಷ್ಟು ಮಾತ್ರ ಇದ್ದಾರೆ. ಪದವಿ ಅಥವಾ ಅದಕ್ಕಿಂತ ಹೆಚ್ಚಿನ ಉನ್ನತ ಶಿಕ್ಷಣ ಹೊಂದಿರುವವರು ಕೇವಲ 9.07 ಪ್ರತಿಶತದಷ್ಟು ಇದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಕೌಶಲ್ಯ ಮತ್ತು ಉದ್ಯೋಗದ ಕಾರ್ಯಕ್ರಮವು ಹೆಚ್ಚು ಶಿಕ್ಷಣ ಪಡೆದಿಲ್ಲದವರು ಅಂದರೆ ಪಿಯುಸಿ ಮಟ್ಟವನ್ನು ಮೀರಿಲ್ಲದವರಿಗೆ ಸೀಮಿತವಾಗಿದೆ.ಎಸ್‌ಎಸ್‌ಎಲ್‌ಸಿವರೆಗೆ ಕನಿಷ್ಠ ಶಿಕ್ಷಣ ಹೊಂದಿರುವವರು ಶೇಕಡಾ 58.26 ನಂತರ ಪಿಯುಸಿ ಶಿಕ್ಷಣ ಹೊಂದಿರುವವರು 25.21 ಪ್ರತಿಶತ ಇದ್ದಾರೆ. ಇದರಿಂದ ಅವರಿಗೆ ಕೌಶಲ್ಯಗಳ ಮತ್ತು ಉದ್ಯೋಗ ಕ್ಷೇತ್ರಗಳ ಆಯ್ಕೆ ಸಹ ಸೀಮಿತಗೊಳ್ಳುತ್ತದೆ. ಕಡಿಮೆ ಶೈಕ್ಷಣಿಕ ಅರ್ಹತೆಯಿಂದ ಕಡಿಮೆ ಮಟ್ಟದ ಕೌಶಲ್ಯಗಳನ್ನು ಪಡೆಯುತ್ತಾರೆ. ಅದರಿಂದ ಕಡಿಮೆ ಆದಾಯ ಬರುತ್ತದೆ ಮತ್ತು ಅವರ ಸಾಮಾಜಿಕ ಚಲನಶೀಲತೆ ಕಡಿಮೆಯಾಗುತ್ತದೆ. ಜಿಲ್ಲೆಗಳಾದ್ಯಂತ ಕನಿಷ್ಠ ಮಟ್ಟದ ಶಿಕ್ಷಣ (8ನೇ ತರಗತಿ) ಹೊಂದಿರುವವರು ಬೆಂಗಳೂರು–ನಗರ ಜಿಲ್ಲೆಯ ಫಲಾನುಭವಿಗಳಲ್ಲಿ (ಶೇಕಡಾ 20.47) ಅತ್ಯಧಿಕವಾಗಿದ್ದರೆ. ಎಸ್.ಎಸ್.ಎಲ್.ಸಿ ಅಥವಾ ಅದಕ್ಕಿಂತ ಕಡಿಮೆ ಇರುವವರು ಕಲಬುರಗಿ (68.97%), ಕೊಡಗು (61.97%), ಧಾರವಾಡ (61.47%) ಮತ್ತು ಬೆಳಗಾವಿ (60.63%) ಯಲ್ಲಿ ಅತಿ ಹೆಚ್ಚು ಇದ್ದಾರೆ.

| ಕೋಷ್ಟಕ ಸಂಖ್ಯೆ: 10.2.4: ಜಿಲ್ಲೆಗಳಾದ್ಯಂತ ಫಲಾನುಭವಿಗಳು ಮತ್ತು ಅವರ ಶಿಕ್ಷಣ ಅರ್ಹತೆಗಳು | | | | | |
|---|---|---|---|---|---|
| ಜಿಲ್ಲೆ | ಶೈಕ್ಷಣಿಕ ಅರ್ಹತೆ | | | | ಒಟ್ಟು (ಸಂ.) |
| | 8ನೇ ತರಗತಿ | ಎಸ್.ಎಸ್.ಎಲ್.ಸಿ ಅಥವಾ ಕೆಳಗೆ | ಪಿ.ಯು.ಸಿ. | ಪದವಿ / ಅದಕ್ಕಿಂತ ಹೆಚ್ಚಿನ | |
| ಬೆಂಗಳೂರು – ನಗರ | 20.47 | 45.20 | 21.32 | 13.01 | 469 |
| ಬೆಳಗಾವಿ | 5.63 | 60.63 | 33.75 | | 160 |
| ಧಾರವಾಡ | 5.48 | 61.47 | 23.23 | 9.81 | 693 |
| ಕಲಬುರಗಿ | 1.84 | 68.97 | 18.16 | 11.03 | 435 |
| ಕೊಡಗು | 4.22 | 61.69 | 34.09 | | 308 |
| ಮಂಡ್ಯ | 1.82 | 49.09 | 41.82 | 7.27 | 110 |
| ರಾಯಚೂರು | | 40.63 | 46.88 | 12.50 | 32 |
| ತುಮಕೂರು | 6.12 | 52.04 | 21.43 | 20.41 | 98 |
| ಒಟ್ಟು % | 7.46 | 58.26 | 25.21 | 9.07 | 2305 |
| ಸಂಖ್ಯೆ | 172 | 1343 | 581 | 209 | |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | |

ಮೂಲ: ಪ್ರಾಥಮಿಕ ದತ್ತಾಂಶ

**10.2.3 ಫಲಾನುಭವಿಗಳು ಕಾರ್ಯಕ್ರಮದ ಬಗ್ಗೆ ತಿಳಿದುಕೊಳ್ಳುವ ಮಾರ್ಗಗಳು:**

ಯೋಜನೆಯ ಕೌಶಲ್ಯ ತರಬೇತಿ ಮತ್ತು ಉದ್ಯೋಗ ಘಟಕ ಕಾರ್ಯಕ್ರಮದ ಕಾರ್ಯಾಚರಣೆ ಮಾರ್ಗಸೂಚಿಗಳ ಪ್ರಕಾರ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದಲ್ಲೂ ಸಹ ಯೋಜನಾ ಅನುಷ್ಠಾನ ನಿಗಮಗಳು ನಿಷ್ಕ್ರಿಯ ತರಬೇತಿ ಸಂಸ್ಥೆಗಳಾಗಿರುವುದಿಲ್ಲ. ಗ್ರಾಮೀಣ ಯುವಕರಲ್ಲಿ ಕಾರ್ಯಕ್ರಮವನ್ನು ಪ್ರಚಾರ ಮಾಡುವ ಕೌಶಲ್ಯದಿಂದ ಸಂಭವಿಸಬಹುದಾದ ವಿವಿಧ ವ್ಯಾಪಾರಗಳು ಅಥವಾ ಕ್ಷೇತ್ರಗಳ ಬಗ್ಗೆ ಸಲಹೆ ನೀಡುವ ಮತ್ತು ಕೌಶಲ್ಯ ತರಬೇತಿ ಕಾರ್ಯಕ್ರಮದ ನಂತರ ಪಡೆಯಬಹುದಾದ ಉದ್ಯೋಗದ ಸ್ವರೂಪ ತಿಳಿಸುವ ಹೊಣೆಗಾರಿಕೆ ಹೊತ್ತಿರುತ್ತವೆ. ಪಂಚಾಯಿತಿಗಳಲ್ಲಿ ಗ್ರಾಮ ಸಭೆಗಳ ಮೂಲಕ ಅವರು ಗುರುತಿಸುವ ಅಭ್ಯರ್ಥಿಗಳ ಸಂಖ್ಯೆಯ ಆಧಾರದ ಮೇಲೆ ವಿವಿಧ ಹಂತಗಳಲ್ಲಿ ಅವರ ಪಾತ್ರಗಳ ಈಡೇರಿಕೆಯನ್ನು ಗಮನಿಸಿ ಅವರ ಸೇವೆಗಳಿಗೆ ಮರುಪಾವತಿ ಮಾಡಲಾಗುತ್ತದೆ. ತರಬೇತಿ ಪಡೆದ ವ್ಯಕ್ತಿಗಳ ಮೇಲೆ ಅನುಸರಣಾ ಟ್ಯಾಬ್ ಮತ್ತು ಸುಮಾರು ಮೂರು ವರ್ಷಗಳವರೆಗೆ ಅವರ ನಿಯೋಜನೆಯ ಮೇಲೆ ಗಮನಹರಿಸಿದರೆ ಮಾತ್ರ ಅಂತಿಮ ಪಾವತಿ ಮಾಡಲಾಗುತ್ತದೆ.

| **ಕೋಷ್ಟಕ ಸಂಖ್ಯೆ 10.2.5: ಜಿಲ್ಲೆಗಳಾದ್ಯಂತ ರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ಮಾಹಿತಿಯ ಮೂಲ** | | | | | |
|---|---|---|---|---|---|
| **ಜಿಲ್ಲೆ** | **ರಾಜೀವ್ ಗಾಂಧಿ ಚೈತನ್ಯ ಯೋಜನೆ(%) ಬಗ್ಗೆ ಮಾಹಿತಿಯ ಮೂಲ** | | | | **ಒಟ್ಟು (ಸಂ.)** |
| | **ಮಾಧ್ಯಮ** | | | | |
| ಬೆಂಗಳೂರು – ನಗರ | 26.44 | 308 | 110 | 32 | 469 |
| ಬೆಳಗಾವಿ | 12.50 | 98 | 2305 | | 160 |
| ಧಾರವಾಡ | 9.96 | ಒಟ್ಟು (ಸಂ.) | | 469 | 693 |
| ಕಲಬುರಗಿ | 4.37 | 160 | 693 | 435 | 435 |
| ಕೊಡಗು | 12.99 | 308 | 110 | 32 | 308 |
| ಮಂಡ್ಯ | 1.82 | 98 | 2305 | | 110 |
| ರಾಯಚೂರು | 21.88 | ಒಟ್ಟು (ಸಂ.) | | 469 | 32 |
| ತುಮಕೂರು | 2.04 | 160 | 693 | 435 | 98 |
| ಒಟ್ಟು % | 12.28 | 308 | 110 | 32 | 2305 |
| ಸಂಖ್ಯೆ | 283 | 649 | 1308 | 65 | |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | |

ಕೋಷ್ಟಕ 10.2.5 ಪ್ರಕಾರ, ಕೇವಲ 12.28 ಪ್ರತಿಶತ ಫಲಾನುಭವಿಗಳು ತಮ್ಮ ಮಾಹಿತಿಯ ಮೂಲವನ್ನು ಮಾಧ್ಯಮ ಜಾಹೀರಾತುಗಳು, 28.16 ಪ್ರತಿಶತ ಫಲಾನುಭವಿಗಳು 'ಸ್ನೇಹಿತರು ಮತ್ತು ಸಂಬಂಧಗಳು' ಎಂದು ತಿಳಿಸಿದ್ದಾರೆ. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಎರಡೂ ಘಟಕಗಳ ಅಡಿಯಲ್ಲಿ ಲಭ್ಯವಿರುವ ಅವಕಾಶಗಳ ಬಗ್ಗೆ ಜಾಹೀರಾತು ನೀಡಲು ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳಬೇಕು ಮತ್ತು ಈ ಉದ್ದೇಶಕ್ಕಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕು. ಏಕೈಕ ಅತಿದೊಡ್ಡ ಮಾಹಿತಿ ಮೂಲವೆಂದರೆ ಪಂಚಾಯಿತಿಗಳು, ಇದು ತಳಮಟ್ಟದಲ್ಲಿ ಕಾರ್ಯಕ್ರಮದ ನೋಡಲ್ ನಿಗಮವಾಗಿದೆ. ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಪ್ರಮುಖ ಸ್ಥಳಗಳಲ್ಲಿ ಬ್ಯಾನರ್‌ಗಳು ಮತ್ತು ಪೋಸ್ಟರ್‌ಗಳನ್ನು ಹಾಕಿದ್ದಲ್ಲದೆ ಚುನಾಯಿತ ಸದಸ್ಯರ ಮೂಲಕ ಸಂದೇಶವನ್ನು ಹರಡಲು ಪ್ರಯತ್ನಿಸಿದ್ದವು. ಹೆಚ್ಚಿನ ಸಂದರ್ಭಗಳಲ್ಲಿ ಈ ವಿಷಯದ ಬಗ್ಗೆ ಗ್ರಾಮ ಸಭೆಯಲ್ಲಿ ಘೋಷಿಸಲಾಯಿತು. ಅನೇಕ ಫಲಾನುಭವಿಗಳು ತಮ್ಮನ್ನು ಕರೆದಾಗ ಗ್ರಾಮ ಸಭೆಗಳಿಗೆ ದೈಹಿಕವಾಗಿ ಹಾಜರಾಗಿರಲಿಲ್ಲ ಆದರೆ ಪ್ರಕಟಣೆಯ ನಂತರ ಬಾಯಿ ಮಾತಿನ ಮೂಲಕ ಅವರು ತಮ್ಮನ್ನು ಸಂಭಾವ್ಯ ಫಲಾನುಭವಿಗಳಾಗಿ ನೋಂದಾಯಿಸಲು ಸಂಬಂಧಿತ ದಾಖಲೆಗಳೊಂದಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಬಳಿ ಹೋಗಿದ್ದರುಎಂದು ಗಮನಿಸಲಾಗಿದೆ. ಅದೇ ರೀತಿ ಕೆಲವು ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಥವಾ ಕಛೇರಿಯ ಸಹಾಯಕರು ಸಂಭಾವ್ಯ ಫಲಾನುಭವಿಗಳನ್ನು ಹುಡುಕಲು ಹೋಗಿದ್ದರು ಏಕೆಂದರೆ ಕಾರ್ಯಕ್ರಮಕ್ಕೆ ಸಾಕಷ್ಟು ಯುವಕರು ದಾಖಲಾಗಿರಲಿಲ್ಲ.

ಈ ಹಂತದಲ್ಲಿ ಕೊಡಗು ಜಿಲ್ಲೆಯ ಸೋಮವಾರ ಪೇಟೆಯಲ್ಲಿ ಕೇಂದ್ರೀಕೃತ ಸಮೂಹ ಚರ್ಚೆಯಲ್ಲಿ ಭಾಗವಹಿಸಿದ ಯುವತಿಯ ಪ್ರತಿಕ್ರಿಯೆ ಮುಖ್ಯವಾಗಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಯೋಜನೆ ಅನುಷ್ಠಾನ ನಿಯೋಗದ ಪ್ರತಿನಿಧಿಯು ತನ್ನ ತಂದೆಗೆ ಬಲವಂತಪಡಿಸಿ ತನ್ನನ್ನು ಕಾರ್ಯಕ್ರಮದ ಅಡಿಯಲ್ಲಿ ದಾಖಲಿಸುವಂತೆ ಮಾಡಿದ್ದಾರೆ ಎಂದು ಅವಳು ಆರೋಪಿಸಿದ್ದಾಳೆ.

"ನಾನು ಈಗ ಗಾರ್ಮೆಂಟ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ನನಗೆ ಸಂತೋಷವಾಗಿದೆ ಮುಖ್ಯವಾಗಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಕಾರ್ಯಕ್ರಮದಿಂದ ನನಗೆ ಹೊಲಿಗೆ ಕೆಲಸದಲ್ಲಿ ತರಬೇತಿ ನೀಡಲಾಯಿತು. ಆದರೆ ನನ್ನ ಪ್ರಾಥಮಿಕ ಆಸಕ್ತಿ ಇನ್ನೂ ಹೆಚ್ಚಿನ ಅಧ್ಯಯನ ಮಾಡುವುದು ಮತ್ತು ಯಾವುದೇ ಉತ್ತಮ ಸರ್ಕಾರಿ ಉದ್ಯೋಗಗಳಿಗೆ ಅರ್ಹತೆ ಪಡೆಯುವುದು. ಕೆಪಿಎಸ್‌ಸಿ ಪರೀಕ್ಷೆಗಳನ್ನು ಬರೆದು ನಾನು ಎಂದಾದರೂ ಒಂದು ದಿನ ತಹಶೀಲ್ದಾರ ಅಥವಾ ಸಹಾಯಕ ಆಯುಕ್ತರು ಆಗುತ್ತೇನೆ ಎಂದು ಬಯಸಿದ್ದೆ, ಆದರೆ ನಾನು ಚಿಕ್ಕ ವಯಸ್ಸಿನಲ್ಲಿಯೇ ಉದ್ಯೋಗಕ್ಕೆ ತಳ್ಳಲ್ಪಟ್ಟೆ ಮತ್ತು ಈಗ ತಂದೆ ನನಗಾಗಿ ವರನನ್ನು ಹುಡುಕುತ್ತಿದ್ದಾರೆ. ಶಿಕ್ಷಣ ಪಡೆದ ನನ್ನಂತಹ ಹುಡುಗಿಯರು ಕಡಿಮೆ ವಿದ್ಯಾವಂತ ವ್ಯಕ್ತಿಯನ್ನು ಮದುವೆಯಾಗುತ್ತಾರೆ. ಕಡಿಮೆ ಸಂಬಳದ ಕೂಲಿ ಕೆಲಸಗಳನ್ನು ಮಾಡುತ್ತಾರೆ. ನಾನು ನನ್ನ ತಂದೆಯನ್ನು ದೂಷಿಸುತ್ತೇನೆ. ಆದರೆ ಅಧಿಕಾರಿಗಳು ತಮ್ಮ ಗುರಿ ತಲುಪಬೇಕಾಗಿರುವುದರಿಂದ ಕೆಲವೊಮ್ಮೆ ನಮ್ಮಂತಹ ಹುಡುಗಿಯರನ್ನು ಈ ಕಾರ್ಯಕ್ರಮಗಳಿಗೆ ಸೇರಿಸಲು ನಮ್ಮ ಕುಟುಂಬಗಳನ್ನು ಹೇಗೆ ಒತ್ತಡಕ್ಕೆ ಸಿಲುಕಿಸುತ್ತವೆ ಎಂದು ನಾನು ದೂಷಿಸುತ್ತೇನೆ[9]"**(ಎಫ್‌ಜಿಡಿ ಪ್ರತಿಕ್ರಿಯೆ)**

ಉಲ್ಲೇಖಿತ ಕೇಂದ್ರೀಕೃತ ಸಮೂಹ ಚರ್ಚೆಯಿಂದನಂತರ ಫಲಾನುಭವಿಗಳೊಂದಿಗೆ ಚರ್ಚೆಯಿಂದ ಕಲಿತ ಪಾಠ ಎಂದರೆಪಂಚಾಯಿತಿಗಳು ಮತ್ತು ಯೋಜನೆ ಅನುಷ್ಠಾನ ನಿಯೋಗಗಳು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ

[9] ಸೋಮವಾರಪೇಟೆಯಲ್ಲಿ 2020 ಫೆಬ್ರವರಿ 02 ರಂದು ನಡೆಸಿದ ಕೇಂದ್ರೀಕೃತ ಸಮೂಹ ಚರ್ಚೆ

ಉತ್ಸುಕತೆಯಲ್ಲಿ ಸ್ಪರ್ಧಿಗಳ ದೃಷ್ಟಿಕೋನ ಮತ್ತು ಅಭಿಸಾಮರ್ಥ್ಯವನ್ನು ಗಮನಿಸಲು ಖಚಿತಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಯೋಜನೆ ಅನುಷ್ಠಾನ ನಿಯೋಗಗಳು ಸಲಹೆಗಾರರ ಪಾತ್ರವನ್ನು ವಹಿಸುವ ನಿರೀಕ್ಷೆಯಿದೆ.

### 10.2.4 ಕೌಶಲ್ಯ ತರಬೇತಿಗಾಗಿ ಕ್ಷೇತ್ರಗಳ ಆಯ್ಕೆ:

ಕೌಶಲ್ಯವನ್ನು ಪಡೆಯಲು ಉದ್ಯೋಗಗಳು ಮತ್ತು ಸೇವೆಗಳ ದೊಡ್ಡ ಪಟ್ಟಿಯನ್ನು ರಾಜ್ಯದ ಗ್ರಾಮೀಣ ಜೀವನೋಪಾಯ ಅಭಿಯಾನ ಸಿದ್ಧಪಡಿಸಿದೆ. ಅಂತಹ ಪಟ್ಟಿಯಿಂದ ಹಲವಾರು ಕ್ಷೇತ್ರಗಳಲ್ಲಿ ಅಗತ್ಯತಾಂತ್ರಿಕ ಮತ್ತು ಮೃದು ಕೌಶಲ್ಯಗಳನ್ನು ಒದಗಿಸುವಲ್ಲಿ ಯೋಜನೆ ಬೆಂಬಲಿಸುವ ನಿಯೋಗಗಳನ್ನು ತಮ್ಮ ಸೇವೆಗಳಿಗಾಗಿ ತೊಡಗಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ. ಮತ್ತು ಅವರು ಪ್ರತಿಉದ್ಯೋಗಕ್ಕಾಗಿ ಸ್ಪಷ್ಟವಾಗಿ ಸಿದ್ಧಪಡಿಸಿದ ತರಬೇತಿ ಕೈಪಿಡಿಗಳನ್ನು ಬಳಸಿಕೊಳ್ಳುವ ನಿರೀಕ್ಷೆಯಿದೆ.

ಕೌಶಲ್ಯ ತರಬೇತಿ ಕಾರ್ಯಕ್ರಮದ ನಂತರ ಅವರಿಗೆ ತರಬೇತಿ ನೀಡಿದ ಅಥವಾ ಪ್ರಸ್ತುತ ಉದ್ಯೋಗದಲ್ಲಿರುವ ನಿರ್ದಿಷ್ಟ ಕ್ಷೇತ್ರದ ಬಗ್ಗೆ ಪ್ರಶ್ನಿಸಿದಾಗ ಫಲಾನುಭವಿಗಳು 30 ಕ್ಕೂ ಹೆಚ್ಚು ವಿಭಿನ್ನ ಉದ್ಯೋಗಗಳನ್ನು ಪಟ್ಟಿ ಮಾಡಿದರು[10]. ಯೋಜನೆ ಅನುಷ್ಠಾನ ನಿಯೋಗಗಳು ಕ್ಷೇತ್ರ ಮಟ್ಟದಲ್ಲಿ ಸಂಬಂಧಿತ ಕ್ಷೇತ್ರ ಚಟುವಟಿಕೆಗಳನ್ನು ಒಟ್ಟುಗೂಡಿಸಿ ಉದ್ಯೋಗಗಳ ಗುಂಪುಗಳನ್ನು ಮಾಡುತ್ತವೆ. ಸಾಮಾನ್ಯ ಅಂಗಡಿ ನಡೆಸಲು ಬ್ಯಾಂಕ್‌ಖಾತೆಯನ್ನು ತೆರೆಯುವುದು ಮತ್ತು ನಿರ್ವಹಿಸುವುದು ಚೆಕ್ ಬರೆಯುವುದು ಅಥವಾ ಕೌಶಲ್ಯಗಳಂತಹ ಖಾತೆಯಿಂದ ಹಣ ತೆಗೆಯುವುದು  ಮುಂತಾದ ಮೃದು ಕೌಶಲ್ಯಗಳ ಅಗತ್ಯವಿದೆ. ಆದರೆ ಕಿರಾಣಿ ಅಂಗಡಿ, ಮೊಬೈಲ್ ಫೋನ್‌ಅಂಗಡಿ, ಪಾನ್‌ಅಂಗಡಿ, ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳು, ಸಂಗೀತ ಸರಕು ಅಂಗಡಿಗಳು, ಜವಳಿ ಅಂಗಡಿಗಳು ಮತ್ತು ಶಾಮಿಯಾನಾ ಟೆಂಟ್ ಮನೆಗಳನ್ನು ನಡೆಸಲು ಬೇಕಾದ ಕೌಶಲ್ಯಗಳನ್ನು ಒಟ್ಟುಗೂಡಿಸಲಾಗಿದೆ.  ಜಿಲ್ಲಾ ಮಟ್ಟದ ಸಮಿತಿಗಳು ಮತ್ತು ಇಲಾಖೆಯ ಅಧಿಕಾರಿಗಳು ಸರಿಯಾದ ಉಸ್ತುವಾರಿ ಕೈಗೊಂಡರೆ ಪರಿಶೀಲನೆಯಲ್ಲಿರುವ ಕಾರ್ಯಕ್ರಮದ ಅಡಿಯಲ್ಲಿ ಅಂತಹ ಕೌಶಲ್ಯಗಳ ಕೇಂದ್ರೀಕರಣವನ್ನು ತಪ್ಪಿಸಬಹುದಿತ್ತು.  ಇವು ಒಂದು ತಿಂಗಳ ಅವಧಿಯ ತರಬೇತಿ ನೀಡಬೇಕಾದ ವ್ಯಾಪಾರಗಳಲ್ಲ. ಅಂತಹ ಮೃದು ಕೌಶಲ್ಯಗಳು ಇತರ ಯಾವುದೇ ಕೌಶಲ್ಯ ಕಾರ್ಯಕ್ರಮದ ಭಾಗವಾಗಿರಬಹುದಾದುದ್ದು. ಅತ್ಯುತ್ತಮ ಅದೇ ಕೌಶಲ್ಯಗಳಿಗೆ ಸ್ವಯಂ ಉದ್ಯೋಗ ಘಟಕದ ಅಡಿಯಲ್ಲಿ ಆರು ದಿನಗಳ ತರಬೇತಿ ನೀಡಲಾಗುತ್ತದೆ.

**ಕೋಷ್ಟಕ 10.2.6 ಪ್ರತಿ ಜಿಲ್ಲೆಯಲ್ಲಿ ಆಯಾ ಕ್ಷೇತ್ರ ಕೌಶಲ್ಯದಲ್ಲಿ ತರಬೇತಿ ಪಡೆದ ಫಲಾನುಭವಿಗಳ ಶೇಕಡಾ ದರ ಸೂಚಿಸುತ್ತದೆ. ಎಲ್ಲಾ ವಿಭಾಗಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಅಂದರೆ 742 ಅಥವಾ 32.19 ಪ್ರತಿಶತ ಫಲಾನುಭವಿಗಳು ಹೊಲಿಗೆ ಕೆಲಸದಲ್ಲಿ ಕೌಶಲ್ಯ ತರಬೇತಿ ಪಡೆದಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಹೊಲಿಗೆ ಕೆಲಸ ತರಬೇತಿ ಪಡೆದ ಫಲಾನುಭವಿಗಳು ಶೇಕಡಾ 60.39 ರಷ್ಟಿದ್ದಾರೆ. 556 ಫಲಾನುಭವಿಗಳು ತರಬೇತಿ ಪಡೆದ ಗಣಕಯಂತ್ರ ಕೌಶಲ್ಯ ಎರಡನೇ ಸ್ಥಾನ ಪಡೆದಿದೆ. ರಾಯಚೂರು ಜಿಲ್ಲೆಯಲ್ಲಿ ಶೇ.37.50 ರಷ್ಟು ಫಲಾನುಭವಿಗಳು ಗಣಕಯಂತ್ರ ಅಂಗಡಿಯನ್ನು ಆಯ್ಕೆ**

[10] ಇತರೆ ಅಡಿಯಲ್ಲಿ ಗುಂಪುಮಾಡಿರುವ ಕೌಶಲ್ಯಗಳು ಅತಿ ಕಡಿಮೆ ಸಂಖ್ಯೆಯ ಫಲಾನುಭವಿಗಳು ಆಯ್ಕೆ ಮಾಡಿರುವ ಕೌಶಲ್ಯಗಳನ್ನು ಒಳಗೊಂಡಿದೆ.ಉದಾಹರಣೆಗೆ ಬಳೆ ತಯಾರಿಸುವುದು ಮತ್ತು ಮಾರಾಟ ಮಾಡುವುದು, ಪುಸ್ತಕದ ಅಂಗಡಿ ನಡೆಸುವುದು, ಗಾಜು ಬೆಸುಗೆಯ ಘಟಕ ಪ್ರತಿಯೊಂದನ್ನೂ ಒಬ್ಬೊಬ್ಬರು ಆಯ್ಕೆ ಮಾಡಿದ್ದಾರೆ. ರುಬ್ಬಿದ ಕಾಗದ ಮಾಡುವುದನ್ನು ಇಬ್ಬರು ಔಷಧ ಅಂಗಡಿ ನಡೆಸುವುದನ್ನು ಮೂರು ಮಂದಿ ಮನೆ ಕಟ್ಟಲು ಸೆಂಟ್ರಿಂಗ್ ಕೆಲಸ ಮಾಡಿಸುವುದು ಮತ್ತು ಪಾನ್ ಬೀಡ ಅಂಗಡಿ ನಡೆಸುವುದು ಪ್ರತಿಯೊಂದರಲ್ಲಿಯೂ ನಾಲ್ಕು ಮಂದಿ, ಛಾಯಾಪ್ರತಿ ತಯಾರಿಸುವ ಅಂಗಡಿ ಮತ್ತು ಫೋಟೋ ಸ್ಟುಡಿಯೋತೆರೆಯುವುದು ಪ್ರತಿಯೊಂದರಲ್ಲಿಯೂ ಐದು ಮಂದಿ ಆಯ್ಕೆಮಾಡಿದ್ದಾರೆ

**ಮಾಡಿಕೊಂಡಿದ್ದಾರೆ. ಇದರ ನಂತರ ಎಲ್ಲಾ ಜಿಲ್ಲೆಗಳಲ್ಲಿ 11.80 ಪ್ರತಿಶತ ಫಲಾನುಭವಿಗಳು ಆಟೋಮೊಬೈಲ್‌ನಲ್ಲಿ ಕೌಶಲ್ಯ ತರಬೇತಿ ಪಡೆದಿದ್ದಾರೆ. ಕನಿಷ್ಠ ಶೇಕಡಾ ದರ ಫಲಾನುಭವಿಗಳು ಹೋಟೆಲ್ ಸಂಬಂಧಿತ ತರಬೇತಿ (0.43 ಪ್ರತಿಶತ) ಮತ್ತು ಮರಗೆಲಸ (1 ಪ್ರತಿಶತ)ದಲ್ಲಿ ಕಂಡುಬಂದಿದ್ದಾರೆ. ಈ ಕಾರ್ಯಕ್ರಮದ ಅಡಿಯಲ್ಲಿ 208 ಅಥವಾ 9.02 ಪ್ರತಿಶತ ಫಲಾನುಭವಿಗಳು ಆಯ್ಕೆಮಾಡಿದ್ದ ಮುಖ್ಯವಾಗಿ ತುಮಕೂರು, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಿಂದ ಹೈನುಗಾರಿಕೆಯನ್ನು ಒಂದು ಔದ್ಯೋಗಿಕ ಕೌಶಲ್ಯವಾಗಿ ಈ ಮೌಲ್ಯಮಾಪನದ ದೃಷ್ಟಿಯಿಂದ ಸಂಪೂರ್ಣವಾಗಿ ತಪ್ಪಿಸಬಹುದಾಗಿದ್ದ ವಿಷಯವಾಗಿದೆ. ಅದೇ ರೀತಿ ಸಾಮಾನ್ಯ ಅಂಗಡಿಗಳು ಬಹುತೇಕವಾಗಿ ಕಲಬುರಗಿ (11.49 ಪ್ರತಿಶತ), ಬೆಂಗಳೂರು–ನಗರ (10.02 ಪ್ರತಿಶತ) ಮತ್ತು ಮಂಡ್ಯ (10.00 ಪ್ರತಿಶತ)ದಿಂದ ಪಡೆಯಲಾದ ಮಾದರಿಯ ಶೇಕಡಾ 8.20 ರಷ್ಟಿದೆ.**

ಆದರೂ ಸಾಮಾನ್ಯ ಅಂಗಡಿಗಳಿಗೆ ತರಬೇತಿ ಪಡೆದವರಲ್ಲಿ ಹೆಚ್ಚಿನವರು ದೊಡ್ಡ ಕಿರಾಣಿ ಅಂಗಡಿಗಳಲ್ಲಿ ಮಾರಾಟಗಾರರಾಗಿ ಅಥವಾ ಹಂಚಿಕೆ ಹುಡುಗರಾಗಿ ಉದ್ಯೋಗವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದು ಗಮನಾರ್ಹ ಸಂಗತಿ. ಕೇಂದ್ರೀಕೃತ ಸಮೂಹ ಚರ್ಚೆಗಳ ಸಮಯದಲ್ಲಿ ಅವರು ತರಬೇತಿ ಕಾರ್ಯಕ್ರಮಗಳಿಂದ ಕಲಿತದ್ದು ಕಡಿಮೆಯಾದರೂ ಯೋಜನೆ ಅನುಷ್ಠಾನ ನಿಯೋಗಗಳು ಸಂಭಾವ್ಯ ಉದ್ಯೋಗದಾತರೊಂದಿಗೆ ಹೊಂದಿದ್ದ ತಿಳಿವಳಿಕೆ ಒಪ್ಪಂದಗಳು ಅವರು ನಡೆಸಿದ ಉದ್ಯೋಗ ಮೇಳಗಳ ಮೂಲಕ ಉದ್ಯೋಗಗಳನ್ನು ಪಡೆಯಲು ಅನುವು ಮಾಡಿಕೊಟ್ಟಿವೆ ಎಂದು ತಿಳಿದು ಬಂತು. ಬೇರೆ ರೀತಿಯಲಿ ಹೇಳುವುದಾದರೆ ಈ ಕೆಲವು ಕೌಶಲ್ಯಗಳಲ್ಲಿ ಫಲಾನುಭವಿಗಳು ಉದ್ಯೋಗದಾತರೊಂದಿಗೆ ಮಾಡಿದ ಪ್ರಮಾಣಪತ್ರ ಮತ್ತು ವ್ಯವಸ್ಥೆಯೇ ಅವರಿಗೆ ಸಹಾಯ ಮಾಡಿದೆಎಂಬುದು ಸ್ಪಷ್ಟವಾಗಿದೆ[11].

ಕೋಷ್ಟಕ ಸಂಖ್ಯೆ 10.2.6: ಮಾದರಿ ಜಿಲ್ಲೆಗಳಲ್ಲಿ ಪಡೆದ ಕೌಶಲ್ಯ ತರಬೇತಿ

| **ಕೌಶಲ್ಯ ತರಬೇತಿ ಪಡೆಯಲಾಗಿದೆ** | ಜಿಲ್ಲೆ | | | | | | | | ಒಟ್ಟು | |
|---|---|---|---|---|---|---|---|---|---|---|
| | ಬೆಂಗಳೂರು – ನಗರ | ಬೆಳಗಾವಿ | ಧಾರವಾಡ | ಕಲಬುರಗಿ | ಕೊಡಗು | ಮಂಡ್ಯ | ರಾಯಚೂರು | ತುಮಕೂರು | % | ಸಂಖ್ಯೆ |
| ಸಾಮಾನ್ಯ ಅಂಗಡಿ | 10.02 | 5.00 | 8.51 | 11.49 | 2.27 | 10.00 | 3.13 | 6.12 | 8.20 | 189 |
| ಹೊಲಿಗೆ ಕೆಲಸ | 35.18 | 16.88 | 29.44 | 22.99 | 60.39 | 40.91 | 3.13 | 14.29 | 32.19 | 742 |
| ಆಟೋಮೊಬೈಲ್ | 15.35 | 13.75 | 15.15 | 5.06 | 8.44 | 8.18 | 21.88 | 9.18 | 11.80 | 272 |
| ಮೊಬೈಲ್ ಅಂಗಡಿಗಳು | 2.56 | 3.13 | 1.30 | 1.38 | 0.65 | 0.91 | 3.13 | | 1.56 | 36 |
| ವಿದ್ಯುತ್ ಸೇವೆಗಳು | 0.64 | 8.13 | 5.77 | 4.37 | 1.30 | 6.36 | 6.25 | | 3.82 | 88 |
| ಬ್ಯೂಟಿ ಪಾರ್ಲರ್ | 4.90 | 13.75 | 5.48 | 5.52 | 5.84 | 10.00 | 6.25 | 13.27 | 6.55 | 151 |
| ಗಣಕ ಯಂತ್ರಗಳು ಮತ್ತು ಅಂಗಡಿ | 24.95 | 30.63 | 22.66 | 31.72 | 17.86 | 12.73 | 37.50 | 14.29 | 24.12 | 556 |
| ಮರಗೆಲಸ | | | 2.45 | | 1.95 | | | | 1.00 | 23 |

[11] ಈ ವರದಿಯ ಮುಂದಿನ ಭಾಗಗಳಲ್ಲಿ ತಾವು ಪಡೆದ ತರಬೇತಿಯ ಗುಣಮಟ್ಟದ ಬಗ್ಗೆ ಫಲಾನುಭವಿಗಳ ಮಾಪನದ ದತ್ತಾಂಶವನ್ನು ಪ್ರಸ್ತುತಪಡಿಸಲಾಗಿದೆ.

| ಕೌಶಲ್ಯ ತರಬೇತಿ ಪಡೆಯಲಾಗಿದೆ | ಜಿಲ್ಲೆ | | | | | | | | | ಒಟ್ಟು |
|---|---|---|---|---|---|---|---|---|---|---|
| | ಬೆಂಗಳೂರು – ನಗರ | ಬೆಳಗಾವಿ | ಧಾರವಾಡ | ಕಲಬುರಗಿ | ಕೊಡಗು | ಬೀದರ್ | ರಾಯಚೂರು | ಮೈಸೂರು | % | ಸಂಖ್ಯೆ |
| ಹೋಟೆಲ್ | 0.21 | | 0.29 | 0.92 | | 0.91 | 6.25 | | 0.43 | 10 |
| ಹೈನುಗಾರಿಕೆ | 4.26 | 8.75 | 8.51 | 14.02 | | 9.09 | 12.50 | 40.82 | 9.02 | 208 |
| ಇತರೆ[12] | 1.92 | | 0.43 | 2.53 | 1.30 | 0.91 | | 2.04 | 1.30 | 30 |
| ಒಟ್ಟು | **469** | **160** | **693** | **435** | **308** | **110** | **32** | **98** | **2305** | |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | | | | | | |

ಮೂಲ: ಪ್ರಾಥಮಿಕ ದತ್ತಾಂಶ

**ಕೋಷ್ಟಕ 10.2.7: ಆಡಳಿತಾತ್ಮಕ ವಿಭಾಗಗಳಾದ್ಯಂತ ಪಡೆದ ಕೌಶಲ್ಯ ತರಬೇತಿ**

| ಕೌಶಲ್ಯ ತರಬೇತಿ ಪಡೆಯಲಾಗಿದೆ | ವಿಭಾಗ | | | | ಒಟ್ಟು (ಸಂಖ್ಯೆ) |
|---|---|---|---|---|---|
| | ಬೆಂಗಳೂರು | ಬೆಳಗಾವಿ | ಕಲಬುರಗಿ | ಮೈಸೂರು | |
| ಸಾಮಾನ್ಯ ಅಂಗಡಿ | 9.35 | 7.85 | 10.92 | 4.31 | 189 |
| ಹೊಲಿಗೆ ಕೆಲಸ | 31.57 | 27.08 | 21.63 | 55.26 | 742 |
| ಆಟೋಮೊಬೈಲ್ | 14.29 | 14.89 | 6.21 | 8.37 | 272 |
| ಮೊಬೈಲ್ ಅಂಗಡಿಗಳು | 2.12 | 1.64 | 1.50 | 0.72 | 36 |
| ವಿದ್ಯುತ್ ಸೇವೆಗಳು | 0.53 | 6.21 | 4.50 | 2.63 | 88 |
| ಬ್ಯೂಟಿ ಪಾರ್ಲರ್ | 6.35 | 7.03 | 5.57 | 6.94 | 151 |
| ಗಣಕಯಂತ್ರಗಳು &ಅಂಗಡಿ | 23.10 | 24.15 | 32.12 | 16.51 | 556 |
| ಮರಗೆಲಸ | | 1.99 | | 1.44 | 23 |
| ಹೋಟೆಲ್ | 0.18 | 0.23 | 1.28 | 0.24 | |
| ಹೈನುಗಾರಿಕೆ | 10.58 | 8.56 | 13.92 | 2.39 | 208 |
| ಇತರೆ | 1.94 | 0.35 | 2.36 | 1.20 | 30 |
| ಒಟ್ಟು (ಸಂ.) | **567** | **853** | **467** | **418** | **2305** |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ<br>ದಯವಿಟ್ಟು 'ಇತರೆ' ವಿವರಗಳಿಗಾಗಿ ಅಡಿ ಟಿಪ್ಪಣಿ 15 ಅನ್ನು ನೋಡಿ. | | | | | |

ಮೂರು ಕೌಶಲ್ಯಗಳಾದ 'ಸಾಮಾನ್ಯ ಅಂಗಡಿಗಳು' ಆಟೋಮೊಬೈಲ್‌ಗಳು ಮತ್ತು 'ಗಣಕಯಂತ್ರಗಳು' ಈ ಎಂಟು ಜಿಲ್ಲೆಗಳ ಮಾದರಿಯಲ್ಲಿ 44.12 ಪ್ರತಿಶತ ಫಲಾನುಭವಿಗಳನ್ನು ಹೊಂದಿವೆ. ಆದರೆ ಮಹಿಳೆಯರಲ್ಲಿ ಮಾತ್ರ ಹೆಚ್ಚು

[12] 'ಇತರೆ' ಎಂದರೆ ಕೌಶಲ್ಯ ಮತ್ತು ಉದ್ಯೋಗ ಘಟಕದಲ್ಲಿ ಬಳೆ ಅಂಗಡಿಗಳು, ಪುಸ್ತಕ ಮತ್ತು ಲೇಖನ ಸಾಮಗ್ರಿ, ಬ್ರಾಸ್‌ಬ್ಯಾಂಡ್, ಮೇಲ್ಹಾವಣಿ, ಹಿಟ್ಟಿನ ಗಿರಣಿ, ಗ್ಯಾಸ್ ಬೆಸೆಯುವಿಕೆ, ಐಸ್‌ಕ್ರೀಮ್ ಅಂಗಡಿ, ಔಷಧ ಅಂಗಡಿಗಳು, ಪಾನ್ ಅಂಗಡಿ, ರುಬ್ಬಿದ ಕಾಗದ ವಸ್ತುಗಳು, ಫೋಟೋ ಸ್ಟುಡಿಯೋ, ಟೆಂಟ್ ಮನೆ ಮತ್ತು ಛಾಯಾಚಿತ್ರ ಪ್ರತಿ ಮಾಡುವುದು ಇವುಗಳನ್ನು ಒಳಗೊಂಡಿದೆ.

ಜನಪ್ರಿಯವಾಗಿರುವಹೊಲಿಗೆ ಕೆಲಸ 32.19 ಪ್ರತಿಶತ ಫಲಾನುಭವಿಗಳನ್ನು ನಿಯೋಜಿಸಲು ಕಾರಣವಾಗಿದೆ. ಈ ಅಗಾಧ ಕೇಂದ್ರೀಕರಣವು ಗ್ರಾಮೀಣ ಯುವಕರಲ್ಲಿ ಈ ಕ್ಷೇತ್ರಗಳನ್ನು ಪ್ರವೇಶಿಸಲು ಇರುವ ಆದ್ಯತೆ ತಿಳಿಸುತ್ತದೆ ಮತ್ತು ಯೋಜನೆ ಅನುಷ್ಠಾನ ನಿಯೋಗಗಳು ಇತರೆ ಕೌಶಲ್ಯಗಳಿಗಿಂತ ಇವುಗಳ ಮೇಲೆ ಹೆಚ್ಚು ಗಮನ ಹರಿಸುತ್ತವೆ.

ಕೋಷ್ಟಕ 10.2.6 ವಿವಿಧ ಜಿಲ್ಲೆಗಳು ಮತ್ತು ಅಲ್ಲಿಯ ಯುವಕರು ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯಗಳನ್ನು ಆಯ್ಕೆ ಮಾಡಿರುವ ವಿವರ ಚಿತ್ರಿಸುತ್ತದೆ. ಬೆಂಗಳೂರು –ನಗರ ಜಿಲ್ಲೆಯು ಜವಳಿ ವಿನ್ಯಾಸ ಹೊಲಿಗೆ ಕೆಲಸ ಸಂಬಂಧಿತ ಕ್ಷೇತ್ರಗಳನ್ನು ಆಯ್ಕೆ ಮಾಡಿದವರಲ್ಲಿ ಹೆಚ್ಚಿನ ಪಾಲನ್ನು (31.57 ಪ್ರತಿಶತ) ಹೊಂದಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಗಾರ್ಮೆಂಟ್ಸ್ ವಲಯದ ಪ್ರಾಬಲ್ಯವನ್ನು ಗಮನದಲ್ಲಿಟ್ಟುಕೊಂಡು, ಈ ಕ್ಷೇತ್ರವನ್ನು ಆಯ್ಕೆ ಮಾಡಲು ವ್ಯಕ್ತಿಗಳನ್ನು ಉತ್ತೇಜಿಸಲು ಜಿಲ್ಲೆ ಒಲವು ತೋರಿದೆ. ನಿರೀಕ್ಷಿಸಿದಂತೆ ಇದು ಹೆಚ್ಚಾಗಿ ಮಹಿಳೆಯರ ಆಯ್ಕೆಯೂ ಆಗಿದೆ. ಇದರ ನಂತರ ಗಣಕಯಂತ್ರಗಳ ಕೌಶಲ್ಯವನ್ನು 556 ಫಲಾನುಭವಿಗಳು ಆಯ್ಕೆ ಮಾಡಿದ್ದಾರೆ. ಇದು ಎಂಎಸ್ ವರ್ಡ್, ಎಕ್ಸೆಲ್ ಮತ್ತು ಟ್ಯಾಲಿಯಂತಹ ತಂತ್ರಾಂಶ ಬಳಸುವ ಕೌಶಲ್ಯವನ್ನು ಒಳಗೊಂಡಿದೆ. ಈ ನಿಟ್ಟಿನಲ್ಲಿ ನಗರ ಪ್ರದೇಶಗಳಲ್ಲಿ ಮತ್ತು ಸುತ್ತಮುತ್ತಲಿನ ಗಣಕಯಂತ್ರ ನಿರ್ವಾಹಕರುಗಳು ದತ್ತಾಂಶ ನಮೂದಕರುಗಳಿಗೆ ಭಾರಿ ಬೇಡಿಕೆಯನ್ನು ಪರಿಗಣಿಸಿ, ಯುವಕರು ಈ ಕೌಶಲ್ಯವನ್ನು ಬಯಸುತ್ತಾರೆ. ವಾಸ್ತವವಾಗಿ ಕೌಶಲ್ಯದ ಕ್ಷೇತ್ರವಾಗಿ ಗಣಕಯಂತ್ರಗಳು ಎಲ್ಲಾ ಜಿಲ್ಲೆಗಳಲ್ಲಿ ಸಾಕಷ್ಟು ಜನಪ್ರಿಯವಾಗಿವೆ. ರಾಯಚೂರು (37.50 ಪ್ರತಿಶತ), ಕಲಬುರಗಿ (31.72 ಪ್ರತಿಶತ), ಬೆಳಗಾವಿ (30.63 ಪ್ರತಿಶತ), ಮತ್ತು ಬೆಂಗಳೂರು–ನಗರ (24.95 ಪ್ರತಿಶತ). ಆದರೆ ಮಂಡ್ಯ ಮತ್ತು ತುಮಕೂರು ಗಣಕಯಂತ್ರ ತರಬೇತಿಗೆಅತಿಕಡಿಮೆ ಪಾಲನ್ನು ಹೊಂದಿವೆ ಎಂಬುದು ಆಶ್ಚರ್ಯಕರ, ಒಂದೆರಡು ಕೇಂದ್ರೀಕೃತ ಸಮೂಹ ಚರ್ಚೆಗಳಲ್ಲಿ ಈ ಕೌಶಲ್ಯಕ್ಕೆ ಕಡಿಮೆ ಬೇಡಿಕೆ ಏಕೆ ಇತ್ತು ಎಂಬುದಕ್ಕೆ ವಿವರಣೆ ಕೇಳಿದಾಗ ಕೆಲವು ಆಸಕ್ತಿದಾಯಕ ಪ್ರತಿಕ್ರಿಯೆಗಳು ಬಂದಿವೆ.

- ಸಾಮಾನ್ಯವಾಗಿ ಅಭ್ಯರ್ಥಿಗಳಿಗೆ ಗಣಿತಅಥವಾ ವಿಜ್ಞಾನದ ಅಭಿರುಚಿಯ ಕೊರತೆಯಿದೆ. ಆ ಕ್ಷೇತ್ರಗಳಲ್ಲಿ ಉತ್ತಮರಾಗಿದ್ದವರು ಈಗಾಗಲೇ ಕೌಶಲ್ಯ ತರಬೇತಿ ಅಥವಾ ಉದ್ಯೋಗಕ್ಕಾಗಿ ಇಲ್ಲಿಗೆ ಬರುವುದಕ್ಕಿಂತ ಆ ಕ್ಷೇತ್ರದಲ್ಲಿ ಉನ್ನತ ಶಿಕ್ಷಣಕ್ಕಾಗಿ ಹೋಗಿದ್ದಾರೆ.
- ಅವರಲ್ಲಿ ಅನೇಕರಿಗೆ ತಮ್ಮ ಗ್ರಾಮೀಣ ಹಿನ್ನೆಲೆಯನ್ನು ಗಮನಿಸಿದರೆ ಉದ್ಯೋಗದ ಭವಿಷ್ಯದ ಬಗ್ಗೆ ಖಚಿತತೆ ಇರಲಿಲ್ಲ.
- ಮಹಿಳೆಯರಿಗೆ ಸ್ಪಷ್ಟವಾದ ಲಿಂಗ ಪಾತ್ರದ ಅರಿವು ಇದೆ. ಯೋಜನೆ ಅನುಷ್ಠಾನ ನಿಯೋಗ ಅವರನ್ನು ಹೊಲಿಗೆ ಕೆಲಸ ಉಡುಪು ತಯಾರಿಕೆ ಅಥವಾ ಉಡುಪು ವಿನ್ಯಾಸಗಳಲ್ಲಿ ಕೆಲಸ ಮಾಡಲು ಬಯಸುತ್ತದೆ. ಆದ್ದರಿಂದ ಗಣಕಯಂತ್ರಗಳಿಗಿಂತ ಅದಕ್ಕೆ ಆದ್ಯತೆ.

### 10.2.5 ಕೌಶಲ್ಯಗಳ ಆಯ್ಕೆಯಲ್ಲಿ ಸಾಮಾಜಿಕ ಹಿನ್ನೆಲೆಯ ಪಾತ್ರ:

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಘಟಕದ ಅಡಿಯಲ್ಲಿ ಯುವಜನರಿಗೆ ತರಬೇತಿ ನೀಡಿದ ಹತ್ತು ವಿಭಿನ್ನ ವಲಯಗಳನ್ನು ಗುರುತಿಸಿದ್ದರೂ ಯಾರು ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು ಸಹ ಆಸಕ್ತಿದಾಯಕವಾಗಿದೆ. ಈ ಅಧ್ಯಯನವು ಫಲಾನುಭವಿಗಳ ಸಾಮಾಜಿಕ ಹಿನ್ನೆಲೆ ವಯಸ್ಸು,

ಲಿಂಗ ಮತ್ತು ಶೈಕ್ಷಣಿಕ ಹಿನ್ನೆಲೆಯಿಂದ ಇದನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಿದೆ. ಈ ವಿಷಯದಲ್ಲಿ ಫಲಿತಾಂಶಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ ಸಂಖ್ಯೆ 10.2.8: ಪಡೆದ ಕೌಶಲ್ಯ ತರಬೇತಿ ಮತ್ತು ಫಲಾನುಭವಿಗಳ ಸಾಮಾಜಿಕ ಹಿನ್ನೆಲೆ**

| **ಕೌಶಲ್ಯ ತರಬೇತಿ ಪಡೆಯಲಾಗಿದೆ** | **ಜಾತಿ ವರ್ಗ** | | | | ಒಟ್ಟು | |
|---|---|---|---|---|---|---|
| | **ಸಾಮಾನ್ಯ** | **ಹಿಂದುಳಿದವರು** | **ಎಸ್.ಸಿ.** | **ಎಸ್.ಟಿ.** | **%** | **ಒಟ್ಟು** |
| ಸಾಮಾನ್ಯ ಅಂಗಡಿ | 8.07 | 10.78 | 6.23 | 8.92 | 8.20 | 189 |
| ಹೊಲಿಗೆ ಕೆಲಸ | 38.26 | 18.32 | 33.16 | 27.39 | 32.19 | 742 |
| ಆಟೋಮೊಬೈಲ್ | 10.37 | 11.85 | 12.29 | 19.75 | 11.80 | 272 |
| ಮೊಬೈಲ್ ಅಂಗಡಿಗಳು | 1.19 | 2.37 | 1.35 | 2.55 | 1.56 | 36 |
| ವಿದ್ಯುತ್ ಸೇವೆಗಳು | 4.04 | 4.96 | 2.36 | 4.46 | 3.82 | 88 |
| ಬ್ಯೂಟಿ ಪಾರ್ಲರ್ | 8.17 | 3.45 | 6.73 | 3.82 | 6.55 | 151 |
| ಗಣಕಯಂತ್ರಗಳು &ಅಂಗಡಿ | 21.10 | 31.90 | 25.76 | 15.92 | 24.12 | 556 |
| ಮರಗೆಲಸ | 0.55 | 1.51 | 0.84 | 3.18 | 1.00 | 23 |
| ಹೋಟೆಲ್ | 0.37 | 0.43 | 0.67 | | 0.43 | 10 |
| ಹೈನುಗಾರಿಕೆ | 6.42 | 13.15 | 9.76 | 12.10 | 9.02 | 208 |
| ಇತರೆ | 1.47 | 1.29 | 0.84 | 1.91 | 1.30 | 30 |
| ಒಟ್ಟು % | 47.29 | 20.13 | 25.77 | 6.81 | **2305** | |
| ಸಂಖ್ಯೆ | 1090 | 464 | 594 | 157 | | |

ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ
'ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ..

ಮೂಲ: ಪ್ರಾಥಮಿಕ ದತ್ತಾಂಶ

**ಜಾತಿ ಹಿನ್ನೆಲೆ**: ಕೌಶಲ್ಯಗಳ ಆಯ್ಕೆ ಗಮನಿಸಿದರೆ ಜಾತಿ ಹಿನ್ನೆಲೆಯನ್ನು ಲೆಕ್ಕಿಸದೆ ಹೊಲಿಗೆ ಕೆಲಸ, ಗಣಕಯಂತ್ರಗಳು ಮತ್ತು ಹೈನುಗಾರಿಕೆಗಳು ಹೆಚ್ಚು ಆದ್ಯತೆಯ ಕೌಶಲ್ಯಗಳಾಗಿವೆ. ಸಾಮಾನ್ಯ ವರ್ಗದ 66 ಪ್ರತಿಶತ, ಹಿಂದುಳಿದ 62 ಪ್ರತಿಶತ, ಎಸ್‌ಸಿಗಳ 68 ಪ್ರತಿಶತ ಮತ್ತು ಎಸ್‌ಟಿಗಳಲ್ಲಿ 55 ಪ್ರತಿಶತ ಈ ಮೂರು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕುತೂಹಲಕಾರಿಯಾಗಿ ಬ್ಯೂಟಿ ಪಾರ್ಲರ್‌ದ ಆಯ್ಕೆಯು ಹಿಂದುಳಿದ, ಎಸ್‌ಸಿ ಅಥವಾ ಎಸ್‌ಟಿಗಿಂತ ಸಾಮಾನ್ಯ ವರ್ಗದಲ್ಲಿ ತುಲನಾತ್ಮಕವಾಗಿ ಹೆಚ್ಚು ಕಂಡುಬಂದಿದೆ. ಔದ್ಯೋಗಿಕ ಕೌಶಲ್ಯಗಳಿಗೆ ಅವರ ಆದ್ಯತೆಗಳಿಂದ ಗ್ರಾಮೀಣ ಯುವಕರಲ್ಲಿತಮ್ಮ ಹಿಂದಿನ ತಲೆಮಾರುಗಳ ಕ್ಷೇತ್ರಗಳಿಗಿಂತ ಬೇರೆ ಕ್ಷೇತ್ರಗಳಿಗೆ ಪ್ರವೇಶಿಸುವ ಆಕಾಂಕ್ಷೆ ಹೆಚ್ಚುತ್ತಿದೆ ಎಂಬುದನ್ನು ಗಮನಿಸಬಹುದು.

**ಲಿಂಗ ಹಿನ್ನೆಲೆ:** ಹಿಂದಿನ ಚರ್ಚೆಗಳಿಂದ ಫಲಾನುಭವಿಗಳಲ್ಲಿ ಸುಮಾರು 40 ಪ್ರತಿಶತ ಮಹಿಳೆಯರು ಇದ್ದಾರೆ ಎಂದು ತಿಳಿದು ಬರುತ್ತದೆ. ಕೌಶಲ್ಯ ಮತ್ತು ಉದ್ಯೋಗ ಆಯ್ಕೆಯಲ್ಲಿಲಿಂಗ ಆಯಾಮ ಗಮನಿಸಿದರೆ, ಇಲ್ಲಿಯವರೆಗೆ ಮುಖ್ಯವಾಗಿ ಮಹಿಳೆಯರೊಂದಿಗೆ ಸಂಬಂಧ ಹೊಂದಿರುವ ಕೆಲವು ಔದ್ಯೋಗಿಕ ಕೌಶಲ್ಯಗಳು ಈ ಕಾರ್ಯಕ್ರಮದ

ಮೂಲಕವೂ ಅವರ ಆಯ್ಕೆಯಾಗಿ ಮುಂದುವರೆದಿವೆ. ಹೀಗಾಗಿ 50 ಪ್ರತಿಶತಕ್ಕೂ ಹೆಚ್ಚು ಮಹಿಳೆಯರು ಹೊಲಿಗೆ ಕೆಲಸ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಅಧ್ಯಯನದಲ್ಲಿ ಕೋಷ್ಟಕ 10.2.9 ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಬ್ಯೂಟಿ ಪಾರ್ಲರ್ (73 ಪ್ರತಿಶತ), ಹೊಲಿಗೆ ಕೆಲಸ (62 ಪ್ರತಿಶತ), ಮತ್ತು ಹೈನುಗಾರಿಕೆ(46 ಪ್ರತಿಶತ) ಯಲ್ಲಿ ಕಂಡುಬಂದಿದ್ದಾರೆ. 100 ಪ್ರತಿಶತ ಪುರುಷ ಫಲಾನುಭವಿಗಳು ಮರಗೆಲಸದಲ್ಲಿ ಕಂಡು ಬರುತ್ತಾರೆ. ಇಲ್ಲಿಯವರೆಗೆ ಪುರುಷರಿಗಾಗಿ ಪರಿಗಣಿಸಲಾದ ಕೌಶಲ್ಯಗಳನ್ನು ಪಡೆಯುವ ಮೂಲಕ ಮಹಿಳೆಯರು ಪ್ರವೇಶ ಮಾಡಿದ ಇತರ ಕ್ಷೇತ್ರಗಳೆಂದರೆ ಗಣಕಯಂತ್ರಗಳು (32 ಪ್ರತಿಶತ), ಹೋಟೆಲ್ (30 ಪ್ರತಿಶತ), ಸಾಮಾನ್ಯ ಅಂಗಡಿ (21 ಪ್ರತಿಶತ). ಸುಮಾರು 17 ಪ್ರತಿಶತದಷ್ಟು ಮಂದಿ ಮೊಬೈಲ್ ಅಂಗಡಿಗಳನ್ನು ತೆರೆದಿದ್ದಾರೆ. ಇದು ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯ ನಿಧಾನ ಮತ್ತು ಮೌನ ಬದಲಾವಣೆಯ ಆರಂಭವನ್ನು ಸೂಚಿಸುತ್ತದೆ. ಆದರೂ ತರಬೇತಿ ಸಂಸ್ಥೆಗಳು ಲಿಂಗ ಆಧಾರಿತ ಕೌಶಲ್ಯಗಳ ಮೇಲೆ ಹೆಚ್ಚು ಗಮನ ಹರಿಸಬೇಕು ಮತ್ತು ಕೌಶಲ್ಯ ಆಯ್ಕೆಯಲ್ಲಿ ಏಕತಾನ್ಮತೆಯನ್ನು ಮುರಿಯಬೇಕು ಎಂದು ಸೂಚಿಸಲು ಈ ಮೌಲ್ಯಮಾಪನವು ಸಾಕಷ್ಟು ಪುರಾವೆಗಳನ್ನು ಕಂಡುಕೊಳ್ಳುತ್ತದೆ.

**ಕೋಷ್ಟಕ ಸಂಖ್ಯೆ 10.2.9: ಲಿಂಗ ಮತ್ತು ಪಡೆದ ಕೌಶಲ್ಯ ತರಬೇತಿ**

| ಕೌಶಲ್ಯ ತರಬೇತಿ ಪಡೆಯಲಾಗಿದೆ | ಒಟ್ಟು ಫಲಾನುಭವಿಗಳಲ್ಲಿ ಕೌಶಲ್ಯಗಳಾದ್ಯಂತ ಲಿಂಗ ಹಂಚಿಕೆ | | ಒಟ್ಟು ಶೇ. | | ಒಟ್ಟು |
|---|---|---|---|---|---|
| | ಪುರುಷ | ಹೆಣ್ಣು | ಪುರುಷ | ಹೆಣ್ಣು | |
| ಸಾಮಾನ್ಯ ಅಂಗಡಿ | 10.68 | 4.46 | 78.31 | 21.69 | 189 |
| ಹೊಲಿಗೆ ಕೆಲಸ | 20.35 | 50.05 | 38.01 | 61.99 | 742 |
| ಆಟೋಮೊಬೈಲ್ | 18.90 | 1.09 | 96.32 | 3.68 | 272 |
| ಮೊಬೈಲ್ ಅಂಗಡಿಗಳು | 2.16 | 0.65 | 83.33 | 16.67 | 36 |
| ವಿದ್ಯುತ್ ಸೇವೆಗಳು | 5.84 | 0.76 | 92.05 | 7.95 | 88 |
| ಬ್ಯೂಟಿ ಪಾರ್ಲರ್ | 2.89 | 12.08 | 26.49 | 73.51 | 151 |
| ಗಣಕಯಂತ್ರಗಳು &ಅಂಗಡಿ | 27.06 | 19.70 | 67.45 | 32.55 | 556 |
| ಮರಗೆಲಸ | 1.66 | | 100.00 | | 23 |
| ಹೋಟೆಲ್ | 0.51 | 0.33 | 70.00 | 30.00 | 10 |
| ಹೈನುಗಾರಿಕೆ | 8.01 | 10.55 | 53.37 | 46.63 | 208 |
| ಇತರೆ | 1.95 | 0.33 | 90.00 | 10.00 | 30 |
| ಒಟ್ಟು | 1386 | 919 | 60.13 | 39.87 | 2305 |

ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ
ಇತರೆ ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ.

ಮೂಲ: ಪ್ರಾಥಮಿಕ ದತ್ತಾಂಶ

| ಕೋಷ್ಟಕ ಸಂಖ್ಯೆ 10.2.10: ವಯಸ್ಸು ಮತ್ತು ಪಡೆದ ಕೌಶಲ್ಯ ತರಬೇತಿ | | | | |
|---|---|---|---|---|
| ಕೌಶಲ್ಯ ತರಬೇತಿ ಪಡೆಯಲಾಗಿದೆ | ವಯಸ್ಸು (ಗುಂಪು ಮಾಡಲಾಗಿದೆ) | | | ಒಟ್ಟು |
| | 18–25 ವರ್ಷ | 25–30 ವರ್ಷ | 30–35 ವರ್ಷ | |
| ಸಾಮಾನ್ಯ ಅಂಗಡಿ | 32.28 | 49.74 | 17.99 | 189 |
| ಹೊಲಿಗೆ ಕೆಲಸ | 42.45 | 49.06 | 8.49 | 742 |
| ಆಟೋಮೊಬೈಲ್ | 40.81 | 48.16 | 11.03 | 272 |
| ಮೊಬೈಲ್ ಅಂಗಡಿಗಳು | 27.78 | 55.56 | 16.67 | 36 |
| ವಿದ್ಯುತ್ ಸೇವೆಗಳು | 31.82 | 50.00 | 18.18 | 88 |
| ಬ್ಯೂಟಿ ಪಾರ್ಲರ್ | 33.11 | 56.29 | 10.60 | 151 |
| ಗಣಕಯಂತ್ರಗಳು & ಅಂಗಡಿ | 35.07 | 53.06 | 11.87 | 556 |
| ಮರಗೆಲಸ | 52.17 | 47.83 | | 23 |
| ಹೋಟೆಲ್ | 50.00 | 30.00 | 20.00 | 10 |
| ಹೈನುಗಾರಿಕೆ | 43.75 | 40.87 | 15.38 | 208 |
| ಇತರೆ | 43.33 | 53.33 | 3.33 | 30 |
| ಒಟ್ಟು | 38.66 | 49.80 | 11.54 | 2305 |
| | 891 | 1148 | 266 | |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ ಇತರೆ ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ. | | | | |

ಮೂಲ: ಪ್ರಾಥಮಿಕ ದತ್ತಾಂಶ

**ತರಬೇತಿದಾರರ ವಯಸ್ಸಿನ ಹಿನ್ನೆಲೆ:** ಕೋಷ್ಟಕ 10.2.10 ಕಾರ್ಯಕ್ರಮಕ್ಕೆ ಅರ್ಹರಾಗಲು ಒಬ್ಬರು 18 ರಿಂದ 35 ವರ್ಷಗಳ ನಡುವೆಇರಬೇಕು ಎಂಬ ವಿನ್ಯಾಸವನ್ನು ಸೂಚಿಸುತ್ತದೆ. ಫಲಾನುಭವಿಗಳ ಮಾದರಿಯನ್ನು ವಿಶ್ಲೇಷಣೆಯಲ್ಲಿ ಸರಳತೆಗಾಗಿ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. 25–30 ವರ್ಷ ವಯಸ್ಸಿನ ಫಲಾನುಭವಿಗಳ ಸಾಂದ್ರತೆಯನ್ನು ಗಮನಿಸಿದರೆ, ಕೋಷ್ಟಕ 10.2.10 ರಲ್ಲಿ ಕಂಡುಬರುವಂತೆ ಪ್ರತಿಯೊಂದು ಔದ್ಯೋಗಿಕ ಕೌಶಲ್ಯ ವಿಭಾಗಗಳಲ್ಲಿ ಈ ವಯಸ್ಸಿನ ವ್ಯಕ್ತಿಗಳು ಹೆಚ್ಚು ಗಮನಾರ್ಹವಾಗಿದ್ದಾರೆ. ಆದರೂ ಪ್ರತಿ ವಯಸ್ಸಿನ ಗುಂಪು ಮತ್ತು ಫಲಾನುಭವಿಗಳು ಮಾಡಿದ ಆಯ್ಕೆಗಳ ಶೇಕಡಾ ವಿತರಣೆಯನ್ನು ಹೋಲಿಸಿದಾಗ 18–30 ವರ್ಷಗಳ ಯೌವ್ವನದ ಗುಂಪಿನಲ್ಲಿ ಆರೋಹಣ ಕ್ರಮದಲ್ಲಿ ಆಟೋಮೊಬೈಲ್, ಗಣಕಯಂತ್ರಗಳು ಮತ್ತು ಹೊಲಿಗೆ ಕೆಲಸ ಹೆಚ್ಚು ಆದ್ಯತೆಯ ಆಯ್ಕೆಯಾಗಿದೆ ಎಂದು ಕಂಡುಬಂದಿದೆ. ಹೊಲಿಗೆ ಕೆಲಸ ಗಮನಾರ್ಹ ಕ್ಷೇತ್ರವಾಗಿದ್ದು ಹೆಚ್ಚಿನ ಫಲಾನುಭವಿಗಳು ಮಹಿಳೆಯರು ಎಂದು ಹಿಂದಿನ ಚರ್ಚೆಯಿಂದ ತಿಳಿದುಬಂದಿದೆ. ಹೆಣ್ಣು ಮಕ್ಕಳನ್ನು ಹೊರಗೆ ಉನ್ನತ ಶಿಕ್ಷಣಕ್ಕಾಗಿ ಕಳುಹಿಸಲು ಶಕ್ತರಲ್ಲದ ಅಥವಾ ಕಳುಹಿಸಲು ಬಯಸದ ಯುವತಿಯರು ಮತ್ತು ಅವರ ಕುಟುಂಬಗಳಿಬ್ಬರೂ ಮದುವೆಯಾಗಿ ಹೋಗಲು ಅಥವಾ ಸ್ಥಳೀಯವಾಗಿ ಕೆಲಸ ಮಾಡಲು ಉತ್ಸುಕರಾಗಿದ್ದಾರೆ. ಹೊಲಿಗೆ ಕೆಲಸ ನೆರೆಯ ಪಟ್ಟಣಗಳು ಮತ್ತು ನಗರಗಳಲ್ಲಿನ ಉಡುಪು ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಅವಕಾಶ ಒದಗಿಸುತ್ತದೆ. ಆದ್ದರಿಂದ ಇದು ಈ ವಯಸ್ಸಿನ ಹೆಚ್ಚಿನ ಸಂಖ್ಯೆಯ ಯುವತಿಯರನ್ನು ಆಕರ್ಷಿಸುತ್ತದೆ.

| ಕೋಷ್ಟಕ 10.2.11: ಪಡೆದ ಕೌಶಲ್ಯ ತರಬೇತಿ ಮತ್ತು ಶೈಕ್ಷಣಿಕ ಅರ್ಹತೆ | | | | | |
|---|---|---|---|---|---|
| ಕೌಶಲ್ಯ ತರಬೇತಿ ಪಡೆಯಲಾಗಿದೆ | ಶೈಕ್ಷಣಿಕ ಅರ್ಹತೆ | | | | ಒಟ್ಟು (ಸಂ.) |
| | 8ನೇ ತರಗತಿ | ಎಸ್.ಎಸ್.ಎಲ್.ಸಿ ಅಥವಾ ಕೆಳಗೆ | ಪಿ.ಯು.ಸಿ. | ಪದವಿ ಅಥವಾ ಅದಕ್ಕಿಂತ ಹೆಚ್ಚಿನ | |
| ಸಾಮಾನ್ಯ ಅಂಗಡಿ | 7.56 | 189 | 7.40 | 6.22 | 189 |
| ಹೊಲಿಗೆ ಕೆಲಸ | 40.12 | 742 | 32.70 | 21.53 | 742 |
| ಆಟೋಮೊಬೈಲ್ | 19.77 | 272 | 11.53 | 6.70 | 272 |
| ಮೊಬೈಲ್ ಅಂಗಡಿಗಳು | 1.74 | 36 | 0.86 | 1.91 | 36 |
| ವಿದ್ಯುತ್ ಸೇವೆಗಳು | 1.74 | 88 | 3.27 | 1.44 | 88 |
| ಬ್ಯೂಟಿ ಪಾರ್ಲರ್ | 4.65 | 151 | 8.26 | 5.26 | 151 |
| ಗಣಕಯಂತ್ರಗಳು & ಅಂಗಡಿ | 14.53 | 556 | 23.41 | 43.06 | 556 |
| ಮರಗೆಲಸ | | 23 | 1.38 | | 23 |
| ಹೋಟೆಲ್ | 0.58 | 10 | 0.34 | 0.48 | 10 |
| ಹೈನುಗಾರಿಕೆ | 6.40 | 208 | 9.64 | 11.96 | 208 |
| ಇತರೆ | 2.91 | 1.12 | 1.20 | 1.44 | 30 |
| ಒಟ್ಟು (%) | 7.46 | 58.26 | 25.21 | 9.07 | 2305 |
| ಸಂಖ್ಯೆ | 172 | 1343 | 581 | 209 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ 'ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ. | | | | | |

ಮೂಲ: ಪ್ರಾಥಮಿಕ ದತ್ತಾಂಶ

**ಶೈಕ್ಷಣಿಕ ಹಿನ್ನೆಲೆ:** ಕೋಷ್ಟಕ 10.2.11ರ ಪ್ರಕಾರ, ತರಬೇತಿದಾರರು ಮತ್ತು ಉದ್ಯೋಗ ಆಕಾಂಕ್ಷಿಗಳ ಶೈಕ್ಷಣಿಕ ಅರ್ಹತೆಗಳನ್ನು ಗಮನಿಸಿದರೆ ಸುಮಾರು 58.26 ಪ್ರತಿಶತ ಫಲಾನುಭವಿಗಳು ಎಸ್ಎಸ್ಎಲ್ಸಿ ಮತ್ತು ಅದಕ್ಕಿಂತ ಕಡಿಮೆ ಶಿಕ್ಷಣವನ್ನೂ, 25.21 ಪ್ರತಿಶತ ಫಲಾನುಭವಿಗಳು ಪಿಯುಸಿವರೆಗೆ ಶಿಕ್ಷಣ ಪಡೆದಿದ್ದಾರೆ. ಪದವಿ ಪಡೆದವರು ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದ ಫಲಾನುಭವಿಗಳ ಪಾಲು ಜಿಲ್ಲೆಗಳಾದ್ಯಂತ ತುಲನಾತ್ಮಕವಾಗಿ ಕಡಿಮೆ (9.07 ಪ್ರತಿಶತ) ಇದೆ. ಹೊಲಿಗೆ ಕೆಲಸದಲ್ಲಿ 40.12 ಪ್ರತಿಶತ ಫಲಾನುಭವಿಗಳು 8ನೇ ತರಗತಿಯವರೆಗೆ ಶಿಕ್ಷಣ ಪಡೆದಿದ್ದಾರೆ.

ಪದವಿ ಮತ್ತು ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದ43.06 ಪ್ರತಿಶತ ಫಲಾನುಭವಿಗಳು ಗಣಕಯಂತ್ರ ಮತ್ತು ಅಂಗಡಿಯಲ್ಲಿ ತರಬೇತಿ ಪಡೆಯಲು ಆಯ್ಕೆ ಮಾಡಿಕೊಂಡಿದ್ದಾರೆ. ಮರಗೆಲಸ ಮತ್ತು ಹೋಟೆಲ್ ಉದ್ಯಮಯಾವುದೇ ಶಿಕ್ಷಣಾರ್ಹತೆ ಪಡೆದ ಫಲಾನುಭವಿಗಳು ಆಯ್ಕೆಯಾಗಿದ್ದಾರೆ.

ಸುಮಾರು 14.5 ಪ್ರತಿಶತ 8ನೇ ತರಗತಿಯವರೆಗೆ ಶಿಕ್ಷಣ ಹೊಂದಿರುವ ಹಾಗೂ ಎಸ್ಎಸ್ಎಲ್ಸಿ ಮತ್ತು ಅದಕ್ಕಿಂತ ಕಡಿಮೆ ಶಿಕ್ಷಣ ಹೊಂದಿರುವ 22.71 ಪ್ರತಿಶತ ಜನರು ಗಣಕಯಂತ್ರ ಅಂಗಡಿ ಸಂಬಂಧಿತ ಕೌಶಲ್ಯಗಳನ್ನು ಆಯ್ಕೆ ಮಾಡಿದ್ದಾರೆ. ಎರಡನೆಯ ಮಟ್ಟದ ಶೈಕ್ಷಣಿಕ ಅರ್ಹತೆಗಳು ಸಮರ್ಪಕವಾಗಿದ್ದರು ಯೋಜನೆ ಅನುಷ್ಠಾನ ನಿಯೋಗಗಳು ಅಂತಹ ಆಕಾಂಕ್ಷಿಗಳಿಗೆ ಹೆಚ್ಚು ಸೂಕ್ತವಾದಔದ್ಯೋಗಿಕ ಕೌಶಲ್ಯಗಳಿಗೆ ಮಾರ್ಗದರ್ಶನ

ನೀಡಬೇಕಾಗುತ್ತದೆ. 8ನೇ ತರಗತಿಯವರೆಗೆ ಶಿಕ್ಷಣ ಹೊಂದಿರುವವರನ್ನು ಆಯ್ಕೆ ಮಾಡಿದ ಔದ್ಯೋಗಿಕ ಕೌಶಲ್ಯಗಳಿಗೆ ಸಹ ಅವರು ಹೊಂದಿದ್ದಕ್ಕಿಂತ ಹೆಚ್ಚಿನ ಕಲಿಕೆಯ ಅಗತ್ಯವಿಲ್ಲದಿರಬಹುದು ಹೊಲಿಗೆ ಕೆಲಸ ಮತ್ತು ಆಟೋಮೊಬೈಲ್ ಒಟ್ಟಿಗೆ 43.99 ಪ್ರತಿಶತವನ್ನು ಹೊಂದಿತ್ತು.

ಈ ಮೌಲ್ಯಮಾಪನವು ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಕೌಶಲ್ಯ ಮತ್ತು ಉದ್ಯೋಗ ಬಯಸುವ ಗ್ರಾಮೀಣ ಯುವಕರ ಶೈಕ್ಷಣಿಕ ಮಟ್ಟಗಳ ಬಗ್ಗೆ ಮುಖ್ಯ ಅವಲೋಕನವೆಂದರೆ ಅವರುತಮ್ಮ ಶೈಕ್ಷಣಿಕ ಹಿನ್ನೆಲೆಗೆ ಅನುಗುಣವಾಗಿ ಕೌಶಲ್ಯ ಪಡೆಯಲು ಸೂಕ್ತ ಕ್ಷೇತ್ರವನ್ನು ಆಯ್ಕೆ ಮಾಡುವುದು. ಆದರೂ ಫಲಾನುಭವಿಗಳನ್ನು ಗುರುತಿಸುವುದು ಅವರಿಗೆ ಸಲಹೆ ನೀಡುವುದು ಮತ್ತು ಅವರಆಯ್ಕೆಯ ಕ್ಷೇತ್ರಗಳಲ್ಲಿ ತರಬೇತಿಯನ್ನು ನೀಡುವುದು, ಜೀವನೋಪಾಯದ ಆಯ್ಕೆಗಳನ್ನು ಮುಂದುವರಿಸಲು ಯುವಕರಿಗೆ ಯಾವುದು ಸೂಕ್ತ ಎಂದು ಮಾರ್ಗದರ್ಶನ ನೀಡುವುದು ಇವುಗಳಲ್ಲಿ ತಮ್ಮ ವೃತ್ತಿಪರ ತೀರ್ಪನ್ನು ಚಲಾಯಿಸುವ ಜವಾಬ್ದಾರಿಯನ್ನು ಹೊಂದಿರುವ ಯೋಜನಾ ಅನುಷ್ಠಾನ ನಿಯೋಗಗಳ ಅಗತ್ಯವಿದೆ. ಹೀಗಾಗಿ 8 ನೇ ತರಗತಿಯವರೆಗೆ ಅಥವಾ ಅದಕ್ಕಿಂತ ಕಡಿಮೆ ಶಿಕ್ಷಣ ಹೊಂದಿರುವ ಯುವಕರಿಗೆ ಗಣಕಯಂತ್ರ ಕೌಶಲ್ಯಗಳನ್ನು ಒದಗಿಸುವುದು ಅಥವಾ ವಿದ್ಯುತ್ ಸೇವೆಗಳಂತಹ ಕ್ಷೇತ್ರಗಳನ್ನು ಒದಗಿಸುವುದು ಸೂಕ್ತ ಉದ್ಯೋಗವನ್ನು ನೀಡುವುದು ಕಷ್ಟ ಮಾತ್ರವಲ್ಲ ದೀರ್ಘಾವಧಿಯಲ್ಲಿ ನಿರಂತರ ವೃತ್ತಿ ಜೀವನದ ಹಾದಿಗೆ ಕೊಡುಗೆ ನೀಡದಿರಬಹುದು ಮತ್ತು ಅವರನ್ನು ಸುರಕ್ಷಿತವಲ್ಲದ ಮತ್ತು ಸಮರ್ಪಕವಲ್ಲದ ಸಂಬಳದ ಅಸಂಘಟಿತ ಉದ್ಯೋಗಗಳಿಗೆ ತಳ್ಳಬಹುದು.

**10.2.6 ಕೌಶಲ್ಯ ತರಬೇತಿಗೆ ಮೊದಲು ಉದ್ಯೋಗದ ಸ್ಥಿತಿಗತಿ;**

ಈ ಮೌಲ್ಯಮಾಪನದ ವಿಭಿನ್ನ ಉದ್ದೇಶಗಳು ಮತ್ತು ಸಂಶೋಧನಾ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವ ಗುರಿಗಳಲ್ಲಿ ಗ್ರಾಮೀಣ ಯುವಕರ ಕೌಶಲ್ಯ ಮತ್ತು ಉದ್ಯೋಗಕ್ಕಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ರೂಪಿಸಲಾದ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಯೋಜನಾ ಅನುಷ್ಠಾನ ಸಂಸ್ಥೆಗಳು ಅನುಸರಿಸಿವೆಯೇ ಎಂದು ನಿರ್ಣಯಿಸುವುದು ಒಂದಾಗಿದೆ. ಕಾರ್ಯಕ್ರಮಕ್ಕೆ ಆಯ್ಕೆ ಮಾಡಿದ ಫಲಾನುಭವಿಗಳು ನಿರುದ್ಯೋಗಿಗಳಾಗಿರಬೇಕು ಮತ್ತು 18 ರಿಂದ 35 ವರ್ಷ ವಯಸ್ಸಿನವರಾಗಿರಬೇಕು ಎಂಬುದು ಒಂದು ಪೂರ್ವ ನಿಬಂಧನೆಯಾಗಿದೆ. ಕಾರ್ಯಕ್ರಮದ ಮೂಲಕ ತರಬೇತಿ ಮತ್ತು ಉದ್ಯೋಗವನ್ನು ಹುಡುಕುವಾಗ ಫಲಾನುಭವಿಗಳು ನಿರುದ್ಯೋಗಿಗಳಾಗಿರಬೇಕೆಂಬ ಮಾರ್ಗಸೂಚಿ ಅಗತ್ಯ. ಎರಡು ಕಾರಣಗಳಿಗಾಗಿ ಇದು ಮುಖ್ಯವಾಗಿದೆ. ಮೊದಲನೆಯದಾಗಿ ಉದ್ಯೋಗದ ಅನುಕೂಲವಿಲ್ಲದವರಿಗೆ ಪ್ರಯೋಜನಗಳು ತಲುಪಬೇಕು ಮತ್ತು ಎರಡನೆಯದಾಗಿ ಕಾರ್ಯಕ್ರಮದ ಫಲಿತಾಂಶ ಸುಸ್ಥಿರವಾಗಿರಬೇಕು. ಪಡೆದ ಹೊಸ ಕೌಶಲ್ಯಗಳು ಮತ್ತು ಉದ್ಯೋಗವು ಫಲಾನುಭವಿಗಳಿಗೆ ಮೊದಲಿಗಿಂತ ಕಡಿಮೆ ಆದಾಯವನ್ನು ತಂದರೆ ಅವರು ತರಬೇತಿ ಪಡೆದ ಕೆಲಸವನ್ನು ಮುಂದುವರಿಸುವುದಕ್ಕಿಂತ ಮುಂಚಿತವಾಗಿ ಏನು ಮಾಡುತ್ತಿದ್ದರು ಎಂಬುದಕ್ಕೆ ಹಿಂದಿರುಗುವ ಸಾಧ್ಯತೆಯಿದೆ.

ಮೌಲ್ಯಮಾಪನ ಅಧ್ಯಯನವು ಫಲಾನುಭವಿಗಳು ಕೌಶಲ್ಯ ತರಬೇತಿ ಕಾರ್ಯಕ್ರಮಕ್ಕೆ ಒಳಗಾಗುವ ಮೊದಲು ಉದ್ಯೋಗ ಸ್ಥಿತಿಗತಿಯನ್ನು ಮೂರು ವಿಧಗಳಾಗಿ ವರ್ಗೀಕರಿಸಿದೆ (ಕೋಷ್ಟಕ 10.2.12 ನೋಡಿ). ಇವುಗಳಲ್ಲಿ ಮೊದಲನೆಯದು 'ನಿಯಮಿತ' ಅಂದರೆ ಅವರು ಒಂದು ಅಥವಾ ಇನ್ನೊಂದು ಕೆಲಸದಲ್ಲಿ ಪೂರ್ಣಸಮಯದ ಆಧಾರದ ಮೇಲೆ ಮತ್ತು ನಿಯಮಿತವಾಗಿ ಕೆಲಸ ಮಾಡುತ್ತಾರೆ. ಎರಡನೆಯದು ಅರೆಕಾಲಿಕ ಆಧಾರದ ಮೇಲೆ

ಅಂದರೆ ಒಂದು ವಾರದಲ್ಲಿ ನಿರ್ದಿಷ್ಟ ಸಂಖ್ಯೆಯ ದಿನಗಳವರೆಗೆ ಅಥವಾ ದಿನದಲ್ಲಿ ಗಂಟೆಗಳ ಕಾಲ ಅವರು ಕೆಲಸ ಮಾಡುವುದು. ಮೂರನೆಯ ಪ್ರಕಾರವೆಂದರೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ ತರಬೇತಿ ಪಡೆಯಲು ಮತ್ತು ಉದ್ಯೋಗ ನೀಡಲು ಅರ್ಹರಾಗಿರುತ್ತಾರೆ ಆದರೆ ನಿರುದ್ಯೋಗಿಗಳಾಗಿರುತ್ತಾರೆ. ಒಟ್ಟಾರೆಯಾಗಿ ಕೇವಲ 43.47 ಪ್ರತಿಶತಜನರು ಮಾತ್ರ ಯಾವುದೇ ತರಬೇತಿ ಕಾರ್ಯಕ್ರಮಕ್ಕೆ ಒಳಗಾಗುವ ಮೊದಲು ನಿರುದ್ಯೋಗಿಗಳಾಗಿದ್ದಾರೆ ಎಂದು ವರದಿಯಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ 56 ಪ್ರತಿಶತದಷ್ಟು ಜನರು ಫಲಾನುಭವಿಗಳ ಮಾಹಿತಿಯಿಂದ ಕಾರ್ಯಕ್ರಮಕ್ಕೆ ಸೇರುವ ಅರ್ಹತೆಯನ್ನು ಹೊಂದಿಲ್ಲ ಎಂದು ಒಪ್ಪಿಕೊಳ್ಳಲಾಗಿದೆ. ಕೊಡಗು ಜಿಲ್ಲೆಯನ್ನು ಹೊರತುಪಡಿಸಿ ಎಲ್ಲೆಡೆ ಮಾನದಂಡಗಳ ಸಾಕಷ್ಟು ಉಲ್ಲಂಘನೆಯಾಗಿದೆಎಂದು ಅಧ್ಯಯನವು ಕಂಡುಕೊಂಡಿದೆ. ಈ ಉಲ್ಲಂಘನೆಯು ಬೆಳಗಾವಿಯಲ್ಲಿ ಅತಿ ಹೆಚ್ಚು 79.38 ಪ್ರತಿಶತ, ಬೆಂಗಳೂರು ನಗರ ಜಿಲ್ಲೆಯು 78.46 ಪ್ರತಿಶತ ಮತ್ತು ರಾಯಚೂರು 78.13 ಪ್ರತಿಶತ ಕಂಡುಬಂದಿದೆ. ಈ ವಿಷಯದಲ್ಲಿ ತುಮಕೂರು ಮತ್ತು ಧಾರವಾಡ ಹಿಂದೆ ಬಿದ್ದಿಲ್ಲ ಏಕೆಂದರೆ ಈ ಜಿಲ್ಲೆಗಳಲ್ಲಿ ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ಮಾತ್ರ ನಿರುದ್ಯೋಗಿಗಳಾಗಿದ್ದಾರೆ. ಮಂಡ್ಯ ಮತ್ತು ಕಲಬುರಗಿಯಲ್ಲಿ ಕನಿಷ್ಠ ಅರ್ಧದಷ್ಟು ಫಲಾನುಭವಿಗಳು ನಿರುದ್ಯೋಗಿಗಳಾಗಿದ್ದಾರೆ ಎಂದು ವರದಿಯಾಗಿದೆ.

**ಕೋಷ್ಟಕ ಸಂಖ್ಯೆ 10.2.12: ವಿಭಾಗ ಮತ್ತು ಜಿಲ್ಲೆಗಳು, ಮತ್ತು ಫಲಾನುಭವಿಗಳ ಪೂರ್ವ ಉದ್ಯೋಗ ಸ್ಥಿತಿಗತಿ**

| ವಿಭಾಗ | ಜಿಲ್ಲೆ | ಪ್ರಸ್ತುತ ಉದ್ಯೋಗ (% ಅಂಕಿಅಂಶಗಳು) | | | |
|---|---|---|---|---|---|
| | | ನಿಯಮಿತ | ಅರೆಕಾಲಿಕ | ನಿರುದ್ಯೋಗಿಗಳು | ಒಟ್ಟು (ಸಂ.) |
| ಬೆಂಗಳೂರು | ಬೆಂಗಳೂರು – ನಗರ | 27.08 | 51.39 | 21.54 | 469 |
| | ತುಮಕೂರು | 53.06 | 10.20 | 36.73 | 98 |
| | ಉಪ–ಮೊತ್ತ | 31.57 | 44.27 | 24.16 | 567 |
| ಬೆಳಗಾವಿ | ಬೆಳಗಾವಿ | 18.75 | 60.63 | 20.63 | 160 |
| | ಧಾರವಾಡ | 15.3 | 52.96 | 31.75 | 693 |
| | ಉಪ–ಮೊತ್ತ | 15.94 | 54.40 | 29.66 | 853 |
| ಕಲಬುರಗಿ | ಕಲಬುರಗಿ | 28.97 | 15.40 | 55.63 | 435 |
| | ರಾಯಚೂರು | 62.5 | 15.63 | 21.88 | 32 |
| | ಉಪ–ಮೊತ್ತ | 31.26 | 15.42 | 53.32 | 467 |
| ಮೈಸೂರು | ಕೊಡಗು | | 0.00 | 100 | 308 |
| | ಮಂಡ್ಯ | 12.73 | 37.27 | 50 | 110 |
| | ಉಪ–ಮೊತ್ತ | 3.35 | 9.81 | 86.84 | 418 |
| ಒಟ್ಟು | % | 20.61 | 35.92 | 43.47 | 2305 |
| | ಇಲ್ಲ. | 475 | 828.00 | 1002 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | |

ಮೂಲ: ಪ್ರಾಥಮಿಕ ದತ್ತಾಂಶ

**10.2.7 ತರಬೇತಿ ಕಾರ್ಯಕ್ರಮದ ಸಮಯದಲ್ಲಿ ಒದಗಿಸಲಾದ ಸೌಲಭ್ಯಗಳ ಬಗ್ಗೆ ಫಲಾನುಭವಿಗಳ ಮಾಪನ:**

ನಿಜವಾದ ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಕ್ರಮದ ಗುಣಮಟ್ಟದ ಬಗ್ಗೆ ಫಲಾನುಭವಿಗಳ ಗ್ರಹಿಕೆಯನ್ನು ಗಮನಿಸಿದಾಗ ಕಾರ್ಯಕ್ರಮದ ಯೋಜನೆ ಅನುಷ್ಠಾನ ನಿಯೋಗಗಳಲ್ಲಿ ಒಂದನ್ನು ಮಾರ್ಗಸೂಚಿಗಳ ಪ್ರಕಾರ ನಿರ್ವಹಿಸದ ಕಾರಣಅದರ ಪಾತ್ರದಿಂದ ಹೊರಗಿಡಲಾಗಿದೆ ಎಂದು ಕಂಡುಬಂದಿದೆ. ಅದರ ಅನುಪಸ್ಥಿತಿಯಲ್ಲಿ ನೆರೆಯ ಜಿಲ್ಲೆಯ ಯೋಜನೆ ಅನುಷ್ಠಾನ ನಿಯೋಗವು ಕಾರ್ಯಕ್ರಮವನ್ನು ಸಮನ್ವಯಗೊಳಿಸುವ ಮತ್ತು ಅನುಷ್ಠಾನಗೊಳಿಸುವ ಕಾರ್ಯವನ್ನು ನಿಯೋಜಿಸಲಾಗಿದೆ. ಕೊಡಗು ತುಮಕೂರು ಮತ್ತು ರಾಯಚೂರು ಜಿಲ್ಲೆಗಳು ನೆರೆಯ ಜಿಲ್ಲೆಗಳ ಸೇವೆಗಳನ್ನು ಹಂಚಿಕೊಂಡಿವೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ವಿಭಾಗದಿಂದ ಯೋಜನೆ ಅನುಷ್ಠಾನ ನಿಯೋಗಗಳಲ್ಲಿ ಯಾರೂ ಇಲ್ಲಿಯವರೆಗೆ ತಮ್ಮ ಬಾಕಿ ಪಾವತಿಯ ಅಂತಿಮ ಕಂತನ್ನು ಪಡೆದಿಲ್ಲ ಎಂದು ಕಂಡುಬಂದಿದೆ. ಕೆಲವೇ ಕೆಲವು (ಇಲಾಖೆ ನಿಖರವಾದ ಸಂಖ್ಯೆಯನ್ನು ನೀಡಲು ಸಾಧ್ಯವಾಗಿಲ್ಲ) ನಿಯೋಗಗಳು ಮಾತ್ರ ಪಡೆದಿವೆ.

ಇದರಿಂದತರಬೇತಿ ಪಡೆಯುವವರ ವಾಸ್ತವ್ಯ ತರಬೇತಿ ಒದಗಿಸುವ ಸಂಸ್ಥೆಗಳಲ್ಲಿ ಇರಬೇಕು ಎಂದು ತರಬೇತಿ ಮಾಡ್ಯೂಲ್‌ಅನ್ನು ಪ್ರಾಥಮಿಕವಾಗಿ ವಿನ್ಯಾಸಗೊಳಿಸಲಾಗಿದೆ. ಆದ್ದರಿಂದ ಅಂತಹ ತರಬೇತಿ ಕಾರ್ಯಕ್ರಮಗಳಿಗೆ ಒಳಗಾಗಲು ಆಯ್ಕೆ ಮಾಡಲಾದ ಯುವಕ ಮತ್ತು ಯುವತಿಯರಿಗೆಎರಡು ಸೌಲಭ್ಯಗಳು – ವಸತಿ ಮತ್ತು ಬಡಿಸುವ ಆಹಾರದ ಗುಣಮಟ್ಟ – ಮಹತ್ವದ್ದೆಂದು ಪರಿಗಣಿಸಲಾಗಿದೆ. ಕಾರ್ಯಕ್ರಮಕ್ಕೆ ಸೇರಿಕೊಂಡಿದ್ದರೂ ಕಾರ್ಯಕ್ರಮದಿಂದ ಹೊರಗುಳಿದ ಅನೇಕರು ಬಡಿಸುವ ಆಹಾರದ ಕಡಿಮೆ ಗುಣಮಟ್ಟ ಅಥವಾ ಸಮರ್ಪಕವಲ್ಲದ ವಸತಿಯಿಂದಾಗಿ ಹೊರಗುಳಿದಿದ್ದೇವೆ ಎಂದು ವ್ಯಕ್ತಪಡಿಸಿದ್ದಾರೆ.

ರೇಖಾಚಿತ್ರ 10.2.1: ತರಬೇತಿ ಸಮಯದಲ್ಲಿ ವಾಸ್ತವ್ಯ



| ಕೋಷ್ಟಕ 10.2.13: ಮಾದರಿ ಜಿಲ್ಲೆಗಳಲ್ಲಿ ತರಬೇತಿಯ ಸಮಯದಲ್ಲಿ ವಾಸ್ತವ್ಯ | | | |
|---|---|---|---|
| ಜಿಲ್ಲೆ | ತರಬೇತಿಯ ಸಮಯದಲ್ಲಿ ವಾಸ್ತವ್ಯ | | ಒಟ್ಟು |
| | ಹೌದು | ಇಲ್ಲ | |
| ಬೆಂಗಳೂರು – ನಗರ | 42.22 | 57.78 | 469 |
| ಬೆಳಗಾವಿ | 41.88 | 58.13 | 160 |
| ಧಾರವಾಡ | 30.16 | 69.84 | 693 |
| ಕಲಬುರಗಿ | 22.53 | 77.47 | 435 |
| ಕೊಡಗು | 27.92 | 72.08 | 308 |
| ಮಂಡ್ಯ | 10.91 | 89.09 | 110 |
| ರಾಯಚೂರು | 46.88 | 53.13 | 32 |
| ತುಮಕೂರು | 41.84 | 58.16 | 98 |
| ಒಟ್ಟು % | 31.50 | 68.50 | 2305 |
| ಇಲ್ಲ. | 726 | 1579 | |

ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ

ಮೂಲ: ಪ್ರಾಥಮಿಕ ದತ್ತಾಂಶ

ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಲು ಐದು ಆಯ್ಕೆಗಳನ್ನು ನೀಡಲಾಗಿದ್ದರೂ ಹೆಚ್ಚಿನ ಫಲಾನುಭವಿಗಳು ಒದಗಿಸಲಾದ ವಸತಿಯ ಗುಣಮಟ್ಟವನ್ನು ನಿರ್ಣಯಿಸುವಾಗ 'ತಂಬಾ ಚೆನ್ನಾಗಿದೆ' (66.7 ಪ್ರತಿಶತ) ಅಥವಾ 'ಚೆನ್ನಾಗಿದೆ' (33.3 ಪ್ರತಿಶತ) ಎಂದು ಪ್ರತಿಕ್ರಿಯಿಸಿದ್ದಾರೆ. ಕುತೂಹಲಕಾರಿ ಸಂಗತಿಯೆಂದರೆ ಕೇವಲ 31 ಪ್ರತಿಶತಜನರು ಯೋಜನೆ ಅನುಷ್ಠಾನ ನಿಯೋಗಗಳು ಒದಗಿಸಿದ ವಸತಿಯನ್ನು ಬಳಸಿಕೊಂಡು ಕೌಶಲ್ಯ ತರಬೇತಿಯನ್ನು ಪಡೆದಿದ್ದಾರೆ. ಸುಮಾರು 69 ಪ್ರತಿಶತದಷ್ಟು ಜನರು ಒದಗಿಸಲಾದ ವಸತಿಯನ್ನು ಬಳಸಿಕೊಂಡಿಲ್ಲ. ಬದಲಾಗಿ ಅವರು ತಮ್ಮ ಮನೆಗಳು ಅಥವಾ ಸ್ನೇಹಿತರು ಮತ್ತು ಸಂಬಂಧಗಳಲ್ಲಿ ಉಳಿಯಲು ಆದ್ಯತೆ ನೀಡಿದ್ದಾರೆ ಮತ್ತು ಕೌಶಲ್ಯ ತರಬೇತಿ ಸ್ಥಳಕ್ಕೆ ಪ್ರಯಾಣಿಸಿದ್ದಾರೆ. ಇದು ಪಡೆದ ತರಬೇತಿಯ ಗುಣಮಟ್ಟದ ಮೇಲೆ ಧನಾತ್ಮಕವಾಗಿ ಪರಿಣಾಮ ಬೀರಿದೆ. ಮಂಡ್ಯದಲ್ಲಿ ವಾಸ್ತವ್ಯ ಕಡಿಮೆ ಇದೆ. ಕೇವಲ 10.9 ಪ್ರತಿಶತ ವಸತಿ ಸೌಕರ್ಯ ಬಳಸಿಕೊಂಡಿದ್ದಾರೆ. ಕಲಬುರಗಿ ಮತ್ತು ಕೊಡಗು ಜಿಲ್ಲೆಗಳಲ್ಲಿ 22.5 ಮತ್ತು 27.92 ಪ್ರತಿಶತದಷ್ಟು ತರಬೇತಿದಾರರು ವಸತಿ ಸೌಕರ್ಯ ಬಳಸಿಕೊಂಡಿದ್ದಾರೆ. ವಸತಿ ಸೌಕರ್ಯ ಬಳಸಿಕೊಂಡು ತರಬೇತಿ ಪಡೆದವರಲ್ಲಿ ಅತಿ ಹೆಚ್ಚು ಜನರು ರಾಯಚೂರು (46.88 ಪ್ರತಿಶತ) ಮತ್ತು ಬೆಂಗಳೂರು –ನಗರ (42.2 ಪ್ರತಿಶತ)ದಲ್ಲಿದ್ದಾರೆ ಎಂದು ಕಂಡುಬಂದಿದೆ.

ಹೆಚ್ಚಿನ ಸಂಖ್ಯೆಯಲ್ಲಿ 'ಚೆನ್ನಾಗಿದೆ' ಅಥವಾ 'ತುಂಬಾ ಚೆನ್ನಾಗಿದೆ' ಎಂದು ವ್ಯಕ್ತಪಡಿಸಲಾದ ಅಭಿಪ್ರಾಯದ ಹೊರತಾಗಿಯೂ ತರಬೇತಿ ಪಡೆಯುವವರಿಗೆ ಉತ್ತಮ ವಸತಿ ಮತ್ತು ಆಹಾರ ಸೌಲಭ್ಯಗಳನ್ನು ಒದಗಿಸುವಲ್ಲಿ ಯೋಜನೆ ಅನುಷ್ಠಾನ ನಿಯೋಗಗಳು ನೀಡುವ ತರಬೇತಿಯ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಮಾಡಬೇಕಾಗಿದೆ. ತರಬೇತಿ ಆವರಣದಲ್ಲಿ ವಾಸ್ತವ್ಯ ಹಾಜರಾತಿ ಮತ್ತು ಸಮಯ ನಿರ್ವಹಣೆಯಲ್ಲಿ ನಿಯಮಿತತೆಯನ್ನು ಸುಧಾರಿಸುತ್ತದೆ.

**10.2.8 ತರಬೇತಿಗಾಗಿ ಮಾಹಿತಿ ತಂತ್ರಜ್ಞಾನ ಬಳಕೆ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದಲ್ಲಿರುವಂತೆ ಕೌಶಲ್ಯ ಮತ್ತು ಉದ್ಯೋಗ ಘಟಕವು ಬೋಧನೆ ಮತ್ತು ತರಬೇತಿಗಾಗಿ ಮಾಹಿತಿ ತಂತ್ರಜ್ಞಾನ ಸಾಧನಗಳನ್ನು ಅವಲಂಬಿಸುವ ನಿರೀಕ್ಷೆಯಿದೆ. ವಾಸ್ತವವಾಗಿ ಅಂತಹ ತಂತ್ರಜ್ಞಾನವನ್ನು ಬಳಸುವ ಅವರ ಸಾಮರ್ಥ್ಯವು ಅವರ ಅನುಭೂತಿಗೆ ಮತ್ತು ಯೋಜನಾ ಅನುಷ್ಠಾನ ಪಾತ್ರಕ್ಕಾಗಿ ಅವರನ್ನು ತೊಡಗಿಸಿಕೊಳ್ಳಲು ಒಂದು ಪೂರ್ವ ನಿಬಂಧನೆಯಾಗಿದೆ. ಆದರೂ ಅವುಗಳನ್ನು ಬಳಸಿಕೊಳ್ಳುವ ನಿಯೋಗಗಳ ಸಾಮರ್ಥ್ಯವು ಇತರ ಅಂಶಗಳ ಸಂಪೂರ್ಣ ಗುಂಪನ್ನು ಅವಲಂಬಿಸಿರುತ್ತದೆ. ಇದಲ್ಲದೆ ಗಣಕಯಂತ್ರಗಳು ಮತ್ತು ಡಿಜಿಟಲ್ ಪ್ರಕ್ಷೇಪಣದ ಸಾಕಷ್ಟು ಲಭ್ಯತೆ ಅಂತರ್ಜಾಲ ಮತ್ತು ಉಪಗ್ರಹ ತಂತ್ರಜ್ಞಾನ ಪ್ರಾಥಮಿಕ ಅಗತ್ಯವಾಗಿದೆ. ದೂರದ ಕ್ಷೇತ್ರ ಪ್ರಧಾನ ಕಚೇರಿಗಳು ಅಥವಾ ಪಂಚಾಯಿತಿಗಳು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಇವುಗಳ ಲಭ್ಯತೆ ಕಷ್ಟಕರವಾಗಿದೆ. ಪ್ರಶ್ನಾವಳಿಗಳಲ್ಲಿ ಮತ್ತು ಕೇಂದ್ರೀಕೃತ ಸಮೂಹ ಚರ್ಚೆಗಳ ಸಮಯದಲ್ಲಿ ಫಲಾನುಭವಿಗಳಿಗೆ ಕೇಳಲಾದ ಪ್ರಶ್ನೆಗಳಲ್ಲಿ ಉಪಗ್ರಹ ಮತ್ತು ಇತರ ಮಾಹಿತಿ ತಂತ್ರಜ್ಞಾನಗಳ ಬಳಕೆಯ ಬಗ್ಗೆ ಅವರ ಅನಿಸಿಕೆಗಳೂ ಒಂದಾಗಿದೆ. ತರಬೇತಿಯ ಇತರ ವೈಶಿಷ್ಟ್ಯಗಳ ಬಗ್ಗೆ ಅಗಾಧವಾದ ಮೆಚ್ಚುಗೆ ಅಥವಾ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದೆ (ಕೋಷ್ಟಕ 10.2.14).

ಎಂಟು ಮಾದರಿ ಜಿಲ್ಲೆಗಳಲ್ಲಿ ಮೂರರಲ್ಲಿ – ಬೆಂಗಳೂರು ನಗರ, ಕಲಬುರಗಿ ಮತ್ತು ಕೊಡಗು ಜಿಲ್ಲೆಗಳು – 100 ಪ್ರತಿಶತ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಪಡೆಯಲಾಗಿದೆ. ಉಳಿದ ಜಿಲ್ಲೆಗಳಲ್ಲಿ 5 ಜಿಲ್ಲೆಗಳು ವಿಭಿನ್ನ ಪ್ರಮಾಣದ ನಕಾರಾತ್ಮಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿವೆ. ಪ್ರತಿಕ್ರಿಯೆ ಬಹುತೇಕ ನಗಣ್ಯವಾಗಿದೆಎಂದು ಒಪ್ಪಿಕೊಂಡರೂ ಪ್ರತಿಕ್ರಿಯೆಯ ಸ್ವರೂಪವನ್ನು ಗಮನಿಸಬೇಕಾಗಿದೆ. ಈ ನಿಟ್ಟಿನಲ್ಲಿ 18.25 ಪ್ರತಿಶತ ಫಲಾನುಭವಿಗಳು ಬೋಧನೆ ಮತ್ತು ತರಬೇತಿಯಲ್ಲಿ ಉಪಗ್ರಹ / ಮಾಹಿತಿ ತಂತ್ರಜ್ಞಾನ ಬಳಕೆಯ ವ್ಯಾಪ್ತಿ ಅಥವಾ ಗುಣಮಟ್ಟವನ್ನು ಕಳಪೆ ಎಂದು ಪರಿಗಣಿಸಿರುವಲ್ಲಿ ರಾಯಚೂರು ಜಿಲ್ಲೆ ಮುಂಚೂಣಿಯಲ್ಲಿದೆ. ನಂತರದ ಕ್ರಮದಲ್ಲಿ ಧಾರವಾಡ (14.43), ಬೆಳಗಾವಿ (13.75), ತುಮಕೂರು (12.24), ಮತ್ತು ಮಂಡ್ಯ (10.00 ಪ್ರತಿಶತ) ಜಿಲ್ಲೆಗಳಿವೆ. ಈ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ ನಿಯೋಗಗಳು ತಮ್ಮ ಬೋಧನಾ ಕ್ರಮದ ಈ ಅಂಶದ ಬಗ್ಗೆ ಗಮನ ಹರಿಸಬೇಕು.

**ಕೋಷ್ಟಕ 10.2.14: ಜಿಲ್ಲೆಗಳು ಮತ್ತು ಬೋಧನೆಗಾಗಿ ಉಪಗ್ರಹ ತಂತ್ರಜ್ಞಾನದ ಬಳಕೆ**

| ಜಿಲ್ಲೆ | ಪ್ರತಿಕ್ರಿಯೆ | | ಒಟ್ಟು (ಸಂ.) |
|---|---|---|---|
| | ಧನಾತ್ಮಕ | ಋಣಾತ್ಮಕ | |
| ಬೆಂಗಳೂರು – ನಗರ | 100.00 | 469 | 469 |
| ಬೆಳಗಾವಿ | 86.25 | 160 | 160 |
| ಧಾರವಾಡ | 85.57 | 693 | 693 |
| ಕಲಬುರಗಿ | 100.00 | 435 | 435 |
| ಕೊಡಗು | 100.00 | 308 | 308 |
| ಮಂಡ್ಯ | 90.00 | 110 | 110 |
| ರಾಯಚೂರು | 81.25 | 32 | 32 |
| ತುಮಕೂರು | 87.76 | 98 | 98 |
| ಒಟ್ಟು % | 93.45 | 2305 | 2305 |

ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ

ಮೂಲ: ಪ್ರಾಥಮಿಕ ದತ್ತಾಂಶ

### 10.2.9 ನಗರ ವಲಸೆಗಾಗಿ ಕೌಶಲ್ಯ ತರಬೇತಿಯ ನಂತರದ ಯೋಜನೆಗಳು:

ಗ್ರಾಮೀಣ ಯುವಕರು ನಗರ ಪ್ರದೇಶಗಳಿಗೆ ವಲಸೆ ಹೋಗದಂತೆ ತಡೆಯುವ ರೀತಿಯಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಪ್ರಮುಖ ಮಾರ್ಗದರ್ಶಿ ಗುರಿಗಳಲ್ಲಿ ಒಂದಾಗಿದೆ. ಕಾರ್ಯಕ್ರಮದ ಸ್ವಯಂ ಉದ್ಯೋಗ ಘಟಕದಿಂದ ಪ್ರಯೋಜನ ಪಡೆಯುತ್ತಿರುವ ಯುವಕರಿಗೆ ಸಂಬಂಧಿಸಿದಂತೆ ಇದು ಕಾರ್ಯ ಸಾಧ್ಯವಾಗಿದ್ದರೂ ಕೌಶಲ್ಯ ಮತ್ತು ಉದ್ಯೋಗ ಘಟಕವು ಈ ಗುರಿಯ ಸಾಧನೆಯನ್ನು ಸಕ್ರಿಯಗೊಳಿಸುವುದು ಅಸಂಭವ. ಮೊದಲನೆಯದಾಗಿ ನೀಡಲಾದ ಅನೇಕ ಕೌಶಲ್ಯಗಳು ಗ್ರಾಮೀಣ ಪ್ರದೇಶಗಳಿಗಿಂತ ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಕಂಡುಬರುವ ಅಂತಹ ಉದ್ಯೋಗಗಳಿಗೆ ಸೂಕ್ತವಾಗಿವೆ. ಆದರೆ ಹೊಲಿಗೆ ಕೆಲಸ ಮತ್ತು ಹೈನುಗಾರಿಕೆಗಳು ಇದಕ್ಕೆ ಅಪವಾದವಾಗಿವೆ. ಹೊಲಿಗೆ ಕೆಲಸ ತರಬೇತಿ ಪಡೆದವರೊಂದಿಗೆ ನಡೆಸಿದ ಚರ್ಚೆಗಳಲ್ಲಿ ಅವರಲ್ಲಿ ಅನೇಕರು ಹತ್ತಿರದ ನಗರ ಪ್ರದೇಶಗಳಲ್ಲಿನ ಉಡುಪು ಕಾರ್ಖಾನೆಗಳಲ್ಲಿ ಉದ್ಯೋಗವನ್ನು ಗುರಿಯಾಗಿಸಿಕೊಂಡಿರುವುದು ತಿಳಿದುಬಂದಿದೆ. ಹೈನುಗಾರಿಕೆಗೆ ಸಂಬಂಧಿಸಿದಂತೆ ಮುಖ್ಯ ಪ್ರೇರಕ ಅಂಶವೆಂದರೆ ನಗರ ವಲಸೆ ಗಣನೀಯವಾಗಿಲ್ಲದಿರುವುದು. ಬದಲಾಗಿ ಅವರು ಹೈನುಗಾರಿಕೆಯಲ್ಲಿ ಕೌಶಲ್ಯದ ಕಾರ್ಯಕ್ರಮಕ್ಕೆ ಒಳಗಾದರೆ ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳಂತಹ ವಾಣಿಜ್ಯ ಹಣಕಾಸು ಸಂಸ್ಥೆಗಳಿಂದ ಕೈಗೆಟಕುವ ಸಾಲಕ್ಕೆ ಅರ್ಹರಾಗುತ್ತಾರೆ ಎಂಬುದು ಒಂದು ಸುಳ್ಳು ಊಹೆಯಾಗಿದೆ. ಈ ಆಯಾಮವು ಫಲಾನುಭವಿಗಳೊಂದಿಗೆ ಕೇಂದ್ರೀಕೃತ ಸಮೂಹ ಚರ್ಚೆಗಳ ಅವಧಿಯಲ್ಲಿ ಸ್ಪಷ್ಟವಾಗಿದೆ.ಯೋಜನೆ ಅನುಷ್ಠಾನ ನಿಯೋಗಗಳು ಹೈನುಗಾರಿಕೆಯ ಬಗ್ಗೆ ಕೌಶಲ್ಯದ ಕಾರ್ಯಕ್ರಮವನ್ನು ನೀಡುವುದರಿಂದ ಅನೇಕ ಚಿಕ್ಕ ಹುಡುಗರು ಮತ್ತು ಹುಡುಗಿಯರು ತಮ್ಮ ಗ್ರಾಮಗಳನ್ನು ತೊರೆಯಲು ಸಿದ್ಧರಿಲ್ಲದ ಕಾರಣಇದಕ್ಕೆ ನೋಂದಾಯಿಸಿಕೊಳ್ಳಲು ಆಕರ್ಷಿತರಾಗಿದ್ದಾರೆ. ಕೇಂದ್ರೀಕೃತ ಸಮೂಹ ಚರ್ಚೆಗಳಲ್ಲಿ ಕೆಲವು ಸ್ಪರ್ಧಿಗಳು ಬೇರೆಯಾವುದೇ ಕೌಶಲ್ಯಗಳನ್ನು ಪಡೆಯುವ ಬಗ್ಗೆ ತಮಗೆ ಖಚಿತವಿಲ್ಲ ಎಂದು ಒಪ್ಪಿಕೊಂಡು ಹೈನುಗಾರಿಕೆಯನ್ನು ಆಯ್ಕೆ ಮಾಡಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ.

ಏನೇ ಆಗಲಿ ಕೌಶಲ್ಯ ತರಬೇತಿ ಕಾರ್ಯಕ್ರಮದ ಮೊದಲು ಅಥವಾ ಸಮಯದಲ್ಲಿ ಅವರು ನಗರ ಜೀವನೋಪಾಯದ ದೃಷ್ಟಿಕೋನವನ್ನು ಹೊಂದಿದ್ದಾರೆಯೇ ಎಂಬುದು ಫಲಾನುಭವಿಗಳಿಗೆ ನಮ್ಮ ಪ್ರಶ್ನೆಯಾಗಿತ್ತು. 8 ಜಿಲ್ಲೆಗಳ ಪೈಕಿ 5 ಜಿಲ್ಲೆಗಳಲ್ಲಿ 100 ಪ್ರತಿಶತ ತರಬೇತಿದಾರರು ನಗರಗಳಿಗೆ ವಲಸೆ ಹೋಗುವ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಬೆಂಗಳೂರು ನಗರ (50.31 ಪ್ರತಿಶತ), ತುಮಕೂರು (45.92 ಪ್ರತಿಶತ), ಮತ್ತು ಕಲಬುರಗಿ (18.4 ಪ್ರತಿಶತ) – ಈ ಮೂರು ಜಿಲ್ಲೆಗಳು ಸ್ವತಃ ದೊಡ್ಡ ನಗರ ಸ್ಥಳಗಳಾಗಿರುವುದರಂದ ವಲಸೆ ಹೋಗುವುದಿಲ್ಲ ಎಂಬ ಉದ್ದೇಶ ಅಭಿವ್ಯಕ್ತವಾಗಿದೆ. ಕೇಂದ್ರೀಕೃತ ಸಮೂಹ ಚರ್ಚೆಗಳ ಅವಧಿಯಲ್ಲಿ ಅನೇಕರು ಈಗಾಗಲೇ ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶಗಳಿಂದ ಹತ್ತಿರದ ಪಟ್ಟಣಅಥವಾ ನಗರಕ್ಕೆ ಪ್ರಯಾಣಿಸುತ್ತಿದ್ದಾರೆ ಎಂದು ಕಂಡುಬಂದಿದೆ. ಇದಕ್ಕೆ ವ್ಯತಿರಿಕ್ತವಾಗಿ ಬೆಂಗಳೂರಿನ ಮಹಾನಗರ ಕೇಂದ್ರದಿಂದ ಸ್ವಲ್ಪ ದೂರದಲ್ಲಿರುವ ಇತರ ಜಿಲ್ಲೆಗಳು ಅಥವಾ ಮೈಸೂರಿನಂತಹ ಸ್ಥಳಗಳಿಂದ ಫಲಾನುಭವಿಗಳು ತಮಗೆ ಸೂಕ್ತವೆನಿಸಿದಾಗ ಹತ್ತಿರದ ನಗರಕ್ಕೆ ಹೋಗಲು ಸಾಕಷ್ಟು ಉತ್ಸುಕರಾಗಿದ್ದಾರೆ.

| **ಕೋಷ್ಟಕ 10.2.15: ಪಡೆದ ಕೌಶಲ್ಯ ತರಬೇತಿ ಮತ್ತು ನಗರಕ್ಕೆ ವಲಸೆ ಹೋಗುವ ಉದ್ದೇಶ** | | | |
|---|---|---|---|
| **ಕೌಶಲ್ಯ ತರಬೇತಿ ಪಡೆಯಲಾಗಿದೆ** | **ವಲಸೆ ಉದ್ದೇಶಗಳು (%)** | | **ಒಟ್ಟು** |
| | **ಹೌದು** | (ಇಲ್ಲ.) | (ಇಲ್ಲ.) |
| ಸಾಮಾನ್ಯ ಅಂಗಡಿ | 79.37 | | 189 |
| ಹೊಲಿಗೆ ಕೆಲಸ | 83.56 | 189 | 742 |
| ಆಟೋಮೊಬೈಲ್ | 83.46 | 742 | 272 |
| ಮೊಬೈಲ್ ಅಂಗಡಿಗಳು | 72.22 | 272 | 36 |
| ವಿದ್ಯುತ್ ಸೇವೆಗಳು | 93.18 | 36 | 88 |
| ಬ್ಯೂಟಿ ಪಾರ್ಲರ್ | 87.42 | 88 | 151 |
| ಗಣಕಯಂತ್ರಗಳು &ಅಂಗಡಿ | 85.97 | 151 | 556 |
| ಮರಗೆಲಸ | 100.00 | 556 | 23 |
| ಹೋಟೆಲ್ | 90.00 | 23 | 10 |
| ಹೈನುಗಾರಿಕೆ | 83.65 | 10 | 208 |
| ಇತರೆ | 76.67 | 208 | 30 |
| ಒಟ್ಟು % | 84.34 | 30 | **2305** |
| ಸಂಖ್ಯೆ | 1944 | 361 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ ಇತರೆ ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣ 15 ಅನ್ನು ನೋಡಿ | | | |

ಮೂಲ: ಪ್ರಾಥಮಿಕ ದತ್ತಾಂಶ

ಈ ಕೆಲವು ಕೌಶಲ್ಯಗಳಿಗೆ ಗ್ರಾಮೀಣ ಪ್ರದೇಶಗಳಿಗಿಂತ ಉದ್ಯೋಗಕ್ಕೆ ಬೇಡಿಕೆ ಇರುವ ಸ್ಥಳದಲ್ಲಿ ಫಲಾನುಭವಿಗಳು ವಾಸಿಸಬೇಕಾಗುತ್ತದೆ: ಉದಾ. ಗಣಕಯಂತ್ರಗಳು, ಛಾಯಾಚಿತ್ರ ಪ್ರತಿ ಮಾಡುವುದು, ಮಾಲ್‌ಗಳು, ಕಿರಾಣಿ ಅಂಗಡಿಗಳು (ಇವುಗಳನ್ನು ಸಾಮಾನ್ಯ ಅಂಗಡಿಗಳ ಅಡಿಯಲ್ಲಿ ಗುಂಪು ಮಾಡಲಾಗಿದೆ) ಮರಗೆಲಸ, ಗಣಕಯಂತ್ರ ಸಂಬಂಧಿತ ಕೌಶಲ್ಯಗಳು, ವಿದ್ಯುತ್ ಸೇವೆಗಳು, ಹೊಲಿಗೆ ಕೆಲಸ, ಆಟೋಮೊಬೈಲ್‌ಗಳಂತಹ ಸಗಟು ಅಥವಾ ಚಿಲ್ಲರೆ ಮಾರುಕಟ್ಟೆಗಳಲ್ಲಿ ಮಾರಾಟ ವ್ಯಕ್ತಿಗಳು. ಕೋಷ್ಟಕ 10.2.15 ಪಡೆದುಕೊಂಡ ಕೌಶಲ್ಯಗಳು ಮತ್ತು ನಗರಕ್ಕೆ ವಲಸೆ ಹೋಗುವ ಉದ್ದೇಶದ ದತ್ತಾಂಶವನ್ನು ಪ್ರಸ್ತುತಪಡಿಸುತ್ತದೆ.

ರೇಖಾಚಿತ್ರ 10.2.2: ಪಡೆದುಕೊಂಡ ಕೌಶಲ್ಯಗಳು ಮತ್ತು ವಲಸೆಯ ಉದ್ದೇಶ




ಅನುಪಾತದಲ್ಲಿ ಚಿಕ್ಕದಾಗಿದ್ದರೂ ಸುಮಾರು 16 ಪ್ರತಿಶತ ಜನರು ವಲಸೆ ಹೋಗಲು ನಾವು ಇನ್ನೂ ಸಿದ್ಧರಾಗಿಲ್ಲ ಎಂದು ವ್ಯಕ್ತಪಡಿಸಿದ್ದಾರೆ. ಸಂದರ್ಶನಗಳು ಅಥವಾ ಕೇಂದ್ರೀಕೃತ ಸಮೂಹ ಚರ್ಚೆಗಳ ಸಮಯದಲ್ಲಿ ಪಾಲ್ಗೊಂಡವರಲ್ಲಿ ಅನೇಕರು ಮಹಿಳೆಯರು ಮತ್ತು ಅವಿವಾಹಿತರಾಗಿದ್ದಾರೆ. ತುಮಕೂರು ಪಟ್ಟಣದಲ್ಲಿ ಕೇಂದ್ರೀಕೃತ ಸಮೂಹ ಚರ್ಚೆ (ಫೆಬ್ರವರಿ 2, 2020)ಯಲ್ಲಿ ಪಾಲ್ಗೊಂಡಿದ್ದ ಕೆಲವು ಅವಿವಾಹಿತ ಮಹಿಳೆಯರು ಈ ಕೆಳಗಿನ ಅಂಶಗಳನ್ನು ಸೂಚಿಸಿದ್ದಾರೆ.

*"ನಾವು ಅಥವಾ ನಮ್ಮಲ್ಲಿ ಹೆಚ್ಚಿನವರು ವಲಸೆ ಹೋಗಲು ಬಯಸುವುದಿಲ್ಲ ಅಥವಾ ನಗರಕ್ಕೆ ವಲಸೆ ಹೋಗುವುದಿಲ್ಲ. ನಾವು ಈಗ ಕಾರ್ಯಕ್ರಮ ಅಥವಾ ರಾಜೀವ್ ಗಾಂಧಿ ಚೈತನ್ಯ ಯೋಜನೆ ಮೂಲಕ ಪಡೆದ ಕೌಶಲ್ಯಗಳಲ್ಲಿ ಒಂದರಲ್ಲಿ ತಮ್ಮ ಜೀವನೋಪಾಯವನ್ನು ಮುಂದುವರಿಸುತ್ತಿದ್ದೇವೆ. ನಮ್ಮಲ್ಲಿ ಕೆಲವರು ಪ್ರತಿದಿನ ನಮ್ಮ ಹಳ್ಳಿಯಿಂದ ಪಟ್ಟಣಕ್ಕೆ (ತುಮಕೂರಿಗೆ) ಮತ್ತು ಬೆಂಗಳೂರಿನ ಪೀಣ್ಯದವರೆಗೆ ಪ್ರಯಾಣಿಸುತ್ತೇವೆ. ನಾವು ವಲಸೆ ಹೋಗುವುದು ನಮ್ಮನ್ನು ಮದುವೆಯಾಗಬಹುದಾದ ಪುಣ್ಯಾತ್ಮನನ್ನು ಅವಲಂಬಿಸಿದೆ. ನಾವು ಮದುವೆಯಾಗುವ ವ್ಯಕ್ತಿ ಎಲ್ಲಿ ವಾಸಿಸುತ್ತಾನೆಯೋ – ಬೆಂಗಳೂರು ಅಥವಾ ಮೈಸೂರು ಅಥವಾ ಬೇರೆ ಯಾವುದೋ ಸ್ಥಳ – ಅಲ್ಲಿಗೆ ಹೋಗುತ್ತೇವೆ. ನಮ್ಮ ನೆರೆಯ ಹಳ್ಳಿಯ ಹುಡುಗ ನಮ್ಮನ್ನು ಮದುವೆಯಾದರೆ ನಾವು ಆ ಹಳ್ಳಿಯಲ್ಲಿ ನೆಲೆಸಲು ಹೋಗುತ್ತೇವೆ. ನಮಗೆ ಸಿಗುವ ಸಂಬಳದಿಂದ ಕೆಲವರು ಸುಲಭವಾಗಿ ನಮ್ಮ ಹಣವನ್ನು ಒಟ್ಟುಗೂಡಿಸಿ ತುಮಕೂರು ಅಥವಾ ಬೆಂಗಳೂರಿನಲ್ಲಿ ಬಾಡಿಗೆಗೆ ಮನೆ ತೆಗೆದುಕೊಳ್ಳಬಹುದು ಅಥವಾ ಪಿಜಿಯಲ್ಲಿ ವಾಸ ಮಾಡಿಕೊಂಡು ಅಲ್ಲಿ ನಾವು ಕೆಲಸ ಮಾಡಬಹುದು. ಆಗ ನಾವು ಯಾರನ್ನು ಮದುವೆಯಾಗುತ್ತೇವೆ ಎಂಬ ಆಯ್ಕೆ ಸಂಕುಚಿತಗೊಳ್ಳುತ್ತದೆ. ನಮ್ಮ ಪೋಷಕರು ಹುಡುಗರು ಗೊತ್ತಿಲ್ಲದಿರುವುದಕ್ಕಿಂತ ತಿಳಿದಿರುವ ಪ್ರದೇಶದಿಂದ ಬಂದವರಾಗಲು ಬಯಸುತ್ತಾರೆ. ಆದರೆ ನಾವು ಒಂದಲ್ಲ ಒಂದು ಉದ್ಯೋಗ ಕ್ಷೇತ್ರದಲ್ಲಿ ಕೌಶಲ್ಯವನ್ನು ಪಡೆಯುವುದು ಖಂಡಿತವಾಗಿಯೂ ಆರ್ಥಿಕವಾಗಿ ಮತ್ತು ಕೌಟುಂಬಿಕ ವಿಷಯಗಳಲ್ಲಿ ನೆಲೆಸಲು ನಮಗೆ ಸಹಾಯ ಮಾಡುತ್ತದೆ. ನಮ್ಮ ತಂಡದ ಕನಿಷ್ಠ ಒಂದು ಡಜನ್ ಹುಡುಗಿಯರು ಈ ಕಾರ್ಯಕ್ರಮದ ಮೂಲಕ ಪಡೆದ ಉದ್ಯೋಗದಿಂದಾಗಿ ಉತ್ತಮ ಸಂಬಂಧದಲ್ಲಿ ಮದುವೆಯಾಗಿದ್ದಾರೆ. (ಕೇಂದ್ರೀಕೃತ ಸಮೂಹ ಚರ್ಚೆ ಪ್ರತಿಕ್ರಿಯೆ)*

**ಕೇಂದ್ರೀಕೃತ ಸಮೂಹ ಚರ್ಚೆಗಳ ಮೂಲಕ ಸಂಗ್ರಹಿಸಲಾದ ದತ್ತಾಂಶ ಮತ್ತು ಮಾಹಿತಿಯಿಂದ ಹೊರಹೊಮ್ಮುವುದು ಏನೆಂದರೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತು ್ತಉದ್ಯೋಗ ಘಟಕವು ಗ್ರಾಮೀಣ ಯುವಕರ ನಗರ ಕನಸುಗಳನ್ನು ಬೆಂಬಲಿಸುವುದು ಮಾತ್ರವಲ್ಲದೆ ಅಂತಹ ವಲಸೆಗೆ ಅನುಕೂಲ ಮಾಡಿಕೊಡುತ್ತದೆ.**

### 10.2.10 ಕೌಶಲ್ಯ ತರಬೇತಿ ಪಡೆದ ನಂತರದಲ್ಲಿ ಉದ್ಯೋಗ ನಿಯೋಜನೆ ಸೇವೆಗಳು:

ತರಬೇತಿ ಪಡೆದವರು ತಮ್ಮ ಆಯ್ಕೆ ಮಾಡಿದ ಕ್ಷೇತ್ರಗಳಲ್ಲಿ ಕೌಶಲ್ಯ ತರಬೇತಿಯನ್ನು ಪಡೆಯುತ್ತಿರುವಾಗಲೂ ಪ್ರತಿ ಜಿಲ್ಲೆಯ ಯೋಜನೆ ಅನುಷ್ಠಾನ ನಿಯೋಗ ಸಂಭಾವ್ಯ ಉದ್ಯೋಗದಾತರನ್ನು ಸಂಪರ್ಕಿಸಬೇಕು ಅವರ ಸಂಭಾವ್ಯ ಉದ್ಯೋಗಿಗಳಿಗೆ ಅಗತ್ಯವಿರುವ ಕೌಶಲ್ಯಗಳ ಬಗ್ಗೆ ಸಮಾಲೋಚನೆ ನಡೆಸಬೇಕು ಮತ್ತು ಅಂತಹ ಕೌಶಲ್ಯಗಳೊಂದಿಗೆ ತರಬೇತಿ ಪಡೆಯುವ ವ್ಯಕ್ತಿಗಳನ್ನು ನೇಮಿಸಿಕೊಳ್ಳಲು ಒಡಂಬಡಿಕೆ ಮಾಡಿಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ. ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಆರಂಭಿಕ ವರ್ಷಗಳಲ್ಲಿ ಯೋಜನೆ ಅನುಷ್ಠಾನ ನಿಯೋಗಗಳು ಅವರು ಪ್ರಮಾಣೀಕರಿಸುವ ನುರಿತ ಕಾರ್ಮಿಕರಿಗೆ ಉದ್ಯೋಗವನ್ನು ಭದ್ರಪಡಿಸುತ್ತವೆ. 2016–17 ರಿಂದ ಕ್ಷೇತ್ರಮಟ್ಟದಲ್ಲಿ ಅಲ್ಲದಿದ್ದರೂ ಜಿಲ್ಲಾ ಮಟ್ಟದಲ್ಲಿ ನುರಿತ ವ್ಯಕ್ತಿಗಳು ಮತ್ತು ಸಂಭಾವ್ಯ ಉದ್ಯೋಗದಾತರನ್ನು ಹುಡುಕುವ ಉದ್ಯೋಗದ ಸಾಮೂಹಿಕ ಸಭೆ(ಮೇಳ)ಗಳನ್ನು ಆಯೋಜಿಸಲಾಗಿದೆ. ಅಂತಹ ಮೇಳಗಳ ಸಮಯದಲ್ಲಿ ನಿರೀಕ್ಷಿತ ಉದ್ಯೋಗದಾತರು ಉದ್ಯೋಗಾಕಾಂಕ್ಷಿಗಳನ್ನು ನೋಂದಾಯಿಸುತ್ತಾರೆ. ಮತ್ತು ಅವರ ಸಂಕ್ಷಿಪ್ತ ವಿವರಗಳ ಅಥವಾ ವೈಯಕ್ತಿಕ ಸಂದರ್ಶನಗಳ ಅಧ್ಯಯನದ ಆಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳಿಗೆ ಉದ್ಯೋಗವನ್ನು ನೀಡಲಾಗುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲೂ ಸಂಬಂಧಪಟ್ಟ ಯೋಜನೆ ಅನುಷ್ಠಾನ ನಿಯೋಗ ಅಂತಹ ಮೇಳಗಳಿಗೆ ಅನುಕೂಲ ಮಾಡಿಕೊಡುತ್ತದೆ. ಈ ಸಂದರ್ಭದಲ್ಲಿ ಮಾನವ ಸಂಪನ್ಮೂಲ ನಿಯೋಗಗಳ ಪಾತ್ರವನ್ನು ವಹಿಸುತ್ತದೆ. ಮಾದರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಹೊಸದಾಗಿ ನುರಿತ ತರಬೇತಿ ಪಡೆದವರಿಗೆ ಉದ್ಯೋಗವನ್ನು ಸುಗಮಗೊಳಿಸುವ ನಿರ್ಣಾಯಕ ಪಾತ್ರವು ಯೋಜನೆ ಅನುಷ್ಠಾನ ನಿಯೋಗಗಳದ್ದಾಗಿದೆ. ಹೊಸದಾಗಿ ತರಬೇತಿ ಪಡೆದ ವ್ಯಕ್ತಿಗಳನ್ನು – ವಿಶೇಷವಾಗಿ ಗಣಕಯಂತ್ರ ಸಂಬಂಧಿತ ಕೌಶಲ್ಯದಲ್ಲಿರುವವರು – ಯೋಜನೆ ಅನುಷ್ಠಾನ ನಿಯೋಗಗಳು ಸ್ವತಃ ಸಹಾಯಕರಾಗಿ ನೇಮಿಸಿಕೊಂಡಿರುವ ಕೆಲವು ಉದಾಹರಣೆಗಳಿವೆ. ತರಬೇತಿ ಮಟ್ಟದಲ್ಲಿಯೇ ಕೈಗಾರಿಕೆಗಳು ಮತ್ತು ಕಾರ್ಪೊರೇಟ್‌ಗಳನ್ನು ತೊಡಗಿಸಿಕೊಳ್ಳುವ ಮೂಲಕ ಸರ್ಕಾರವು ಹೆಚ್ಚಿನ ಉದ್ಯೋಗವನ್ನು ಸುಗಮಗೊಳಿಸಬಹುದು. ಪೂರೈಕೆ–ಚಾಲಿತವಾಗುವ ಬದಲು ಕಾರ್ಯಕ್ರಮವು ಬೇಡಿಕೆ–ಚಾಲಿತವಾಗುವುದನ್ನು ಹೆಚ್ಚಿಸಬೇಕು.

ಮಾದರಿ ಜಿಲ್ಲೆಗಳಲ್ಲಿ ಮಾದರಿ ಫಲಾನುಭವಿಗಳ ಪ್ರತಿಕ್ರಿಯೆಯಂತೆ ಕೇವಲ 76 ಪ್ರತಿಶತದಷ್ಟು ಮಂದಿ ಮಾತ್ರ ಯೋಜನೆ ಅನುಷ್ಠಾನ ನಿಯೋಗಗಳ ಮೂಲಕ ಉದ್ಯೋಗ ನಿಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಸುಮಾರು 24 ಪ್ರತಿಶತ ತಾವು ಸೇವೆಯನ್ನು ಪಡೆದುಕೊಂಡಿಲ್ಲ ಎಂದು ವರದಿ ಮಾಡಿದ್ದಾರೆ. ತುಮಕೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಸುಮಾರು 100 ಪ್ರತಿಶತ ಉದ್ಯೋಗ ನಿಯೋಜನೆ ಕಂಡುಬಂದರೆ ಕಲಬುರಗಿ ಮತ್ತು ಬೆಂಗಳೂರು ನಗರಗಳಲ್ಲಿ ಕ್ರಮವಾಗಿ ಸುಮಾರು 84.14 ಮತ್ತು 76.12 ಪ್ರತಿಶತದಷ್ಟು ಉದ್ಯೋಗ ನಿಯೋಜನೆ ಇದೆ. ರಾಯಚೂರು ಜಿಲ್ಲೆಯಲ್ಲಿ ಕೂಡ ಅಲ್ಲಿನ ಸುಮಾರು ಮುಕ್ಕಾಲು ಭಾಗದಷ್ಟು ಫಲಾನುಭವಿಗಳು ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಮತ್ತು ಇದರಲ್ಲಿ ಬೆಳಗಾವಿ ಜಿಲ್ಲೆ ಕನಿಷ್ಠ ಮಟ್ಟದಲ್ಲಿದೆ.

**ಕೋಷ್ಟಕ 10.2.16: ಜಿಲ್ಲೆಗಳಲ್ಲಿ ಪಡೆಯಲಾಗಿರುವ ಉದ್ಯೋಗ ನಿಯೋಜನೆ**

| ಜಿಲ್ಲೆ | ಪಡೆಯಲಾಗಿರುವ ಉದ್ಯೋಗ ನಿಯೋಜನೆ (%) | | ಒಟ್ಟು ಸಂಖ್ಯೆ |
|---|---|---|---|
| | ಹೌದು | ಇಲ್ಲ | |
| ಬೆಂಗಳೂರು – ನಗರ | 76.12 | 23.88 | 469 |
| ಬೆಳಗಾವಿ | 41.88 | 58.13 | 160 |
| ಧಾರವಾಡ | 67.53 | 32.47 | 693 |
| ಕಲಬುರಗಿ | 84.14 | 15.86 | 435 |
| ಕೊಡಗು | 99.03 | 0.97 | 308 |
| ಮಂಡ್ಯ | 71.82 | 28.18 | 110 |
| ರಾಯಚೂರು | 75.00 | 25.00 | 32 |
| ತುಮಕೂರು | 100.00 | | 98 |
| ಒಟ್ಟು % | 76.53 | 23.47 | 2305 |
| ಸಂಖ್ಯೆ | 1764 | 541 | |
| ಸೂಚನೆ: ಬೇರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | |

ಮೂಲ: ಪ್ರಾಥಮಿಕ ದತ್ತಾಂಶ

ಇಷ್ಟು ಕಡಿಮೆ ಉದ್ಯೋಗ ನಿಯೋಜನೆ ದರ ಏಕೆ ಎಂದು ಬೆಳಗಾವಿಯ ಯೋಜನೆ ಅನುಷ್ಠಾನ ನಿಯೋಗ ಪ್ರತಿನಿಧಿಯನ್ನು ಪ್ರಶ್ನಿಸಿದಾಗ ಬಂದ ಪ್ರತಿಕ್ರಿಯೆಯು ಸಮಾಧಾನಕರವಾಗಿಲ್ಲ. "ನಾವು ನಿಯೋಜನೆ ಸೇವೆಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದೇವೆ ಆದರೆ ಫಲಾನುಭವಿಗಳು ತಮ್ಮ ಉದ್ಯೋಗವನ್ನು ತೊರೆದು ತಮ್ಮ ಹಳ್ಳಿಗಳಿಗೆ ಹಿಂದಿರುಗಿದರೆ ಅಥವಾ ಇತರ ಉದ್ಯೋಗವನ್ನು ಬಯಸಿದರೆ ನಾವು ಜವಾಬ್ದಾರರಲ್ಲ."



| ಕೋಷ್ಟಕ 10.2.17: ಬೆಳಗಾವಿಯಲ್ಲಿ ಪಡೆದ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನಿಯೋಜನೆ | | | | |
|---|---|---|---|---|
| ಕೌಶಲ್ಯ ತರಬೇತಿ ಪಡೆಯಲಾಗಿದೆ | ಪಡೆಯಲಾಗಿರುವ ಉದ್ಯೋಗ ನಿಯೋಜನೆ | | ಒಟ್ಟು | |
| | ಹೌದು | ಇಲ್ಲ | % | ಸಂಖ್ಯೆ |
| ಮೊಬೈಲ್ ಅಂಗಡಿಗಳು | 2.99 | 3.23 | 3.13 | 5 |
| ಸಾಮಾನ್ಯ ಅಂಗಡಿ | 2.99 | 6.45 | 5.00 | 8 |
| ಗಣಕಯಂತ್ರಗಳು &ಅಂಗಡಿ | 62.69 | 7.53 | 30.63 | 49 |
| ಆಟೋಮೊಬೈಲ್ | 17.91 | 10.75 | 13.75 | 22 |
| ವಿದ್ಯುತ್ ಸೇವೆಗಳು | 4.48 | 10.75 | 8.13 | 13 |
| ಹೈನುಗಾರಿಕೆ | | 15.05 | 8.75 | 14 |
| ಬ್ಯೂಟಿ ಪಾರ್ಲರ್ | 2.99 | 21.51 | 13.75 | 22 |
| ಹೊಲಿಗೆ ಕೆಲಸ | 5.97 | 24.73 | 16.88 | 27 |
| ಒಟ್ಟು % | 41.88 | 58.13 | **160** | |
| ಸಂಖ್ಯೆ | 67 | 93 | | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | |

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ 10.2.17 ಸೂಚಿಸುವಂತೆ ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚು ಬೇಡಿಕೆಯಿಲ್ಲದ ನಿರ್ದಿಷ್ಟ ಕೌಶಲ್ಯಗಳೊಂದಿಗೆ ಗಣನೀಯ ಸಂಬಂಧವಿದೆ ಅಂದರೆ ಕನಿಷ್ಟ ಸ್ಥಳೀಯವಾಗಿ ತರಬೇತಿ ಪಡೆದ ವ್ಯಕ್ತಿಗಳಿಗೆ ಇತರೆ ಕೌಶಲ್ಯಗಳಿಗೆ ಹೋಲಿಸಿದರೆ ಸುಲಭವಾಗಿ ಉದ್ಯೋಗ ನಿಯೋಜನೆ ಸಾಧ್ಯವಾಗುವುದಿಲ್ಲ. ಒಟ್ಟಾರೆ ಕಡಿಮೆ ಉದ್ಯೋಗ ನಿಯೋಜನೆಯ ದರ ಇದ್ದ ಬೆಳಗಾವಿಯಲ್ಲಿ ಹೊಲಿಗೆ ಕೆಲಸ (24.73 ಪ್ರತಿಶತ), ಬ್ಯೂಟಿ ಪಾರ್ಲರ್ (21.51 ಪ್ರತಿಶತ), ಮತ್ತು ಹೈನುಗಾರಿಕೆ (15.05 ಪ್ರತಿಶತ) ಉದ್ಯೋಗ ನಿಯೋಜನೆಯಲ್ಲಿ ವಿಫಲವಾದ ನಿದರ್ಶನಗಳು ಅತ್ಯಧಿಕವಾಗಿವೆ. ಒಟ್ಟಿನಲ್ಲಿ ಇವುಗಳಲ್ಲಿ ವೈಫಲ್ಯ ಪ್ರಕರಣಗಳು ಶೇಕಡಾ 61ಕ್ಕೂ ಹೆಚ್ಚಾಗಿವೆ. ಫಲಾನುಭವಿಯು ಯಾವ ರೀತಿಯ ಕೌಶಲ್ಯ ತರಬೇತಿಯನ್ನು ಪಡೆದಿದ್ದಾನೆ ಮತ್ತು ಉದ್ಯೋಗ ನಿಯೋಜನೆಯಲ್ಲಿ ಯಶಸ್ವಿಯಾಗಿದ್ದಾನೆಯೇ ಎಂಬುದರ ನಡುವೆ ಸಂಬಂಧವಿದೆ.

**ರೇಖಾ ಚಿತ್ರ 10.2.4:** ಸ್ವೀಕರಿಸಿದ ಕೌಶಲ್ಯ ತರಬೇತಿ ಮತ್ತು ಪಡೆದುಕೊಂಡ ಉದ್ಯೋಗ ನಿಯೋಜನೆ



| ಕೋಷ್ಟಕ ಸಂಖ್ಯೆ 10.2.18: ಪಡೆದ ಕೌಶಲ್ಯ ತರಬೇತಿ ಮತ್ತು ಉದ್ಯೋಗ ನಿಯೋಜನೆ | | | |
|---|---|---|---|
| ಕೌಶಲ್ಯ ತರಬೇತಿ ಪಡೆಯಲಾಗಿದೆ | ಪಡೆಯಲಾಗಿರುವ ಉದ್ಯೋಗ ನಿಯೋಜನೆ | | ಒಟ್ಟು |
| | ಹೌದು | ಇಲ್ಲ | |
| ಸಾಮಾನ್ಯ ಅಂಗಡಿ | 58.73 | 41.27 | 189 |
| ಹೊಲಿಗೆ ಕೆಲಸ | 82.48 | 17.52 | 742 |
| ಆಟೋಮೊಬೈಲ್ | 70.96 | 29.04 | 272 |
| ಮೊಬೈಲ್ ಅಂಗಡಿಗಳು | 69.44 | 30.56 | 36 |
| ವಿದ್ಯುತ್ ಸೇವೆಗಳು | 53.41 | 46.59 | 88 |
| ಬ್ಯೂಟಿ ಪಾರ್ಲರ್ | 68.87 | 31.13 | 151 |
| ಗಣಕಯಂತ್ರಗಳು &ಅಂಗಡಿ | 83.99 | 16.01 | 556 |
| ಮರಗೆಲಸ | 47.83 | 52.17 | 23 |
| ಹೋಟೆಲ್ | 90.00 | 10.00 | 10 |
| ಹೈನುಗಾರಿಕೆ | 77.88 | 22.12 | 208 |
| ಇತರೆ | 76.67 | 23.33 | 30 |
| ಒಟ್ಟು % | 76.53 | 23.47 | 2305 |
| ಸಂಖ್ಯೆ | **1764** | **541** | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ ಇತರೆ ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ. | | | |

ಮೂಲ: ಪ್ರಾಥಮಿಕ ದತ್ತಾಂಶ

ಯಾವ ಕೌಶಲ್ಯವು ಇತರೆ ಕೌಶಲ್ಯಗಳಿಗಿಂತ ಉತ್ತಮ ಉದ್ಯೋಗಾವಕಾಶವನ್ನು ಹೊಂದಿದೆ ಎಂಬ ವಿಷಯದಲ್ಲಿ ವ್ಯತ್ಯಾಸವಿದೆ ಎಂಬುದು ಗಮನಾರ್ಹ. **ಮೌಲ್ಯಮಾಪನ ಅಧ್ಯಯನವು ಗ್ರಾಮೀಣ ನಿರುದ್ಯೋಗಿಗಳಿಗೆ ತರಬೇತಿ ನೀಡಬೇಕಾದ ವಿವಿಧ ಕೌಶಲ್ಯಗಳನ್ನು ಆಯ್ಕೆ ಮಾಡುವುದು, ವಿಶೇಷವಾಗಿ ಗ್ರಾಮೀಣ-ನಗರ ವಲಸೆ ತಡೆಗಟ್ಟಲು, ವಿವಿಧ ಜಿಲ್ಲೆಗಳಲ್ಲಿ ಇರಬಹುದಾದ ಕೌಶಲ್ಯ ಅಂತರಗಳ ಪ್ರಾಥಮಿಕ ಸಮೀಕ್ಷೆ ಅಥವಾ ಮಾಪನ ಮಾಡಬೇಕು ಎಂದು ಶಿಫಾರಸ್ಸು ಮಾಡುತ್ತದೆ. ಸಾಧ್ಯವಾದಲ್ಲಿ ಈ ಕಾರ್ಯಕ್ರಮಕ್ಕೆ ನಿರುದ್ಯೋಗಿ ಯುವಕರನ್ನು ದಾಖಲಿಸುವಾಗ ಸಂಭಾವ್ಯ ಉದ್ಯೋಗದಾತರ ಅಭಿಪ್ರಾಯಗಳನ್ನು ಕೋರಬಹುದು.**

ಕೆಲವು ಕೌಶಲ್ಯ ಗುಂಪುಗಳು ಸಂಸ್ಥೆ ಅಥವಾ ಖಾಸಗಿ ಉದ್ಯಮಿಗಾಗಿ ಕೆಲಸ ಮಾಡುವಲ್ಲಿ ಉದ್ಯೋಗವನ್ನು ಪ್ರೋತ್ಸಾಹಿಸುವುದಿಲ್ಲ. ಬದಲಾಗಿ ಅವು ಕೆಲವು ಜಿಲ್ಲೆಗಳಲ್ಲಿಯಾದರೂ ಸ್ವಯಂ ಉದ್ಯೋಗವನ್ನು ಉತ್ತೇಜಿಸುವಂತಹ ಕೌಶಲ್ಯಗಳಾಗಿವೆ. ಉದಾ: ಹೊಲಿಗೆ ಕೆಲಸ, ಸಾಮಾನ್ಯ ಅಂಗಡಿಗಳು, ಹೈನುಗಾರಿಕೆ, ಮರಗೆಲಸ. ತಾತ್ವಿಕವಾಗಿ, ಕೌಶಲ್ಯ ಪ್ರಕ್ರಿಯೆಯ ಮೂಲಕ ಸ್ವಯಂ ಉದ್ಯೋಗವನ್ನು ಸಕ್ರಿಯಗೊಳಿಸುವುದು ಯಾವುದೇ ತಪ್ಪಿಲ್ಲವಾದರೂ, ಫಲಾನುಭವಿಗಳನ್ನು ನೇಮಿಸಿಕೊಳ್ಳದಿರುವುದು ವಿಫಲತೆಯ ಉಬ್ಬರಕ್ಕೆ ಎಡೆಮಾಡಿಕೊಡುತ್ತದೆ. ಅನೇಕ ಯುವಕರು

ಕೌಶಲ್ಯ ತರಬೇತಿ ಪಡೆದ ನಂತರ ಹೈನುಗಾರಿಕೆ, ವಿದ್ಯುತ್ ಸೇವೆಗಳು ಅಥವಾ ಹೊಲಿಗೆ ಕೆಲಸದಂತಹ ತಮ್ಮದೇ ಆದ ದೈನಂದಿನ ಕೆಲಸಕ್ಕೆ ಮರಳಿದ್ದಾರೆ.

**10.2.11 ಕೌಶಲ್ಯ ಮತ್ತು ಉದ್ಯೋಗ: ಹೊಂದಾಣಿಕೆ ಮತ್ತು ಹೊಂದಾಣಿಕೆ ಇಲ್ಲದಿರುವುದು**

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ಉದ್ಯೋಗ ಘಟಕದ ಯಶಸ್ಸನ್ನು ಮೌಲ್ಯಮಾಪನ ಮಾಡುವ ಮತ್ತೊಂದು ಅಗತ್ಯ ವಿಧಾನವಿದೆ. ವ್ಯಕ್ತಿಗಳಿಗೆ ಅವರು ಆಯ್ಕೆ ಮಾಡಿದ ಕೌಶಲ್ಯಗಳಲ್ಲಿ ತರಬೇತಿ ನೀಡಿದರೆ ಮತ್ತು ನಂತರ ಉದ್ಯೋಗವನ್ನು ಒದಗಿಸಿದರೆ ಅದು ಸಾಕಾಗುವುದಿಲ್ಲ. ಅವರು ಕೌಶಲ್ಯ ಪಡೆದ ನಂತರ ಅದೇ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಉದ್ಯೋಗವನ್ನು ಕಂಡುಕೊಳ್ಳುವುದು ಸಹ ನಿರ್ಣಾಯಕವಾಗಿದೆ. ಹೀಗಾಗಿ ಗಣಕಯಂತ್ರಗಳಲ್ಲಿ ಕೌಶಲ್ಯ ಪಡೆದು ಉದ್ಯೋಗಕ್ಕೆ ಸೇರುವಾಗ ಯೋಜನೆ ಅನುಷ್ಠಾನ ನಿಯೋಗಮೂಲಕ ಅಥವಾ ಸಂಬಂಧವಿಲ್ಲದ ಕ್ಷೇತ್ರದಲ್ಲಿ – ಉದಾಹರಣೆಗೆ ಹೈನುಗಾರಿಕೆ, ಸಾಮಾನ್ಯ ಅಂಗಡಿ ಅಥವಾ ಮರಗೆಲಸದಲ್ಲಿ– ಸ್ವತಂತ್ರವಾಗಿ ಉದ್ಯೋಗ ಪಡೆಯುವುದರಲ್ಲಿ ಯಾವುದೇ ಅರ್ಥವಿಲ್ಲ. ಉತ್ತಮ ತರಬೇತಿ ಅಥವಾ ಕೌಶಲ್ಯಗಳನ್ನು ಪಡೆದ ನುರಿತ ವ್ಯಕ್ತಿಗಳು ಅದೇ ಕ್ಷೇತ್ರದಲ್ಲಿ ಉದ್ಯೋಗವನ್ನು ಪಡೆದರೆ, ಕಾರ್ಯಕ್ರಮದ ಯಶಸ್ಸು ಹೆಚ್ಚಿನದಾಗಿದೆ ಎಂದು ಪರಿಗಣಿಸಬಹುದು. ಈ ಮೌಲ್ಯಮಾಪನ ಅಧ್ಯಯನದ ದತ್ತಾಂಶವನ್ನು ಮಾದರಿ ಜಿಲ್ಲೆಗಳಾದ್ಯಂತ ಮತ್ತು ವಿವಿಧ ಕೌಶಲ್ಯ ಕ್ಷೇತ್ರಗಳಿಂದ ಹೊಂದಾಣಿಕೆ ಅಥವಾ ಹೊಂದಾಣಿಕೆಯಿಲ್ಲದ ವ್ಯಾಪ್ತಿ ಪರಿಶೀಲಿಸಲು ಅಡ್ಡ ಪರಿಶೀಲನೆ ಮಾಡಲಾಯಿತು. ಬೇರೆ ರೀತಿಯಲಿ ಹೇಳುವುದಾದರೆ ಕೆಲವು ಜಿಲ್ಲೆಗಳು ಇತರ ಜಿಲ್ಲೆಗಳಿಗಿಂತ ಹೊಂದಿಕೆಯಾಗುವ ಕೌಶಲ್ಯ ಮತ್ತು ಉದ್ಯೋಗವನ್ನು ಕಂಡುಹಿಡಿಯಲು ಹೆಚ್ಚು ಅನುಕೂಲಕರವಾಗಿವೆಯೇ ಎಂದು ಮೌಲ್ಯಮಾಪನ ಮಾಡುವುದು ನಮ್ಮ ಕಾಳಜಿಯಾಗಿತ್ತು. ಅಂತೆಯೇ ಇತರೆ ಕೌಶಲ್ಯಗಳಿಗಿಂತ ಕೆಲವು ಕೌಶಲ್ಯಗಳಲ್ಲಿ ಸಂಬಂಧಿತ ಕ್ಷೇತ್ರದಲ್ಲಿ ಉದ್ಯೋಗವನ್ನು ಹುಡುಕುವ ಸಾಧ್ಯತೆ ಹೆಚ್ಚು ಎಂದು ಪರಿಶೀಲಿಸುವ ಪ್ರಯತ್ನವನ್ನೂ ಮಾಡಲಾಗಿದೆ. ಈ ಎರಡು ಸೂಚಕಗಳ ಬಗ್ಗೆ ಕೋಷ್ಟಕ 10.2.19 ಮತ್ತು 10.2.20 ದತ್ತಾಂಶವನ್ನು ಪ್ರಸ್ತುತಪಡಿಸುತ್ತವೆ.

| ಕೋಷ್ಟಕ ಸಂಖ್ಯೆ 10.2.19: ಪಡೆದುಕೊಂಡಿರುವ ಕೌಶಲ್ಯ ಮತ್ತು ಉದ್ಯೋಗ ಹೊಂದಾಣಿಕೆ ಅಥವಾ ಹೊಂದಾಣಿಕೆ ಇಲ್ಲದಿರುವುದು | | | | | | |
|---|---|---|---|---|---|---|
| ಜಿಲ್ಲೆ | ನಿಯೋಜನೆಯೊಂದಿಗೆ | | ನಿಯೋಜನೆ ಇಲ್ಲ | | | ಒಟ್ಟು ಸಂಖ್ಯೆ |
| | ಕೌಶಲ್ಯಭರಿತ | ಹೊಂದಾಣಿಕೆಯಾಗುತ್ತಿಲ್ಲ | ವಿಭಿನ್ನವಾದ ಉದ್ಯೋಗ | ಕೌಶಲ್ಯದಿಂದ ಉದ್ಯೋಗ | ನಿರುದ್ಯೋಗಿಗಳು | |
| ಬೆಂಗಳೂರು – ನಗರ | 75.48 | 0.64 | 2.35 | | 21.54 | 469 |
| ಬೆಳಗಾವಿ | 36.25 | 5.63 | 57.50 | 0.63 | | 160 |
| ಧಾರವಾಡ | 60.32 | 7.22 | 32.18 | 0.29 | | 693 |
| ಕಲಬುರಗಿ | 83.91 | 0.23 | 15.86 | | | 435 |
| ಕೊಡಗು | 99.03 | | 0.97 | | | 308 |
| ಮಂಡ್ಯ | 66.36 | 5.45 | 27.27 | 0.91 | | 110 |
| ರಾಯಚೂರು | 75.00 | | 25.00 | | | 32 |
| ತುಮಕೂರು | 100.00 | | | | | 98 |
| ಒಟ್ಟು % | 73.54 | 2.99 | **18.92** | **0.17** | **4.38** | **2305** |
| ಇಲ್ಲ. | 1695 | 69 | **436** | **4** | **101** | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾವಾರುಗಳಲ್ಲಿವೆ | | | | | | |

| ಕೋಷ್ಟಕ 10.2.20: ಪಡೆದುಕೊಂಡಿರುವ ಕೌಶಲ್ಯ ಮತ್ತು ಉದ್ಯೋಗ ಹೊಂದಾಣಿಕೆ ಅಥವಾ ಹೊಂದಾಣಿಕೆಯಾಗದಿರುವುದು | | | | | | |
|---|---|---|---|---|---|---|
| ಕೌಶಲ್ಯ ತರಬೇತಿ ಪಡೆಯಲಾಗಿದೆ | ನಿಯೋಜನೆಯೊಂದಿಗೆ | | ನಿಯೋಜನೆ ಇಲ್ಲ | | | ಒಟ್ಟು |
| | ಕೌಶಲ್ಯಭರಿತ | ಹೊಂದಾಣಿಕೆಯಾಗುತ್ತಿಲ್ಲ | ವಿಭಿನ್ನವಾದ ಉದ್ಯೋಗ | ಕೌಶಲ್ಯದಿಂದ ಉದ್ಯೋಗ | ನಿರುದ್ಯೋಗಿಗಳು | |
| ಸಾಮಾನ್ಯ ಅಂಗಡಿ | 53.97 | 4.76 | 189 | | 4.23 | 189 |
| ಹೊಲಿಗೆ ಕೆಲಸ | 80.86 | 1.62 | 742 | | 4.58 | 742 |
| ಆಟೋಮೊಬೈಲ್ | 69.49 | 1.47 | 272 | | 6.99 | 272 |
| ಮೊಬೈಲ್ ಅಂಗಡಿಗಳು | 66.67 | 2.78 | 36 | | 5.56 | 36 |
| ವಿದ್ಯುತ್ ಸೇವೆಗಳು | 48.86 | 4.55 | 88 | | | 88 |
| ಬ್ಯೂಟಿ ಪಾರ್ಲರ್ | 66.23 | 2.65 | 151 | | 2.65 | 151 |
| ಗಣಕ ಯಂತ್ರಗಳು & ಅಂಗಡಿ | 83.81 | 0.18 | 556 | 0.72 | 5.04 | 556 |
| ಮರಗೆಲಸ | 34.78 | 13.04 | 23 | | | 23 |
| ಹೋಟೆಲ್ | 90.00 | | 10 | | | 10 |
| ಹೈನುಗಾರಿಕೆ | 62.98 | 14.90 | 208 | | 2.40 | 208 |
| ಇತರೆ | 76.67 | | 30 | | 3.33 | 30 |
| ಒಟ್ಟು % | 73.54 | 2.99 | 2305 | 0.17 | 4.38 | **2305** |
| ಸಂಖ್ಯೆ | 1695 | 69 | 436 | 4 | 101 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ "ಇತರೆ' ವಿವರಗಳಿಗಾಗಿ, ದಯವಿಟ್ಟು ಅಡಿ ಟಿಪ್ಪಣಿ 5 ಅನ್ನು ನೋಡಿ. | | | | | | |

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕಗಳು 10.2.19 ಮತ್ತು 10.2.20, ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ಉದ್ಯೋಗ ಘಟಕದ ಪ್ರಮುಖ ಪರಿಣಾಮದ ಮೇಲೆ ಕೇಂದ್ರೀಕೃತವಾಗಿವೆ. ಸುಮಾರು 75 ಪ್ರತಿಶತ ಫಲಾನುಭವಿಗಳಿಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗದಲ್ಲಿ ನಿಯೋಜಿಸಲಾಗಿದೆಎಂದು ಫಲಿತಾಂಶಗಳ ಬಗ್ಗೆ ನಮ್ಮ ಹಿಂದಿನ ಚರ್ಚೆಗಳಿಂದ ತಿಳಿದುಬಂದಿದೆ. ಸುಮಾರು 73 ಪ್ರತಿಶತ ಪ್ರಕರಣಗಳಲ್ಲಿ, ಅವರು ಕೌಶಲ್ಯ ಪಡೆದುಕೊಂಡ ಕ್ಷೇತ್ರಗಳು ಮತ್ತು ಅವರು ಕೆಲಸ ಮಾಡುತ್ತಿರುವ ಕ್ಷೇತ್ರದ ನಡುವೆ ಹೊಂದಾಣಿಕೆ ಇದೆ. ಹೊಂದಾಣಿಕೆಯಾಗದ ನಿದರ್ಶನಗಳು ಕೇವಲ 2.99 ಪ್ರತಿಶತ ಪ್ರಕರಣಗಳಲ್ಲಿವೆ. ಸುಮಾರು 19 ಪ್ರತಿಶತ ಫಲಾನುಭವಿಗಳು, ಅವರಿಗೆ ಕೌಶಲ್ಯ ತರಬೇತಿ ನೀಡಿದ ಕ್ಷೇತ್ರಗಳನ್ನು ಹೊರತುಪಡಿಸಿ ಇತರ ಕ್ಷೇತ್ರಗಳಲ್ಲಿ ಜೀವನೋಪಾಯವನ್ನು ನಡೆಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಪ್ರಸ್ತುತ ಮೌಲ್ಯಮಾಪನ ಅಧ್ಯಯನವು ಮಾಡುವ ಒಂದು ನೀತಿ ಸಲಹೆಯೆಂದರೆ, ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ಉದ್ಯೋಗ ಘಟಕದಲ್ಲಿ ನಿಯೋಜನೆ ಭಾಗವನ್ನು ಗುರಿಯಾಗಿಸಿಕೊಳ್ಳುವ ಜೊತೆಗೆ ಕಾರ್ಯಕ್ರಮದ ಉದ್ಯಮಶೀಲತೆ ಮತ್ತು ಸ್ವಯಂ ಉದ್ಯೋಗ ಘಟಕವನ್ನು ಉತ್ತೇಜಿಸಲು ಸಹ ಸಾಧ್ಯವಾಗಬೇಕು. ಇವೆರಡೂ ಪರಸ್ಪರ ಪ್ರತ್ಯೇಕವಾಗಿ ಉಳಿಯಬೇಕಾಗಿಲ್ಲ. ಬದಲಾಗಿ ಅವರು ಸಾಂಸ್ಥಿಕ ಸಾಲ ಮತ್ತು ಸಹಾಯಧನ ಸಾಲಗಳನ್ನು ಬೆಂಬಲಿಸುವ ಮೂಲಕ ಸ್ವಯಂ ಉದ್ಯೋಗವನ್ನು ಆಯ್ಕೆ ಮೇರೆಗೆ ಉತ್ತೇಜಿಸಲಾಗುತ್ತದೆ. ಇದನ್ನು ಅನುಸರಿಸಿದಾಗ ಕೌಶಲ್ಯಕ್ಕಾಗಿ ಖರ್ಚು ಮಾಡಿದ ಸಂಪನ್ಮೂಲಗಳು ವ್ಯರ್ಥವಾಗುವುದಿಲ್ಲ ಮತ್ತು ನಿರ್ಣಾಯಕ ಕಾರ್ಯಕ್ರಮದ ಎರಡೂ ಘಟಕಗಳು ಪರಸ್ಪರ ಬೆಂಬಲಿಸುತ್ತವೆ. ಇದಲ್ಲದೆ ಕೆಲವರಿಗೆ ಹೆಚ್ಚಿನ ಬೇಡಿಕೆ ಇದ್ದರೂ ಸಹ ಯೋಜನೆ ಅನುಷ್ಠಾನ ನಿಯೋಗಗಳು ಇತರೆಗಿಂತ ಉತ್ತಮ ಉದ್ಯೋಗಾವಕಾಶಗಳನ್ನು ಹೊಂದಿರುವ ಕೌಶಲ್ಯ ಕ್ಷೇತ್ರಗಳ ಮೇಲೆ ಗಮನ ಹರಿಸಬೇಕಾಗಿದೆ. ಸ್ಥಳೀಯವಾಗಿ ಸಂಭಾವ್ಯ ಉದ್ಯೋಗದಾತರೊಂದಿಗೆ ಪೂರ್ವ ವ್ಯವಸ್ಥೆ ಮತ್ತು ಸರಿಯಾದ ಮಾನವ ಸಂಪನ್ಮೂಲ ಯೋಜನೆಯನ್ನು ಜಂಟಿಯಾಗಿ ನಡೆಸಬೇಕಾಗಿದೆ. ಏಕೆಂದರೆ ಸತತ ವರ್ಷಗಳಲ್ಲಿ ತರಬೇತಿ ಪಡೆದವರ ಪ್ರವೇಶಾವಕಾಶ ಅಂತಹ ಬೇಡಿಕೆ ಮ್ಯಾಪಿಂಗ್‌ಗೆ ಅನುಗುಣವಾಗಿರುತ್ತದೆ.

**ಕೌಶಲ್ಯ ಪಡೆದಿದ್ದಾರೆ ಆದರೆ ನಿಯೋಜನೆ ಇಲ್ಲ – ಅವರು ಏನು ಮಾಡುತ್ತಿದ್ದಾರೆ?**

541 ಫಲಾನುಭವಿಗಳಿಗೆ (ಮಾದರಿಯ 23.5 ಪ್ರತಿಶತ) ಸಂಬಂಧಿಸಿದಂತೆ ಯಾವುದೇ ನಿಯೋಜನೆ ಸೇವೆಗಳು ಇರಲಿಲ್ಲ ಎಂದು ಗುರುತಿಸಲಾಗಿದೆ. ಅವರನ್ನು ಮೌಲ್ಯಮಾಪನದ ನಿಯಂತ್ರಣ ಗುಂಪು ಎಂದು ಪರಿಗಣಿಸಿದಾಗ – ಅಂದರೆ, ಕೌಶಲ್ಯ ಪಡೆದು ಉದ್ಯೋಗ ಪ್ರಯೋಜನವನ್ನು ಪಡೆಯದವರು – ಸುಮಾರು 80.6 ಪ್ರತಿಶತದಷ್ಟು ಫಲಾನುಭವಿಗಳು ತರಬೇತಿ ಪಡೆದ ಕ್ಷೇತ್ರಗಳನ್ನು ಹೊರತುಪಡಿಸಿ ಇತರೆ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿದ್ದಾರೆ ಎಂದು ತಿಳಿದು ಬಂದಿದೆ. ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ ಬಹಳಷ್ಟು ಮಂದಿ ಕೌಶಲ್ಯ ಪಡೆದ ಕ್ಷೇತ್ರವನ್ನು ಹೊರತುಪಡಿಸಿ ಬೇರಾವುದೋ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ ಅಥವಾ ತೊಡಗಿಸಿಕೊಂಡಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನ ನಿಯೋಗಗಳಿಂದ ಉದ್ಯೋಗದಲ್ಲಿ ಸ್ಥಾನ ಪಡೆಯದ ಗರಿಷ್ಠ ವ್ಯಕ್ತಿಗಳು ನಿರುದ್ಯೋಗಿಗಳಾಗಿದ್ದಾರೆ. ಸೂಕ್ತ ಉದ್ಯೋಗ ನಿಯೋಜನೆ ಸೇವೆಗಳು ರಾಜೀವ್ ಗಾಂಧಿ ಚೈತನ್ಯ ಯೋಜನೆಯಂತಹ ಕಾರ್ಯಕ್ರಮದಲ್ಲಿ ವ್ಯಾಪಾರ ಮತ್ತು ಸೇವೆಗಳಲ್ಲಿ ಪಡೆದ ಕೌಶಲ್ಯವನ್ನು ಪರಿಗಣಿಸದಿದ್ದಲ್ಲಿ ಕೌಶಲ್ಯ ಘಟಕವು ವ್ಯರ್ಥವಾಗುತ್ತದೆ ಎಂಬುದು ತಿಳಿದು ಬರುತ್ತದೆ. ಕೌಶಲ್ಯ ತರಬೇತಿ ಪಡೆದು ನಿಯೋಜನೆ ಇಲ್ಲದ ಹೆಚ್ಚಿನವರು ಅವರು ಗಳಿಸಿದ ಕೌಶಲ್ಯಗಳಿಗೆ ಸಂಬಂಧವಿಲ್ಲದ ಕೆಲಸವನ್ನು ಮಾಡುತ್ತಿದ್ದಾರೆ. ಬೆಳಗಾವಿ ಮತ್ತು ಧಾರವಾಡದ ತಲಾ ಒಬ್ಬರು

ಮತ್ತು ಮಂಡ್ಯದ ಇಬ್ಬರು ಮಾತ್ರ ತಮ್ಮ ಕೌಶಲ್ಯಕ್ಕೆ ಸಂಬಂಧಿಸಿದ ಉದ್ಯೋಗ ನಿಯೋಜನೆಯಲ್ಲಿ ವಿಫಲರಾದಾಗ ಅದೇ ಕ್ಷೇತ್ರದಲ್ಲಿ ಉದ್ಯೋಗ ಮುಂದುವರೆಸುತ್ತಿದ್ದಾರೆ.

**ಕೋಷ್ಟಕ 10.2.21: ಕೌಶಲ್ಯ ಪಡೆದಿದ್ದಾರೆ ಆದರೆ ನಿಯೋಜನೆ ಇಲ್ಲ – ಅವರು ಏನು ಮಾಡುತ್ತಿದ್ದಾರೆ?**

| ಜಿಲ್ಲೆ | ಪಡೆದುಕೊಂಡ ಕೌಶಲ್ಯ ಮತ್ತು ಪ್ರಸ್ತುತ ಸ್ಥಿತಿಗತಿ (%) | | | ಒಟ್ಟು (ಸಂ.) |
|---|---|---|---|---|
| | ವಿಭಿನ್ನವಾದ ಉದ್ಯೋಗ | ಕೌಶಲ್ಯದಿಂದ ಉದ್ಯೋಗ | ನಿರುದ್ಯೋಗಿಗಳು | |
| ಬೆಂಗಳೂರು – ನಗರ | 9.82 | | 90.18 | 112 |
| ಬೆಳಗಾವಿ | 98.92 | 1.08 | | 93 |
| ಧಾರವಾಡ | 99.11 | 0.89 | | 225 |
| ಕಲಬುರಗಿ | 100.00 | | | 69 |
| ಕೊಡಗು | 100.00 | | | 3 |
| ಮಂಡ್ಯ | 96.77 | 3.23 | | 31 |
| ರಾಯಚೂರು | 100.00 | | | 8 |
| ಒಟ್ಟು % | 80.59 | 0.74 | 18.67 | 541 |
| ಸಂಖ್ಯೆ | 436 | 4 | 101 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | |

ಮೂಲ: ಪ್ರಾಥಮಿಕ ದತ್ತಾಂಶ

### 10.2.12 ಉದ್ಯೋಗದಲ್ಲಿ ನಿಯೋಜನೆಗಾಗಿ ತೆಗೆದುಕೊಂಡ ಸಮಯ:

ರಾಜೀವ್ ಗಾಂಧಿ ಚೈತನ್ಯ ಯೋಜನೆ (ವಿಶೇಷವಾಗಿ ಕೌಶಲ್ಯ ಮತ್ತು ಉದ್ಯೋಗ ಘಟಕ) ಕಾರ್ಯಕ್ರಮದ ಯಶಸ್ಸನ್ನು ಕೌಶಲ್ಯ ತರಬೇತಿಯನ್ನು ಪೂರ್ಣಗೊಳಿಸುವುದು ಮತ್ತು ಉದ್ಯೋಗವನ್ನು ಹುಡುಕುವ ನಡುವೆ ಕಳೆದ ಅಲ್ಪಾವಧಿಯ ಮೂಲಕ ಸಹ ಸೂಚಿಸಲಾಗುತ್ತದೆ. ಹೊಸದಾಗಿ ಕಲಿತ ಕೌಶಲ್ಯಗಳಲ್ಲಿ ಉದ್ಯೋಗ ಹುಡುಕಲು ಬಿಡದೆ ಅಥವಾ ಅವರನ್ನು ಸೋಮಾರಿಯಾಗಲು ಬಿಡದಿರುವ ಮೂಲಕ ಕಾರ್ಯಕ್ರಮದ ಪರಿಣಾಮಕಾರಿತ್ವ ಮತ್ತು ದಕ್ಷತೆಯನ್ನು ಪ್ರತಿಬಿಂಬಿಸುತ್ತದೆ ಪಡೆದ ಕೌಶಲ್ಯಗಳನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರುವುದರಿಂದ ಅವುಗಳನ್ನು ಪರಿಷ್ಕರಿಸಲು ಮತ್ತು ಶಾಶ್ವತವಾಗಿ ಉಳಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಕೋಷ್ಟಕ 10.2.22 ಕೌಶಲ್ಯ ತರಬೇತಿಯನ್ನು ಪೂರ್ಣಗೊಳಿಸುವುದು ಮತ್ತು ಉದ್ಯೋಗವನ್ನು ಹುಡುಕುವ ನಡುವಿನ ಅಂತರಕ್ಕೆ ಸಂಬಂಧಿಸಿದಂತೆ ವಿವಿಧ ಜಿಲ್ಲೆಗಳು ಹೇಗೆ ನಿಭಾಯಿಸಿವೆ ಎಂಬುದನ್ನು ಪ್ರಸ್ತುತ ಪಡಿಸುತ್ತದೆ. ಇಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯಲ್ಲಿ ನಿಯೋಗಗಳ ಪಾತ್ರದ ಪರಿಣಾಮವನ್ನು ಮೌಲ್ಯಮಾಪನ ಮಾಡುತಿರುವುದರಿಂದ ದತ್ತಾಂಶವು ಯೋಜನೆ ಅನುಷ್ಠಾನ ನಿಯೋಗಗಳ ಮೂಲಕ ನಿಯೋಜನೆ ಸೇವೆಯನ್ನು ಪಡೆಯುವಲ್ಲಿ ಯಶಸ್ವಿಯಾದವರಿಗೆ ಮಾತ್ರ ಸೀಮಿತವಾಗಿದೆ. ಸುಮಾರು ಕಾಲು ಭಾಗದಷ್ಟು ಫಲಾನುಭವಿಗಳು ಕೌಶಲ್ಯ ತರಬೇತಿ ಕಾರ್ಯಕ್ರಮ ಪೂರ್ಣಗೊಂಡ ಒಂದು ತಿಂಗಳೊಳಗೆ ಉದ್ಯೋಗವನ್ನು ಹುಡುಕುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಇದು ಖಂಡಿತವಾಗಿಯೂ ಸಣ್ಣ ಸಾಧನೆಯಲ್ಲ. ಸುಮಾರು ಸಮಾನ ಪ್ರಮಾಣದ ಫಲಾನುಭವಿಗಳು ತರಬೇತಿ ಪೂರ್ಣಗೊಂಡ ಮೂರು ತಿಂಗಳ ನಡುವೆ ಉದ್ಯೋಗವನ್ನು ಪಡೆಯುವಲ್ಲಿ

ಯಶಸ್ವಿಯಾಗಿದ್ದಾರೆ ಎಂದು ವರದಿ ಮಾಡಿದ್ದಾರೆ. ಆದ್ದರಿಂದ ತರಬೇತಿಯ ಮೊದಲ ಮೂರು ತಿಂಗಳೊಳಗೆ ಉದ್ಯೋಗವನ್ನು ಪಡೆಯುವಲ್ಲಿ ಯಶಸ್ವಿಯಾದವರು, ನಿಯೋಜನೆ ಸೇವೆಗಳನ್ನು ಪಡೆದ ಫಲಾನುಭವಿಗಳಲ್ಲಿ 50 ಪ್ರತಿಶತಕ್ಕಿಂತ ಸ್ವಲ್ಪ ಹೆಚ್ಚು ಈ ನಿಟ್ಟಿನಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ಉದ್ಯೋಗ ಘಟಕವು ಮೂರು ತಿಂಗಳೊಳಗೆ 50 ಪ್ರತಿಶತದಷ್ಟು ಪ್ರಭಾವಶಾಲಿ ಫಲಿತಾಂಶವನ್ನು ಹೊಂದಿದೆ.

**ಕೋಷ್ಟಕ ಸಂಖ್ಯೆ 10.2.22: ತರಬೇತಿ ಮತ್ತು ಉದ್ಯೋಗಕ್ಕೆ ಮೊದಲು ಅಂತರ**

| ಜಿಲ್ಲೆ | ತರಬೇತಿಯ ನಂತರ ಉದ್ಯೋಗಕ್ಕೆ ಮೊದಲು ಅಂತರ (% ಅಂಕಿಅಂಶಗಳು) | | | | ಒಟ್ಟು |
|---|---|---|---|---|---|
| | ಒಂದು ತಿಂಗಳಿಗಿಂತ ಕಡಿಮೆ | 2 ರಿಂದ 3 ತಿಂಗಳುಗಳು | 4 ರಿಂದ 6 ತಿಂಗಳುಗಳು | 7 ತಿಂಗಳುಗಳು ಅಥವಾ ಅದಕ್ಕಿಂತ ಹೆಚ್ಚು | |
| ಬೆಂಗಳೂರು – ನಗರ | | | 65.55 | 34.46 | 357 |
| ಬೆಳಗಾವಿ | | | 64.18 | 35.82 | 67 |
| ಧಾರವಾಡ | 48.29 | 41.88 | 9.40 | 0.43 | 468 |
| ಕಲಬುರಗಿ | 46.72 | 43.17 | 9.84 | 0.27 | 366 |
| ಕೊಡಗು | | | 65.25 | 34.75 | 305 |
| ಮಂಡ್ಯ | 18.99 | 53.16 | 27.85 | | 79 |
| ರಾಯಚೂರು | 16.67 | 37.50 | 45.83 | | 24 |
| ತುಮಕೂರು | 18.37 | 48.98 | 32.65 | | 98 |
| ಒಟ್ಟು % | 24.60 | 25.68 | 35.20 | 14.51 | |
| ಸಂಖ್ಯೆ | 434 | 453 | 621 | 256 | 1764 |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | |

ಮೂಲ: ಪ್ರಾಥಮಿಕ ದತ್ತಾಂಶ

ಈ ಯಶಸ್ಸಿಗಾಗಿ ಯೋಜನಾ ಅನುಷ್ಠಾನ ನಿಯೋಗಗಳನ್ನು ಪ್ರಶಂಸಿಸಬೇಕಾದ ಅಗತ್ಯವಿದ್ದರೂ, ಉದ್ಯೋಗವನ್ನು ಹುಡುಕಲು ಮೂರು ತಿಂಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡಿರುವ ಉಳಿದ ಅರ್ಧದಷ್ಟು ಫಲಾನುಭವಿಗಳಿಗೆ ಸಂಬಂಧಿಸಿದಂತೆ ಕಾಳಜಿವಹಿಸಬೇಕಾಗಿದೆ. ಉತ್ತಮವಾಗಿ ಯೋಚಿಸಿದ ಮತ್ತು ಸಂಪೂರ್ಣವಾಗಿ ಸಂಘಟಿತಗೊಂಡ ಕಾರ್ಯಕ್ರಮದ ಮೂಲಕ ತರಬೇತಿಯನ್ನು ಪೂರ್ಣಗೊಳಿಸಿ ಉದ್ಯೋಗವನ್ನು ಪಡೆಯುವ ಅಂತಿಮ ಹಂತದವರೆಗಿನ ವಿಳಂಬವು ಅದರಲ್ಲಿ ಕೆಲವು ಲೋಪದೋಷಗಳನ್ನು ನಿವಾರಿಸಬೇಕಾಗಿದೆಎಂದು ಸೂಚಿಸುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಯೋಜನೆ ಅನುಷ್ಠಾನ ನಿಯೋಗಗಳೊಂದಿಗೆ ವಿವರವಾದ ಚರ್ಚೆ ನಡೆಸಲಾಯಿತು. ಅಂತಹ ಚರ್ಚೆಯಲ್ಲಿ ಪ್ರಮುಖ ಗಮನವು ಕಾರ್ಯಕ್ರಮದ ಎರಡು ಅಂತಿಮ ಹಂತಗಳ ನಡುವೆ ಏಕೆ ಅಂತಹ ಅಂತರವಿರಬೇಕು ಎಂದು ತಿಳಿಯುವದಾಗಿತ್ತು. ಇದಲ್ಲದೆ ಕೆಲವು ಜಿಲ್ಲೆಗಳಲ್ಲಿ ಈ ವಿಷಯದಲ್ಲಿ ಕಾರ್ಯಕ್ಷಮತೆ ಏಕೆ ಕಳಪೆಯಾಗಿದೆ ಎಂಬುದನ್ನು ಕಂಡು ಹಿಡಿಯುವುದು ಗಮನಾರ್ಹವಾಗಿತ್ತು. ಬೆಂಗಳೂರು ನಗರ (34. 46 ಪ್ರತಿಶತ), ಬೆಳಗಾವಿ (35.82 ಪ್ರತಿಶತ) ಮತ್ತು ಕೊಡಗಿನಲ್ಲಿ 34.75 ಪ್ರತಿಶತದಷ್ಟರಲ್ಲಿ ಆರು ತಿಂಗಳಿಗಿಂತ ಹೆಚ್ಚು ವಿಳಂಬದ ನಿದರ್ಶನ ಇತ್ತು. ಈ ನಿಟ್ಟಿನಲ್ಲಿ ದೊರೆತ ಅನೇಕ ಪ್ರತಿಕ್ರಿಯೆಗಳು ಸ್ವಯಂ ವಿವರಣಾತ್ಮಕವಾಗಿದ್ದವು. ಆದ್ದರಿಂದ ಅವುಗಳನ್ನು ಕೇವಲ ಮುಖ್ಯಾಂಶಗಳು ಮತ್ತು ಅಗತ್ಯವಿರುವಲ್ಲಿ ಸಂಕ್ಷಿಪ್ತ ವಿವರಣೆ ಎಂದು ಕೆಳಗೆ ಪಟ್ಟಿ ಮಾಡಲಾಗಿದೆ.

- ನಾವು ಸಂಭಾವ್ಯ ಉದ್ಯೋಗದಾತರೊಂದಿಗೆ ತಿಳಿವಳಿಕೆ ಒಪ್ಪಂದವನ್ನು ಹೊಂದಿದ್ದರೂ, ತರಬೇತಿಯನ್ನು ಪೂರ್ಣಗೊಳಿಸಿದ ಅದೇ ದಿನಾಂಕದಿಂದ ತರಬೇತಿದಾರರನ್ನು ನೇಮಿಸಿಕೊಳ್ಳಲು ಅವರು ಬದ್ಧವಾಗಿರಬೇಕಿಲ್ಲ.
- ಕೆಲವು ಸಂದರ್ಭಗಳಲ್ಲಿ ಉದ್ಯೋಗದಾತರು ತಮ್ಮ ತರಬೇತಿಯನ್ನು ಹೊಸಬರಿಗೆ ನೀಡಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತಾರೆ ಮತ್ತು ಯಾವುದೇ ಉದ್ಯೋಗ ಒಪ್ಪಂದ ಅಥವಾ ವೇತನದ ಅಗತ್ಯವಿರುವುದಿಲ್ಲ.
- ಬಹಳ ಮುಂಚಿತವಾಗಿ ಉದ್ಯೋಗ ಪಡೆದಿದ್ದರೂ ಫಲಾನುಭವಿಗಳು ಮೂರು ಅಥವಾ ಆರು ತಿಂಗಳು ಎಂದು ಪೂರ್ಣ ಸಂಖ್ಯೆಯಲ್ಲಿ ಹೇಳುತ್ತಾರೆ.
- ಗಣನೀಯ ಅವಧಿಯ ತರಬೇತಿ ನಂತರ ತರಬೇತಿ ಪಡೆದವರು ಉದ್ಯೋಗವನ್ನು ನೀಡಿದ ನಂತರವೂ ಉದ್ಯೋಗಕ್ಕಾಗಿ ಸಮಯವನ್ನು ತೆಗೆದುಕೊಳ್ಳುತ್ತಾರೆ.
- ಕೆಲವೊಮ್ಮೆ ತರಬೇತಿದಾರರಿಗೆ ಮೊದಲೇ ಉದ್ಯೋಗ ನೀಡಿದ್ದರೂ ಸಹ ಉದ್ಯೋಗದ ಪ್ರಸ್ತಾಪವನ್ನು ಹಲವು ಕಾರಣಗಳಿಂದ – ಸಂಬಳವು ಅವರಿಗೆ ಸಾಕಷ್ಟು ಉತ್ತಮವಾಗಿಲ್ಲ ಕೆಲಸದ ಸ್ಥಳವು ಅನುಕೂಲಕರವಾಗಿಲ್ಲ ಅಥವಾ ಸಮಯವು ಸೂಕ್ತವಲ್ಲ – ತಿರಸ್ಕರಿಸುತ್ತಾರೆ. ವಿಳಂಬಕ್ಕೆ ಯೋಜನೆ ಅನುಷ್ಠಾನ ನಿಯೋಗಗಳನ್ನು ದೂಷಿಸಲಾಗುತ್ತದೆ!
- ಕೆಲವು ಜಿಲ್ಲೆಗಳಲ್ಲಿ ಅವರಿಗೆತರಬೇತಿ ನೀಡಿದ ಕ್ಷೇತ್ರದಲ್ಲಿ ಸ್ಥಳೀಯವಾಗಿ ಅವಕಾಶಗಳು ಲಭ್ಯವಿಲ್ಲದಿರುವುದರಿಂದ ವಿಳಂಬವು ಹೆಚ್ಚಾಗಿರುತ್ತದೆ.
- ಹೊಸದಾಗಿ ತರಬೇತಿ ಪಡೆದ ಮತ್ತು ನುರಿತ ವ್ಯಕ್ತಿಯು ಬೆಂಗಳೂರು ಅಥವಾ ಮೈಸೂರಿನಂತಹ ಕೆಲವು ನಗರಗಳಲ್ಲಿ ಮಾತ್ರ ಉದ್ಯೋಗವನ್ನು ಕಂಡುಕೊಳ್ಳುವ ಪ್ರವೃತ್ತಿ ಹೊಂದಿರುವುದರಿಂದ ಉದ್ಯೋಗವನ್ನು ಬಹಳ ಮುಂಚಿತವಾಗಿ ನೀಡಿದರೂ ತಮ್ಮ ದಾರಿಯಲ್ಲಿ ಏನು ಬರುತ್ತದೆಯೋ ಅದನ್ನು ತೆಗೆದುಕೊಳ್ಳುವುದಿಲ್ಲ.

ಈ ಹಂತದಲ್ಲಿ ಹೆಚ್ಚಿನ ಯೋಜನೆ ಅನುಷ್ಠಾನ ನಿಯೋಗಗಳು ಪಾವತಿಯ ಭಾಗಗಳನ್ನು ತಡೆಹಿಡಿಯುವ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ ಎಂದು ಸೂಚಿಸುವುದು ಸೂಕ್ತವಾಗಬಹುದು. ಆ ಕಾರಣದಿಂದಾಗಿ ತರಬೇತಿಗೆ ಪಾವತಿಸಬೇಕಾದ ಶುಲ್ಕ ಮತ್ತು ಸಲ್ಲಿಸಿದ ಸೇವೆಗಳಿಗೆ ಅವರಿಗೆ ತೊಂದರೆ ಉಂಟಾಗುತ್ತಿದೆ. ಅವರಲ್ಲಿ ಒಬ್ಬರು ಕೆಲವು ಸಮಯಗಳಲ್ಲಿ ಅನೇಕ ಮಹಿಳಾ ಕಾರ್ಮಿಕರು ತಮ್ಮ ಮದುವೆ ಮೈತ್ರಿಯನ್ನು ಇತ್ಯರ್ಥಪಡಿಸಿಕೊಂಡ ನಂತರತಮ್ಮ ಕೆಲಸವನ್ನು ತ್ಯಜಿಸುತ್ತಾರೆ. ತತ್ಪರಿಣಾಮವಾಗಿ ತರಬೇತಿ ಪಡೆದ ವ್ಯಕ್ತಿಯು ಅವರ ದಾಖಲೆಗಳ ಪ್ರಕಾರ ಉದ್ಯೋಗದಲ್ಲಿಲ್ಲದ ಕಾರಣದಿಂದ ನಮಗೆ ಸಲ್ಲಬೇಕಾದುದನ್ನು ನಾವು ಪಡೆಯುವುದಿಲ್ಲ ಎಂಬುದನ್ನು ಗುರುತಿಸಿದ್ದಾರೆ. **ಈ ಮೌಲ್ಯಮಾಪನವು 'ಫಲಾನುಭವಿಗೆ ಉದ್ಯೋಗ ದೊರೆತ ನಂತರ ಲಾಕ್–ಇನ್ ಅನುಸರಣಾ ಅವಧಿಯನ್ನು ಒಂದು ಅಥವಾ ಎರಡು ವರ್ಷಗಳಿಗೆ ಇಳಿಸಬಹುದು' ಎಂದು ನಂಬುತ್ತದೆ.**

ತರಬೇತಿ ಪೂರ್ಣಗೊಳಿಸುವುದು ಮತ್ತು ಉದ್ಯೋಗದಲ್ಲಿ ತೊಡಗುವುದರ ನಡುವಿನ ಸಮಯದಅಂತರದಕಡೆಗೆ ಔದ್ಯೋಗಿಕ ಕೌಶಲ್ಯಗಳ ದೃಷ್ಟಿಕೋನದಿಂದ ಗಮನಹರಿಸಲಾಗಿದೆ. ಉದ್ಯೋಗವನ್ನು ಹುಡುಕಲು ತೆಗೆದುಕೊಂಡ ಸಮಯದ ವಿಷಯದಲ್ಲಿ ಔದ್ಯೋಗಿಕ ಕೌಶಲ್ಯದ ವಿಧದಿಂದ ಏನಾದರೂ ವ್ಯತ್ಯಾಸ ಉಂಟಾಗುತ್ತದೆಯೇ? ಈ ಪ್ರಶ್ನೆಗೆ ಉತ್ತರವನ್ನು ಕೋಷ್ಟಕ 10.2.23 ಪ್ರಸ್ತುತಪಡಿಸುತ್ತದೆ. 50.28 ಪ್ರತಿಶತ ಫಲಾನುಭವಿಗಳು ತರಬೇತಿ ಪಡೆದ ನಂತರ ಸ್ವತಃ ಉದ್ಯಮವನ್ನು ಪ್ರಾರಂಭಿಸಲು 3 ತಿಂಗಳವರೆಗೆ ಸಮಯ ತೆಗೆದುಕೊಳ್ಳುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಹೈನುಗಾರಿಕೆ (70.99 ಪ್ರತಿಶತ) ಮತ್ತು ವಿದ್ಯುತ್ ಸೇವೆಗಳ (70.21 ಪ್ರತಿಶತ) ಅಡಿಯಲ್ಲಿ ಈ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ತರಬೇತಿ ಪಡೆದ ನಂತರ ಉದ್ಯಮವನ್ನು ಪ್ರಾರಂಭಿಸಲು 7 ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಕಾಲ ತೆಗೆದುಕೊಂಡವರು 14.51 ಪ್ರತಿಶತ ಇದ್ದಾರೆ ಮೊಬೈಲ್ ಸೇವೆಗಳ ತರಬೇತಿ ಪಡೆದ 28.10 ಪ್ರತಿಶತ ಫಲಾನುಭವಿಗಳು ಈ ಅಭಿಪ್ರಾಯವನ್ನು ಹೊಂದಿದ್ದಾರೆ. ಮರಗೆಲಸ ತರಬೇತಿ ಪಡೆದ 54.55 ಪ್ರತಿಶತವು ತರಬೇತಿಯ ನಂತರ 4 ರಿಂದ 6 ತಿಂಗಳ ಅಂತರದಲ್ಲಿ ಉದ್ಯಮವನ್ನು ಪ್ರಾರಂಭಿಸಿದೆ ಎಂದು ವ್ಯಕ್ತಪಡಿಸಿದ್ದಾರೆ.

ಅದರಂತೆ ಮೂರು ತಿಂಗಳ ಅವಧೀಯೊಳಗೆ ಉದ್ಯೋಗ ಪಡೆದವರ ಪಾಲು ಅತಿ ಹೆಚ್ಚಾಗಿದೆ – 887 ಜನರು (50.28 ಪ್ರತಿಶತ). ಇದುಅತ್ಯಂತ ಕಡಿಮೆ ಅವಧಿಯಾಗಿದೆ. ಈ ಗುಂಪಿನಲ್ಲಿ ಹೈನುಗಾರಿಕೆ (70.49 ಪ್ರತಿಶತ), ನಂತರ ವಿದ್ಯುತ್ ಸೇವೆಗಳು (70.21 ಪ್ರತಿಶತ), ಹೋಟೆಲ್ ಮತ್ತು ಕೇಟರಿಂಗ್ ಸೇವೆಗಳು (66.67 ಪ್ರತಿಶತ) ಅತಿ ದೊಡ್ಡ ಪಾಲು ಹೊಂದಿವೆ. ಬ್ಯೂಟಿ ಪಾರ್ಲರ್‌ಗಳು (56.7 ಪ್ರತಿಶತ) ಮತ್ತು ಸಾಮಾನ್ಯ ಅಂಗಡಿಗಳಲ್ಲಿ (53.15 ಪ್ರತಿಶತ) ಇರುವವರನ್ನು ಈ ಉದ್ಯೋಗಗಳ ಪಟ್ಟಿಗೆ ಸೇರಿಸಬಹುದು. ಇವುಗಳಲ್ಲಿ ಪ್ರತಿಯೊಬ್ಬರೂ ಕೌಶಲ್ಯ ತರಬೇತಿಯನ್ನು ಪೂರ್ಣಗೊಳಿಸಿದ ಮೊದಲ ಮೂರು ತಿಂಗಳೊಳಗೆ ಉದ್ಯೋಗವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. **ಆದರೆ ಈ ಉದ್ಯೋಗಗಳಲ್ಲಿ ನಿಯೋಜನೆ ಮೂಲಕ ಉದ್ಯೋಗಕ್ಕಿಂತ ಸ್ವಯಂ ಉದ್ಯೋಗಿಗಳಾಗಿ ತಮ್ಮ ಉದ್ಯಮಗಳನ್ನು ಪ್ರಾರಂಭಿಸಿರುವ ವ್ಯಕ್ತಿಗಳು ಸಹ ಇದ್ದಾರೆ ಎಂಬುದನ್ನು ಗಮನಿಸಬೇಕು. ಆದರೂ ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಫಲನುಭವಿಗಳಿಬ್ಬರೂ ಇದನ್ನು ನಿಯೋಜನೆ ಮತ್ತು ಉದ್ಯೋಗ ಎಂದು ಹೇಳಿಕೊಳ್ಳುತ್ತಾರೆ.**

**ಕೋಷ್ಟಕ 10.2.23: ಪಡೆದ ಕೌಶಲ್ಯ ತರಬೇತಿ ಮತ್ತು ಉದ್ಯೋಗ ಪಡೆಯುವ ಮೊದಲಿನ ಅಂತರ**

| ಕೌಶಲ್ಯ ತರಬೇತಿ ಪಡೆಯಲಾಗಿದೆ | ತರಬೇತಿಯ ನಂತರ ಉದ್ಯೋಗಕ್ಕೆ ಮೊದಲು ಅಂತರ (%) | | | |
|---|---|---|---|---|
| | 3 ತಿಂಗಳವರೆಗೆ | 4 ರಿಂದ 6 ತಿಂಗಳುಗಳು | 7 ತಿಂಗಳುಗಳು ಅಥವಾ ಅದಕ್ಕಿಂತ ಹೆಚ್ಚು | ಒಟ್ಟು ಸಂಖ್ಯೆ |
| ಮೊಬೈಲ್ ಅಂಗಡಿಗಳು | 36.00 | 36.00 | 28.00 | 25 |
| ಮರಗೆಲಸ | 36.36 | 54.55 | 9.09 | 11 |
| ಹೊಲಿಗೆ ಕೆಲಸ | 41.18 | 40.69 | 18.14 | 612 |
| ಆಟೋಮೊಬೈಲ್ | 49.74 | 36.27 | 13.99 | 193 |
| ಗಣಕ ಯಂತ್ರಗಳು & ಅಂಗಡಿ | 52.25 | 33.40 | 14.35 | 467 |
| ಸಾಮಾನ್ಯ ಅಂಗಡಿ | 53.15 | 30.63 | 16.22 | 111 |
| ಬ್ಯೂಟಿ ಪಾರ್ಲರ್ | 56.73 | 34.62 | 8.65 | 104 |
| ಹೋಟೆಲ್ | 66.67 | 33.33 | | 9 |
| ವಿದ್ಯುತ್ ಸೇವೆಗಳು | 70.21 | 21.28 | 8.51 | 47 |
| ಹೈನುಗಾರಿಕೆ | 70.99 | 25.31 | 3.70 | 162 |
| ಇತರೆ | 43.48 | 30.43 | 26.09 | 23 |
| ಒಟ್ಟು % | 50.28 | 35.20 | 14.51 | 1764 |
| ಸಂಖ್ಯೆ | 887 | 621 | 256 | |

ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ
ಇತರೆ ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ

ಮೂಲ: ಪ್ರಾಥಮಿಕ ದತ್ತಾಂಶ

**10.2.12 ಆದಾಯದ ಮೇಲೆ ಪ್ರಭಾವ :**

ಗ್ರಾಮೀಣ ನಿರುದ್ಯೋಗ ಜೀವನೋಪಾಯಗಳನ್ನು ಸುಧಾರಿಸಲು ಕೈಗೊಂಡ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಆಗಿರುವುದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆ ಆದಾಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಕೌಶಲ್ಯ ತರಬೇತಿ ಪಡೆದ ಮತ್ತು ತರುವಾಯ ಉದ್ಯೋಗಕ್ಕಾಗಿ ನಿಯೋಜನೆಗೊಂಡ ವ್ಯಕ್ತಿಗಳು ನಿಯಮಿತ ಆದಾಯವನ್ನು ಗಳಿಸುವ ಬಯಕೆಯನ್ನು ಹೊಂದಿರುತ್ತಾರೆ. ಅವರು ಪಡೆದಕೌಶಲ್ಯ ತರಬೇತಿಯೊಂದಿಗೆ ಮಾಸಿಕ ಆದಾಯದ ಬಗ್ಗೆ ಅವರ ನಿರೀಕ್ಷೆಗಳು ಏನು ಎಂದು ಫಲಾನುಭವಿಗಳಿಂದ ತಿಳಿಯಲು ಪ್ರಯತ್ನಿಸಿದಾಗ ನಿರೀಕ್ಷೆಗಳಲ್ಲಿ ತಿಂಗಳಿಗೆ ಅತಿ ಕಡಿಮೆ 20 ರೂ.ಗಳಿಂದ ಅತಿ ಹೆಚ್ಚು 80,000 ರೂ.ಗಳವರೆಗೆ ವ್ಯತ್ಯಾಸ ಕಂಡುಬಂದಿದೆ. ನಿರೀಕ್ಷಿಸಿದಂತೆ ವಿವಿಧ ಕೌಶಲ್ಯಗಳು ವಿವಿಧ ಮಟ್ಟದ ನಿರೀಕ್ಷಿತ ಆದಾಯ ಹೊಂದಿವೆ. ಆಟೋಮೊಬೈಲ್ ಚಾಲಕನಾಗಿ ತರಬೇತಿ ಪಡೆದವರು ತಿಂಗಳಿಗೆ 5000 ರೂ.ಗಳ ನಿರೀಕ್ಷೆಗಳನ್ನು ಹೊಂದಿದ್ದರೆ ಗಣಕಯಂತ್ರ ಸಂಬಂಧಿತ ತರಬೇತಿ ಹೊಂದಿರುವವರು ಮಾಸಿಕ 60,000 ರೂ.ಗಳ ಆದಾಯವನ್ನು ನಿರೀಕ್ಷಿಸಿದ್ದಾರೆ.

ಈ ವಿಶ್ಲೇಷಣೆಯಲ್ಲಿ, ಆದಾಯದಎರಡು ಅಂಶಗಳ ಮೇಲೆ ಗಮನಹರಿಸಲಾಗಿದೆ. ಮೊದಲನೆಯದಾಗಿ ಜಿಲ್ಲೆಗಳಾದ್ಯಂತ ವಿವಿಧ ಉದ್ಯೋಗಗಳಿಂದ ನಿಜವಾದ ಆದಾಯವನ್ನು ಗಮನಿಸುವುದು. ನಿರ್ಣಾಯಕ ವಿಷಯವೆಂದರೆ ಯೋಜನೆ ಅನುಷ್ಠಾನ ನಿಯೋಗಗಳು ಸಂಭಾವ್ಯ ಉದ್ಯೋಗದಾತರೊಂದಿಗೆ ಒಡಂಬಡಿಕೆಗೆ ಪ್ರವೇಶಿಸುವ ಮತ್ತು ಹೊಸದಾಗಿ ಕೌಶಲ್ಯ ಹೊಂದಿರುವವರು ಮೊದಲ ಮೂರು ವರ್ಷಗಳವರೆಗೆ ಉದ್ಯೋಗದಲ್ಲಿದ್ದಾರೆ ಎಂದು ಖಚಿತಪಡಿಸಿಕೊಳ್ಳುವ ಜೊತೆಗೆ ಅವರಿಗೆ ಪಾವತಿಸುವ ವೇತನಗಳು ಅಥವಾ ಸಂಬಳಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಕನಿಷ್ಠ ವೇತನ ಕಾನೂನುಗಳಿಗೆ ಅನುಗುಣವಾಗಿವೆ ಎಂದು ಖಚಿತಪಡಿಸಿಕೊಳ್ಳಬೇಕು. ಏಕೆಂದರೆ ಕೆಲವರು 3000 ಅಥವಾ 4000 ರೂ.ಗಳಷ್ಟು ಕಡಿಮೆ ಮಾಸಿಕ ವೇತನವನ್ನು ಹೊಂದಿದ್ದಾರೆ[13] ಎಂದು ಕಂಡುಬಂದಿದೆ, ಇಲ್ಲಿ ರಾಜ್ಯದ ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದೆ.

ಎರಡನೆಯದಾಗಿ, ಕಾರ್ಯಕ್ರಮವು ಅವರ ಆದಾಯದ ನಿರೀಕ್ಷೆಗಳನ್ನು ಎಷ್ಟರ ಮಟ್ಟಿಗೆ ಪೂರೈಸಿದೆ ಎಂಬುದನ್ನು ಹೋಲಿಸುವುದು[14]. ಕೋಷ್ಟಕ ಸಂಖ್ಯೆ 10.2.24 ಮತ್ತು 10.2.25 ಕೆಲಸ ಮಾಡುವವರಿಗೆ ಮಾತ್ರ ಸೀಮಿತಗೊಂಡಿವೆ ಮತ್ತು ಅವರು ನಿಯೋಜನೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಅಲ್ಲ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕೋಷ್ಟಕಗಳು ನಿರುದ್ಯೋಗಿಗಳಾದ ವ್ಯಕ್ತಿಗಳನ್ನು ಒಳಗೊಂಡಿಲ್ಲ.

[13] ಸಂಶೋಧನಾ ಪ್ರಶ್ನೆಗಳಿಗೆ ಉತ್ತರಿಸುವಾಗ, ಫಲಾನುಭವಿಗಳು ತಮ್ಮ ನಿಜವಾದ ಆದಾಯವನ್ನು ತಿಳಿಸದಿರಬಹುದು ಅಥವಾ ತಮ್ಮ ಖರ್ಚೆಲ್ಲವನ್ನು ಕಳೆದು ನಂತರದ ಆದಾಯವನ್ನು ತಿಳಿಸಿರಬಹುದು ಎಂಬ ಅಂಶವನ್ನು ಇಲ್ಲಿ ಒಪ್ಪಿಕೊಳ್ಳಲಾಗಿದೆ.

[14] ಎರಡು ಕೋಷ್ಟಕಗಳು ಮತ್ತು ಅದಕ್ಕೆ ಸಂಬಂಧಿಸಿದ ಅಂಕಿಅಂಶಗಳು ಕೆಲಸ ಮಾಡುವವರಿಗೆ ಮಾತ್ರ ಸೀಮಿತಗೊಂಡಿವೆ – ಅವರು ಉದ್ಯೋಗ ನಿಯೋಜನೆಯಲ್ಲಿ ಯಶಸ್ವಿಯಾಗಿದ್ದಾರೋ ಇಲ್ಲವೋ ಬೇರೆ ರೀತಿಯಲಿ ಹೇಳುವುದಾದರೆ, ಕೋಷ್ಟಕಗಳು ನಿರುದ್ಯೋಗಿಗಳಾದ ಅಂತಹ ವ್ಯಕ್ತಿಗಳನ್ನು ಒಳಗೊಂಡಿಲ್ಲ. ಮಾದರಿಯಲ್ಲಿರುವ ಎಲ್ಲಾ ನಿರುದ್ಯೋಗಿಗಳು ನಿಯೋಜನೆ ಸೇವೆಗಳಲ್ಲಿ ಯಶಸ್ವಿಯಾಗದವರೂ ಆಗಿದ್ದಾರೆ. ಆದರೆ ಈ ವಿಷಯದಲ್ಲಿ ವಿಫಲರಾಗಿದ್ದರೂ ಅವರು ತರಬೇತಿ ಪಡೆದ ಕೌಶಲ್ಯಗಳಿಗೆ ಸಂಬಂಧಿಸಿರಲಿ ಅಥವಾ ಇಲ್ಲದಿರಲಿ ಸ್ವತಃ ಕೆಲಸವನ್ನು ಮುಂದುವರಿಸುತ್ತಿದ್ದವರನ್ನು ವಿಶ್ಲೇಷಣೆಯ ಉದ್ದೇಶಗಳಿಗಾಗಿ ಈ ಕೋಷ್ಟಕಗಳಲ್ಲಿ ಸೇರಿಸಲಾಗಿದೆ.

| ಕೋಷ್ಟಕ ಸಂಖ್ಯೆ 10.2.24: ಮಾದರಿ ಜಿಲ್ಲೆಗಳಲ್ಲಿ ನಿಜವಾದ ಆದಾಯ | | | | | | |
|---|---|---|---|---|---|---|
| ಜಿಲ್ಲೆ | ನಿಜವಾದ ಆದಾಯ (ಕೌಶಲ್ಯ ತರಬೇತಿಯ ನಂತರ) | | | | | ಒಟ್ಟು (ಸಂ.) |
| | 7500 ರೂ. ವರೆಗೆ | ರೂ.7501 ರಿಂದ ರೂ 10,000 | 10,001 ರಿಂದ 12,500 ರೂ. | 12,501 ರಿಂದ 15,000 ರೂ. | 15,000 ಅಥವಾ ಅದಕ್ಕಿಂತ ಹೆಚ್ಚಿನ ರೂ. | |
| ಬೆಂಗಳೂರು – ನಗರ | 13.73 | 357 | 21.01 | 26.61 | 11.48 | 357 |
| ಬೆಳಗಾವಿ | 38.81 | 67 | 1.49 | | | 67 |
| ಧಾರವಾಡ | 43.59 | 468 | 2.56 | 3.63 | 0.85 | 468 |
| ಕಲಬುರಗಿ | 33.06 | 366 | 5.46 | 5.19 | 1.64 | 366 |
| ಕೊಡಗು | 40.33 | 305 | 3.93 | 2.95 | | 305 |
| ಮಂಡ್ಯ | 7.59 | 79 | 7.59 | 8.86 | 2.53 | 79 |
| ರಾಯಚೂರು | 8.33 | 24 | 8.33 | 37.50 | 4.17 | 24 |
| ತುಮಕೂರು | 50.00 | 98 | 6.12 | 3.06 | | 98 |
| ಒಟ್ಟು % | 32.88 | 1764 | 7.60 | 9.01 | 3.06 | **1764** |
| ಸಂಖ್ಯೆ | 580 | 837 | 134 | 159 | 54 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | | |

ಮೂಲ: ಪ್ರಾಥಮಿಕ ದತ್ತಾಂಶ

ನಿಯೋಜನೆ ಸೇವೆಗಳ ಮೂಲಕ ಉದ್ಯೋಗವನ್ನು ಕಂಡುಕೊಂಡ ಸುಮಾರು ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ತಿಂಗಳಿಗೆ 7500 ರೂ.ಗಳಿಗಿಂತ ಕಡಿಮೆ ವೇತನ ಹೊಂದಿದ್ದಾರೆ. ಕನಿಷ್ಠ ವೇತನದ ಬಗ್ಗೆ ಮೇಲೆ ತಿಳಿಸಿದ ಕಾಳಜಿಯು ಇಲ್ಲಿ ಮತ್ತೆ ಗಮನ ಸೆಳೆಯುತ್ತದೆ. ತುಮಕೂರು (50.0 ಪ್ರತಿಶತ), ಧಾರವಾಡ (43.6 ಪ್ರತಿಶತ), ಮತ್ತು ಕೊಡಗು (40.3 ಪ್ರತಿಶತ) ಜಿಲ್ಲೆಗಳಲ್ಲಿ ಫಲಾನುಭವಿಗಳಿಗೆ ಕಡಿಮೆ ವೇತನವನ್ನು ಪಾವತಿಸಲಾಗುತ್ತಿದೆ. ಸುಮಾರು ಅರ್ಧದಷ್ಟು ಫಲಾನುಭವಿಗಳು 7501 ರಿಂದ 10,000 ರೂ.ಗಳ (ಶೇ.47.45) ಆದಾಯವನ್ನು ಹೊಂದಿದ್ದಾರೆ. ಮಂಡ್ಯ, ಬೆಳಗಾವಿ, ಕಲಬುರಗಿ, ಕೊಡಗು ಈ ಜಿಲ್ಲೆಗಳಲ್ಲಿ ಉದ್ಯೋಗದಲ್ಲಿರುವವರಲ್ಲಿ ಹೆಚ್ಚಿನ ಪ್ರಮಾಣವು ಈ ಆದಾಯವನ್ನು ಪಡೆಯುತ್ತಿದ್ದಾರೆ. ರಾಯಚೂರು ಮತ್ತು ಬೆಂಗಳೂರು ನಗರ ಜಿಲ್ಲೆಗಳು 10,000 ದಿಂದ 12,500 ರೂ.ಗಳ ಹೆಚ್ಚಿನ ವೇತನದರವನ್ನು ನೀಡುವ ಮೂಲಕ ಉತ್ತಮ ಸ್ಥಾನದಲ್ಲಿವೆ.

ಹೊಸದಾಗಿ ಕೌಶಲ್ಯ ಪಡೆದ ಮತ್ತು ಉದ್ಯೋಗದಲ್ಲಿರುವ ವ್ಯಕ್ತಿಗಳ ಆದಾಯವು ಅವರು ಅನುಸರಿಸುವ ನಿರ್ದಿಷ್ಟ ಉದ್ಯೋಗಗಳ ಆಧಾರದ ಮೇಲೆ ಹೇಗೆ ವ್ಯತ್ಯಾಸ ಹೊಂದುತ್ತದೆ? ಕೋಷ್ಟಕ 10.2.25 ವಿವರಣೆಯನ್ನು ಪ್ರಸ್ತುತ ಪಡಿಸುತ್ತದೆ. ಹೋಲಿಕೆಗಾಗಿ, ಆದಾಯದ ವ್ಯಾಪ್ತಿಯನ್ನು ಗುಂಪು ಮಾಡಲಾಗಿದ್ದು ಪ್ರತಿ ಆದಾಯ ವ್ಯಾಪ್ತಿಯಲ್ಲಿ ಯಾವ ಉದ್ಯೋಗ ಕ್ಷೇತ್ರವು ಪ್ರಾಬಲ್ಯ ಹೊಂದಿದೆ ಎಂಬುದನ್ನು ಪರಿಶೀಲಿಸಲಾಗಿದೆ.

| ಕೋಷ್ಟಕ ಸಂಖ್ಯೆ 10.2.25: ಪಡೆದ ಕೌಶಲ್ಯ ತರಬೇತಿ ಮತ್ತು ನಿಜವಾದ ಆದಾಯ | | | | | | |
|---|---|---|---|---|---|---|
| **ಪಡೆದ ಕೌಶಲ್ಯ ತರಬೇತಿ (ಇತರೆ ಪಟ್ಟಿ ಮಾಡಲಾಗಿದೆ)** | **ನಿಜವಾದ ಆದಾಯ (ಕೌಶಲ್ಯ ತರಬೇತಿಯ ನಂತರ)** | | | | | **ಒಟ್ಟು (ಸಂ.)** |
| | **ವರೆಗೆ 7500 ರೂ.** | **7501 ರಿಂದ 10,000 ರೂ.** | **10,001 ರಿಂದ 12,500 ರೂ.** | **12,501 ರಿಂದ 15,000 ರೂ.** | **15,000 ಅಥವಾ ಅದಕ್ಕಿಂತ ಹೆಚ್ಚಿನ ರೂ.** | |
| ಸಾಮಾನ್ಯ ಅಂಗಡಿ | 4.14 | 6.33 | 8.96 | 10.06 | 11.11 | 111 |
| ಹೊಲಿಗೆ ಕೆಲಸ | 41.03 | 31.66 | 45.52 | 20.13 | 29.63 | 612 |
| ಆಟೋಮೊಬೈಲ್ | 10.34 | 8.96 | 9.70 | 23.27 | 14.81 | 193 |
| ಮೊಬೈಲ್ ಅಂಗಡಿಗಳು | 1.03 | 1.08 | 0.75 | 3.77 | 5.56 | 25 |
| ವಿದ್ಯುತ್ ಸೇವೆಗಳು | 1.72 | 3.23 | 2.99 | 0.63 | 9.26 | 47 |
| ಬ್ಯೂಟಿ ಪಾರ್ಲರ್ | 4.31 | 6.09 | 5.97 | 10.69 | 5.56 | 104 |
| ಗಣಕಯಂತ್ರಗಳು &ಅಂಗಡಿ | 24.14 | 31.30 | 18.66 | 19.50 | 16.67 | 467 |
| ಮರಗೆಲಸ | 0.86 | 0.48 | | 1.26 | | 11 |
| ಹೋಟೆಲ್ | 0.52 | 0.60 | 0.75 | | | 9 |
| ಹೈನುಗಾರಿಕೆ | 11.21 | 9.08 | 5.97 | 6.29 | 5.56 | 162 |
| ಇತರೆ | 0.69 | 1.19 | 0.75 | 4.40 | 1.85 | 23 |
| ಒಟ್ಟು % | 32.88 | 47.45 | 7.60 | 9.01 | 3.06 | 1764 |
| ಸಂಖ್ಯೆ | 580 | 837 | 134 | 159 | 54 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ ಇತರೆ ವಿವರಗಳಿಗಾಗಿ ದಯವಿಟ್ಟು ಅಡಿ ಟಿಪ್ಪಣಿ 15 ಅನ್ನು ನೋಡಿ | | | | | | |

ಮೂಲ: ಪ್ರಾಥಮಿಕ ದತ್ತಾಂಶ

ಕನಿಷ್ಠ ವಿವಿಧ ಉದ್ಯೋಗ ಕ್ಷೇತ್ರಗಳನ್ನು ನೋಡಿದಾಗ, ಸಾಕಷ್ಟು ಬೇಡಿಕೆಇರುವ ವಲಯಗಳು ಕಡಿಮೆ ಸಂಬಳವನ್ನು ಹೊಂದಿರುವ ವಲಯಗಳಾಗಿದ್ದು 'ಬೇಡಿಕೆ ಮತ್ತು ಪೂರೈಕೆ' ಎಂಬ ಮೂಲಭೂತ ಆರ್ಥಿಕ ಸಿದ್ಧಾಂತವನ್ನು ಸಾಬೀತುಪಡಿಸುತ್ತವೆ. ಹೊಲಿಗೆ ಕೆಲಸ ಮತ್ತು ಉಡುಪು ತಯಾರಿಕೆ ಕ್ಷೇತ್ರಗಳು ಕೌಶಲ್ಯ ಮತ್ತು ಉದ್ಯೋಗಕ್ಕೆ ಹೆಚ್ಚಿನ ಬೇಡಿಕೆಯನ್ನು ಹೊಂದಿದ್ದರೂ ಈ ಕ್ಷೇತ್ರಗಳಿಂದ 41 ಪ್ರತಿಶತ ಮಂದಿ ರೂ. 7500 ಕ್ಕಿಂತ ಕಡಿಮೆ ಸಂಪಾದನೆ ಹೊಂದಿದ್ದಾರೆ. ಈ ವೇತನ ವ್ಯಾಪ್ತಿಗೆ ಶೇಕಡಾ 24 ಕ್ಕೂ ಹೆಚ್ಚು ಫಲಾನುಭವಿಗಳಿರುವ ಗಣಕಯಂತ್ರಗಳು ಮತ್ತು ಸಂಬಂಧಿತ ಕ್ಷೇತ್ರಗಳು ಈ ಆದಾಯದ ವಿಭಾಗದಲ್ಲಿ ಪ್ರಾಬಲ್ಯ ಸಾಧಿಸಿವೆ. ಇದಕ್ಕಿಂತ ಹೆಚ್ಚಿನ ಆದಾಯ (7500 ರಿಂದ 10,000 ರೂ.) ವ್ಯಾಪ್ತಿಯಲ್ಲಿ ಈ ಎರಡು ಕ್ಷೇತ್ರಗಳು (ಹೊಲಿಗೆ ಕೆಲಸ ಮತ್ತು ಗಣಕಯಂತ್ರಗಳು) ಜಂಟಿಯಾಗಿ 63 ಪ್ರತಿಶತಕ್ಕಿಂತ ಹೆಚ್ಚು ಪ್ರಾಬಲ್ಯ ಹೊಂದಿವೆ.

ಈ ಸಂದರ್ಭದಲ್ಲಿ ಪ್ರಸ್ತುತ ಮೌಲ್ಯಮಾಪನವು ಮಾಡುವ ನಿರ್ಣಾಯಕ ಶಿಫಾರಸ್ಸು ಹೀಗಿದೆ. ಹೊಸದಾಗಿ ಕೌಶಲ್ಯ ಪಡೆದ ಮತ್ತು ಸಾಪೇಕ್ಷವಾಗಿ ಅನುಭವಿಲ್ಲದ ಗ್ರಾಮೀಣ ಯುವಕರಿಗೆ ಪಾವತಿಸುವ ಸಂಬಳವನ್ನು ಮಾರುಕಟ್ಟೆ ನಿರ್ಧರಿಸಬಹುದಾದರೂ ಸಂಭಾವ್ಯ ಉದ್ಯೋಗದಾತರು ಕನಿಷ್ಠ ವೇತನ ನಿಯಮಗಳನ್ನು ನಿರ್ವಹಿಸುವುದನ್ನು ಯೋಜನೆ ಅನುಷ್ಠಾನ ನಿಯೋಗಗಳು ಖಚಿತಪಡಿಸಿಕೊಳ್ಳಬೇಕು. ಉದ್ಯೋಗದಾತರೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳುವ ಮೊದಲು ಕಾರ್ಮಿಕರ ಕಾನೂನು ಹಕ್ಕುಗಳ ಬಗ್ಗೆಯೂ ಗಮನಹರಿಸಬೇಕಾಗಿದೆ. ಅಂತಹ ಸಂಧಾನವು ಕನಿಷ್ಠ ತರಬೇತಿ ಕಾರ್ಯಕ್ರಮದ ಒಂದು ಭಾಗವಾದರೂ ಉತ್ಪಾದಕ– ಪ್ರತಿರೋಧಕ ಎಂದು ಗ್ರಹಿಸಲ್ಪಟ್ಟರೆ ತರಬೇತಿ ಪಡೆದವರಿಗೆ ಕಾರ್ಮಿಕರ ಪರಿಹಾರ ಕಾಯ್ದೆ ಕಾರ್ಖಾನೆಗಳ ಕಾಯ್ದೆ ಮತ್ತು ವೇತನವನ್ನು ನಿಯಂತ್ರಿಸುವ ಕಾನೂನುಗಳ ಬಗ್ಗೆ ಶಿಕ್ಷಣ ನೀಡಬೇಕಾಗುತ್ತದೆ.

**ಕೋಷ್ಟಕ 10.2.26: ನಿರೀಕ್ಷಿತ ಮತ್ತು ನೈಜ ಆದಾಯದ ನಡುವಿನ ವ್ಯತ್ಯಾಸ**

| ಜಿಲ್ಲೆ | ನಿರೀಕ್ಷಿಸಿದಂತೆ, | 25% ವರೆಗೆ ಕಡಿಮೆ | 25% ಕ್ಕಿಂತ ಕಡಿಮೆ | 25% ವರೆಗೆ ಹೆಚ್ಚುವರಿ | 25% ಕ್ಕಿಂತ ಹೆಚು ್ಚ ಹೆಚ್ಚುವರಿ | ಒಟ್ಟು (ಸಂ.) |
|---|---|---|---|---|---|---|
| ಬೆಂಗಳೂರು – ನಗರ | 0.56 | 40.62 | 12.32 | 17.09 | 29.41 | 357 |
| ಬೆಳಗಾವಿ | 74.63 | 14.93 | | 7.46 | 2.99 | 67 |
| ಧಾರವಾಡ | 42.09 | 30.13 | 21.37 | 3.42 | 2.99 | 468 |
| ಕಲಬುರಗಿ | 8.47 | 64.75 | 24.32 | 1.91 | 0.55 | 366 |
| ಕೊಡಗು | 44.92 | 37.38 | 13.44 | 3.93 | 0.33 | 305 |
| ಮಂಡ್ಯ | 25.32 | 31.65 | 40.51 | 2.53 | 0.00 | 79 |
| ರಾಯಚೂರು | 12.50 | 25.00 | 16.67 | 33.33 | 12.50 | 24 |
| ತುಮಕೂರು | 85.71 | 3.06 | 5.10 | 4.08 | 2.04 | 98 |
| ಒಟ್ಟು % | 29.71 | 38.61 | 17.86 | 6.52 | 7.31 | 1764 |
| ಇಲ್ಲ. | 524 | 681 | 315 | 115 | 129 | |
| ಸೂಚನೆ: ಬೇರೆ ರೀತಿಯಲಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಅಂಕಿಅಂಶಗಳು ಶೇಕಡಾ ದರಗಳಲ್ಲಿವೆ | | | | | | |

ಮೂಲ: ಪ್ರಾಥಮಿಕ ದತ್ತಾಂಶ

ಹೊಸದಾಗಿ ಕೌಶಲ್ಯ ಪಡೆದ ಮತ್ತು ಉದ್ಯೋಗದಲ್ಲಿರುವ ವ್ಯಕ್ತಿಗಳು ತಮ್ಮ ಸಂಬಳದ ನಿರೀಕ್ಷೆಗಳನ್ನು ಹೆಚ್ಚಾಗಿ ಪೂರೈಸುವಲ್ಲಿ ತುಮಕೂರು ಜಿಲ್ಲೆ ವಿಶಿಷ್ಟ ಸ್ಥಾನ ಪಡೆದಿದೆ. 98 ಫಲಾನುಭವಿಗಳಲ್ಲಿ 85.71 ಪ್ರತಿಶತ (ನಿಯೋಜನೆಗೊಂಡಿರುವ) ತಮ್ಮ ಆದಾಯವು ತಾವು ನಿರೀಕ್ಷಿಸಿದಂತೆ ಇದೆ ಎಂದು ಒಪ್ಪಿಕೊಂಡಿದ್ದಾರೆ. ಇದಲ್ಲದೆ ಅವರಲ್ಲಿ 6.12 ಪ್ರತಿಶತ ಜನರು ತಮ್ಮ ನಿರೀಕ್ಷಿತ ಆದಾಯವನ್ನು ಮೀರಿಸಿದ್ದಾರೆ. ನಂತರದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 74.6 ಪ್ರತಿಶತ ಫಲಾನುಭವಿಗಳು ತಮ್ಮ ಸಂಬಳದ ನಿರೀಕ್ಷೆಗಳನ್ನು ಪೂರೈಸಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಕನಿಷ್ಠ (0.56 ಪ್ರತಿಶತ) ಫಲಾನುಭವಿಗಳು ತಮ್ಮ ನಿರೀಕ್ಷೆಗಳನ್ನು ಪೂರೈಸಿದ್ದಾರೆ. ಸುಮಾರು 53 ಪ್ರತಿಶತ ಜನರು ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದರೆ 46 ಪ್ರತಿಶತ ಜನರು ತಮ್ಮ ನಿರೀಕ್ಷೆಗಳಿಗಿಂತ ಹೆಚ್ಚಿನದನ್ನು ಹೊಂದಿದ್ದಾರೆ. ನಿರೀಕ್ಷಿತ ಆದಾಯದ ಕೊರತೆಯನ್ನು ಅನುಭವಿಸುತ್ತಿರುವ ಫಲಾನುಭವಿಗಳು ಕಲಬುರಗಿಯಲ್ಲಿ ಅತ್ಯಂತ

ಗಮನಾರ್ಹವಾಗಿ ಕಂಡುಬಂದಿದ್ದಾರೆ (89.07 ಪ್ರತಿಶತ). ಈ ವರ್ಗದಲ್ಲಿ ಮಂಡ್ಯ ಕೂಡ ಹೆಚ್ಚಿನ ಪಾಲನ್ನು ಹೊಂದಿದ್ದು ಸುಮಾರು 72 ಪ್ರತಿಶತದಷ್ಟು ಮಂದಿ ನಿರೀಕ್ಷೆಗಿಂತ ಕಡಿಮೆ ಆದಾಯವನ್ನು ಪಡೆದಿದ್ದಾರೆ.

ನಿರೀಕ್ಷಿತ ಮತ್ತು ನಿಜವಾದ ಆದಾಯದ ನಡುವೆ ಗಮನಾರ್ಹ ಕೊರತೆ ಇದೆಎಂದು ಪರಿಗಣಿಸಿದರೆ – ಜಿಲ್ಲೆಗಳು ಅಥವಾ ವಿವಿಧ ಉದ್ಯೋಗ ಗುಂಪುಗಳಾದ್ಯಂತ ಫಲಾನುಭವಿಗಳೊಂದಿಗೆ ಸಂದರ್ಶನಗಳು ಮತ್ತು ಕೇಂದ್ರೀಕೃತ ಸಮೂಹ ಚರ್ಚೆಗಳ ಸಮಯದಲ್ಲಿ ಹತಾಶೆ ಸಾಕಷ್ಟು ಸ್ಪಷ್ಟವಾಗಿದೆ. ಫಲಾನುಭವಿಗಳು ಯೋಜನೆ ಅನುಷ್ಠಾನ ನಿಯೋಗಗಳ ಬಗ್ಗೆ ತೋರಿಸಿದ ನಕಾರಾತ್ಮಕ ಶ್ರೇಯಾಂಕ ಅಥವಾ ಕಡಿಮೆ ಮಟ್ಟದ ಮೆಚ್ಚುಗೆಯು ಪ್ರಾಥಮಿಕವಾಗಿ ಮೂರು ಅಂಶಗಳಲ್ಲಿದೆ ಎಂದು ನಂಬಲು ಕಾರಣಗಳಿವೆ.

- ತರಬೇತಿ ಪೂರ್ಣಗೊಳಿಸಿದ ಎಲ್ಲಾ ತರಬೇತಿದಾರರು ಉದ್ಯೋಗ ನಿಯೋಜನೆ ಹುಡುಕುವಲ್ಲಿ ಯಶಸ್ವಿಯಾಗಿಲ್ಲ.
- ದೀರ್ಘಾವಧಿಯ ಕೌಶಲ್ಯ ತರಬೇತಿ ಮತ್ತು ಪ್ರಮಾಣೀಕರಣದ ನಂತರ ಉದ್ಯೋಗವನ್ನು ಪಡೆಯುವಲ್ಲಿ ಮೂರು ತಿಂಗಳುಗಳಿಗಿಂತ ಹೆಚ್ಚಿನ ಅವಧಿ ತೆಗೆದುಕೊಳ್ಳಲಾಗಿದೆ
- ಉದ್ಯೋಗದಿಂದ ಬರುವ ಸಂಬಳದ ಆದಾಯ ಅವರು ನಿರೀಕ್ಷಿಸಿದಷ್ಟು ಉತ್ತಮವಾಗಿಲ್ಲ.

ಈ ಮೌಲ್ಯಮಾಪನ ಅಧ್ಯಯನವು ಈ ನಿಟ್ಟಿನಲ್ಲಿ ಮಾಡುವ ಶಿಫಾರಸ್ಸು ಏನೆಂದರೆ, ಯೋಜನೆ ಅನುಷ್ಠಾನ ನಿಯೋಗಗಳು ಬೇಡಿಕೆಯಲ್ಲಿರುವ ಇತರೆ ಕೌಶಲ್ಯಗಳಿಗಿಂತ ಉತ್ತಮ ಉದ್ಯೋಗಾವಕಾಶಗಳನ್ನು ಹೊಂದಿರುವ ಕೌಶಲ್ಯ ಕ್ಷೇತ್ರಗಳ ಮೇಲೆ ಗಮನ ಹರಿಸಬೇಕಾಗಿದೆ. ಪಡೆಯದ ಕ್ಷೇತ್ರಗಳಿಗೆ ಅವರನ್ನು ತಳ್ಳುವುದಕ್ಕಿಂತ ಮಾನವ ಬಂಡವಾಳವನ್ನು ಉತ್ತಮವಾಗಿ ಬಳಸಿಕೊಳ್ಳಬೇಕಾಗಿದೆ. ಸ್ಥಳೀಯವಾಗಿ ಸಂಭಾವ್ಯ ಉದ್ಯೋಗದಾತರೊಂದಿಗೆ ಪೂರ್ವ ವ್ಯವಸ್ಥೆ ಮತ್ತು ಸರಿಯಾದ ಮಾನವ ಸಂಪನ್ಮೂಲ ಯೋಜನೆಯನ್ನು ಜಂಟಿಯಾಗಿ ನಡೆಸಬೇಕಾಗಿದೆ. ಅದರಿಂದ ಮುಂದಿನ ವರ್ಷಗಳಲ್ಲಿ ತರಬೇತಿದಾರರ ಪ್ರವೇಶಾವಕಾಶ ಅಂತಹ ಬೇಡಿಕೆ ಮ್ಯಾಪಿಂಗ್‌ಗೆ ಅನುಗಣವಾಗಿರಬಹುದು.

## ಭಾಗ 3:

## 10.3 ಕಾರ್ಯಕ್ರಮದ ಒಟ್ಟಾರೆ ಗುರಿ ಮತ್ತು ಉದ್ದೇಶಗಳಿಗೆ ಸಂಬಂಧಿಸಿದಂತೆ: ತರಬೇತಿ ಪಾಲುದಾರರ ಸವಾಲುಗಳು ಮತ್ತು ಅನುಭವಗಳು

- 'ಸ್ವಯಂ ಉದ್ಯೋಗ ಘಟಕ ಫಲಾನುಭವಿಗಳಲ್ಲಿ ಈ ಕಾರ್ಯಕ್ರಮವನ್ನು ವಾಣಿಜ್ಯ ಸಂಸ್ಥೆಗಳಿಂದ ಸಾಲ ಪಡೆಯಬಹುದಾದ ಮತ್ತೊಂದು ಯೋಜನೆ ಎಂದು ನೋಡುವ ಬಲವಾದ ಪ್ರವೃತ್ತಿ ಇದೆ. ನಿರುದ್ಯೋಗಿಗಳು ಅಥವಾ ಇತರೆ ಯುವಕರು ಈ ಕಾರ್ಯಕ್ರಮದಲ್ಲಿ ಕೇವಲ ಜೀವನೋಪಾಯದ ಸಾಧನಗಳನ್ನು ಆಯ್ಕೆ ಮಾಡುವ ಮತ್ತು ಅದನ್ನು ಮುಂದುವರಿಸುವ ಸಾಧನವಾಗಿ ಭಾಗವಹಿಸುವುದು ಅಪರೂಪವಾಗಿದೆ.'
- 'ಸ್ವಯಂ ಉದ್ಯೋಗ ಅಥವಾ ಕೌಶಲ್ಯ ಮತ್ತು ಉದ್ಯೋಗದ ಗುರಿಗಳು' ಪ್ರಾಥಮಿಕವಾಗಿ ಗ್ರಾಮೀಣ ನಿರುದ್ಯೋಗಿ ಯುವಕರ ನಗರ ವಲಸೆಯನ್ನು ತಡೆಗಟ್ಟುವುದಾದರೆ ನಾವು ಅವರಿಗೆ ತರಬೇತಿ ನೀಡುವ ಕ್ಷೇತ್ರಗಳು ವಿಷಯ ಮತ್ತು ದೃಷ್ಟಿಕೋನದಲ್ಲಿ ಹೆಚ್ಚು ಗ್ರಾಮೀಣತೆಯನ್ನು ಹೊಂದಿರಬೇಕು ಮತ್ತು ಅಂತಹ ಉದ್ಯಮಗಳು ಅಥವಾ ಕೌಶಲ್ಯಗಳ ಮಾರುಕಟ್ಟೆ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕು. ಉದಾಹರಣೆಗೆ ಭದ್ರತಾ ಸೇವೆಗಳು ಅಥವಾ ಗಣಕಯಂತ್ರ ಯಂತ್ರಾಂಶ ನಿರ್ವಹಣೆಯಲ್ಲಿ ಯುವಕರಿಗೆ ತರಬೇತಿ ನೀಡುವ ಮತ್ತು ಅವರು ಸ್ವಯಂ ಉದ್ಯೋಗಿಗಳಾಗಬೇಕೆಂದು ಅಥವಾ ಗ್ರಾಮೀಣ ಆವಾಸ ಸ್ಥಾನಗಳಲ್ಲಿ ಉದ್ಯೋಗದಲ್ಲಿ ಇರಿಸಲ್ಪಡಬೇಕೆಂದು ನಿರೀಕ್ಷಿಸುವುದರ ಉಪಯುಕ್ತತೆ ಏನು ಎಂಬುದನ್ನು ಯೋಚಿಸಬೇಕು. ಯಾವುದೇ ನೀತಿಯನ್ನು ವಿನ್ಯಾಸಗೊಳಿಸುವಾಗ ಅಥವಾ ಅದನ್ನು ಅನುಷ್ಠಾನಗೊಳಿಸುವಾಗ ಕೌಶಲ್ಯಗಳ ಬೇಡಿಕೆ ಮತ್ತು ಕಾರ್ಮಿಕ ಮಾರುಕಟ್ಟೆ ರಚನೆಯ ಗುಣಲಕ್ಷಣದೊಂದಿಗೆ ಅವರ ಸಂಪರ್ಕಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಸೂಕ್ತವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.'
- '18 ರಿಂದ 25ರ ವಯೋಮಾನದಲ್ಲಿ ಯುವಕರು ತಮ್ಮ ನಿರುದ್ಯೋಗವನ್ನು ತಾತ್ಕಾಲಿಕ ವಿದ್ಯಮಾನ ಬೆಳೆಯುವ ಆರಂಭಿಕ ಹಂತ ಎಂದು ಪರಿಗಣಿಸುವ ಪ್ರವೃತ್ತಿ ಬಲವಾಗಿದೆ. ಇದು ವಿಶೇಷವಾಗಿ ಹೊಸದಾಗಿ ಉತ್ತೀರ್ಣರಾದ ಅಥವಾ ಪೂರ್ಣಗೊಳಿಸದ ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿ ಶಿಕ್ಷಣ ಮಟ್ಟದವರಲ್ಲಿ ಅಥವಾ ಈ ವಯಸ್ಸಿನೊಳಗಿನ ಕಿರಿಯರಲ್ಲಿ ಕಂಡು ಬರುತ್ತದೆ. ಆದ್ದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಗುರಿಗಳು ಮತ್ತು ಅವಕಾಶಗಳು ಅಂತಿಮ ಶಾಶ್ವತ ಜೀವನೋಪಾಯದ ಗುರಿಗಳಿಗಿಂತ ಹೆಚ್ಚಾಗಿ ಮಧ್ಯಂತರ ತಂತ್ರಗಳಾಗಿವೆ ಎಂದು ಗ್ರಹಿಸಲಾಗಿದೆ.'
- ಸ್ವಯಂ ಉದ್ಯೋಗ ಅಥವಾ ಕೌಶಲ್ಯದ ಮೂಲಕ ಗ್ರಾಮೀಣ ಯುವಕರ ವಲಸೆಯನ್ನು ತಡೆಗಟ್ಟುವತ್ತ ಗಮನ ಹರಿಸುವುದರಲ್ಲಿ ಅಂತರ್ಗತ ವಿರೋಧಾಭಾಸವಿದೆ. ಇದು ಗ್ರಾಮೀಣ ಜೀವನೋಪಾಯ ವ್ಯವಸ್ಥೆಯ ಸಮಗ್ರ ಅರ್ಥವನ್ನು ಮತ್ತು ಹೊಸ ಕೌಶಲ್ಯಗಳು ಹಾಗೂ ಉದ್ಯೋಗಗಳ ಮೂಲಕ ಸ್ವಯಂ ಉದ್ಯೋಗ ಅಥವಾ ಆರ್ಥಿಕ/ ಆದಾಯ ಮಾನದಂಡಗಳ ಸುಧಾರಣೆಯ ಉದ್ದೇಶಗಳನ್ನು ಗ್ರಹಿಸಲು ವಿಫಲವಾಗಿದೆ. ಒದಗಿಸಲಾದ ಅನೇಕ ಸ್ವಯಂ ಉದ್ಯೋಗ ಉದ್ಯಮಗಳು ಅಥವಾ ಕೌಶಲ್ಯಗಳನ್ನು ಕೃಷಿಯಂತೆ ಏಕೈಕ ಸಾಧನವಾಗಿಸಿಕೊಳ್ಳುವ ಬದಲು ಗ್ರಾಮೀಣ ಜೀವನೋಪಾಯ ವ್ಯವಸ್ಥೆಗಳನ್ನು ಅನುಸರಿಸುವ ಅತ್ಯುತ್ತಮ 'ಬೆಂಬಲಿತ'

ಸಾಧನವಾಗಿಸಿಕೊಳ್ಳಬಹುದು.' ಅಂತೆಯೇ ನೀಡಲಾದ ಅನೇಕ ಕೌಶಲ್ಯಗಳು ಯುವಕರನ್ನು ಹಳ್ಳಿಯಿಂದ ವಾಣಿಜ್ಯ ಯಶಸ್ಸಿನ ಉತ್ತಮ ಭವಿಷ್ಯವನ್ನು ಹೊಂದಿರುವ ನಗರಕ್ಕೆ ಕರೆದೊಯ್ಯುತ್ತವೆ.

- ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ನೀಡಲಾಗುವ ಕೌಶಲ್ಯಗಳನ್ನು ಪೂರೈಸಲು ಅಗತ್ಯವಿರುವ ಶೈಕ್ಷಣಿಕ ಅರ್ಹತೆಯು ಕಡಿಮೆಯಿಂದ ಮಧ್ಯಮ ಮಟ್ಟದ್ದಾಗಿರುತ್ತದೆ. ಆದರೆ ಅನೇಕ ಉನ್ನತ ವಿದ್ಯಾವಂತ ನಿರುದ್ಯೋಗಿಗಳು ಅನೇಕರು ವಿಶೇಷವಾಗಿ ಮಹಿಳೆಯರು ಇದ್ದಾರೆ. ಆದ್ದರಿಂದ ವಿದ್ಯಾವಂತ ಫಲಾನುಭವಿಗಳ ಅಗತ್ಯವನ್ನು ಪೂರೈಸಲು ನೀಡಲಾದ ಕೌಶಲ್ಯಗಳಲ್ಲಿ ವ್ಯತ್ಯಾಸವನ್ನು ಪರಿಚಯಿಸಲಾಗಿದೆ.

| **ನೀಡಲಾದ ಕೌಶಲ್ಯದ ಹೆಸರು** | **ಶಿಕ್ಷಣದ ಮಟ್ಟಗಳ ಅವಶ್ಯಕತೆ** |
|---|---|
| ಹೈನುಗಾರಿಕೆ | ಕಡಿಮೆ (ಪ್ರಾಥಮಿಕ ಶಿಕ್ಷಣ) |
| ಕೃಷಿ | ಕಡಿಮೆ (ಪ್ರಾಥಮಿಕ ಶಿಕ್ಷಣ) |
| ಪಶುಸಂಗೋಪನೆ | ಕಡಿಮೆ (ಪ್ರಾಥಮಿಕ ಶಿಕ್ಷಣ) |
| ಕೋಳಿ ಸಾಕಾಣಿಕೆ | ಕಡಿಮೆ (ಪ್ರಾಥಮಿಕ ಶಿಕ್ಷಣ) |
| ಚಿಲ್ಲರೆ / ದಿನಸಿ ಅಂಗಡಿಗಳು | ಕಡಿಮೆಯಿಂದ ಮಧ್ಯಮ (ಮಾಧ್ಯಮಿಕ ಶಿಕ್ಷಣ) |
| ಜವಳಿ ಅಂಗಡಿ | ಕಡಿಮೆಯಿಂದ ಮಧ್ಯಮ (ಮಾಧ್ಯಮಿಕ ಶಿಕ್ಷಣ) |
| ಹೊಲಿಗೆ ಕೆಲಸ | ಕಡಿಮೆಯಿಂದ ಮಧ್ಯಮ (ಮಾಧ್ಯಮಿಕ ಶಿಕ್ಷಣ) |
| ಚಾಲನೆ | ಕಡಿಮೆಯಿಂದ ಮಧ್ಯಮ (ಮಾಧ್ಯಮಿಕ ಶಿಕ್ಷಣ) |
| ಆಟೋಮೊಬೈಲ್ | ಕಡಿಮೆಯಿಂದ ಮಧ್ಯಮ (ಮಾಧ್ಯಮಿಕ ಶಿಕ್ಷಣ) |
| ಬ್ಯೂಟಿ ಪಾರ್ಲರ್ | ಕಡಿಮೆ (ಪ್ರಾಥಮಿಕ ಶಿಕ್ಷಣ) |
| ಗಣಕಯಂತ್ರ ಅಂಗಡಿ | ಮಧ್ಯಮದಿಂದಉನ್ನತ (ಆದ್ಯತೆಯ ಪದವೀಧರ) |
| ಗಣಕಯಂತ್ರ ಆಪರೇಟರ್/ಡಿಟಿಪಿ | ಮಧ್ಯಮದಿಂದಉನ್ನತ (ಆದ್ಯತೆಯ ಪದವೀಧರ) |
| ವಿದ್ಯುತ್ ಸೇವೆಗಳು | ಮಧ್ಯಮದಿಂದಉನ್ನತ (ಆದ್ಯತೆಯ ಪದವೀಧರ) |
| ಹೋಟೆಲ್ / ಟೀ ಅಂಗಡಿ | ಕಡಿಮೆ (ಪ್ರಾಥಮಿಕ ಶಿಕ್ಷಣ) |

- ಅನುಷ್ಠಾನದ ಪರಸ್ಪರ ಸಂಬಂಧಿತ ವಿವಿಧ ಹಂತಗಳು ಸಂಪೂರ್ಣವಾಗಿ ಕಾರ್ಯಾಚರಣೆಯ ವಾತಾವರಣದಂತೆ ಕಾರ್ಯನಿರ್ವಹಿಸುತ್ತವೆ ಎಂದು ಭಾವಿಸಲು ಈ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ ಇದರಲ್ಲಿ ಪ್ರತಿಯೊಬ್ಬ ಪ್ರಮುಖ ಆಟಗಾರನುತನ್ನ ಪಾತ್ರಗಳನ್ನು ಜೋಡಣಾ ಸಾಲಿನಲ್ಲಿರುವಂತೆ ನಿಖರವಾಗಿ ನಿರ್ವಹಿಸುತ್ತಾನೆ. ಮೇಲಿನಿಂದ ತಳಮಟ್ಟದವರೆಗೆ ವಿವಿಧ ಇಲಾಖೆಗಳು ಮತ್ತು ಸಮಿತಿಗಳು ಇದೇ ರೀತಿ ಕಾರ್ಯ ನಿರ್ವಹಿಸುತ್ತವೆ ಎಂದು ಅದು ಊಹಿಸುತ್ತದೆ. ಆದರೆಇದುಆದರ್ಶ ಕಲ್ಪನೆ ಮಾತ್ರ ಮತ್ತು ತಳಮಟ್ಟದ ವಾಸ್ತವವನ್ನು ಪ್ರತಿಬಿಂಬಿಸುವುದಿಲ್ಲ. ಕೊಡಗು (ಸ್ವಯಂ ಉದ್ಯೋಗ) ಮತ್ತು ಬೆಳಗಾವಿ (ಕೌಶಲ್ಯ) ಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಮೇಲೆ ಮಾಡಿದ ಅವಲೋಕನಗಳನ್ನು ವಿವರಿಸಬಹುದು. ಅದು ಹೀಗಿದೆ:

  "ಗ್ರಾಮ ಪಂಚಾಯಿತಿಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಒಂದೇ ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಏಕಕಾಲದಲ್ಲಿ ಘಟಿಸುವುದಿಲ್ಲ. ಫಲಾನುಭವಿಗಳನ್ನು ಗುರುತಿಸುವುದು ಮತ್ತು ಕಾರ್ಯಕ್ರಮದಲ್ಲಿ ಸಂಭಾವ್ಯ ಸ್ಪರ್ಧಿಗಳ ಪಟ್ಟಿಯನ್ನು ಮಾಡುವುದರ ಹೊತ್ತಿಗೆ ಅನೇಕರು ತಮ್ಮ ಮನಸ್ಸನ್ನು

ಬದಲಾಯಿಸಿದ್ದಾರೆ ಮತ್ತು ಇನ್ನು ಮುಂದುವರೆಯಲು ಆಸಕ್ತಿ ಹೊಂದಿಲ್ಲ. ಉಪಗ್ರಹ ತಂತ್ರಜ್ಞಾನವು ಜಿಲ್ಲೆಯ ಮೂಲೆ ಮೂಲೆಗಳನ್ನು ಪ್ರವೇಶಿಸಲು ಯಾವಾಗಲೂ ಸಾಧ್ಯವಾಗುವಷ್ಟು ಪರಿಪೂರ್ಣವಾಗಿದೆ ಎಂದು ಕಾರ್ಯಕ್ರಮವು ನಿರೀಕ್ಷಿಸುತ್ತದೆ. ಅವರಲ್ಲಿ ಪ್ರತಿಯೊಬ್ಬರೂತರಬೇತಿಯ ನಿರ್ದಿಷ್ಟ ಅವಧಿಗೆ ತರಬೇತಿ ಕೇಂದ್ರದಲ್ಲಿ ವಾಸಿಸಲು ಸಿದ್ಧರಾಗಿದ್ದಾರೆ ಅಥವಾ ಪ್ರಯಾಣಿಸುವವರಾದರೆ ನಿರ್ದಿಷ್ಟ ಸಮಯದಲ್ಲಿ ತರಬೇತಿಯ ಸ್ಥಳವನ್ನು ತಲುಪಲು ಸಿದ್ಧರಾಗಿದ್ದಾರೆ ಎಂದುಅದು ಊಹಿಸುತ್ತದೆ! 'ನಾವು ಪ್ರಯಾಣಕ್ಕಾಗಿ ನೀಡುವ ಹಣದ ಪ್ರಮಾಣವು ಅವರ ಗ್ರಾಮದಿಂದ ತರಬೇತಿ ಕಾರ್ಯಕ್ರಮವನ್ನು ನಡೆಸುವ ಸ್ಥಳಕ್ಕೆ ಬಸ್ ಶುಲ್ಕದ ನಿಜವಾದ ವೆಚ್ಚವನ್ನು ಪೂರೈಸುವುದಿಲ್ಲ,' (ಆಳವಾದ ಸಮೂಹ ಚರ್ಚೆ ಸಮಯದಲ್ಲಿ ತರಬೇತಿ ಪಾಲುದಾರರು ಸೂಚಿಸಿದ ಅಂಶ)

- 'ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಬಗ್ಗೆ ಸರ್ಕಾರ ಗಂಭೀರವಾಗಿದ್ದರೆ ತರಬೇತಿ ಕೆಲಸದ ಪ್ರತಿಯೊಂದು ಹಂತದಲ್ಲೂ ಹಸ್ತಕ್ಷೇಪ ಮಾಡಬೇಕಾದ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಅಗತ್ಯವಿದೆ. "ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಪ್ರಾರಂಭಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳವರೆಗೆ ಅನೇಕ ಅಧಿಕಾರಿಗಳು ಮತ್ತು ಅವರ ಇಲಾಖೆಗಳೊಂದಿಗೆ ವ್ಯವಹರಿಸಬೇಕಾಗುತ್ತದೆ ಮತ್ತು ಅದರಿಂದ ನಿಗದಿತ ಸಮಯದೊಳಗೆ ನಮ್ಮ ಕೆಲಸವನ್ನು ಪೂರ್ಣಗೊಳಿಸಲು ಅಡಚಣೆಯಾಗುತ್ತದೆ ಅದು ಅಸಾಧ್ಯ."
- 'ಅನೇಕ ತರಬೇತಿ ಪಾಲುದಾರರು ಸರ್ಕಾರೇತರ ಸಂಸ್ಥೆಗಳಾಗಿದ್ದು, ಈ ಕ್ಷೇತ್ರದಲ್ಲಿ ಸ್ವಯಂ ಸೇವಾ ಸಂಸ್ಥೆಗಳಾಗಿ ಮತ್ತು ಲಾಭಕ್ಕಾಗಿ ಅಲ್ಲದೆ ಕೆಲಸ ಮಾಡುತ್ತಿದ್ದಾರೆ. "ನಮ್ಮದು ದೊಡ್ಡ ಬಂಡವಾಳ ನೆಲೆಯನ್ನು ಹೊಂದಿರುವ ದೊಡ್ಡ ಕಾರ್ಪೊರೇಟ್ ಸಂಸ್ಥೆಯಲ್ಲ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ ನಮ್ಮ ಸೀಮಿತ ಸಂಪನ್ಮೂಲಗಳನ್ನು ಹೂಡಿಕೆ ಮಾಡುವುದು ಮತ್ತು ಅವುಗಳನ್ನು ಮರಳಿ ಪಡೆಯಲು ವರ್ಷಗಟ್ಟಲೆ ಕಾಯುವುದು ಆಗಿದೆ. "ಈಗಾಗಲೇ ಖರ್ಚು ಮಾಡಿದ ಅವರ ವೆಚ್ಚಗಳು ಸಕಾಲದಲ್ಲಿ ಮರುಪಾವತಿಯಾಗುವುದಿಲ್ಲ". ಸರ್ಕಾರ ತನ್ನ ಬದ್ಧತೆಗಳನ್ನು ಗೌರವಿಸದೆ ನಾವು ದಕ್ಷರಾಗಬೇಕೆಂದು ಹೇಗೆ ನಿರೀಕ್ಷಿಸುತ್ತದೆ?"
- "ನನ್ನ ಜಿಲ್ಲೆಯಲ್ಲಿ ತರಬೇತಿ ನಡೆಸಲು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದ ಸ್ಥಳಕ್ಕೆ ಬಾಡಿಗೆ ಪಾವತಿಸದ ಕಾರಣ ನನ್ನ ಸಂಸ್ಥೆಯ ವಿರುದ್ಧ ಮೊಕದ್ದಮೆ ಹೂಡುವ ಬೆದರಿಕೆ ಇದೆ (ಕೊಡಗು). ಮೂರು ವರ್ಷಗಳಿಂದ ಪಾವತಿಗಳು ಬಾಕಿ ಇವೆ ಮತ್ತು ನಾನು ಅದನ್ನು ಕೆಟ್ಟ ಹೂಡಿಕೆಯೆಂದು ಕೈಬಿಟ್ಟಿದ್ದೇನೆ."
- "ಅವರು ಹಾಜರಾತಿಯ ಜೈವಿಕ ಮೆಟ್ರಿಕ್ ಪುರಾವೆಗಳನ್ನು ಬಯಸಿದ್ದರು (ತರಬೇತಿ ಪಡೆದವರು) ಅದನ್ನು ಒದಗಿಸಿದಾಗ ಸಾಂಪ್ರದಾಯಿಕ ಹಾಜರಾತಿ ದಾಕಲಾತಿ ಪುಸ್ತಕದ ಮುದ್ರಿತ ಪ್ರತಿಯನ್ನು ಒತ್ತಾಯಿಸಲಾಯಿತು. ಅದೂ ಕೂಡ ಸಲ್ಲಿಕೆಯಾದಾಗ ಅವರು ಸಿಸಿ ಕ್ಯಾಮೆರಾ ಸಾಕ್ಷ್ಯಗಳನ್ನು ಬಯಸಿದರು. ಮೂರು ಅಥವಾ ನಾಲ್ಕು ತಿಂಗಳುಗಳ ಕಾಲ ನಮ್ಮನ್ನು ನರಳುವಂತೆ ಮಾಡುವ ಬದಲು ಎಲ್ಲ ದಾಖಲೆಗಳನ್ನು ಒಂದೇ ಬಾರಿಗೆ ಕೇಳಬಹುದಾಗಿತ್ತು ಮತ್ತು ನಮ್ಮ ಹಕ್ಕುಗಳನ್ನು ಇನ್ನೂ ಗೌರವಿಸಲಾಗಿಲ್ಲ ಎಂದು ಒಮ್ಮೆ ಏಕೆ ಕೇಳಬಾರದು? "
- 'ಕೌಶಲ್ಯ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಅವರನ್ನು ಉದ್ಯೋಗದಲ್ಲಿ ನಿಯೋಜಿಸಲು ತರಬೇತಿ ಪಾಲುದಾರರು ಮೂರು ವರ್ಷಗಳ ಕಾಲ ಹಿಂಬಾಲಿಸಲು ನಿರೀಕ್ಷಿಸುವುದು ಅವಾಸ್ತವಿಕವಾಗಿದೆ. 3 ರಿಂದ 4 ನೂರು ಜನರಿಗೆ ವಿವಿಧ ಉದ್ಯೋಗ ಸ್ಥಳಗಳಲ್ಲಿ ಇದನ್ನು ಮಾಡುವುದು ಕಷ್ಟ!'

- "ನಮ್ಮ ಹುಡುಗರು ಮತ್ತು ಹುಡುಗಿಯರನ್ನು ನೇಮಿಸಿಕೊಳ್ಳುವ ಸಂಸ್ಥೆಗಳು ನಾವು ಎಲ್ಲಾ ಕಾರ್ಮಿಕ ಕಾನೂನುಗಳನ್ನು ಅನುಸರಿಸಬೇಕೆಂದು ಒತ್ತಾಯಿಸಿದಾಗ ನಮ್ಮನ್ನು ಕಾರ್ಮಿಕ ಇಲಾಖೆಯ ನಿಯೋಗಗಳು ಎಂದು ಶಂಕಿಸುತ್ತವೆ. ಒಂದೆಡೆ ಅವರು ನಮ್ಮ ಕೌಶಲ್ಯ ಪಡೆದ ಹುಡುಗರು ಮತ್ತು ಹುಡುಗಿಯರನ್ನು ನೇಮಿಸಿಕೊಳ್ಳಲು ಒಪ್ಪುವ ಮೂಲಕ ನಮಗೆ ಒಲವು ತೋರುತ್ತಾರೆ. ಮತ್ತೊಂದೆಡೆ ನಾವು ಈ ರೀತಿಯ ಮಿತಿಗಳನ್ನು ಎದುರಿಸುತ್ತೇವೆ. ಕಾರ್ಮಿಕ ಮಾರುಕಟ್ಟೆಯಲ್ಲಿನ ವಿರೋಧಾಭಾಸಗಳನ್ನು ಹೇಗೆ ಸಮತೋಲನಗೊಳಿಸುವುದು?"

**10.3.1 ಜಿಲ್ಲೆಗಳ ಮಟ್ಟದಲ್ಲಿ ಮತ್ತು ಪ್ರಮುಖ ಕಛೇರಿ ಅಧಿಕಾರಿಗಳೊಂದಿಗೆ ಸಮಾಲೋಚನೆ:**

ಈ ಮೌಲ್ಯಮಾಪನ ಅಧ್ಯಯನಕ್ಕಾಗಿ ಅಳವಡಿಸಿಕೊಳ್ಳಲಾದ ವಿಧಾನಗಳ ಭಾಗವಾಗಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್‌ನ ಮಾದರಿ ಜಿಲ್ಲಾ ಅಧಿಕಾರಿಗಳೊಂದಿಗೆ ಮತ್ತು ಕೌಶಲ್ಯ ವಿಭಾಗದಿಂದ ಸಂಬಂಧಪಟ್ಟವರೊಂದಿಗೆ ಹಲವಾರು ಚರ್ಚೆಗಳನ್ನು ನಡೆಸಲಾಗಿದೆ. ಅಂತೆಯೇ ರಾಜ್ಯದರಾಜಧಾನಿಯಲ್ಲೂ ಸಮಾಲೋಚನೆಗಳನ್ನು ನಡೆಸಲಾಗಿದೆ. ಅವರ ಕೆಲಸದ ಒತ್ತಡದಿಂದಾಗಿ ಉನ್ನತ ಅಧಿಕಾರಿಗಳೊಂದಿಗೆ ವಿವರವಾದ ಸಮಾಲೋಚನೆಗಾಗಿ ಸುದೀರ್ಘವಾಗಿ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಕೆಳಗಿನ ಹಂತಗಳಲ್ಲಿದ್ದವರಿಗೆ ನೀಡಲಾದ ಮಾಹಿತಿಯನ್ನು ಮೌಲ್ಯಮಾಪನ ತಂಡ ಹೇಗೆ ಬಳಸಿಕೊಳ್ಳುತ್ತದೆ ಎಂಬ ಬಗ್ಗೆ ನಿರಂತರ ಭಯವಿತ್ತು. ಆದರೂ ಒಂದು ಮಹತ್ವದ ಫಲಿತಾಂಶ ಎಂದು ನಿರ್ಧರಿಸಲುನಿದರ್ಶನಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ:

- ಜಿಲ್ಲಾ ಮಟ್ಟದಲ್ಲಿರಾಜೀವ್ ಗಾಂಧಿ ಚೈತನ್ಯ ಯೋಜನೆದತ್ತಾಂಶವನ್ನು ನಿರ್ವಹಿಸಲು ನಿಯೋಜಿತಅಧಿಕಾರಿ/ ಪ್ರಕರಣ ನಿರ್ವಾಹಕರ ಅನುಪಸ್ಥಿತಿ
- ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ದತ್ತಾಂಶಗಳ ನಿರ್ವಹಣೆಯ ಸಂಪೂರ್ಣ ದುರಾಡಳಿತ. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಯಾವುದೇ ಘಟಕಗಳಿಗೆ ಸರಿಯಾದ ದಾಖಲೆಗಳನ್ನು ನಿರ್ವಹಿಸುವುದಿಲ್ಲ.
- ಜಿಲ್ಲಾ ಮಟ್ಟದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಪ್ರತ್ಯೇಕವಾಗಿ ಯಾವುದೇ ನಿಯೋಜಿತ ಅಧಿಕಾರಿ ಇಲ್ಲ. ನಿದರ್ಶನಗಳಲ್ಲಿರುವ ಯಾವುದೇ ಸಣ್ಣ ಪ್ರಗತಿಯು ಅವರು ತಮ್ಮ ಕೆಲಸಕ್ಕೆ ಪಾವತಿಗಾಗಿ ಸಂಬಂಧಪಟ್ಟ ಇಲಾಖೆಗಳನ್ನು ಬೆನ್ನಟ್ಟುವ ಯೋಜನೆ ಬೆಂಬಲಿಸುವ ನಿಯೋಗ ಅಥವಾ ಯೋಜನೆ ಅನುಷ್ಠಾನ ನಿಯೋಗಗಳ ಪರಿಶ್ರಮದಿಂದಾಗಿದೆ. ತಮ್ಮ ಹಕ್ಕುಗಳನ್ನು ಇತ್ಯರ್ಥಪಡಿಸಲು ಹೆಚ್ಚಾಗಿ ಒತ್ತಾಯಿಸಿದಾಗ ಸ್ವಲ್ಪ ಉಸ್ತುವಾರಿ ನಡೆಯುತ್ತದೆ ಆದರೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಗುರಿಗಳನ್ನು ಸಾಧಿಸಲು ತುಂಬಾ ರಚನಾತ್ಮಕವಾಗಿ ಅಥವಾ ಅನುಕೂಲಕರವಾಗಿಲ್ಲ.
- ಬ್ಯಾಂಕುಗಳು ತಮ್ಮ ಕಡೆಯಿಂದ ಸ್ವಯಂ ಉದ್ಯೋಗ ಘಟಕಕ್ಕೆ ಹಣಕಾಸು ಒದಗಿಸುವ ಜನಾದೇಶ ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಅಥವಾ ರಾಜ್ಯ ಮಟ್ಟದಲ್ಲಿ ಆಡಳಿತದ ಕಡೆಯಿಂದ ಯಾವುದೇ ಪ್ರಯತ್ನವಿಲ್ಲ.
- ಆಗಾಗ್ಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಮತ್ತು ರಾಜ್ಯ ಮಟ್ಟದಲ್ಲಿ ಪ್ರಕರಣ ನಿರ್ವಾಹಕರುಗಳ ಬದಲಾವಣೆಗಳಿಂದಾಗಿ ಸರಿಯಾದ ಮೇಲ್ವಿಚಾರಣೆ ಇಲ್ಲದಿರುವುದು. ಕಳೆದ 5 ವರ್ಷಗಳಲ್ಲಿ ಸುಮಾರು 12 ಜನರು ಬದಲಾಗಿದ್ದಾರೆ.

- ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮಕ್ಕೆ ಯಾವುದೇ ಸ್ವತಂತ್ರ ಹುದ್ದೆಗಳಿಲ್ಲ. ಜಿಲ್ಲಾ ಪಂಚಾಯಿತಿಯಲ್ಲಿ ಯೋಜನಾ ನಿರ್ದೇಶಕರು ನೋಡಲ್‌ಅಧಿಕಾರಿ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಿಬ್ಬಂದಿ (ಸ್ವ-ಸಹಾಯ ಗುಂಪುಗಳಿಗೆ ಮೀಸಲಿರುವ) ಕ್ಷೇತ್ರ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಆಜ್ಞೆಯ ಸರಪಳಿ ಅಥವಾ ಜವಾಬ್ದಾರಿಗಳ ಸಾಲು ಒಗ್ಗಟ್ಟಿನಿಂದ ಹರಿಯುವುದಿಲ್ಲ.
- ಇವೆಲ್ಲವೂ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ದೊಡ್ಡ ಹಿನ್ನಡೆಯಾಗಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳು ರಾಜ್ಯ ಮಟ್ಟದಿಂದ ಅಧಿಕೃತ 'ಟಪಾಲು' ಎಂದು ಅವರಿಗೆ ರವಾನಿಸಲ್ಪಟ್ಟದ್ದನ್ನು ಸಂಕಲಿಸುತ್ತಾರೆ. ಸಂಬಂಧಪಟ್ಟ ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಯೋಜನೆ ಅನುಷ್ಠಾನ ನಿಯೋಗಗಳು, ಬ್ಯಾಂಕುಗಳಿಂದ ಮಾಹಿತಿಯನ್ನು ಸಂಗ್ರಹಿಸುತ್ತಾರೆ ಸಹಾಯಧನಕ್ಕಾಗಿ ಬ್ಯಾಂಕುಗಳಿಗೆ ಆದೇಶಗಳನ್ನು ಬಿಡುಗಡೆ ಮಾಡುತ್ತಾರೆ. ಯಾವುದೇ ಜವಾಬ್ದಾರಿ ಜಿಲ್ಲಾ ಮಟ್ಟದಲ್ಲಿ ಯಾರ ಮೇಲೂ ಇರುವುದಿಲ್ಲ.

**10.3.2 ವಾಣಿಜ್ಯ ಬ್ಯಾಂಕ್ ಅಧಿಕಾರಿಗಳಿಂದ ಪ್ರತಿಕ್ರಿಯೆಗಳು:**

ಆಯ್ಕೆ ಮಾಡಿದ ಫಲಾನುಭವಿಗಳು ವಾಣಿಜ್ಯ ಬ್ಯಾಂಕುಗಳಿಂದ ಸಾಲಕ್ಕೆ ಅರ್ಹರಾಗಿದ್ದಾರೆ ಎಂದು ಖಚಿತಪಡಿಸಿಕೊಂಡ ನಂತರವೇ ತರಬೇತಿಯನ್ನು ಪ್ರಾರಂಭಿಸುವುದಾಗಿ ಯೋಜನೆ ಬೆಂಬಲಿಸುವ ನಿಯೋಗಗಳು ಹೇಳಿಕೊಂಡರೂ ಪುರಾವೆಗಳು ಇದಕ್ಕೆವಿರುದ್ಧವಾಗಿವೆ. ಔಪಚಾರಿಕವಾಗಿ ತರಬೇತಿಯನ್ನು ನೀಡಿದ ನಂತರ ಸಾಲಕ್ಕೆ ಬ್ಯಾಂಕಿನ ಅನುಮೋದನೆಯನ್ನು ಪಡೆಯದ ಆಯ್ದ ಫಲಾನುಭವಿಗಳು ಸಾಕಷ್ಟು ದೊಡ್ಡ ಪ್ರಮಾಣದಲ್ಲಿದ್ದಾರೆ. ತಮ್ಮ ಕಡೆಯಿಂದ ಯೋಜನೆ ಬೆಂಬಲಿಸುವ ನಿಯೋಗಗಳು ತರಬೇತಿ ಪಡೆದ ಫಲಾನುಭವಿಗಳಿಗೆ ಸಾಲದ ಅನುಮೋದನೆಯ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ 'ಪ್ರಾಥಮಿಕ ಅನುಮೋದನೆ'ಯನ್ನು ಅಂತಿಮ ಹಂತವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬ್ಯಾಂಕ್ ಅಧಿಕಾರಿಗಳು ಸೂಚಿಸುತ್ತಾರೆ. ಅಂತಹ ಪ್ರಾಥಮಿಕ ಅನುಮೋದನೆಯನ್ನು ಪಡೆಯುವಾಗ ಅರ್ಜಿದಾರರಿಗೆ ಯಾವುದೇ ಹೊಣೆಗಾರಿಕೆ ಇದೆಯೇ ಅಥವಾ ಇಲ್ಲವೇ ಎಂಬ ಪರಿಶೀಲನೆಯ ಆಧಾರದ ಮೇಲೆ ಅಭಿಪ್ರಾಯವನ್ನು ನೀಡಲಾಗುವುದು. ಈ ಹಿಂದೆ ಸಕಾರಾತ್ಮಕ ಸೂಚನೆ ನೀಡಿದ್ದ ವಾಣಿಜ್ಯ ಬ್ಯಾಂಕುಗಳು ನಂತರದ ದಿನಗಳಲ್ಲಿ ತಮ್ಮ ನಿರ್ಧಾರಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತವೆ ಎಂದು ಯೋಜನೆ ಬೆಂಬಲಿಸುವ ನಿಯೋಗಗಳು ದೂರುತ್ತವೆ.

ಸಾಮಾನ್ಯವಾಗಿ ಅಂತಹ ಅಸಮ್ಮತಿಯಲ್ಲಿ ಅರ್ಜಿದಾರರು ಸಾಲದ ಭದ್ರತೆಗೆ ಬೆಂಬಲವಾಗಿ ಯಾವುದೇ ಮೇಲಾಧಾರವನ್ನು ಒದಗಿಸಲು ವಿಫಲರಾಗಿರುತ್ತಾರೆ ಅಥವಾ ಬ್ಯಾಂಕಿನಲ್ಲಿ ಸಾಲ ಸುಸ್ತಿದಾರರಾಗಿರಲು ಇತರೆ ಯಾವುದೇ ಕುಟುಂಬ ಸದಸ್ಯರು ವಿಫಲರಾಗಿರುತ್ತಾರೆ. ಅಂತಹ ಬಾಕಿ ಇರುವ ಸಾಲಗಳು ಕೇವಲ ಸಂಬಂಧಪಟ್ಟ ವಾಣಿಜ್ಯ ಬ್ಯಾಂಕುಗಳೊಂದಿಗೆ ಮಾತ್ರವಲ್ಲ ಇತರೆ ಯಾವುದೇ ವಾಣಿಜ್ಯ ಬ್ಯಾಂಕ್‌ನೊಂದಿಗೆ ಸಹ ಇರಬಹುದು. ಸಾಲಗಳು ಮತ್ತು ಇತರ ಹೊಣೆಗಾರಿಕೆಗಳು ಸೇರಿದಂತೆ ಬ್ಯಾಂಕ್ ವಹಿವಾಟುಗಳ ಬಗ್ಗೆ ಮಾಹಿತಿಯ ಡಿಜಿಟಲ್ ಹಂಚಿಕೆಯನ್ನು ಗಮನಿಸಿದರೆ– ಇತ್ತೀಚಿನ ದಿನಗಳಲ್ಲಿ ಯಾವುದೇ ಸಾಲಗಳ ಮಾಹಿತಿಯನ್ನು ಮರೆಮಾಡುವುದು ಪ್ರಾಯೋಗಿಕವಾಗಿ ಅಸಾಧ್ಯವಾಗಿದೆ. ಆಗಾಗ್ಗೆ ವಾಣಿಜ್ಯ ಬ್ಯಾಂಕುಗಳು 'ಕೆಟ್ಟ ಸಾಲಗಳು' ಅಥವಾ 'ನಿಷ್ಕ್ರಿಯ ಬಂಡವಾಳಗಳ' ಬಗ್ಗೆ ಜಾಗರೂಕವಾಗಿವೆ. ಈ ನಿಯಮವನ್ನು ಕೇವಲ ಫಲಾನುಭವಿಗೆ ಮಾತ್ರವಲ್ಲದೆ ಇತರ ಫಲಾನುಭವಿ ಗೃಹ ಸದಸ್ಯರಿಗೂ ವಿಸ್ತರಿಸುತ್ತವೆ. ಹೀಗಾಗಿ ಒಬ್ಬ ಮಹಿಳೆ ತನ್ನ ಪತಿ ಸಾಲಗಾರನಾಗಿದ್ದರೆ ಸಾಲಕ್ಕೆ

ಅನರ್ಹಳಾಗುತ್ತಾಳೆ. ಅಥವಾ ತಂದೆ ಸಾಲಗಾರನಾಗಿದ್ದರೆ ಮಗ. ತರಬೇತಿ ಪಡೆದ ಸಂಭಾವ್ಯ ಫಲಾನುಭವಿಗಳಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಜನರು ಬ್ಯಾಂಕ್ ಸಾಲಗಳಿಗೆ ಅನರ್ಹರು ಎಂದು ಕಂಡುಬಂದಿದೆ. ಅಂತಹ ವ್ಯಕ್ತಿಗಳಿಗೆ ತರಬೇತಿ ನೀಡಲು ಯೋಜನೆ ಬೆಂಬಲಿಸುವ ನಿಯೋಗಗಳಿಗೆ ವೇತನ ನೀಡದಿದ್ದರೂ, ಇದು ಯೋಜನೆ ಬೆಂಬಲಿಸುವ ನಿಯೋಗಗಳ ಸಂಪನ್ಮೂಲಗಳನ್ನು ಮಹತ್ತರವಾಗಿ ನಷ್ಟಗೊಳಿಸುತ್ತದೆ ಇದರಿಂದ ಅವರು ತಮ್ಮ ನಷ್ಟವನ್ನು ಸರಿಪಡಿಸಲು ಇತರೆ ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸಬಹುದು. ಗ್ರಾಮೀಣ ಕೌಶಲ್ಯ ರಹಿತ ಯುವಕರನ್ನು ಕೌಶಲ್ಯಭರಿತರಾಗಿಸುವುದು ರಾಷ್ಟ್ರೀಯ ಮಂತ್ರವಾಗಿದೆ ಮತ್ತು ರಾಷ್ಟ್ರ ನಿರ್ಮಾಣದ ಅತ್ಯಂತ ಪ್ರಮುಖ ಅಂಶವಾಗಿದೆ. ಆದ್ದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯಂತಹ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಈ ಯೋಜನೆಯು ಅಗತ್ಯ ಮಾರ್ಪಾಡುಗಳೊಂದಿಗೆ ಮುಂದುವರಿಯಬಹುದು.

# 11. ತೀರ್ಮಾನಗಳು ಮತ್ತು ಮೌಲ್ಯಮಾಪನೋತ್ತರ ಮಾತೃಕೆ

ಕೌಶಲ್ಯಪೂರ್ಣರಾಗಿಸುವುದು ಮತ್ತು ಗ್ರಾಮೀಣ ಯುವಕರನ್ನು ಕೌಶಲ್ಯಪೂರ್ಣರಾಗಿಸುವುದು ನಿಸ್ಸಂದೇಹವಾಗಿ 'ಆತ್ಮನಿರ್ಭರ್' ಭಾರತಕ್ಕೆ ಅತ್ಯಂತ ಪ್ರಮುಖ ಪೂರ್ವ ನಿಬಂಧನೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಪಾರ ಭರವಸೆಗಳನ್ನು ಹೊಂದಿದೆ. ಇದು ಇಲ್ಲಿಯವರೆಗೆ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳಾದ ಪರಿಶಿಷ್ಟ ಜಾತಿಗಳಿಗೆ (ಒಟ್ಟು ಫಲಾನುಭವಿಗಳಲ್ಲಿ, ಸ್ವಯಂ ಉದ್ಯೋಗದಲ್ಲಿ 28.66% ಮತ್ತು ವೇತನ ಉದ್ಯೋಗದಲ್ಲಿ 25.77%), ಮಹಿಳೆಯರಿಗೆ (30.46% ಸ್ವಯಂ ಉದ್ಯೋಗ ಮತ್ತು 39.87% ವೇತನ ಉದ್ಯೋಗ) ಹೊಸ ಅವಕಾಶಗಳನ್ನು ತೆರೆದಿದೆ. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸ್ವಯಂ ಉದ್ಯೋಗ ಘಟಕದ ಸರಾಸರಿ 60% ಫಲಾನುಭವಿಗಳು ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ವೇತನ ಉದ್ಯೋಗದ ಫಲಾನುಭವಿಗಳಲ್ಲಿ 76.53% ಜನರು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮತ್ತು ಘನತೆಯ ಜೀವನವನ್ನು ನಡೆಸಲು ಸಾಧ್ಯವಾಗಿದೆ. ಹೆಚ್ಚಿನ ಯಶಸ್ಸಿಗೆ ಅಗತ್ಯ ಮಾರ್ಪಾಡುಗಳೊಂದಿಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮವನ್ನು ಏಕೆ ಮುಂದುವರಿಸಬೇಕು ಎಂಬುದನ್ನು ಈ ಕೆಳಗಿನ ಪ್ರಕರಣ ಅಧ್ಯಯನಗಳು ಚಿತ್ರಿಸುತ್ತವೆ.

## 11.1 ಯಶೋಗಾಥೆಗಳು:

| |
|---|
| **1. ಫಲಾನುಭವಿಯ ಹೆಸರು: ಅಕ್ಕಮ್ಮ (32 ವರ್ಷ, ಮಹಿಳೆ)** |
| ತಾಲ್ಲೂಕು: ಬಾಗಲಕೋಟೆ |
| ಜಿಲ್ಲೆ: ಬಾಗಲಕೋಟೆ, |
| ಗ್ರಾಮ ಪಂಚಾಯಿತಿ– ಅಮರಾವತಿ |
| ಗ್ರಾಮ/ಗ್ರಾಮ– ಜಾಲಿಹಾಳ |
| ತಂದೆ/ಪತಿ ಹೆಸರು: ಉಮೇಶ |
| ಶಿಕ್ಷಣ: 10ನೇ ತರಗತಿ |
| ಜಾತಿ: ಪರಿಶಿಷ್ಟ ಜಾತಿ |
| **ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ:** |
| ಫಲಾನುಭವಿಯು ಈ ಹಿಂದೆ ಕೂಲಿ ಕಾರ್ಮಿಕನಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ದಿನಗೂಲಿ ಗಳಿಸುತ್ತಿದ್ದಳು. ಪ್ರತಿದಿನ ಅವಳು ಕೃಷಿ ಹೊಲದಲ್ಲಿ ಲಭ್ಯವಿರುವ ಮೇವನ್ನು ಬಿಟ್ಟು ಕೆಲಸದಿಂದ ಹಿಂತಿರುಗುತ್ತಿದ್ದಳು, ಏಕೆಂದರೆ ಮನೆಗೆ ಹಿಂತಿರುಗಿದಾಗ ಮೇವನ್ನು ಒದಗಿಸಲು ಯಾವುದೇ ಜಾನುವಾರು ಇರಲಿಲ್ಲ. |
| ಪ್ರಸ್ತುತ ಈ ಯೋಜನೆಯು ಎಮ್ಮೆ ಖರೀದಿಸಲು ಅವಳಿಗೆ ಪ್ರಯೋಜನಕಾರಿಯಾಗಿದೆ. ಎಮ್ಮೆ ಖರೀದಿಸಿದಾಗಿನಿಂದ ಫಲಾನುಭವಿಯ ಆರ್ಥಿಕ ಸ್ಥಿತಿ ಸುಧಾರಿಸಿದೆ. ಈ ಮೊದಲು ಕೃಷಿ ಕ್ಷೇತ್ರದಲ್ಲಿ ಲಭ್ಯವಾಗಿದ್ದ ಕೂಲಿ ಕೆಲಸದ ಮೇಲೆ ಮಾತ್ರ ಆಕೆಯ ಕುಟುಂಬದ ಆದಾಯ ಅವಲಂಬಿತವಾಗಿತ್ತು. ಕೆಲವೊಮ್ಮೆ ಕುಟುಂಬಕ್ಕೆ ಯಾವುದೇ ಕೆಲಸವಿಲ್ಲದ ಮತ್ತು ಅವರು ಮನೆಯಲ್ಲಿ ನಿಷ್ಕ್ರಿಯವಾಗಿ ಕುಳಿತುಕೊಳ್ಳಬೇಕಾಗಿದ್ದ ದಿನಗಳು ಇದ್ದವು. ಆದರೆ ರಾಜೀವ್ ಗಾಂಧಿ ಸ್ವಯಂ ಉದ್ಯೋಗ ಯೋಜನೆಗೆ ಸಂಬಂಧಿಸಿದಂತೆ ಜಾಗೃತಿ ಪಡೆದ ನಂತರ ಫಲಾನುಭವಿಗೆ ಎಮ್ಮೆ ಖರೀದಿಸಿ ಹೈನುಗಾರಿಕೆಯನ್ನು ಪ್ರಾರಂಭಿಸಲು |

ಸಾಧ್ಯವಾಯಿತು. ಇದರೊಂದಿಗೆ ಕುಟುಂಬದ ಇತರೆ ಸದಸ್ಯರೂ ಹೈನುಗಾರಿಕೆಯ ಜವಾಬ್ದಾರಿಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು. ಈ ರೀತಿಯಾಗಿ ಫಲಾನುಭವಿಯ ಕುಟುಂಬವು ಅವರ ಆರ್ಥಿಕ ಸ್ಥಾನಮಾನದಲ್ಲಿ ಸುಧಾರಣೆಯನ್ನು ಕಂಡಿತು ಮತ್ತು ಸಮಾಜದಲ್ಲಿ ಉತ್ತಮ ಸ್ಥಾನಮಾನವನ್ನು ಕಂಡಿತು. ಫಲಾನುಭವಿಯು "ನವ ಚೇತನ – ಜಂಟಿ ಹೊಣೆಗಾರಿಕೆ ಗುಂಪು " ಎಂಬ ಗುಂಪಿಗೆ ಸೇರಿಕೊಂಡರು. ಇದು ಸ್ಟೇಟ್ ಬ್ಯಾಂಕ್ಆಫ್ ಇಂಡಿಯಾ ಬ್ಯಾಂಕ್ ಬಾಗಲಕೋಟೆ ಶಾಖೆಯಲ್ಲಿ ತನ್ನ ಬ್ಯಾಂಕ್ ಖಾತೆಯನ್ನು ಹೊಂದಿರುವ ಐದು ಸದಸ್ಯರ ಗುಂಪು. ಪ್ರತಿ ತಿಂಗಳು ಗುಂಪು ಸಭೆಗಳನ್ನು ನಡೆಸಲಾಗುತ್ತದೆ ಮತ್ತು ಫಲಾನುಭವಿ ಈ ಗುಂಪಿನಲ್ಲಿ ಸಕ್ರಿಯ ಭಾಗಿಯಾಗಿ. ಅವಳು ಗುಂಪಿನಲ್ಲಿ ಹಣವನ್ನು ಉಳಿಸಿದ್ದಾಳೆ ಮತ್ತು ಹೀಗಾಗಿ ಅವಳು ತನ್ನ ಉಳಿತಾಯದಿಂದ ಎಮ್ಮೆಯನ್ನು ಖರೀದಿಸಲು ಸಾಧ್ಯವಾಯಿತು. ಹೈನುಗಾರಿಕೆ ಫಲಾನುಭವಿಯ ಕುಟುಂಬಕ್ಕೆ ಪರ್ಯಾಯ ಉದ್ಯೋಗವಾಗಿ ಮಾರ್ಪಟ್ಟಿದೆ ಮತ್ತು ಅವರು ಕೂಲಿ ಕೆಲಸದ ಮೇಲೆ ಕಡಿಮೆ ಅವಲಂಬಿತರಾಗಿದ್ದಾರೆ. ಅವರು ಮಾಸಿಕ ಕಂತುಗಳಲ್ಲಿ ಸಾಲದ ಮೊತ್ತವನ್ನು ಮರುಪಾವತಿಸಲು ಸಾಧ್ಯವಾಗಿದೆ.

**ಫಲಾನುಭವಿಯು ಯೋಜನೆ ಬಗ್ಗೆ ಹೇಗೆ ಜಾಗೃತಿ ಪಡೆದಳು ?**

ಗ್ರಾಮ ಪಂಚಾಯಿತಿ ತಮಟೆ ಹೊಡೆಸುವುದರ ಮೂಲಕ ಯೋಜನೆ ಬಗ್ಗೆ ಸಾರಿಸಿದರು. ಅದರಿಂದ ಫಲಾನುಭವಿಯು ವಿಷಯ ತಿಳಿದಳು.

ಫಲಾನುಭವಿಯು ಸ್ವಯಂ ಉದ್ಯೋಗ ಯೋಜನೆ ಆಯ್ಕೆ ಮಾಡಿಕೊಂಡಳು.

ಫಲಾನುಭವಿಯು ಪಡೆದ ತರಬೇತಿ ವಿಷಯ : ಹೈನುಗಾರಿಕೆ

**ಸ್ವಯಂ ಉದ್ಯೋಗದ ವಿವರಗಳು ಫಲಾನುಭವಿಗಳ ಮೇಲೆ ಯೋಜನೆಯ ಪ್ರಭಾವ**

- ತರಬೇತಿ / ಉದ್ಯೋಗದ ಪ್ರಾರಂಭದ ದಿನಾಂಕ – 10/06/2015
- ಯೋಜನೆ ಸೇರುವ ಮೊದಲು ಫಲಾನುಭವಿಯ ಆದಾಯ – 1500/–ರೂ.ಗಳು
- ಯೋಜನೆ ಸೇರಿದ ನಂತರದಲ್ಲಿ ಫಲಾನುಭವಿಯ ಆದಾಯ –3000/– ರೂ.ಗಳು

**ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ**

- ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗದ ಪ್ರಯೋಜನಗಳ ಬಗ್ಗೆ ತಿಳಿಸಲಾಯಿತು
- ತರಬೇತಿ ಅವಧಿಯಲ್ಲಿ ವಿವಿಧ ಅಂಶಗಳ ಬಗ್ಗೆ ತಿಳಿದುಕೊಂಡಳು
- ಬ್ಯಾಂಕ್ ವ್ಯವಹಾರಗಳ ಬಗ್ಗೆ ಕಲಿತುಕೊಂಡಳು
- ಫಲಾನುಭವಿಯು ತನ್ನ ಜೀವನ ಶೈಲಿಯನ್ನು ಸುಧಾರಿಸಿಕೊಳ್ಳಲು ಮತ್ತು ಗೌರವಯುತ ಜೀವನ ನಡೆಸಲು ಸಾಧ್ಯವಾಯಿತು.

| **2. ಫಲಾನುಭವಿಯ ಹೆಸರು: ಬಸವರಾಜ ಮಲ್ಲಯ್ಯ (29 ವರ್ಷ, ಪುರುಷ)** |
|---|
| ಜಿಲ್ಲೆ : ಚಿತ್ರದುರ್ಗ |
| ತಾಲ್ಲೂಕು : ಹೊಳಲ್ಕೆರೆ |
| ಗ್ರಾಮ : ಕೊನಸಾಗರ ಗ್ರಾಮ |
| ತಂದೆ/ಪತಿ ಹೆಸರು : ಮಲ್ಲಯ್ಯ |
| ಶಿಕ್ಷಣ : ವಿದ್ಯಾವಂತ ಆದರೆ ಅರ್ಹತೆಯ ವಿವರಗಳಿಲ್ಲ |
| ಜಾತಿ : ಪರಿಶಿಷ್ಟ ಜಾತಿ |
| **ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಫಲಾನುಭವಿಯ ಸ್ಥಿತಿಗತಿ :**<br>ಆರಂಭದಲ್ಲಿ ಫಲಾನುಭವಿ ತೆರೆದ ಹೊಲದಲ್ಲಿ ಕುರಿ ಸಾಕುತ್ತಿದ್ದರು, ಅವರಿಗೆ ಸುಸ್ಥಿರ ಆದಾಯವಿರಲಿಲ್ಲ. ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಫಲಾನುಭವಿಯು ಏಪ್ರೀಲ್ 20 2016 ರಿಂದ ಏಪ್ರೀಲ್ 25 2016 ರವರೆಗೆ ಆರು ದಿನಗಳ ಕುರಿ ಸಾಕಣೆ ತರಬೇತಿ ಕಾರ್ಯಕ್ರಮಕ್ಕೆ ಪಾಲ್ಗೊಂಡರು. ಸಾಂಪ್ರದಾಯಿಕ ಉದ್ಯೋಗವಾಗಿ ಕುರಿ ಸಾಕಣೆಯಲ್ಲಿ ತೊಡಗಿದ್ದ ಐದು ಗ್ರಾಮಸ್ಥರ ಗುಂಪು ಗ್ರಾಮ ಪಂಚಾಯಿತಿ ಸಹಾಯದಿಂದ 'ಭಗತ್ ಸಿಂಗ್ ಜಂಟಿ ಹೊಣೆಗಾರಿಕೆ ಗುಂಪನ್ನು' ರಚಿಸಿತು. ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ತರಬೇತಿ ಕಾರ್ಯಕ್ರಮಕ್ಕೆ ಒಳಗಾದ ನಂತರ ಅವರು ವೈಜ್ಞಾನಿಕವಾಗಿ ಕುರಿಗಳನ್ನು ಸಾಕಲು ಸಾಧ್ಯವಾಗಿದೆ ಮತ್ತು ಅವರ ಆದಾಯವು ದುಪ್ಪಟ್ಟಾಗಿದೆ. ಆದರೆ ಈಗ ಅವುಗಳನ್ನು ಈ ಉದ್ದೇಶಕ್ಕಾಗಿ ನಿರ್ಮಿಸಲಾದ ಶೆಡ್‌ಗಳಲ್ಲಿ ಸಾಕಲಾಗುತ್ತಿದೆ. ಗುಂಪು ಸ್ವಯಂ ಉದ್ಯೋಗಿಗಳು ಮಾತ್ರವಲ್ಲ ಅವರ ಆದಾಯವೂ ಹೆಚ್ಚಾಗಿದೆ. ಅವರು ಪತ್ರೆಹಳ್ಳಿ ಶಾಖೆಯಲ್ಲಿ ಕೃಷ್ಣ ಗ್ರಾಮೀಣ ಬ್ಯಾಂಕ್‌ನಿಂದ 40,000 ರೂ.ಗಳ ಬ್ಯಾಂಕ್ ಸಾಲವನ್ನು ಪಡೆದಿದ್ದು ಸರ್ಕಾರವು ಅವರಿಗೆ ಆರ್ಥಿಕ ಸಹಾಯವಾಗಿ 10,000 ರೂ.ಗಳನ್ನು ವಿತರಿಸಿದೆ. |
| **ಫಲಾನುಭವಿಗೆ ಯೋಜನೆಯ ಅರಿವು ಹೇಗೆ ಬಂತು?**<br>ಫಲಾನುಭವಿಯನ್ನು ಗ್ರಾಮ ಪಂಚಾಯಿತಿಯಿಂದ ಕಾರ್ಯಕ್ರಮಕ್ಕೆ ಸೇರಿಸಿಕೊಳ್ಳಲಾಯಿತು.<br>ಫಲಾನುಭವಿಯು ಕೌಶಲ್ಯ ಅಭಿವೃದ್ದಿ ತರಬೇತಿ ಮತ್ತು ಸ್ವಯಂ ಉದ್ಯೋಗ ಯೋಜನೆಯನ್ನು ಆಯ್ಕೆ ಮಾಡಿಕೊಂಡರು. |
| **ಫಲಾನುಭವಿ ಪಡೆದ ತರಬೇತಿಯ ಕ್ಷೇತ್ರ ಪಶು ಸಂಗೋಪನೆ** |
| **ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು**<br>ಕುರಿ ಸಾಕಾಣಿಕೆ ತರಬೇತಿ ಕಾರ್ಯಕ್ರಮ<br>ತರಬೇತಿ / ಉದ್ಯೋಗ ಪ್ರಾರಂಭವಾದ ದಿನಾಂಕ.– ಏಪ್ರೀಲ್ 20, 2016 ರಿಂದ ಎಪ್ರೀಲ್ 25, 2016 ರ ವರೆಗೆ |
| **ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ :**<br>• ಕುರಿ ಸಾಕಾಣಿಕೆಯ ಬಗ್ಗೆ ವೈಜ್ಞಾನಿಕ ಜ್ಞಾನವನ್ನು ಪಡೆದು ತಮ್ಮ ಕೌಶಲ್ಯವನ್ನು ಸುಧಾರಿಸಿಕೊಂಡರು.<br>• ಸ್ವಯಂ ಉದ್ಯೋಗ ಮತ್ತು ಆದಾಯ ಸುಧಾರಿಸಿತು.<br>• ಬ್ಯಾಂಕಿಂಗ್ ವಹಿವಾಟಿನ ಬಗ್ಗೆ ತಿಳಿದುಕೊಂಡರು.<br>• ಫಲಾನುಭವಿಯು ತನ್ನ ಜೀವನ ಶೈಲಿಯನ್ನು ಸುಧಾರಿಸಲು ಮತ್ತು ಗೌರವಯುತ ಜೀವನವನ್ನು ನಡೆಸಲು ಸಾಧ್ಯವಾಯಿತು. |

**3. ಫಲಾನುಭವಿಯ ಹೆಸರು – ಶೇಷರಾವ್ (26 ವರ್ಷ, ಪುರುಷ)**

ಜಿಲ್ಲೆ – ಧಾರವಾಡ

ತಾಲ್ಲೂಕು – ಧಾರವಾಡ

ಗ್ರಾಮ– ಉಪ್ಪಿನ ಬೇಟಗೇರಿ

ತಂದೆ/ಪತಿ ಹೆಸರು: ವಿನಾಯಕ

ಶಿಕ್ಷಣ: ವಿದ್ಯಾವಂತ

ಜಾತಿ: ಸಾಮಾನ್ಯ

**ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ:**

ಫಲಾನುಭವಿ ಧಾರವಾಡದ ಅಂಗಡಿಯೊಂದರಲ್ಲಿ ದರ್ಜಿಯಾಗಿ ಕೆಲಸ ಮಾಡುತ್ತಿದ್ದರು. ಒಂದು ಜೊತೆ ಪ್ಯಾಂಟ್ ಮತ್ತು ಶರ್ಟ್ ಹೊಲಿಯಲು ಅವರು 200 ರೂ.ಗಳನ್ನು ವೇತನವಾಗಿ ಪಡೆಯುತ್ತಿದ್ದರು. ಅವರು ಶಿಕ್ಷಣ ಪಡೆದಿದ್ದರೂ ಅವರು ತಮ್ಮ ಜೀವನೋಪಾಯಕ್ಕಾಗಿ ದಿನಗೂಲಿಯನ್ನು ಅವಲಂಬಿಸಿದ್ದರು. ಕೆಲಸ ಮತ್ತು ಜೀವನೋಪಾಯವನ್ನು ಕಳೆದುಕೊಳ್ಳುವ ಭಯವಿತ್ತು. ಇದಲ್ಲದೆ ಅವರು ನಿರುದ್ಯೋಗಿಯಾಗುವ ಮತ್ತು ಮನೆಯಲ್ಲಿಯೇ ಉಳಿಯುವ ಸಾಧ್ಯತೆ ಇತ್ತು. ಕೆಲವೊಮ್ಮೆ ಅಂಗಡಿಯಲ್ಲಿ ಯಾವುದೇ ಕೆಲಸ ಬರದಿದ್ದಾಗ ಖಾಲಿ ಕೈಗಳಲ್ಲಿ ಮನೆಗೆ ಬರಬೇಕಾಗಿತ್ತು.

ಅವರ ಹಳ್ಳಿಯ ಐದುಜನರ ಒಟ್ಟಾರೆ ಸೇರಿ ನವತರುಣ ಜಂಟಿ ಹೊಣೆಗಾರಿಕೆ ಗುಂಪನ್ನು' ರಚಿಸಿದರು. ಅವರು ಪ್ರತಿ ತಿಂಗಳು ನಿಯಮಿತ ಸಭೆಗಳನ್ನು ನಡೆಸುತ್ತಾರೆ ಮತ್ತು ತಮ್ಮ ಎಲ್ಲಾ ಉಳಿತಾಯಗಳನ್ನು ಸಂಗ್ರಹಿಸುತ್ತಾರೆ. ರಾಜೀವ್ ಗಾಂಧಿ ಚೈತನ್ಯ ಯೋಜನೆ ಅವರ ಸಹಾಯದಿಂದ ಫಲಾನುಭವಿಯು ಹೊಲಿಗೆ ಯಂತ್ರದ ಕಿಟ್ ಖರೀದಿಸಿ ತಮ್ಮ ಹಳ್ಳಿಯಲ್ಲಿ ಹೊಲಿಗೆ ಅಂಗಡಿಯನ್ನು ತೆರೆದರು. ಅವರು ಈಗ ತನ್ನ ಅಂಗಡಿಯೊಂದಿಗೆ ಗಳಿಸುವ ಲಾಭದೊಂದಿಗೆ ಜೀವನೋಪಾಯವನ್ನು ನಡೆಸುತ್ತಿದ್ದಾರೆ. ಅವನು ತನ್ನ ಉದ್ಯಮವನ್ನು ಸ್ಥಾಪಿಸಲು ತೆಗೆದುಕೊಂಡ ಸಾಲಗಳನ್ನು ಸಹ ಮರುಪಾವತಿಸುತ್ತಾರೆ.

ಗ್ರಾಮದಯುವಕರ ಮೂಲಕ ಸ್ವಸಹಾಯ ಗುಂಪು ನಮೂನೆಯಿಂದ ಫಲಾನುಭವಿಮಾಹಿತಿ ಪಡೆದರು.

ಫಲಾನುಭವಿ ಸ್ವಯಂ ಉದ್ಯೋಗಯೋಜನೆಯನ್ನುಆಯ್ಕೆ ಮಾಡಿಕೊಂಡರು.

**ಫಲಾನುಭವಿ ಪಡೆದ ತರಬೇತಿಯ ಕ್ಷೇತ್ರ:** ಹೊಲಿಗೆ ಮತ್ತು ಹೊಸ ವಿನ್ಯಾಸಗಳನ್ನು ಕಲಿಯುವ ಮೂಲಕ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು.

**ಸ್ವಯಂ ಉದ್ಯೋಗದ ವಿವರಗಳು :**

- ಚಟುವಟಿಕೆಯಆರಂಭದ ದಿನಾಂಕ: 10–02–2016
- ಚಟುವಟಿಕೆಯ ಪ್ರಾರಂಭದಲ್ಲಿ ಗಳಿಸಿದ ಮೊದಲ ಆದಾಯ: 4,000 ರೂ.
- ಚಟುವಟಿಕೆಯ ನಂತರ ಗಳಿಸಿದ ಆದಾಯ: 8,000/– ರೂ.

**ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ :**

- ಕಾರ್ಯಕ್ರಮದ ಸಮಯದಲ್ಲಿ ಬಟ್ಟೆಗಳನ್ನು ವಿನ್ಯಾಸಗೊಳಿಸುವ ಮತ್ತು ಹೊಲಿಗೆ ಮಾಡುವ ವಿಧಗಳನ್ನು ಕಲಿಯುವ ಮೂಲಕ ಕೌಶಲ್ಯವನ್ನು ಹೆಚ್ಚಿಸಲಾಗಿದೆ.
- ಜೀವನೋಪಾಯಕ್ಕಾಗಿ ನಗರಕ್ಕೆ ಹೋಗದೇತನ್ನ ಹಳ್ಳಿಯಲ್ಲಿಯೇ ಗಳಿಕೆ ದಾರಿ ಕಂಡುಕೊಂಡು ಜೀವನ ಸಾಗಿಸುತಿದ್ದಾರೆ.
- ತಮ್ಮ ಗ್ರಾಮದಲ್ಲಿ ಹೊಲಿಗೆ ಅಂಗಡಿ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದಾರೆ.
- ಅವರು ಸ್ವಯಂ ಉದ್ಯೋಗ ಯೋಜನೆಯ ಪ್ರಯೋಜನಗಳನ್ನು ನಿರುದ್ಯೋಗಿ ಯುವಕರಿಗೆ ತಿಳಿಸಿದ್ದಾರೆ.
- ತರಬೇತಿ ಸಮಯದಲ್ಲಿ ವಿವಿಧ ಅಂಶಗಳ ಬಗ್ಗೆ ಜಾಗೃತಿಯನ್ನು ಪಡೆದರು.
- ಬ್ಯಾಂಕಿಂಗ್ ವಹಿವಾಟಿನ ಬಗ್ಗೆ ತಿಳಿದುಕೊಂಡರು.
- ಫಲಾನುಭವಿಯು ತನ್ನ ಜೀವನ ಶೈಲಿಯನ್ನು ಸುಧಾರಿಸಲು ಮತ್ತು ಗೌರವಯುತ ಜೀವನವನ್ನು ನಡೆಸಲು ಸಾಧ್ಯವಾಗಿದೆ.

| |
|---|
| **4. ಫಲಾನುಭವಿಯ ಹೆಸರು – ಲಕ್ಷ್ಮಿ(24 ವರ್ಷ, ಮಹಿಳೆ) ,** |
| ಜಿಲ್ಲೆ– ತುಮಕೂರು |
| ತಾಲ್ಲೂಕು – ಮಧುಗಿರಿ |
| ಗ್ರಾಮ ಪಂಚಾಯಿತಿ– ಪಿ ಡಿ ಹಳ್ಳಿ ಹೋಬಳಿ ಗ್ರಾಮ – ಪ್ರಲುಮಾಚಿ |
| ತಂದೆ ಹೆಸರು: ಈರಣ್ಣ |
| ಶಿಕ್ಷಣ: ಎಸ್.ಎಸ್.ಎಲ್.ಸಿ. |
| ಜಾತಿ: ಪರಿಶಿಷ್ಟ ಜಾತಿ |
| **ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ:**<br>ಫಲಾನುಭವಿಯ ಕುಟುಂಬವು ಬಹಳ ಸಮಯದಿಂದ ಕುರಿ ಸಾಕಾಣಿಕೆ ಚಟುವಟಿಕೆಯಲ್ಲಿ ತೊಡಗಿತ್ತು. ಅಕಾಲಿಕ ಮಳೆಯಿಂದ, ಅವರು ಸಾಕಿದ್ದ ಆರು ಕುರಿಗಳು ಸತ್ತವು ಇದರ ಪರಿಣಾಮವಾಗಿ ಕುಟುಂಬಕ್ಕೆ ಆರ್ಥಿಕ ಮುಗ್ಗಟ್ಟು ಉಂಟಾಯಿತು. ಫಲಾನುಭವಿಯ ಕುಟುಂಬವು ಕುರಿಗಳನ್ನು ಖರೀದಿಸಲು ಆರ್ಥಿಕವಾಗಿ ಸದೃಢವಾಗಿರಲಿಲ್ಲ. ಫಲಾನುಭವಿಯ ಕುಟುಂಬವು ಒಣ ಭೂಮಿ ಕೃಷಿಯಲ್ಲಿ ತೊಡಗಿತ್ತು ಮತ್ತು ಅವರು ತಮ್ಮ ಜೀವನೋಪಾಯಕ್ಕಾಗಿ ಸಕಾಲದಲ್ಲಿ ಮುಂಗಾರು ಆಗಮನವನ್ನು ಅವಲಂಬಿಸಿದ್ದರು. ಕುರಿಗಳ ಮರಣದ ನಂತರ, ಅವರಿಗೆ ಸಾಕಷ್ಟು ಆದಾಯವನ್ನು ಪಡೆಯುವ ಇತರ ಎಲ್ಲಾ ಆದಾಯದ ಮೂಲಗಳು ಮುಚ್ಚಿಹೋದವು, ಕುಟುಂಬದ ಎಲ್ಲಾ ಸದಸ್ಯರು ಇತರರ ಒಡೆತನದ ಹೊಲಗಳಲ್ಲಿ ಕಾರ್ಮಿಕರಾಗಿ ಕೆಲಸಕ್ಕೆ ಹೋಗುವಂತೆ ಒತ್ತಾಯಿಸಲಾಯಿತು.<br>ಪ್ರಲುಮಾಚಿ ಗ್ರಾಮದ ಐದು ಗ್ರಾಮಸ್ಥರು 'ದುರ್ಗಾ ಜಂಟಿ ಹೊಣೆಗಾರಿಕೆ ಗುಂಪನ್ನು' ರಚಿಸಿದರು ಮತ್ತು ಯೋಜನೆಯಡಿ ಉಳಿತಾಯವನ್ನು ಕ್ರೋಢೀಕರಿಸುವ ಜೊತೆಗೆ ಮಾಸಿಕ ಸಭೆಗಳನ್ನು ಆಯೋಜಿಸಿದರು. ಫಲಾನುಭವಿಯು ರಾಜೀವ್ ಗಾಂಧಿ ಚೈತನ್ಯ ಯೋಜನೆ ಅಡಿಯಲ್ಲಿ ಸಾಲದ ಸಹಾಯದಿಂದ ನಾಲ್ಕು ಕುರಿಗಳನ್ನು ಖರೀದಿಸಿದರು. ಫಲಾನುಭವಿಗೆ ತರಬೇತಿ ನೀಡಲಾಯಿತು ಮತ್ತು ಯೋಜನೆಯ ಅಡಿಯಲ್ಲಿ ನಾಲ್ಕು ಕುರಿಗಳನ್ನು ಖರೀದಿಸಿದ ನಂತರಕುಟುಂಬವು ಲಾಭವನ್ನು ಗಳಿಸಲು ಸಾಧ್ಯವಾಯಿತು ಮತ್ತು ಅವರು ಮಾಸಿಕ ಕಂತುಗಳ ಮೂಲಕ ತಮ್ಮ ಸಾಲಗಳನ್ನು ಮರುಪಾವತಿಸಲು ಸಾಧ್ಯವಾಯಿತು. |
| ಗ್ರಾಮ ಪಂಚಾಯಿತಿ ಅಧಿಕಾರಿಗಳು ಒಮ್ಮೆ ವಾರ್ಡ್ ಸಭೆ ಕರೆದು ಯೋಜನೆಯ ಬಗ್ಗೆ ಜಾಗೃತಿ ಮೂಡಿಸುತ್ತಾರೆ.<br>ಗ್ರಾಮದಲ್ಲಿ ನಡೆದ ಗ್ರಾಮ ಸಭೆಯಲ್ಲಿ ಈ ಯೋಜನೆಯಡಿ ಫಲಾನುಭವಿಯನ್ನು ಆಯ್ಕೆ ಮಾಡಲಾಯಿತು. |
| ಫಲಾನುಭವಿಯು ಸ್ವಯಂ ಉದ್ಯೋಗ ಯೋಜನೆಯನ್ನು ಆಯ್ಕೆ ಮಾಡಿಕೊಂಡರು. |
| **ಫಲಾನುಭವಿಯು ಪಡೆದ ತರಬೇತಿಯ ಕ್ಷೇತ್ರ: ಕುರಿ ಸಾಕಣೆ** |
| **ಸ್ವಯಂ ಉದ್ಯೋಗದ ವಿವರಗಳು :**<br>• ಚಟುವಟಿಕೆಯಆರಂಭದ ದಿನಾಂಕ: 05–05–2015<br>• ಚಟುವಟಿಕೆಯ ಪ್ರಾರಂಭದಲ್ಲಿ ಗಳಿಸಿದ ಮೊದಲ ಆದಾಯ: ರೂ 1,000/–<br>• ಚಟುವಟಿಕೆಯ ನಂತರ ಗಳಿಸಿದ ಆದಾಯ: 3,000/– ರೂ. |
| **ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ :**<br>• ಕುರಿ ಸಾಕಾಣಿಕೆ ಕುರಿತು ಪಶು ಸಂಗೋಪನಾ ತರಬೇತಿ ಕೇಂದ್ರದಲ್ಲಿ ತರಬೇತಿ ಒದಗಿಸಲಾಗಿದ್ದು ಅಲ್ಲಿ ಕುರಿ ಮತ್ತು ಮೇಕೆಗಳನ್ನು ವೈಜ್ಞಾನಿಕವಾಗಿ ಸಾಕುವುದರ ಬಗ್ಗೆ ವ್ಯಾಪಕ ತರಬೇತಿ ನೀಡಲಾಯಿತು. |

- ಉಣ್ಣೆಯ ಸರಕುಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ಬಗ್ಗೆ ಮತ್ತು ಅವರ ಆದಾಯವನ್ನು ಹೇಗೆ ಹೆಚ್ಚಿಸಬಹುದು ಎಂಬುದರ ಬಗ್ಗೆ ಪ್ರಾಯೋಗಿಕ ಸಲಹೆಗಳನ್ನು ಅವರಿಗೆ ನೀಡಲಾಯಿತು.
- ಯೋಜನೆಯ ಲಾಭ ಪಡೆದ ನಂತರ ತನ್ನ ಕುಟುಂಬದಆರ್ಥಿಕ ಸ್ಥಿತಿ ಗಣನೀಯವಾಗಿ ಸುಧಾರಿಸಿದೆ ಎಂದು ಫಲಾನುಭವಿ ಹೇಳಿದರು.

**5. ಫಲಾನುಭವಿಯ ಹೆಸರು: ಅರುಣ್‌ಕುಮಾರ್ (ಪುರುಷ, 24 ವರ್ಷಗಳು) ,**

ಜಿಲ್ಲೆ– ಉಡುಪಿ

ತಾಲ್ಲೂಕು – ಕಾರ್ಕಳ

ಗ್ರಾಮ ಪಂಚಾಯಿತಿ– ಮುಂಡೂರು ಗ್ರಾಮ – ಮುಂಡೂರು

ತಂದೆ ಹೆಸರು – ದೇವೇಂದ್ರ

ಶಿಕ್ಷಣ – 2nd ಪಿ.ಯು.ಸಿ.

ಜಾತಿ: ಸಾಮಾನ್ಯ

**ಯೋಜನೆಯಪ್ರಯೋಜನವನ್ನುಪಡೆಯುವಮೊದಲುಫಲಾನುಭವಿಯಸ್ಥಿತಿಗತಿ :**

ಫಲಾನುಭವಿಯು ಕಡಿಮೆ ಆದಾಯದ ಕುಟುಂಬಕ್ಕೆ ಸೇರಿದವನು, ಅಲ್ಲಿ ಇಬ್ಬರೂ ಪೋಷಕರು ಮನೆಯ ವೆಚ್ಚಗಳು ಮತ್ತು ಅವಶ್ಯಕತೆಗಳನ್ನು ಬೆಂಬಲಿಸಲು ಕೆಲಸ ಮಾಡುತ್ತಿದ್ದರು. 2ನೇ ಪಿಯುಸಿ ನಂತರ ಸೂಕ್ತ ಉದ್ಯೋಗ ಪಡೆಯಲಾಗಲಿಲ್ಲ. ಆದ್ದರಿಂದ ಸಾಮಾಜಿಕವಗಿ ಕೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಫಲಾನುಭವಿಯು ಯಾವಾಗಲೂ ಸ್ವಯಂ ಉದ್ಯೋಗಿಯಾಗಲು ಮತ್ತು ತನ್ನದೇಆದ ವ್ಯವಹಾರವನ್ನು ಪ್ರಾರಂಭಿಸಲು ಆಸಕ್ತಿ ಹೊಂದಿದ್ದನು. ಪೋಷಕರು ಬಡವರಾದ ಕಾರಣ, ಅವರು ವ್ಯವಹಾರವನ್ನು ಪ್ರಾರಂಭಿಸಲು ಅವನಿಗೆ ಆರ್ಥಿಕವಾಗಿ ಸಹಾಯ ಮಾಡಲು ಸಾಧ್ಯವಾಗಲಿಲ್ಲ. ರಾಜೀವ್ ಗಾಂಧಿ ಚೈತನ್ಯ ಯೋಜನೆ ಅವರ ಜೀವನಕ್ಕೆ ದಾರಿದೀಪವಾಗಿ ಸಹಾಯಕ್ಕೆ ಬಂದಿತು. ಐದುಗ್ರಾಮಸ್ಥರ ಗುಂಪು ಒಗ್ಗೂಡಿ 'ಮದರ್ ತೆರೇಸಾ ಜಂಟಿ ಹೊಣೆಗಾರಿಕೆ ಗುಂಪನ್ನು' ರಚಿಸಿತು. ಅವರು ಮಾಸಿಕ ಸಭೆಗಳನ್ನು ನಡೆಸಿದರು ಮತ್ತು ರಾಜೀವ್ ಗಾಂಧಿ ಚೈತನ್ಯ ಯೋಜನೆ ಭಾಗವಾಗಿ ತಮ್ಮ ಉಳಿತಾಯವನ್ನು ಒಟ್ಟುಗೂಡಿಸಿದರು. ಅವರು ತಮ್ಮದೇ ಆದಕಿರಾಣಿ ಮಳಿಗೆಗಳನ್ನು ಪ್ರಾರಂಭಿಸಿದರು ಮತ್ತು ಈ ಉದ್ಯಮದ ಮೂಲಕ ಲಾಭಗಳಿಸಲು ಪ್ರಾರಂಭಿಸಿದರು / ಅವರು ಸಾಲಗಳನ್ನು ಬ್ಯಾಂಕಿಗೆ ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುತ್ತಿದ್ದಾರೆ.

ಫಲಾನುಭವಿಯನ್ನು ಗ್ರಾಮಸಭೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸೇರಿಸಿಕೊಂಡರು. ಯೋಜನೆಯ ಬಗ್ಗೆ ಏನೂ ತಿಳಿಯದೆ ಫಲಾನುಭವಿ ಗ್ರಾಮಸಭೆಗೆ ಪ್ರಾಸಂಗಿಕವಾಗಿ ಹಾಜರಾಗಿದ್ದರು. ಅಲ್ಲಿ ಯೋಜನೆಯ ಪ್ರತಿನಿಧಿಗಳು ರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ಎಲ್ಲಾ ಲಕ್ಷಣಗಳನ್ನು ಸಂಪೂರ್ಣವಾಗಿ ವಿವರಿಸಿದ್ದನ್ನು ಅವನು ಕೇಳಿಕೊಂಡನು. ನಂತರ ಸ್ವಯಂ ಉದ್ಯೋಗ ಯೋಜನೆಯಲ್ಲಿ ಆಸಕ್ತಿ ತೋರಿದ್ದರಿಂದ ಯೋಜನೆಗೆ ತಮ್ಮ ಹೆಸರನ್ನು ನೋಂದಾಯಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದರು. ಫಲಾನುಭವಿಯು ಸ್ವಯಂ ಉದ್ಯೋಗ ಯೋಜನೆಯನ್ನು ಆಯ್ಕೆ ಮಾಡಿಕೊಂಡರು.

**ಫಲಾನುಭವಿಯು ಪಡೆದ ತರಬೇತಿಯ ಕ್ಷೇತ್ರ : ಅಂಗಡಿ ನಿರ್ವಹಣೆ**

**ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು ;**

- ಚಟುವಟಿಕೆಯ ಆರಂಭದ ದಿನಾಂಕ: 15–05–2015

| |
|---|
| • ಚಟುವಟಿಕೆಯ ಪ್ರಾರಂಭದಲ್ಲಿ ಗಳಿಸಿದ ಮೊದಲ ಆದಾಯ: ರೂ 0<br>• ಚಟುವಟಿಕೆಯ ನಂತರ ಗಳಿಸಿದ ಆದಾಯ: 4,000/– ರೂ. |
| **ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ :**<br>• ಯೋಜನೆಯ ಸಹಾಯದಿಂದ ಅವರುತಮ್ಮ ಹಳ್ಳಿಯಲ್ಲಿ ಸ್ವಯಂಉದ್ಯೋಗಿ ವ್ಯಕ್ತಿಯಾಗಲು ಸಾಧ್ಯವಾಯಿತು.<br>• ಅವನು ತನ್ನ ಕುಟುಂಬಕ್ಕೆ ಅಗತ್ಯವಿರುವ ದಿನಸಿ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗಲು ಸಮರ್ಥನಾಗಿದ್ದಾನೆ ಮತ್ತು ಆದ್ದರಿಂದ ಅವನ ಪೋಷಕರು ಅವನ ಸಾಧನೆಯ ಬಗ್ಗೆ ಹೆಮ್ಮೆ ಪಡುತ್ತಾರೆ.<br>• ಫಲಾನುಭವಿಯು ತನ್ನ ಜೀವನ ಶೈಲಿಯನ್ನು ಸುಧಾರಿಸಲು ಮತ್ತು ಗೌರವಯುತ ಜೀವನವನ್ನು ನಡೆಸಲು ಸಾಧ್ಯವಾಗಿದೆ. |
| |
| **6. ಫಲಾನುಭವಿಯ ಹೆಸರು: ಸುಮಿತ್ರ (ಮಹಿಳೆ, 25 ವರ್ಷಗಳು)** |
| ಜಿಲ್ಲೆ– ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಗ್ರಾಮ ಪಂಚಾಯಿತಿ– ಕಲ್ಲುಬಾಲು, ಕೃಷ್ಣದೊಡ್ಡಗ್ರಾಮ |
| ತಂದೆ ಹೆಸರು: ಅಂಜನಪ್ಪ |
| ಶಿಕ್ಷಣ: ಎಸ್.ಎಸ್.ಎಲ್.ಸಿ. |
| ಜಾತಿ: ಬೋವಿ (ವಡ್ಡರು) |
| **ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಫಲಾನುಭವಿಯ ಸ್ಥಿತಿಗತಿ:**<br>ಫಲಾನುಭವಿಯುಕಾರ್ಯಕ್ರಮಕ್ಕೆ ಸೇರುವ ಮೊದಲು ಮನೆಕೆಲಸ ಮಾಡುವಲ್ಲಿ ತೊಡಗಿದ್ದರೆ ಅವಳ ಪೋಷಕರು ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು. ಗ್ರಾಮದಲ್ಲಿ ನಡೆದ ಗ್ರಾಮ ಸಭೆಯಲ್ಲಿರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ಅವರು ಮಾಹಿತಿ ಪಡೆದರು. ಅವರುಕೌಶಲ್ಯಅಭಿವೃದ್ಧಿಯೋಜನೆಯಡಿ ಹೊಲಿಗೆಯಲ್ಲಿ ಮೂರು ತಿಂಗಳ ತರಬೇತಿ ಪಡೆದರು. ನಂತರಅವರು ಬೆಂಗಳೂರಿನ ಸ್ಕಾಟ್ಸ್ ಗಾರ್ಮೆಂಟ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಸೇರಿದರು ಮತ್ತು ಅಲ್ಲಿ ಉತ್ತಮವಾದ ಸಂಬಳ ಮತ್ತು ಇತರ ಪ್ರಯೋಜನಗಳೊಂದಿಗೆ ಸ್ವಯಂಚಾಲಿತ ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. |
| ಫಲಾನುಭವಿಯನ್ನುಗ್ರಾಮಸಭೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸೇರಿಸಿಕೊಂಡರು. |
| ಫಲಾನುಭವಿಯು ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಆಯ್ಕೆ ಮಾಡಿಕೊಂಡರು. |
| **ಫಲಾನುಭವಿಯು ಪಡೆದ ತರಬೇತಿಯ ಕ್ಷೇತ್ರ : ಹೊಲಿಗೆ ಕೆಲಸ** |
| **ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು :**<br>• ಹೊಲಿಗೆ ಕೆಲಸದಲ್ಲಿ ಮೂರು ತಿಂಗಳ ತರಬೇತಿ |
| **ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ:**<br>• ಚಟುವಟಿಕೆಯ ನಂತರ ಗಳಿಸಿದ ಆದಾಯ: ರೂ 10,000/–<br>• ಉಚಿತ ಹಾಸ್ಟೆಲ್ ವಸತಿ.<br>• ನುರಿತ ಕೆಲಸಗಾರರಾದರು<br>• ಅವಳ ಆದಾಯದ ಪರಿಣಾಮವಾಗಿ, ಅವಳ ಕುಟುಂಬದಆರ್ಥಿಕ ಸ್ಥಿತಿ ಹೆಚ್ಚಾಗಿದೆ. |

| |
|---|
| 7. ಫಲಾನುಭವಿಯ ಹೆಸರು: ಅಶೋಕ (ಪುರುಷ, 28 ವರ್ಷ) |
| ಜಿಲ್ಲೆ – ಬೆಳಗಾವಿ |
| ತಾಲ್ಲೂಕು – ರಾಮದುರ್ಗ |
| ಗ್ರಾಮ – ಓಬಲಾಪುರ ಗ್ರಾಮ |
| ತಂದೆ ಹೆಸರು: ಈರಪ್ಪ |
| ಶಿಕ್ಷಣ:2ನೇ ಪಿ.ಯು.ಸಿ. |
| ಜಾತಿ: ಪರಿಶಿಷ್ಟ ಜಾತಿ |
| ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ:<br>ಫಲಾನುಭವಿಯು ತನ್ನ ಕೃಷಿಭೂಮಿಯಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ಕುಟುಂಬವನ್ನು ಉಳಿಸಿಕೊಳ್ಳಲು ಅನಿಯಮಿತ ಆದಾಯವು ಸಾಕಾಗುತ್ತಿರಲಿಲ್ಲ. ಗ್ರಾಮ ಪಂಚಾಯಿತಿ ಕಾರ್ಯಕ್ರಮದ ಬಗ್ಗೆ ವಿವರಿಸಿದ ನಂತರ ಅವನು ತನ್ನ ಎಲ್ಲಾ ದಾಖಲೆಗಳನ್ನು ಸಲ್ಲಿಸಿದನು. ಅವನು ಸೆಟ್‌ಕಾಮ್ ನಲ್ಲಿ ತರಬೇತಿಯನ್ನು ಪಡೆದನು ಮತ್ತು ವಾಹನ ಚಾಲನೆಯಲ್ಲಿ (ವಸತಿ) ಮೂರು ತಿಂಗಳ ತರಬೇತಿಯ ಮೂಲಕ ಮತ್ತಷ್ಟು ತರಬೇತಿಯನ್ನು ಪಡೆದನು.<br>ಇಂದು, ಫಲಾನುಭವಿಯು ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದು ಮಾಸಿಕ 15,000 ರೂ. ವೇತನವನ್ನು ಗಳಿಸುತ್ತಿದ್ದಾನೆ. ಇದಲ್ಲದೆ ಅವನು ಉಚಿತ ವಸತಿ ಸೌಲಭ್ಯವನ್ನು ಪಡೆಯುತ್ತಿದ್ದಾನೆ. ಜೀವನದುದ್ದಕ್ಕೂ ತಮ್ಮ ಹಳ್ಳಿಯಲ್ಲಿ ವಾಸಿಸುತ್ತಿದ್ದ ಫಲಾನುಭವಿಯು ಇಂದು ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಸಹಾಯದಿಂದ ಉದ್ಯೋಗವನ್ನು ಪಡೆದು ಸಂತೋಷವಾಗಿದ್ದಾನೆ. |
| ಫಲಾನುಭವಿಯನ್ನು ಗ್ರಾಮ ಸಭೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸೇರಿಸಿಕೊಂಡರು. |
| ಫಲಾನುಭವಿಯು ಕೌಶಲ್ಯ ಅಭಿವೃದ್ಧಿ ಮತ್ತು ವೇತನ ಉದ್ಯೋಗ ಯೋಜನೆಯನ್ನು ಆಯ್ಕೆ ಮಾಡಿಕೊಂಡರು. |
| ಫಲಾನುಭವಿಯು ಪಡೆದ ತರಬೇತಿಯ ವಿಷಯ: ವಾಹನ ಚಾಲನೆ (ವಸತಿ) |
| ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು :<br>• ಸೆಟ್ ಕಾಮ್ ನಲ್ಲಿ ತರಬೇತಿ<br>• ವಾಹನ ಚಾಲನೆಯಲ್ಲಿ (ವಸತಿ) ಮೂರು ತಿಂಗಳ ತರಬೇತಿ. |
| ಫಲಾನುಭವಿಯ ಮೇಲೆಯೋಜನೆಯ ಪ್ರಭಾವ:<br>• ಚಟುವಟಿಕೆಯ ನಂತರ ಗಳಿಸಿದ ಆದಾಯ: ರೂ 15,000/–<br>• ಉಚಿತ ವಸತಿ.<br>• ನುರಿತ ಕೆಲಸಗಾರನಾಗಿ ಜೀವನವನ್ನು ನಡೆಸುವ ಬಗ್ಗೆ ಗೌರವ ಮತ್ತು ಆತ್ಮವಿಶ್ವಾಸ. ಸ್ಥಿರವಾದ ಆದಾಯ ಮತ್ತು ಉದ್ಯೋಗದ ನಿರಂತರತೆಯ ಭರವಸೆ<br>• ಅವರ ಆದಾಯದ ಪರಿಣಾಮವಾಗಿ ಅವರ ಕುಟುಂಬದ ಆರ್ಥಿಕ ಸ್ಥಿತಿ ಹೆಚ್ಚಾಗಿದೆ. |
| |

| |
|---|
| 8. ಫಲಾನುಭವಿಯ ಹೆಸರು: ರತ್ನ ಬಿ ತಳವಾರ (ಮಹಿಳೆ, 30 ವರ್ಷ) |
| ಜಿಲ್ಲೆ – ಧಾರವಾಡ |
| ತಾಲ್ಲೂಕು – ಕುಂದಗೋಳ |
| ಗ್ರಾಮ – ಹಂಚನಾಳ ಗ್ರಾಮ |
| ತಂದೆ ಹೆಸರು: ಬಿ ತಳವಾರ |
| ಶಿಕ್ಷಣ: ಎಸ್.ಎಸ್.ಎಲ್.ಸಿ. |
| ಜಾತಿ: ಪರಿಶಿಷ್ಟ ಜಾತಿ |
| ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ:<br>ಫಲಾನುಭವಿಯು ತಾಲ್ಲೂಕಿನ ಡಿಟಿಪಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಳು ಮತ್ತು ಮಾಸಿಕ 4,000 ರೂ. ವೇತನ ಪಡೆಯುತ್ತಿದ್ದಳು. ಅವಳು ತನ್ನ ಕೆಲಸದ ಸ್ಥಳವನ್ನು ತಲುಪಲು ಮತ್ತು ಮನೆಗೆ ಹಿಂತಿರುಗಲು ಆಟೋ ಸಾರಿಗೆಗಾಗಿ 1,500 ರೂ.ಗಳನ್ನು ಖರ್ಚು ಮಾಡುತ್ತಿದ್ದಳು. ಫಲಾನುಭವಿಯು ಮೂರು ತಿಂಗಳ ಗಣಕಯಂತ್ರ ತರಬೇತಿ ಪಡೆದು, ಕುಂದಗೋಳದ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಗಣಕಯಂತ್ರ ನಿರ್ವಾಹಕಳಾಗಿ ಕೆಲಸ ಮಾಡುತ್ತಿದ್ದಾಳೆ. ಇಂದು ಅವಳು ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಮಾಸಿಕ 12,000 ರೂ. ವೇತನವನ್ನು ಗಳಿಸುತ್ತಿದ್ದಾಳೆ ಮತ್ತು ಅವಳ ಆರ್ಥಿಕ ಸ್ಥಿತಿ ಸುಧಾರಿಸಿದೆ. ಅವಳ ಪ್ರಕಾರ, ರಾಜೀವ್ ಗಾಂಧಿಚೈತನ್ಯ ಯೋಜನೆ ಅಡಿಯಲ್ಲಿಕೌಶಲ್ಯಅಭಿವೃದ್ಧಿಕಾರ್ಯಕ್ರಮದ ಬಗ್ಗೆ ನಿರುದ್ಯೋಗಿ ಯುವಕರಲ್ಲಿ ಜಾಗೃತಿ ಮೂಡಿಸಲಾಗಿದೆ. ಅಲ್ಲಿ ಹಲವಾರು ಹೊಸ ವಿಷಯಗಳನ್ನು ಕಲಿಸಲಾಗುತ್ತದೆ. ಫಲಾನುಭವಿಗಳು ಈಗ ಸಂತೋಷದ ಮತ್ತು ಗೌರವಾನ್ವಿತ ಜೀವನವನ್ನು ನಡೆಸುತ್ತಿದ್ದಾರೆ. |
| ಫಲಾನುಭವಿಯನ್ನು ಗ್ರಾಮಸಭೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸೇರಿಸಿಕೊಂಡರು. |
| ಫಲಾನುಭವಿಯು ಕೌಶಲ್ಯ ಅಭಿವೃದ್ಧಿ ಮತ್ತು ವೇತನ ಉದ್ಯೋಗ ಯೋಜನೆಯನ್ನು ಆಯ್ಕೆ ಮಾಡಿಕೊಂಡಳು. |
| ಫಲಾನುಭವಿಯು ಪಡೆದ ತರಬೇತಿಯ ಕ್ಷೇತ್ರ : ಗಣಕಯಂತ್ರ ತರಬೇತಿ ಕಾರ್ಯಕ್ರಮ. |
| ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು :<br>ಮೂರು ತಿಂಗಳ ಗಣಕಯಂತ್ರ ತರಬೇತಿ ಕಾರ್ಯಕ್ರಮ |
| ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ:<br>• ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಮಾಸಿಕ 12,000 ರೂ.ಗಳ ವೇತನದೊಂದಿಗೆ ಕಂಪ್ಯೂಟರ್ ಆಪರೇಟರ್ ಆಗಿ ನೇಮಕಗೊಂಡಿದ್ದಾಳೆ<br>• ನುರಿತ ಕೆಲಸಗಾರಳಾಗಿ ಜೀವನ ನಡೆಸುತ್ತಿರುವ ಗೌರವವಿದೆ<br>• ಅವಳ ಆದಾಯದ ಪರಿಣಾಮವಾಗಿ ಅವಳ ಕುಟುಂಬದ ಆರ್ಥಿಕ ಸ್ಥಿತಿ ಹೆಚ್ಚಾಗಿದೆ. |
| |

| |
|---|
| 9. ಫಲಾನುಭವಿಯ ಹೆಸರು: ಮೌನೇಶ್ವರ (ಪುರುಷ, 28 ವರ್ಷಗಳು) |
| ಜಿಲ್ಲೆ–ಕಲಬುರಗಿ |
| ತಾಲ್ಲೂಕು – ಜೇವರ್ಗಿ |
| ಗ್ರಾಮ – ಸಿಡ್ನಾಲ ಗ್ರಾಮ |
| ತಂದೆ ಹೆಸರು: ಜಟ್ಟೆಪ್ಪ |
| ಶಿಕ್ಷಣ: ಬಿ ಎ ಪದವೀಧರ |
| ಜಾತಿ: ಪಾಂಚಾಲ ಸಮುದಾಯ |
| ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ :<br>ಫಲಾನುಭವಿಯು ಕೃಷಿ ಕುಟುಂಬದಿಂದ ಬಂದವನಾಗಿದ್ದು, ತನ್ನ ಸ್ವಂತ ಕೃಷಿ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ. ಆದರೆ ಭೂಹಿಡುವಳಿಯಲ್ಲಿ ಸಣ್ಣದಾಗಿದ್ದ ಕಾರಣ ಆದಾಯವು ನಿಯಮಿತವಾಗಿರಲಿಲ್ಲ ಮತ್ತು ಕುಟುಂಬವನ್ನು ನಿರ್ವಹಿಸಲು ಸಾಕಾಗುತ್ತಿರಲಿಲ್ಲ.<br>ಫಲಾನುಭವಿಯು ಮೊಬೈಲ್ ಫೋನ್ ಗಳನ್ನು ರಿಪೇರಿ ಮಾಡುವ ಬಗ್ಗೆ ಎರಡು ತಿಂಗಳ ತರಬೇತಿ ಪಡೆದುಕೊಂಡನು. ಇಂದು ಅವನು ಕಲ್ಬುರ್ಗಿಯ ಸಂಗೀತಾ ಮೊಬೈಲ್ ಶೋರೂಮ್‌ನಲ್ಲಿ ಮಾರಾಟ ಕಾರ್ಯನಿರ್ವಾಹಕನಾಗಿ ಕೆಲಸ ಮಾಡುತ್ತಾನೆ. ಅವನು ಮಾಸಿಕ 12,000 ರೂ.ಗಳ ಆದಾಯವನ್ನು ಗಳಿಸುತ್ತಿದ್ದು ಅವನ ಕುಟುಂಬವು ಸಂತೋಷದ ಜೀವನವನ್ನು ನಡೆಸುತ್ತಿರುವುದರಿಂದ ಅವನ ಆರ್ಥಿಕ ಸ್ಥಿತಿ ಸುಧಾರಿಸಿದೆ. |
| ಫಲಾನುಭವಿಯನ್ನು ಗ್ರಾಮ ಸಭೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸೇರಿಸಿಕೊಂಡರು. |
| ಫಲಾನುಭವಿಯು ಕೌಶಲ್ಯ ಅಭಿವೃದ್ಧಿ ಮತ್ತು ವೇತನ ಉದ್ಯೋಗ ಯೋಜನೆಯನ್ನು ಆಯ್ಕೆ ಮಾಡಿಕೊಂಡನು. |
| ಫಲಾನುಭವಿಯು ಪಡೆದ ತರಬೇತಿಯ ಕ್ಷೇತ್ರ : ಮೊಬೈಲ್ ರಿಪೇರಿಯಲ್ಲಿ ತಾಂತ್ರಿಕ ತರಬೇತಿ |
| ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು :<br>ಮೊಬೈಲ್ ರಿಪೇರಿಯಲ್ಲಿ ಎರಡು ತಿಂಗಳ ತರಬೇತಿ ಕಾರ್ಯಕ್ರಮ |
| ಫಲಾನುಭವಿಯ ಮೇಲೆಯೋಜನೆಯ ಪ್ರಭಾವ:<br>• ಕಲಬುರಗಿಯ ಸಂಗೀತಾ ಮೊಬೈಲ್ ಶೋರೂಂನಲ್ಲಿ ಮಾರಾಟ ಕಾರ್ಯನಿರ್ವಾಹಕನಾಗಿ ಲಾಭದಾಯಕ ಉದ್ಯೋಗ ಮಾಡುತ್ತಾನೆ.<br>• ಅವನು ಮಾಸಿಕ 12,000 ರೂ.ಗಳ ಆದಾಯವನ್ನು ಗಳಿಸುತ್ತಿದ್ದು, ಅವನ ಕುಟುಂಬವು ಸಂತೋಷದ ಜೀವನವನ್ನು ನಡೆಸುತ್ತಿರುವುದರಿಂದ ಆರ್ಥಿಕ ಸ್ಥಿತಿ ಸುಧಾರಿಸಿದೆ.<br>• ತಾಂತ್ರಿಕವಾಗಿ ತರಬೇತಿ ಪಡೆದಿದ್ದಾನೆ. |
| |

| |
|---|
| 10. ಫಲಾನುಭವಿಯ ಹೆಸರು: ಈರೇಶ್ (ಪುರುಷ, 24 ವರ್ಷಗಳು) |
| ಜಿಲ್ಲೆ – ರಾಯಚೂರು |
| ತಾಲ್ಲೂಕು –ರಾಯಚೂರು |
| ಗ್ರಾಮ – ಮಂಜಾರಲಾ ಗ್ರಾಮ |
| ತಂದೆ ಹೆಸರು: ತಿಮ್ಮಪ್ಪ |
| ಶಿಕ್ಷಣ:2ನೇ ಪಿ.ಯು.ಸಿ. |
| ಜಾತಿ: ಪರಿಶಿಷ್ಟ ಜಾತಿ |
| ಯೋಜನೆಯ ಪ್ರಯೋಜನವನ್ನು ಪಡೆಯುವ ಮೊದಲು ಮತ್ತು ನಂತರದಲ್ಲಿ ಫಲಾನುಭವಿಯ ಸ್ಥಿತಿಗತಿ:<br>ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ ಸೇರುವ ಮೊದಲು ಫಲಾನುಭವಿಯು ನಿರುದ್ಯೋಗಿಯಾಗಿದ್ದನು. ಇಂದು ಅವನು ಮಾಸಿಕ 15,000 ರೂ. ವೇತನವನ್ನು ಗಳಿಸುತ್ತಿದ್ದಾನೆ ಅದರ ನಂತರ ಅವರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಫಲಾನುಭವಿಯು ಐಟಿ/ಐಟಿಇಎಸ್‌ನಲ್ಲಿ ಮೂರು ತಿಂಗಳ ತರಬೇತಿ ಪಡೆದಿದ್ದು ಪ್ರಸ್ತುತ ಬೆಂಗಳೂರಿನ ಎಲ್ ಅಂಡ್ ಟಿಯಲ್ಲಿ ಸಿಸ್ಟಂ ಅಡ್ಮಿನ್ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾನೆ. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಅಡಿಯಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಪಡೆದ ನಂತರ ಅವನ ಮತ್ತು ಅವನ ಕುಟುಂಬದ ಆರ್ಥಿಕ ಸ್ಥಿತಿ ಗಣನೀಯವಾಗಿ ಸುಧಾರಿಸಿದೆ. |
| ಫಲಾನುಭವಿಯನ್ನು ಗ್ರಾಮಸಭೆಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸೇರಿಸಿಕೊಂಡರು. |
| ಫಲಾನುಭವಿಯು ಯೋಜನೆಯ ಕೌಶಲ್ಯ ಅಭಿವೃದ್ಧಿ ಮತ್ತು ವೇತನ ಉದ್ಯೋಗವನ್ನು ಆಯ್ಕೆ ಮಾಡಿಕೊಂಡನು. |
| ಫಲಾನುಭವಿಯು ಪಡೆದ ತರಬೇತಿಯ ವಿಷಯ: ಗಣಕಯಂತ್ರ ತರಬೇತಿ ಕಾರ್ಯಕ್ರಮ |
| ಕೌಶಲ್ಯ ಅಭಿವೃದ್ಧಿ / ಸ್ವಯಂ ಉದ್ಯೋಗದ ವಿವರಗಳು :<br>ಮೂರು ತಿಂಗಳ ಗಣಕಯಂತ್ರ ತರಬೇತಿ ಕಾರ್ಯಕ್ರಮ |
| ಫಲಾನುಭವಿಯ ಮೇಲೆ ಯೋಜನೆಯ ಪ್ರಭಾವ :<br>• ಐಟಿ/ಐಟಿಇಎಸ್ ನಲ್ಲಿ ತಾಂತ್ರಿಕ ತರಬೇತಿ<br>• ಬೆಂಗಳೂರಿನ ಎಲ್ ಅಂಡ್ ಟಿಯಲ್ಲಿ ಸಿಸ್ಟಮ್ ಅಡ್ಮಿನ್ ಸಹಾಯಕ ಆಗಿ ಕೆಲಸ ಮಾಡುತ್ತಿದ್ದಾನೆ. ಕೌಶಲ್ಯ ಅಭಿವೃದ್ಧಿ ತರಬೇತಿ ಒಳಗಾದ ನಂತರ ಅವನ ಮತ್ತು ಅವನ ಕುಟುಂಬದ ಆರ್ಥಿಕ ಸ್ಥಿತಿ ಗಣನೀಯವಾಗಿ ಸುಧಾರಿಸಿದೆ<br>• ಅವನ ಆದಾಯದ ಪರಿಣಾಮವಾಗಿ, ಅವನ ಕುಟುಂಬದ ಆರ್ಥಿಕ ಸ್ಥಿತಿ ಹೆಚ್ಚಾಗಿದೆ. |

ಕಾರ್ಯಕ್ರಮದ ಘಟಕಗಳು ಮತ್ತು ಪ್ರಮುಖ ಪಾಲುದಾರರಾದ ತಾಲ್ಲೂಕು ಪಂಚಾಯಿತಿ ಗಳೆರಡರ ಫಲಾನುಭವಿಗಳೊಂದಿಗೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ವ್ಯಾಪಕ ಸಮಾಲೋಚನೆಗಳನ್ನು ನಡೆಸಿದ ನಂತರ ಈ ಮೌಲ್ಯಮಾಪನ ಅಧ್ಯಯನವು ಕಾರ್ಯಕ್ರಮದ ವಿನ್ಯಾಸದಲ್ಲಿ ಅಗತ್ಯವಿರುವ ಮೂಲಭೂತ ಬದಲಾವಣೆಗಳನ್ನು ಸೂಚಿಸುತ್ತದೆ. ಅಂತಹ ಬದಲಾವಣೆಗಳಿಲ್ಲದೆ ಕಾರ್ಯಕ್ರಮತನ್ನ ಘೋಷಿತ ಗುರಿಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಶಿಫಾರಸ್ಸು ಮಾಡಲಾದ ಬದಲಾವಣೆಗಳು ಈ ಕೆಳಗಿನಂತಿವೆ.

1. ಪ್ರಸ್ತುತ ಗ್ರಾಮೀಣ ಪ್ರದೇಶದ ವ್ಯಕ್ತಿಗಳು ದೀರ್ಘಕಾಲಿಕ ಉದ್ಯೋಗ ಅಥವಾ ಸ್ವಯಂ ಉದ್ಯೋಗದ ಕಡೆಗೆ ದೃಢವಾದ ಹೆಜ್ಜೆಇಡಲು ವಯಸ್ಸಿನ ಮಿತಿಬಹಳ ಕಡಿಮೆಯಾಗಿದೆ. ಆದ್ದರಿಂದ ಕನಿಷ್ಠ ವಯಸ್ಸನ್ನು 21 ವರ್ಷಗಳಿಗೆ ಏರಿಸಲು ಮತ್ತು ಗರಿಷ್ಠ ಮಿತಿಯು 35 ವರ್ಷಗಳಲ್ಲಿಯೇ ಉಳಿಯಲು ನಾವು ಶಿಫಾರಸ್ಸು ಮಾಡುತ್ತೇವೆ.
2. ಆಧಾರ್ ಲಿಂಕ್ ಮಾಡಿದ ವಿಶೇಷವಾಗಿ ರಚಿಸಿದ ತಂತ್ರಾಂಶ ಮೂಲಕ ಅರ್ಹತೆಯ ಪರಿಶೀಲನೆಯನ್ನು ಮಾಡಬಹುದು.
3. 'ವಲಸೆ ತಡೆಗಟ್ಟುವಿಕೆ'ಗೆ ಹೇಳಲಾದ ಒತ್ತು ಮನ್ನಾ ಮಾಡಬಹುದು, ಏಕೆಂದರೆ ಅದು ಕಾರ್ಯಕ್ರಮದಿಂದ ಉಂಟಾಗುತ್ತದೆ ಎಂದು ನಿರೀಕ್ಷಿಸುವುದು ಅವಾಸ್ತವಿಕವಾಗಿದೆ. ಈ ಅಧ್ಯಯನದಲ್ಲಿ ಕಂಡುಬರುವಂತೆ ಯಶಸ್ಸು ಒಬ್ಬನನ್ನು ವಲಸೆ ಹೋಗಲು ಕಾರಣವಾಗುವ ಸಂದರ್ಭಗಳಿವೆ ಆದರೆ ಇತರವುಗಳಲ್ಲಿ ವೈಫಲ್ಯವು ವಲಸೆ ಹೋಗಲು ಕಾರಣವಾಗುತ್ತದೆ.
4. ಜೀವನೋಪಾಯದ ಆಯ್ಕೆಗಳನ್ನು ಬೆಂಬಲಿಸುವ ಸುಸ್ಥಿರತೆ ಲಾಭದಾಯಕತೆ ಮತ್ತು ಸಾಮರ್ಥ್ಯದಿಂದ ಸ್ವಯಂ ಉದ್ಯೋಗ ಮಾರ್ಗಗಳ ಕಾರ್ಯಸಾಧ್ಯತೆಯ ಬಗ್ಗೆ ಎಚ್ಚರಿಕೆಯಿಂದ ಮೌಲ್ಯಮಾಪನವನ್ನು ನಡೆಸಬೇಕು. ಉದಾಹರಣೆಗೆ, ಫೋಟೋಕಾಪಿ ಮಾಡುವ ಅಂಗಡಿಗಳು, ಬ್ಯೂಟಿ ಪಾರ್ಲರ್‌ಗಳು ಅಥವಾ ಉದ್ಯೋಗವನ್ನು ಹುಡುಕುವಷ್ಟು ಹೆಚ್ಚಿನ ದರ್ಜೆಗಳನ್ನು ಉತ್ತೇಜಿಸುವುದು ಮುಕ್ತವಾಗಿಲ್ಲದ ಗ್ರಾಮೀಣ ಸಮುದಾಯದಲ್ಲಿ ಸುಸ್ಥಿರವಲ್ಲ.
5. ಕಾರ್ಮಿಕ ಇಲಾಖೆ, ಕೌಶಲ್ಯ ಮತ್ತು ಉದ್ಯೋಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ನಡುವೆ ನಿಕಟ ಮತ್ತು ಪರಿಣಾಮಕಾರಿ ಸಮನ್ವಯ ಪ್ರಸಕ್ತ ದಿನಗಳ ಅಗತ್ಯವಾಗಿದೆ. ಆದರೆ ಕಾರ್ಯಾಚರಣೆಯ ಉದ್ದೇಶಗಳಿಗಾಗಿ ಸಂಪರ್ಕ (ನೋಡಲ್) ಇಲಾಖೆಯ ಪಾತ್ರವನ್ನು ನಿರ್ವಹಿಸಬೇಕು.
6. ಫಲಾನುಭವಿಗಳಿಗೆ ತರಬೇತಿ ಪ್ರಾರಂಭವಾಗುವ ಮೊದಲು ಸಾಲಗಳ ಅರ್ಹತಾ ಮಾನದಂಡಗಳ ಬಗ್ಗೆ ಹಣಕಾಸು ಸಂಸ್ಥೆಗಳು (ವಾಣಿಜ್ಯ ಬ್ಯಾಂಕುಗಳು) ಸರಿಯಾದ ಪರವಾನಗಿ ತುರ್ತು ಅಗತ್ಯವಾಗಿದೆ.
7. ಸ್ಥಳೀಯ ಸರ್ಕಾರಿ ಶಾಲೆಗಳನ್ನು ಶಾಲೆ ನಡೆಯದ ಸಮಯ ಮತ್ತು ರಜೆಯ ಸಮಯದಲ್ಲಿ ಉಪಗ್ರಹ ಆಧಾರಿತ ತರಬೇತಿ ಕೇಂದ್ರಕ್ಕೆ ನವೀಕರಿಸಬಹುದು ಮತ್ತು ಬಳಸಬಹುದು. ಇದು ಶಾಲೆ ಮತ್ತು ತಾಲ್ಲೂಕು ಪಂಚಾಯಿತಿಗಳೆರಡಕ್ಕೂ ಪರಸ್ಪರ ಪ್ರಯೋಜನಕಾರಿ ಆಯ್ಕೆಯಾಗಿದೆ.

## 11.2 ಮೌಲ್ಯಮಾಪನೋತ್ತರ ಮಾತೃಕೆ

| ಉದ್ದೇಶಗಳು | ದತ್ತಾಂಶದ ಮೂಲಗಳು | ಸಂಶೋಧನೆಗಳು | ಸಲಹೆಗಳು |
|---|---|---|---|
| ತರಬೇತಿ, ಜಾಗೃತಿ ಮತ್ತು ಸಾಮರ್ಥ್ಯ ವರ್ಧನೆ ಕಾರ್ಯಕ್ರಮಗಳ ಮೂಲಕ ಸುಧಾರಿತ ಮತ್ತು ಪರ್ಯಾಯ ಜೀವನೋಪಾಯ ಅವಕಾಶಗಳನ್ನು ಸೃಷ್ಟಿಸುವುದು | ಅನುಷ್ಠಾನ ಇಲಾಖೆ ಮತ್ತು ಇತರ ವರದಿಗಳು ಮತ್ತು ಸಮೀಕ್ಷೆಗಳಿಂದ ಸಂಗ್ರಹಿಸಲಾದ ದ್ವಿತೀಯ ದತ್ತಾಂಶ<br>+<br>ಪ್ರಾಥಮಿಕ ಕ್ಷೇತ್ರ ಸಮೀಕ್ಷೆ | 1. ಪಂಚಾಯಿತಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಗ್ರಾಮ ಸಭೆಯ (56.75) ನಂತರ ಸ್ನೇಹಿತರು (28.16) ಜಾಗೃತಿಯ ಪ್ರಮುಖ ಮೂಲವಾಗಿದೆ.<br>2. ಯೋಜನೆ ಅನುಷ್ಠಾನ ನಿಯೋಗಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು ಜಾಗೃತಿ–ನಿರ್ಮಾಣ ಮತ್ತು ಅಭ್ಯರ್ಥಿಗಳ ಆಯ್ಕೆಯಲ್ಲಿ ಬಹುತೇಕ ಯಾವುದೇ ಪಾತ್ರವನ್ನು ವಹಿಸುವುದಿಲ್ಲ.<br>3.ಸ್ಥಳೀಯ ಮಟ್ಟದಲ್ಲಿ ಯಾವುದೇ ತೀವ್ರ ಕೌಶಲ್ಯ–ನಿರೂಪಣಾ ನಕ್ಷೆ ತಯಾರಿಸುವುದು ಮತ್ತು ಅಗತ್ಯ–ಮೌಲ್ಯಮಾಪನವನ್ನು ಮಾಡಲಾಗಿಲ್ಲ ಇದು ಕೆಲವು ಕೌಶಲ್ಯಗಳ ಸುತ್ತಲೂ ಅಭ್ಯರ್ಥಿಗಳ ಕೇಂದ್ರೀಕರಣಕ್ಕೆ ಕಾರಣವಾಗುತ್ತದೆ.<br>4. ಫಲಾನುಭವಿಗಳನ್ನು ಆಯ್ಕೆ ಮಾಡಲು35 ವರ್ಷ ಮೇಲ್ಪಟ್ಟವರ ಮೇಲಿನ ವಯಸ್ಸಿನ ಗುಂಪುಗಳಿಗೆ ಸಂಬಂಧಿಸಿದಂತೆ ಅರ್ಹತಾಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿಲ್ಲ. ಹೀಗೆ ಕನಿಷ್ಠ 9 ಪ್ರತಿಶತ ಫಲಾನುಭವಿಗಳು ಹೆಚ್ಚು ವಯಸ್ಸಿನವರಾಗಿದ್ದರು. | 1. ಕೌಶಲ್ಯಪೂರ್ಣಗೊಳಿಸುವ ಮೊದಲು ಸರಿಯಾದ ಕೌಶಲ್ಯ–ನಿರೂಪಣಾ ನಕ್ಷೆ ತಯಾರಿಸುವುದು ಸ್ಥಳೀಯವಾಗಿ ಸಂಬಂಧಿತ ಕೌಶಲ್ಯದ ಭಂಡಾರ ಮತ್ತು ಕೌಶಲ್ಯಗಳ ವಿಷಯದಲ್ಲಿ ಸ್ಥಳೀಯ ಅಗತ್ಯ ಮೌಲ್ಯಮಾಪನವನ್ನು ಮಾಡಬೇಕಾಗಿದೆ.<br>2.ಯೋಜನೆಯ ಎರಡೂ ಘಟಕಗಳಲ್ಲಿ ಪ್ರವೇಶ ಮಟ್ಟದ ಅರ್ಹತೆಯನ್ನು ಪರಿಶೀಲಿಸಬೇಕಾಗಿದೆ. ಕನಿಷ್ಠ ಪ್ರವೇಶ ಮಟ್ಟದ ವಯಸ್ಸನ್ನು 21 ವರ್ಷಗಳನ್ನಾಗಿ ಮಾಡಲುಅದನ್ನು ಪರಿಷ್ಕರಿಸಬೇಕಾಗಿದೆ.<br>3.ಮೊದಲ ಬಾರಿಗೆ ಫಲಾನುಭವಿಗಳಿಗೆ ಮಾತ್ರಯೋಜನೆಯ ಪ್ರಯೋಜನವನ್ನು ಯಾವುದೇ ರಾಜ್ಯ ಪ್ರಾಯೋಜಿತ ಯೋಜನೆಗಳಿಗೆ ಸೀಮಿತಗೊಳಿಸುವ ಕಠಿಣ ನಿಯಮವನ್ನು ಕೌಶಲ್ಯಪೂರ್ಣಗೊಳಿಸುವ ಮತ್ತು ಸ್ವಾವಲಂಬನೆಯ ಹಿನ್ನೆಲೆಯಲ್ಲಿ ಮರುಪರಿಶೀಲಿಸಬೇಕಾಗಿದೆ.<br>4. ದ್ವಿಗುಣಗೊಳ್ಳುವಿಕೆ ಮತ್ತು ಸಮಯ ವ್ಯರ್ಥವಾಗುವುದನ್ನು ನಿಲ್ಲಿಸಲು ಫಲಾನುಭವಿಗಳು ಮತ್ತು ಕುಟುಂಬವು ಈ ಹಿಂದೆ ಪಡೆದ ಸರ್ಕಾರಿ ಸಾಲಗಳ ಜಾಡು ಹಿಡಿಯಲು ಒಂದುಆ್ಯಪ್– ಆಧಾರಿತ ಆಧಾರ್– ಸಂಬಂಧಿತ ತಂತ್ರಾಂಶವನ್ನು ತಯಾರಿಸಬಹುದು.<br>5. ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕೌಶಲ್ಯ ಮತ್ತು ವೇತನ |

| | | | |
|---|---|---|---|
| | | | ಉದ್ಯೋಗ ಘಟಕವನ್ನು ಉದ್ದೇಶಿಸಿ ಮಾತನಾಡುವಾಗ ಅದು ಕಾರ್ಯಕ್ರಮದ ಉದ್ಯಮಶೀಲತೆ ಮತ್ತು ಸ್ವಯಂ ಉದ್ಯೋಗ ಘಟಕವನ್ನು ಸಹ ಉತ್ತೇಜಿಸಬೇಕು. ಇವೆರಡೂ ಪರಸ್ಪರ ಪ್ರತ್ಯೇಕವಾಗಿ ಉಳಿಯಬೇಕಾಗಿಲ್ಲ. ಬದಲಾಗಿ ವೇತನ ಉದ್ಯೋಗ, ಸಾಂಸ್ಥಿಕ ಸಾಲ ಮತ್ತು ಅರ್ಹ ಅಭ್ಯರ್ಥಿಗಳಿಗೆ ಸಹಾಯಧನ ಸಾಲಗಳ ಮೂಲಕ ಸ್ವಯಂ ಉದ್ಯೋಗ ಮತ್ತು ಉದ್ಯಮಶೀಲತೆ ಚಟುವಟಿಕೆಗಳಿಗೆ ಅವರು ಸಲ್ಲಿಸಿದ ಪ್ರಸ್ತಾಪಗಳ ಆಧಾರದ ಮೇಲೆ ಆಯ್ಕೆ ಆಧಾರಿತ ಉತ್ತೇಜನ ನೀಡಬಹುದು. |
| ಕೌಶಲ್ಯ ತರಬೇತಿ ಮತ್ತು ಸ್ವಯಂ ಉದ್ಯೋಗ<br>ವೈಯಕ್ತಿಕ ಉದ್ಯಮಗಳನ್ನು ಪ್ರಾರಂಭಿಸುವ ಮೂಲಕ ನಿರುದ್ಯೋಗಿ ಯುವಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು.<br><br>ಗ್ರಾಮೀಣ ಬಡ ಯುವಕರಿಗೆ ಉದ್ಯಮಶೀಲತೆ ಮತ್ತು ವ್ಯವಹಾರ ಕೌಶಲ್ಯಗಳಲ್ಲಿ ತರಬೇತಿ ನೀಡುವ ಮೂಲಕ ಆದಾಯಉತ್ಪಾದಿಸುವ ಯೋಜನೆಗಳನ್ನು ಪ್ರಾರಂಭಿಸಲು | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ+ ಆಳವಾದ ಸಂದರ್ಶನಗಳು | 1. ತರಬೇತಿ ಪಡೆದ 40 ಪ್ರತಿಶತಕ್ಕೂ ಹೆಚ್ಚು ಫಲಾನುಭವಿಗಳು ಬ್ಯಾಂಕ್ ಸಾಲಗಳಿಗೆ ಅನರ್ಹರು ಎಂದು ಕಂಡುಬಂದಿದೆ. ಈ ಕೈಬಿಡುವ ಪ್ರಕ್ರಿಯೆ ಉಡುಪಿ ಜಿಲ್ಲೆಯಲ್ಲಿ 45.83 ಪ್ರತಿಶತದೊಂದಿಗೆ ಅತ್ಯಧಿಕವಾಗಿತ್ತು, ನಂತರ ಕಲಬುರಗಿ (45.75%), ಬಾಗಲಕೋಟೆ (45.37%), ಮತ್ತು ಯಾದಗಿರಿ (41.27%)ಯಲ್ಲಿದೆ. ಧಾರವಾಡ ಮತ್ತು ಹಾಸನದಲ್ಲಿ (31.40 ಮತ್ತು 32.84%) ಕನಿಷ್ಠ ಪ್ರಮಾಣ ಕಂಡುಬಂದಿದೆ.<br>2. 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಮತ್ತು 21 ರಿಂದ 25 ವರ್ಷಗಳ ನಡುವಿನ ಫಲಾನುಭವಿಗಳ ಅನರ್ಹತೆಯ ಪ್ರಮಾಣವು ತುಂಬಾ ಕಡಿಮೆಯಾಗಿದೆ.<br>3. ಹೆಚ್ಚಿನ ಫಲಾನುಭವಿಗಳಿಗೆ ಈಗಾಗಲೇ | 1. ಸ್ವಯಂ ಉದ್ಯೋಗಕ್ಕಾಗಿ ತರಬೇತಿ ಕಾರ್ಯಕ್ರಮಗಳ ವಿಷಯಗಳು ಹೆಚ್ಚು ವೈಜ್ಞಾನಿಕ ಮತ್ತು ಪ್ರಸ್ತುತವಾಗಿರಬೇಕು. ಇಲಾಖೆಯು ಪೂರ್ವಭಾವಿ ಪ್ರದೇಶ–ನಿರ್ದಿಷ್ಟ ಅಗತ್ಯ ವಿಶ್ಲೇಷಣೆಯನ್ನು ಮಾಡಬೇಕಾಗಿದೆ ಮತ್ತು ಕಾರ್ಯದಲ್ಲಿ ತೊಡಗುವ ಮೊದಲು ಯೋಜನೆ ಬೆಂಬಲಿಸುವ ನಿಯೋಗಗಳನ್ನು ಅವರ ನಿರ್ದಿಷ್ಟ ಕೌಶಲ್ಯ–ಪಾಲುದಾರಿಕೆ ಸಾಮರ್ಥ್ಯಗಳ ದೃಷ್ಟಿಯಿಂದ ಮೌಲ್ಯಮಾಪನ ಮಾಡಬೇಕು.<br>2. ಸಾಕಷ್ಟು ಮಾನವ ಸಂಪನ್ಮೂಲ ಹೊಂದಿರುವ ಸೂಕ್ತ ಯೋಜನೆ ಬೆಂಬಲಿಸುವ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗಿದೆ. ಉಪಗ್ರಹ ಆಧಾರಿತ ತರಬೇತಿಗಾಗಿ ಪ್ರಾದೇಶಿಕ ಭಾಷೆಗಳಲ್ಲಿ ಪ್ರಮಾಣೀಕೃತ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಬೇಕಾಗಿದೆ. ಜೀವನೋಪಾಯದ ಆಯ್ಕೆಗಳನ್ನು |

| | | | |
|---|---|---|---|
| ಪ್ರೇರೇಪಿಸುವುದು. | | ಉದ್ಯೋಗದಲ್ಲಿರುವ ಕಾರಣ ಸಾಲವು ಹೆಚ್ಚುವರಿ ಸಂಪನ್ಮೂಲವಾಗಿದೆ. ಯೋಜನೆಗೆ ಸೇರುವ ಮೊದಲು ನಿರುದ್ಯೋಗಿಎಂದು ಹೇಳಿಕೊಳ್ಳುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಬಾಗಲಕೋಟೆ (71.67 ಪ್ರತಿಶತ) ಅತ್ಯುನ್ನತ ಸ್ಥಾನದಲ್ಲಿದೆ.<br>4.ಸುಮಾರು 75 ಪ್ರತಿಶತದಷ್ಟು ಫಲಾನುಭವಿಗಳು ಸ್ವಯಂ ಉದ್ಯೋಗಕ್ಕಾಗಿ ಪಶು ಸಂಗೋಪನೆ ಸಂಬಂಧಿತ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ<br>5.56 ಪ್ರತಿಶತಕ್ಕೂ ಹೆಚ್ಚು 'ಫಲಾನುಭವಿಗಳು' ತಮ್ಮ ಆದಾಯದ ನಿರೀಕ್ಷೆಗಳನ್ನು ಮೀರಿದ್ದಾರೆ.<br>6. ತಮ್ಮ ಉದ್ಯಮವನ್ನು ಪ್ರಾರಂಭಿಸಿದ ನಂತರ, 42.87% ಫಲಾನುಭವಿಗಳು ರೂ. 15,001 ರಿಂದರೂ. 20.000 ಗಳಿಸುತ್ತಾರೆ, 31.77% ರೂ. 12,001 ರಿಂದರೂ. 15,000 ಮತ್ತು 21.56% ರೂ. 12,000 ವರೆಗೆ ಸಂಪಾದಿಸುತ್ತಾರೆ ಮತ್ತು ಸುಮಾರು 4 ಪ್ರತಿಶತ ಫಲಾನುಭವಿಗಳು ಯಾವುದೇ ಸ್ವಯಂ ಉದ್ಯೋಗ ಚಟುವಟಿಕೆಯನ್ನು ಪ್ರಾರಂಭಿಸಿಲ್ಲ.<br>7.ಈ ಮೌಲ್ಯಮಾಪನವು ಕೇವಲ 22.49 ಪ್ರತಿಶತದಷ್ಟು ಯಶಸ್ವಿ ಫಲಾನುಭವಿಗಳು ಮಾತ್ರ ಸ್ವಯಂ ಉದ್ಯಮವನ್ನು ಪ್ರಾರಂಭಿಸಿದರು ಮತ್ತು ನಮ್ಮ ಅಧ್ಯಯನದ ಸಮಯದಲ್ಲಿ ಅದನ್ನು ಉಳಿಸಿಕೊಂಡರು ಎಂದು ಕಂಡು ಹಿಡಿದಿದೆ. | ಬೆಂಬಲಿಸುವ ಸುಸ್ಥಿರತೆ ಲಾಭದಾಯಕತೆ ಮತ್ತು ಸಾಮರ್ಥ್ಯದದೃಷ್ಟಿಕೋನದಿಂದ ಸ್ವಯಂ ಉದ್ಯೋಗ ಮಾರ್ಗಗಳ ಕಾರ್ಯಸಾಧ್ಯತೆಯನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಬೇಕು.<br>3. ಕೈ ಬಿಡುವ ಪ್ರಕ್ರಿಯೆ ಕಡಿಮೆ ಮಾಡಲುಸಾಲದ ಕಾರ್ಯವಿಧಾನಗಳ ಬಗ್ಗೆ ವಾಣಿಜ್ಯ ಬ್ಯಾಂಕುಗಳೊಂದಿಗೆ ಉತ್ತಮ ತಿಳುವಳಿಕೆಯನ್ನು (ಮೇಲಾಧಾರ ಒಂದು ಕುಟುಂಬ ಒಂದು ಸಾಲ ನಿಯಮ) ಖಚಿತಪಡಿಸಿಕೊಳ್ಳಬೇಕು.<br>4."ಜಂಟಿ ಹೊಣೆಗಾರಿಕೆ" ಗುಂಪಿನ ಪರಿಕಲ್ಪನೆಯನ್ನು ಮುಂದುವರಿಸಿದರೂ ಅದುದೊಡ್ಡ ನಿಧಿ ಸಂಗ್ರಹದೊಂದಿಗೆ ಸಹಕಾರಿ ಉಪಕ್ರಮವನ್ನು ಉತ್ತೇಜಿಸಬೇಕು.<br>5. ಫಲಾನುಭವಿಗಳು ತರಬೇತಿ ಪ್ರಾರಂಭಿಸುವ ಮೊದಲು ಸಾಲಗಳ ಅರ್ಹತಾ ಮಾನದಂಡಗಳ ಬಗ್ಗೆ ಅಭ್ಯರ್ಥಿಗಳು ಹಣಕಾಸು ಸಂಸ್ಥೆಗಳಿಂದ (ವಾಣಿಜ್ಯ ಬ್ಯಾಂಕುಗಳು) ಸರಿಯಾದ ಅನುಮತಿಯನ್ನು ಹಾಜರುಪಡಿಸಬಹುದು, ರದ್ದುಗೊಳಿಸಬಹುದು ಮತ್ತು ಅದನ್ನು ಮುಂದುವರಿಸಿದರೂ ಅದು ದೊಡ್ಡ ನಿಧಿ ಸಂಗ್ರಹದೊಂದಿಗೆ ಸಹಕಾರಿ ಉಪಕ್ರಮವನ್ನು ಉತ್ತೇಜಿಸಬೇಕು.<br>5. ಫಲಾನುಭವಿಗಳು ತರಬೇತಿ ಪ್ರಾರಂಭಿಸುವ ಮೊದಲು ಸಾಲಗಳ ಅರ್ಹತಾ ಮಾನದಂಡಗಳ ಬಗ್ಗೆ ಅಭ್ಯರ್ಥಿಗಳು ಹಣಕಾಸು ಸಂಸ್ಥೆಗಳಿಂದ (ವಾಣಿಜ್ಯ ಬ್ಯಾಂಕುಗಳು) ಸರಿಯಾದ |

| | | | |
|---|---|---|---|
| | | 8. ಮುಚ್ಚಲ್ಪಟ್ಟ ಉದ್ಯಮಗಳಲ್ಲಿ, ಬ್ಯೂಟಿ ಪಾರ್ಲರ್‌ಗಳು (87.5%), ಹೋಟೆಲ್ /ಚಹಾ ಅಂಗಡಿಗಳು (80%), ನಂತರ ಕೋಳಿ ಸಾಕಾಣಿಕೆ ಮತ್ತು ಪಶು ಸಂಗೋಪನೆ (63%), ಮತ್ತು ಚಿಲ್ಲರೆ ಮತ್ತು ಜವಳಿ ಅಂಗಡಿಗಳಲ್ಲಿ ಹೆಚ್ಚು ಗಮನಾರ್ಹ ಪಾಲು ಇದೆ.<br>9. ಕೇವಲ 6.56% ಫಲಾನುಭವಿಗಳು ಪಡೆದ ಸಾಲವನ್ನು ಸರ್ವವ್ಯಾಪಿಯಾಗಿ ಬಳಸಿದ್ದಾರೆ. | ಪರವಾನಗಿಯನ್ನು ಹಾಜರುಪಡಿಸಬೇಕು.<br>6. ಈ ಮೌಲ್ಯಮಾಪನವು ಪ್ರತಿಕ್ಷೇತ್ರಕ್ಕೆ ಕನಿಷ್ಠ ಸಂಖ್ಯೆಯ ತರಬೇತಿದಾರರನ್ನು ನಿಗದಿಪಡಿಸಲು ಮತ್ತು ಫಲಾನುಭವಿಗಳಿಗೆ ವಿಶಾಲವಾದ ಕೌಶಲ್ಯ ಆಯ್ಕೆಗಳನ್ನು ಒದಗಿಸಲು ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಕೊಳ್ಳುತ್ತದೆ. |
| ಕೌಶಲ್ಯ ತರಬೇತಿ ಮತ್ತು ವೇತನ – ಉದ್ಯೋಗ<br>ವೃತ್ತಿಪರ ಮತ್ತು ವ್ಯವಸ್ಥಾಪಕ ಕೌಶಲ್ಯಗಳನ್ನು ಉನ್ನತೀಕರಿಸುವ ಮೂಲಕ ಮತ್ತು ವೇತನ ಉದ್ಯೋಗಕ್ಕೆ ಅವಕಾಶಗಳನ್ನು ಸೃಷ್ಟಿಸುವ ಮೂಲಕ ನಿರುದ್ಯೋಗಿ ಯುವಕರ ಆದಾಯವನ್ನು ಸುಧಾರಿಸುವುದು.<br><br>ತರಬೇತಿ ಪಡೆದಯುವಕರಿಗೆ ಸೃಷ್ಟಿಸಲಾದ ಉದ್ಯೋಗಾವಕಾಶಗಳು ಮತ್ತು ಉದ್ಯೋಗ ನಿಯೋಜನೆಗಳನ್ನು ಪರಿಶೀಲಿಸುವುದು. | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ+ ಆಳವಾದ ಸಂದರ್ಶನಗಳು | 1. ಕೌಶಲ್ಯಪೂರ್ಣಗೊಳಿಸುವ ಮತ್ತು ಉದ್ಯೋಗ ಕಾರ್ಯಕ್ರಮವು ಬಹುತೇಕವಾಗಿ ಹೆಚ್ಚು ಶಿಕ್ಷಣ ಪಡೆದಿಲ್ಲದವರಿಗೆ ಅಂದರೆ ಖಂಡಿತವಾಗಿಯೂ ಪಿಯುಸಿ ಮಟ್ಟವನ್ನು ಮೀರಿಲ್ಲದವರಿಗೆ ಸೀಮಿತಗೊಂಡಿದೆ. ಎಸ್‌ಎಸ್‌ಎಲ್‌ಸಿವರೆಗೆ ಕನಿಷ್ಠ ಶಿಕ್ಷಣ ಹೊಂದಿರುವ ಫಲಾನುಭವಿಗಳು ಶೇಕಡಾ 58.26 ರಷ್ಟು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಪದವಿ ಪೂರ್ವ ಶಿಕ್ಷಣ ಹೊಂದಿರುವವರು (ಪಿಯುಸಿ) ಶೇಕಡಾ 25.21 ಇದ್ದಾರೆ. ಮಹಿಳಾ ಫಲಾನುಭವಿಗಳಲ್ಲಿ ಹೆಚ್ಚಿನ ಪದವೀಧರರುಇದ್ದಾರೆ.<br>2. ಕೋಷ್ಟಕ 10.2.6ಎ ಹೊಲಿಗೆ ಕೆಲಸ (32.19%) ಆಯ್ಕೆ ಮಾಡಿದ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿಯೂ ನಂತರದಲ್ಲಿ ಗಣಕಯಂತ್ರ ಸಂಬಂಧಿತ ಉದ್ಯಮಗಳಲ್ಲಿಯೂ (24.12%) ಇದ್ದಾರೆ ಎಂದು ಪ್ರತಿಬಿಂಬಿಸುತ್ತದೆ. ಬೆಂಗಳೂರು | 1.ಕೌಶಲ್ಯ ತರಬೇತಿ ಮತ್ತು ನಿಯೋಜನೆ ಕಾರ್ಯಕ್ರಮ ಪೂರೈಕೆ–ಸ್ವಭಾವದ ಕಾರ್ಯಕ್ರಮಕ್ಕಿಂತ ಬೇಡಿಕೆ–ಚಾಲಿತವಾಗಬೇಕು. ಈ ಕಾರ್ಯಕ್ರಮವು ಮೊದಲು ಸಂಭಾವ್ಯ ಉದ್ಯೋಗದಾತರ ಸಂಸ್ಥೆಗಳಿಂದ ಕೌಶಲ್ಯಗಳ ಬೇಡಿಕೆಯನ್ನು ಮೌಲ್ಯಮಾಪನ ಮಾಡಬೇಕು ಮತ್ತು ನಂತರ ನಿರುದ್ಯೋಗಿ ಯುವಕರಿಗೆ ತರಬೇತಿಯನ್ನು ಕೈಗೊಳ್ಳಬೇಕು. ಸರ್ಕಾರವು ಕೈಗಾರಿಕೆಗಳ ಸಂಭಾವ್ಯ ಉದ್ಯೋಗದಾತರೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು ಮತ್ತು ಅವರನ್ನು ಕೌಶಲ್ಯಪೂರ್ಣಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದು (ಉಲ್ಲೇಖ: ಕೆಫೆ, ಕಾಫಿ ಡೇ, ಗ್ರಾಮ ತರಂಗ ಉಪಕ್ರಮ)<br>2. ಸಾಕಷ್ಟು ಮಾನವ ಸಂಪನ್ಮೂಲ ಮತ್ತು ಪ್ರಮಾಣಿತ ತರಬೇತಿ ಮಾಡ್ಯೂಲ್‌ಗಳೊಂದಿಗೆ ಸೂಕ್ತ ಯೋಜನೆ ಅನುಷ್ಠಾನ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು |

| | | | |
|---|---|---|---|
| | | ನಗರ ಜಿಲ್ಲೆ ಪ್ರದೇಶದಲ್ಲಿ ಹೆಚ್ಚಾಗಿ ರಫ್ತು ಆಧಾರಿತ ಉಡುಪು ಕಾರ್ಖಾನೆಗಳು ಕೇಂದ್ರೀಕರಿಸಿರುವುದರಿಂದ ಬಹಳಷ್ಟು ಜನರು (35.18 ಪ್ರತಿಶತ) ವಸ್ತ್ರ ವಿನ್ಯಾಸ ಹೊಲಿಗೆ ಕೆಲಸ ಮತ್ತು ಸಂಬಂಧಿತ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.<br>3. ಕೋಷ್ಟಕ 10.2.9 ರಲ್ಲಿ ಕಂಡು ಬರುವಂತೆ ಪ್ರತಿಯೊಂದು ಔದ್ಯೋಗಿಕ ಕೌಶಲ್ಯ ವಿಭಾಗಗಳಲ್ಲಿ 20–30 ವರ್ಷಗಳ ವಯಸ್ಸಿನವರ ಹೆಚ್ಚು ಗಮನಾರ್ಹ ಪಾಲು ಇದೆ. ಫಲಾನುಭವಿಗಳೊಂದಿಗಿನ ಗುಣಾತ್ಮಕ ಸಂವಾದವು 20 ವರ್ಷಕ್ಕಿಂತ ಕಡಿಮೆ ವಯಸ್ಸಿನ ಫಲಾನುಭವಿಗಳು ಇನ್ನೂ ಮನಸ್ಸು ಮಾಡದ ಕಾರಣ ಆಯ್ಕೆಗೆ ಸಿದ್ಧರಗಿರುತ್ತಾರೆ. ಆದರೆ 35 ವರ್ಷಕ್ಕಿಂತ ಹೆಚ್ಚು ವಯಸ್ಸಿನವರು ತಮ್ಮ ಜೀವನ ಹಾದಿಯನ್ನು ಈಗಾಗಲೇ ನಿರ್ಧರಿಸಲಾಗಿರುವುದರಿಂದ ಅಥವಾ ಏನಾದರೂ ಹೊಸದನ್ನು ಪಡೆಯಲು ವಯಸ್ಸು ಮೀರಿರುತ್ತದೆ ಎಂದು ಬಹಿರಂಗಪಡಿಸುತ್ತದೆ.<br>4. 43.47 ಪ್ರತಿಶತ ಜನರು ಯಾವುದೇ ತರಬೇತಿ ಪಡೆಯುವ ಮೊದಲು ನಿರುದ್ಯೋಗಿಗಳಾಗಿದ್ದರು ಎಂದು ವರದಿ ಮಾಡಿದ್ದಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಫಲಾನುಭವಿಗಳ ಮಾಹಿತಿ ಪ್ರಕಾರ 56 ಪ್ರತಿಶತದಷ್ಟು ಜನರು ಕಾರ್ಯಕ್ರಮದಲ್ಲಿ ಸೇರಲು ಅರ್ಹತೆಯನ್ನು ಹೊಂದಿಲ್ಲ. | ಮಾಡಬೇಕಾಗಿದೆ.<br>3. ಉತ್ತಮ ಸಮನ್ವಯ, ವಿಶೇಷವಾಗಿ ಹೊಸದಾಗಿ ಉದ್ಯೋಗದಲ್ಲಿರುವ ವ್ಯಕ್ತಿಗಳಿಗೆ ವೇತನ ಪ್ರಸ್ತಾವನೆಗಳ ಬಗ್ಗೆ (ಕನಿಷ್ಠ ವೇತನ, ಕೆಲಸದ ಸಮಯ, ಸಾಮಾಜಿಕ ಭದ್ರತಾ ಕ್ರಮಗಳು) ಖಚಿತಪಡಿಸಿಕೊಳ್ಳಬೇಕು.<br>4.ಕೌಶಲ್ಯ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ನೀಡಲಾಗುವ ಕೌಶಲ್ಯಗಳ ಸೆಟ್ (ಸಾಮಾನ್ಯಅಂಗಡಿ, ಹೈನುಗಾರಿಕೆ) ಹೆಚ್ಚಾಗಿ ಒಂದು ತಿಂಗಳ ಅವಧಿಯ ತರಬೇತಿನೀಡಬೇಕಾದ ವ್ಯಾಪಾರಗಳಲ್ಲ.<br>ಆದ್ದರಿಂದ ಸೂಕ್ತ ಕೌಶಲ್ಯ ಸೆಟ್‌ಅನ್ನು ಗುರುತಿಸುವಲ್ಲಿ ಮತ್ತು ಕಠಿಣ ತರಬೇತಿ ನೀಡುವುದರಲ್ಲಿ ಹೆಚ್ಚು ಸಂಘಟಿತ ಪ್ರಯತ್ನಗಳನ್ನು ಮಾಡಬೇಕಾಗಿದೆ. |

| | | | |
|---|---|---|---|
| | | 5. ಯೋಜನೆ ಅನುಷ್ಠಾನ ನಿಯೋಗಗಳ ಮೂಲಕ ನಿಯೋಜನೆಯ ಪ್ರಯೋಜನಗಳನ್ನು ಕೇವಲ 76 ಪ್ರತಿಶತದಷ್ಟು ಮಾತ್ರ ಪಡೆದುಕೊಂಡಿದ್ದಾರೆ. ಸುಮಾರು 24 ಪ್ರತಿಶತ ಜನರು ತಾವು ಸೇವೆಯನ್ನು ಪಡೆದುಕೊಂಡಿಲ್ಲ ಎಂದು ವರದಿ ಮಾಡಿದ್ದಾರೆ. ತುಮಕೂರು ಮತ್ತು ಕೊಡಗು ಜಿಲ್ಲೆಗಳಲ್ಲಿ 100 ಪ್ರತಿಶತದಷ್ಟು ಉದ್ಯೋಗ ನಿಯೋಜನೆ ಇದೆ. ಗಣನೀಯವಾಗಿ ಹೆಚ್ಚಿನ ಶೇಕಡಾವಾರು ಉದ್ಯೋಗ ನಿಯೋಜನೆ ಹೊಂದಿರುವ ಇತರ ಜಿಲ್ಲೆಗಳು ಕಲಬುರಗಿ (84.14%) ಮತ್ತು ಬೆಂಗಳೂರು ನಗರ (76.12%).<br>6. ಸುಮಾರು 73 ಪ್ರತಿಶತ ಫಲಾನುಭವಿಗಳಲ್ಲಿ ತರಬೇತಿ ಕ್ಷೇತ್ರವು ಉದ್ಯೋಗ ಕ್ಷೇತ್ರದೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗಿದೆ. ಹೊಂದಾಣಿಕೆಯಾಗದ ನಿದರ್ಶನಗಳು ಕೇವಲ 2.99 ಪ್ರತಿಶತ ಪ್ರಕರಣಗಳ ಮಟ್ಟಿಗೆ ಮಾತ್ರ ಇದ್ದವು.<br>7. ಕೆಲವರಿಗೆ ಮಾಸಿಕ ವೇತನ ಕಡಿಮೆಯಾಗಿದ್ದು3000– 4000 ರೂ.ಗಳಷ್ಟು ಇದೆ. ಇಲ್ಲಿ ಭೂಮಿಯ ಕಾನೂನು ಸಂಪೂರ್ಣವಾಗಿ ಉಲ್ಲಂಘನೆಯಾಗಿದೆ. ನಿಯೋಜನೆ ಸೇವೆಗಳ ಮೂಲಕ ಉದ್ಯೋಗವನ್ನು ಕಂಡುಕೊಂಡ ಸುಮಾರು ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ಒಂದು ತಿಂಗಳಲ್ಲಿ ರೂ.7500ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದ್ದಾರೆ. | |

| | | | |
|---|---|---|---|
| ಯುವಕರಿಗೆ ತಮ್ಮ ಸ್ಥಳೀಯ ಹುಟ್ಟೂರಿನಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಪಟ್ಟಣಗಳು ಮತ್ತು ನಗರಗಳಿಗೆ ವಲಸೆ ಹೋಗುವುದನ್ನು ಪರಿಶೀಲಿಸುವುದು. | ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ ಸಂದರ್ಶನಗಳು | 1. ಸ್ವಯಂ ಉದ್ಯೋಗ ಅಥವಾ ಕೌಶಲ್ಯಗಳು ಮತ್ತು ಉದ್ಯೋಗದ ಗುರಿಗಳು ಪ್ರಾಥಮಿಕವಾಗಿ ಗ್ರಾಮೀಣ ನಿರುದ್ಯೋಗಿ ಯುವಕರ ನಗರ ವಲಸೆಯನ್ನು ತಡೆಗಟ್ಟುವುದಾದರೆ ಅವರು ತರಬೇತಿ ಪಡೆದ ಕ್ಷೇತ್ರಗಳು ಹೆಚ್ಚು ಗ್ರಾಮೀಣ ಸಂಬಂಧಿತ ವಿಷಯ ಮತ್ತು ದೃಷ್ಟಿಕೋನವನ್ನು ಹೊಂದಿರಬೇಕು. ಅಂತಹ ಉದ್ಯಮಗಳು ಅಥವಾ ಕೌಶಲ್ಯಗಳ ಮಾರುಕಟ್ಟೆ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕು. ಉದಾಹರಣೆಗೆ ಭದ್ರತಾ ಸೇವೆಗಳು ಅಥವಾ ಗಣಕಯಂತ್ರ ನಿರ್ವಹಣೆ ಕ್ಷೇತ್ರದಲ್ಲಿ ಯುವಕರಿಗೆ ತರಬೇತಿ ನೀಡುವ ಉಪಯುಕ್ತತೆ ಅವರು ಸ್ವಯಂ ಉದ್ಯೋಗಿಗಳಾಗುವ ಅಥವಾ ಗ್ರಾಮೀಣ ವಾಸಸ್ಥಳಗಳಲ್ಲಿ ಉದ್ಯೋಗ ಪಡೆಯುವ ಭರವಸೆ ಹೊಂದಿರಬೇಕು.<br>2. ಸ್ವಯಂ ಉದ್ಯೋಗ ಅಥವಾ ಕೌಶಲ್ಯಪೂರ್ಣಗೊಳಿಸುವಿಕೆ ಮೂಲಕ ಗ್ರಾಮೀಣ ಯುವಕರ ವಲಸೆಯನ್ನು ತಡೆಗಟ್ಟುವತ್ತ ಗಮನ ಹರಿಸುವುದರಲ್ಲಿ ಅಂತರ್ಗತ ವಿರೋದ್ಯಾ ಭ್ಯಾಸವನ್ನು ಹೊಂದಿದೆ. ಈ ಅಧ್ಯಯನದಲ್ಲಿ ಕಂಡುಬರುವಂತೆ ಯಶಸ್ಸು ಒಬ್ಬನು ವಲಸೆ ಹೋಗಲು ಕಾರಣವಾದರೆ ಮತ್ತೊಂದರ ವೈಫಲ್ಯವು ವಲಸೆ ಹೋಗಲು ಕಾರಣವಾಗುತ್ತದೆ.<br>3. ಅನೇಕ ವೇಳೆ ಆದ್ಯತೆಯ ಕೌಶಲ್ಯಕ್ಕೆ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಇರುವುದಿಲ್ಲ. ಕೆಲವು | 1. ಯಾವುದೇ ನೀತಿಯನ್ನು ವಿನ್ಯಾಸಗೊಳಿಸುವಾಗ ಅಥವಾ ಅನುಷ್ಠಾನಗೊಳಿಸುವಾಗ ಕೌಶಲ್ಯಗಳ ಬೇಡಿಕೆ ಮತ್ತು ಕಾರ್ಮಿಕ ಮಾರುಕಟ್ಟೆ ಸಂರಚನೆಯ ಗುಣಲಕ್ಷಣದೊಂದಿಗೆ ಅವುಗಳ ಸಂಪರ್ಕಗಳ ಬಗ್ಗೆ ಸರಿಯಾಗಿ ಅರ್ಥಮಾಡಿಕೊಳ್ಳಬೇಕು.<br>2.ಯೋಜನೆಯ ಮಾರ್ಗದರ್ಶಿ ಉದ್ದೇಶವಾಗಿ ವಲಸೆಯನ್ನು ತಡೆಗಟ್ಟುವ ಗುರಿಯನ್ನು ಪರಿಷ್ಕರಿಸಬೇಕಾಗಿದೆ. ಆ ಗುರಿಯು ಕಾರ್ಯಸಾಧ್ಯತೆ ಹೊಂದಿಲ್ಲದಿರುವುದು ಮತ್ತು ವಾಸ್ತವತೆಯಿಂದ ದೂರವಿರುವುದೆ ಇದಕ್ಕೆ ಕಾರಣವಾಗಿದೆ. |

| | | | |
|---|---|---|---|
| | | ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ವೈಯಕ್ತಿಕ ಆಕಾಂಕ್ಷೆಗಳನ್ನು ನಿರ್ಬಂಧಗೊಳಿಸಿದರೆ ಫಲಾನುಭವಿಗಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. | |
| ಲಿಂಗದ ವಿಷಯದಲ್ಲಿ ಯೋಜನೆಯ ವಿಶಿಷ್ಟತೆ | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ | 1. ಸ್ವಯಂ ಉದ್ಯೋಗದ ಘಟಕದಲ್ಲಿ ಕೇವಲ 28.9 ಪ್ರತಿಶತ ಫಲಾನುಭವಿಗಳು ಮಹಿಳೆಯರಾಗಿದ್ದಾರೆ. ಹೈದರಾಬಾದ್ ಕರ್ನಾಟಕ ವಲಯದ ಜಿಲ್ಲೆಗಳಾದ ಯಾದಗಿರಿ (7.69) ಮತ್ತು ಕಲಬುರಗಿ (16.86)ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆಯಿದ್ದರೆ ಉಡುಪಿ (72.73) ಮತ್ತು ಬೆಂಗಳೂರು–ನಗರ (51.52) ಗಳಲ್ಲಿ ಅತಿ ಹೆಚ್ಚು ಮತ್ತು ಬಹಳಷ್ಟು ಮಟ್ಟಿಗೆ ಮಹಿಳೆಯರು ಪುರುಷರಿಗಿಂತ ಉತ್ತಮ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ್ದಾರೆ.<br>2. ಮುಚ್ಚಲ್ಪಟ್ಟ ಉದ್ಯಮಗಳಲ್ಲಿ, ಬ್ಯೂಟಿ ಪಾರ್ಲರ್‌ಗಳೂ (87.5%) ಹೆಚ್ಚು ಗಮನಾರ್ಹ ಪಾಲನ್ನು ಹೊಂದಿರುವುದು ಸಾಲದ ಮೊತ್ತವನ್ನು ಸ್ವಾವಲಂಬನೆ ಹೊರತುಪಡಿಸಿ ಇತರ ಉದ್ದೇಶಗಳಿಗೆ ಖರ್ಚು ಮಾಡಲಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ.<br>**ವೇತನ–ಉದ್ಯೋಗ:** ಮಹಿಳೆಯರ ಪ್ರಮಾಣವು ಈ ಘಟಕದಲ್ಲಿ ಸ್ವಲ್ಪ ಹೆಚ್ಚು, ಸುಮಾರು 40 ಪ್ರತಿಶತ ಇದೆ. ಮಹಿಳಾ ಫಲಾನುಭವಿಗಳಲ್ಲಿ ಅತ್ಯಂತ ಕಡಿಮೆ ಪಾಲು ರಾಯಚೂರಿನ ಜಿಲ್ಲೆಗಳಿಂದ 12.50 ಪ್ರತಿಶತ ನಂತರ | 1. ಯೋಜನೆಯಲ್ಲಿ ಹೆಚ್ಚಿನ ಮಹಿಳೆಯರನ್ನು ಉತ್ತೇಜಿಸಬೇಕಾಗಿದೆ ಮತ್ತು ಕೌಶಲ್ಯದ ವಿಷಯದಲ್ಲಿ ಲಿಂಗ–ಪಕ್ಷಪಾತವನ್ನು ತರಬೇತಿ ಪಾಲುದಾರರಿಂದ ಸರಿಯಾದ ಸಮಾಲೋಚನೆಯ ಮೂಲಕ ತಡೆಗಟ್ಟಬೇಕಾಗಿದೆ.<br>2. ಯೋಜನೆಯಲ್ಲಿ ಫಲಾನುಭವಿಗಳನ್ನು ಉಳಿಸಿಕೊಳ್ಳುವುದು ಅವರ ಸಾಲದ ಮೊತ್ತವನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರ ಖರ್ಚು ಮಾಡಬೇಕೆಂದು ಒತ್ತಾಯಿಸುತ್ತದೆ.<br>3. ಮಂಗಳಮುಖಿ ವ್ಯಕ್ತಿಗೆ ಅರ್ಹತಾ ಖಂಡವನ್ನು ಸಡಿಲಿಸಬೇಕಾಗಿದೆ ಮತ್ತು ಅವರ ಆಯ್ಕೆಯ ಸ್ಥಳದಿಂದ ಪ್ರಯೋಜನವನ್ನು ಪಡೆಯಲು ಅವರಿಗೆ ಅವಕಾಶ ನೀಡಬೇಕು ಏಕೆಂದರೆ ಅವರ ಸ್ವಂತ ಸ್ಥಳದಿಂದ ಪ್ರಯೋಜನಗಳನ್ನು ಪಡೆಯಲು ಅವರ ಗುರುತನ್ನು ಬಹಿರಂಗಪಡಿಸುವುದು ಸವಾಲಾಗಿದೆ. |

| | | | |
|---|---|---|---|
| | | ಕಲಬುರಗಿಯಲ್ಲಿ 21.61 ಪ್ರತಿಶತ ಹೊಂದಿದೆ. ತುಮಕೂರಿನಲ್ಲಿ ಅತಿ ಹೆಚ್ಚಾಗಿದ್ದು 80.61 ಪ್ರತಿಶತವಾದರೆ ನಂತರದಲ್ಲಿ ಮಂಡ್ಯ 51.52 ಪ್ರತಿಶತ ಹೊಂದಿದೆ.<br>3. ಬ್ಯೂಟಿ ಪಾರ್ಲರ್ (73 ಪ್ರತಿಶತ), ಹೊಲಿಗೆ ಕೆಲಸ (62 ಪ್ರತಿಶತ), ಮತ್ತು ಹೈನುಗಾರಿಕೆ (46 ಪ್ರತಿಶತ) ಅಂತಹ ವೃತಿಗಳಲ್ಲಿ ಮಹಿಳೆಯರು ಕೇಂದ್ರೀಕರಿಸಿರುವುದು ಅಸ್ತಿತ್ವದಲ್ಲಿರುವ ಲಿಂಗ ಪಾತ್ರಗಳ ಬಲವರ್ಧನೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಇಲ್ಲಿಯವರೆಗೆ ಪುರುಷರಿಗೆಂದೇ ಸೀಮಿತವಾಗಿದ್ದ ಕೌಶಲ್ಯಗಳನ್ನು ಪಡೆಯುವ ಮೂಲಕ ಮಹಿಳೆಯರು ಪ್ರವೇಶ ಪಡೆದ ಇತರ ಕ್ಷೇತ್ರಗಳೆಂದರೆ ಗಣಕಯಂತ್ರ (32 ಪ್ರತಿಶತ), ಹೋಟೆಲ್ (30 ಪ್ರತಿಶತ), ಸಾಮಾನ್ಯ ಅಂಗಡಿಗಳು (21 ಪ್ರತಿಶತ), ಮೊಬೈಲ್ ಫೋನ್ ಸಂಬಂಧಿತ (17%).<br>**4. ಮಂಗಳಮುಖಿ ಸಮುದಾಯವನ್ನು ಸೇರಿಸುವ ಬಗ್ಗೆ:**<br>ಆದ್ಯತೆಯಆಧಾರದ ಮೇಲೆ ರಾಜೀವ್ ಗಾಂಧಿ ಚೈತನ್ಯ ಯೋಜನೆಅಡಿಯಲ್ಲಿ ಮಂಗಳಮುಖಿ ಸಮುದಾಯದ ಸೇರ್ಪಡೆಯನ್ನು ಉತ್ತೇಜಿಸುವುದು ಬಹುತೇಕ ವಿಫಲವಾಗಿದೆ ಏಕೆಂದರೆ ನಮ್ಮ ಕ್ಷೇತ್ರ ಶೋಧಕರು ಅಧ್ಯಯನ ಮಾಡಿದ ಫಲಾನುಭವಿಗಳಲ್ಲಿ ಯಾರೊಬ್ಬ ಮಂಗಳಮುಖಿಯನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ ಮತ್ತು ಇಲಾಖೆಗೂ ಈ | |

| | | | |
|---|---|---|---|
| | | ಬಗ್ಗೆ ಯಾವುದೇ ದತ್ತಾಂಶ ಇಲ್ಲ. | |
| ಜಾತಿ ಮತ್ತು ಧರ್ಮದ ದೃಷ್ಟಿಯಿಂದ ಯೋಜನೆಯ ಸಮಾವಿಷ್ಟತೆ | ಪ್ರಾಥಮಿಕ ಕ್ಷೇತ್ರ ಸಮೀಕ್ಷೆ<br>+<br>ಕೇಂದ್ರೀಕೃತ ಸಮೂಹ ಚರ್ಚೆ | **ಸ್ವಯಂ ಉದ್ಯೋಗ:** ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯವು ಮಾದರಿಯಲ್ಲಿ ಶೇಕಡಾ 27.66 ರಷ್ಟಿದೆ. ಈ ಅರ್ಥದಲ್ಲಿ, ಗುರಿಯನ್ನು 7.5 ಪ್ರತಿಶತಕ್ಕೂ ಹೆಚ್ಚು ಅಂಶಗಳಿಂದ ಮೀರಿಸಿರುವುದು ಸ್ವಾಗತಾರ್ಹ ಆದರೆ ಮೂರು ಜಿಲ್ಲೆಗಳು ಈ ವಿಷಯದಲ್ಲಿ ಕೊರತೆಯನ್ನು ತೋರಿಸುತ್ತವೆ. ಧಾರವಾಡ (9.92 ಪ್ರತಿಶತ), ಚಿತ್ರದುರ್ಗ (17.03 ಪ್ರತಿಶತ), ಮತ್ತು ಯಾದಗಿರಿ (19.05 ಪ್ರತಿಶತ). ಅಧ್ಯಯನ ಮಾಡಿದ ಎಲ್ಲಾ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡ (6.09) ಪ್ರಾತಿನಿಧ್ಯವು ಉದ್ದೇಶಿತ 9%ಗಿಂತ ಕಡಿಮೆ ಆಗಿದೆ. ಫಲಾನುಭವಿಗಳಲ್ಲಿ ಶೇಕಡಾ ತೊಂಬತ್ತೈದು ಪ್ರತಿಶತ ಹಿಂದೂಗಳು, ಕೇವಲ 3.4% ಮುಸ್ಲಿಮರು ಮತ್ತು 1.5% ಕ್ರಿಶ್ಚಿಯನ್ನರು ಇದ್ದಾರೆ.<br>**ವೇತನ–ಉದ್ಯೋಗ:** ಯೋಜನೆಯಲ್ಲಿ ಪರಿಶಿಷ್ಟ ಜಾತಿ ಪಾಲ್ಗೊಳ್ಳುವಿಕೆಯು ಶೇ.25 ಅಗಿದ್ದು, ನಿಗದಿತ ಪ್ರಮಾಣ 20%ಕ್ಕಿಂತ ಹೆಚ್ಚಾಗಿದೆ. ಫಲಾನುಭವಿಗಳ ಮಾದರಿಯಲ್ಲಿ ಪರಿಶಿಷ್ಟ ಪಂಗಡದವರ ಉಪಸ್ಥಿತಿ ಕೇವಲ 6.81 ಪ್ರತಿಶತ ಆಗಿದೆ.<br>ಫಲಾನುಭವಿಗಳ ಧಾರ್ಮಿಕ ಹಂಚಿಕೆಯ ವಿಷಯದಲ್ಲಿ, ಹಿಂದೂಗಳು 92.5% ನೊಂದಿಗೆ ಪ್ರಾಬಲ್ಯ ಸಾಧಿಸಿದ್ದಾರೆ, ನಂತರ ಮುಸ್ಲಿಮರು ಕೇವಲ 6.8% ರಷ್ಟಿದ್ದಾರೆ. | ರಾಜೀವ್ ಗಾಂಧಿ ಚೈತನ್ಯ ಯೋಜನೆ ಕಾರ್ಯಕ್ರಮದ ಎರಡೂ ಘಟಕಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಅಂಶಗಳನ್ನು ಗಮನಿಸಿದರೆ, ಕಾರ್ಯಕ್ರಮದಲ್ಲಿ ಅವರನ್ನು, ನಿರ್ದಿಷ್ಟವಾಗಿ ಯುವಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಲು ಗಮನ ನೀಡುವ ಅಗತ್ಯವಿದೆ. ಇದು ಅಲ್ಪಸಂಖ್ಯಾತರಿಗೂ ಅನ್ವಯಿಸುತ್ತದೆ.<br>ವಿಕಲಚೇತನರನ್ನು ಯೋಜನೆಯ ಘಟಕಗಳೆರಡರಲ್ಲೂ ಆದ್ಯತೆಯ ಆಧಾರದ ಮೇಲೆ ಸೇರಿಸಬೇಕು ಮತ್ತು ಸಾಲಗಳನ್ನು ಪಡೆಯುವ ವಿಷಯದಲ್ಲಿ ಅವರಿಗೆ ಒಂದು ಬಾರಿ ಪ್ರಯೋಜನದ ಪ್ರಮಾಣಕಗಳನ್ನು ಸಡಿಲಿಸಬೇಕು. |

| | | | |
|---|---|---|---|
| ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಯೋಜನೆ ಅನುಷ್ಠಾನ ನಿಯೋಗಗಳು (ತರಬೇತಿ ಪಾಲುದಾರರು) ಎದುರಿಸುತ್ತಿರುವ ಅನುಷ್ಠಾನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳು | ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ ಸಂದರ್ಶನಗಳು | 1.ಆಯ್ಕೆ ಪ್ರಕ್ರಿಯೆಯಲ್ಲಿ ತರಬೇತಿ ಪಾಲುದಾರರ ಕನಿಷ್ಠ ಪಾಲ್ಗೊಳ್ಳುವಿಕೆಯು ಹೆಚ್ಚಿನ ಅನರ್ಹತೆಗೆ ಕಾರಣವಾಗಿದೆ. ತರಬೇತಿ ಪಡೆದ ಸಂಭಾವ್ಯ ಫಲಾನುಭವಿಗಳಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಜನರು ಬ್ಯಾಂಕ್ ಸಾಲಗಳಿಗೆ ಅನರ್ಹರು ಎಂದು ಕಂಡುಬಂದಿದೆ. ಅಂತಹ ವ್ಯಕ್ತಿಗಳಿಗೆ ತರಬೇತಿ ನೀಡಲು ಯೋಜನೆ ಬೆಂಬಲಿಸುವ ನಿಯೋಗಗಳಿಗೆ ವೇತನ ನೀಡದಿದ್ದರೂ ಇದು ಯೋಜನೆ ಬೆಂಬಲಿಸುವ ನಿಯೋಗಗಳ ಸಂಪನ್ಮೂಲಗಳ ಬೃಹತ್ ಹೊರಹರಿವಿಗೆ ಎಡೆ ಮಾಡಿಕೊಡುತ್ತದೆ, ಅವರು ತಮ್ಮ ನಷ್ಟವನ್ನು ತುಂಬಿಸಿಕೊಳ್ಳಲು ಇತರ ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸಬಹುದಾಗಿದೆ.<br>2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಪ್ರಾರಂಭಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳ ವರೆಗೆವಿವಿಧ ಹಂತಗಳಲ್ಲಿ ಅನೇಕ ಬೇಡಿಕೆಗಳೊಂದಿಗೆ ಅನೇಕ ರೀತಿಯ ಮಧ್ಯ ಪ್ರವೇಶದಿಂದಾಗಿ ತರಬೇತಿ ಪಾಲುದಾರರ ಕಾರ್ಯಕ್ಷಮತೆ ಪೀಡಿತಗೊಂಡಿದೆ.<br>3. ಯೋಜನೆ ಬೆಂಬಲಿಸುವ ನಿಯೋಗಗಳು ಮತ್ತು ಯೋಜನೆ ಅನುಷ್ಠಾನ ನಿಯೋಗಗಳು ಈಗಾಗಲೇ ಖರ್ಚು ಮಾಡಿದ ವೆಚ್ಚಗಳ ಸಮಯೋಚಿತ ಮರುಪಾವತಿ ಸಾಧ್ಯವಾಗುತ್ತಿಲ್ಲ. | 1. ಸಾಕಷ್ಟು ಮಾನವ ಸಂಪನ್ಮೂಲ ಹೊಂದಿರುವ ಸೂಕ್ತ ಯೋಜನೆ ಬೆಂಬಲಿಸುವ ನಿಯೋಗಗಳನ್ನು ಗುರುತಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗಿದೆ. ಉಪಗ್ರಹ ಆಧಾರಿತ ತರಬೇತಿಗಾಗಿ ಪ್ರಾದೇಶಿಕ ಭಾಷೆಗಳಲ್ಲಿ ಪ್ರಮಾಣೀಕೃತ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಬೇಕಾಗಿದೆ. ಜೀವನೋಪಾಯದ ಆಯ್ಕೆಗಳನ್ನು ಬೆಂಬಲಿಸುವ ಸುಸ್ಥಿರತೆ ಲಾಭದಾಯಕತೆ ಮತ್ತು ಸಾಮರ್ಥ್ಯದ ದೃಷ್ಟಿಕೋನದಿಂದ ಸ್ವಯಂ ಉದ್ಯೋಗ ಮಾರ್ಗಗಳ ಕಾರ್ಯಸಾಧ್ಯತೆಯನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಬೇಕು.<br>2. ಪೂರ್ವ ನಿಗದಿತ ಷರತ್ತುಗಳನ್ನು ಪೂರೈಸಿದ ನಂತರ ಅವರಿಗೆ ಸಕಾಲದಲ್ಲಿ ಪಾವತಿಸಬೇಕು. |

| | | | |
|---|---|---|---|
| | | 4. ಕೌಶಲ್ಯ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ತರಬೇತಿ ಪಾಲುದಾರರು ಉದ್ಯೋಗದಲ್ಲಿ ಅವರ ನಿಯೋಜನೆಯನ್ನು ಮೂರು ವರ್ಷಗಳ ಕಾಲ ಟ್ರ್ಯಾಕ್ ಮಾಡಬೇಕೆಂಬ ನಿರೀಕ್ಷೆ ವಾಸ್ತವಿಕವಾದುದಲ್ಲ. ಉದ್ಯೋಗದ ಅನೇಕ ಸ್ಥಳಗಳಲ್ಲಿ 3 ರಿಂದ 4 ನೂರು ಜನರಿಗೆಇದನ್ನು ಮಾಡುವುದು ಕಷ್ಟಸಾಧ್ಯ<br>5. ಅನೇಕ ವೇಳೆ ತರಬೇತಿಗಾಗಿ ನುರಿತ ಸಂಪನ್ಮೂಲ ವ್ಯಕ್ತಿಗಳು ಲಭ್ಯವಿಲ್ಲದಿರುವುದರಿಂದ ತರಬೇತಿ ಪಾಲುದಾರರು ಕೆಲವು ಕೌಶಲ್ಯ ಉಪಕ್ರಮಗಳನ್ನು ಮಾತ್ರ ಆಯ್ಕೆ ಮಾಡಲು ದಾರಿಯಾಗಿದೆ.<br>6. ಎರಡೂ ಘಟಕಗಳಲ್ಲಿ ಫಲಾನುಭವಿಗಳು ಆಹಾರ ಮತ್ತು ವಸತಿಯ ಗುಣಮಟ್ಟದ ವಿರುದ್ಧ ಅಗಾಧವಾಗಿ ಪ್ರತಿಕ್ರಿಯಿಸಿದ್ದಾರೆ.<br>7. ತರಬೇತಿ ಮತ್ತು ವಸತಿಗಾಗಿ ಸ್ಥಳಗಳನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಬಾಡಿಗೆ ಸಮಸ್ಯೆಗಳ ಬಗ್ಗೆ ತರಬೇತಿ ಪಾಲುದಾರರು ತಮ್ಮ ಅಳಲು ವ್ಯಕ್ತಪಡಿಸಿದ್ದಾರೆ. | |
| ಬ್ಯಾಂಕ್ ಸಾಲಗಳಿಗೆ ಪ್ರವೇಶಾತಿಯಲ್ಲಿ ಅಂತರ್ಗತವಾಗಿರುವ ಅಡೆತಡೆಗಳನ್ನು ಮೌಲ್ಯಮಾಪನ ಮಾಡುವುದು ಮತ್ತು ಮರುಪಾವತಿಯ ಸ್ಥಿತಿಗತಿಯನ್ನು | ಕೇಂದ್ರೀಕೃತ ಸಮೂಹ ಚರ್ಚೆ<br>+<br>ಆಳವಾದ | 1. ಯೋಜನೆ ಬೆಂಬಲಿಸುವ ನಿಯೋಗಗಳು ತಮ್ಮ ಕಡೆಯಿಂದ ತರಬೇತಿ ಪಡೆದ ಫಲಾನುಭವಿಗಳಿಗೆ ಸಾಲದ ಅನುಮೋದನೆಯ ಬಗ್ಗೆ ಅಭಿಪ್ರಾಯವನ್ನು ಪಡೆಯುತ್ತವೆ. ಪೂರ್ವಭಾವಿ ಅನುಮೋದನೆಯನ್ನು ಅಂತಿಮ ಹಂತವಾಗಿ | ನೀತಿಯನ್ನು ವಿನ್ಯಾಸಗೊಳಿಸುವಾಗ ಸಾಲ ನೀಡುವ ನಿಯಮಗಳು ಮತ್ತು ಷರತ್ತುಗಳುಸಹಾಯಧನದ ಅಂಶ ಮತ್ತು ಅರ್ಹತಾ ಮಾನದಂಡಗಳ ಬಗ್ಗೆ ಹಣಕಾಸು ಸಂಸ್ಥೆಗಳೊಂದಿಗೆ ಸ್ಪಷ್ಟ ತಿಳುವಳಿಕೆಯನ್ನು ಹೊಂದುವುದು ಅಗತ್ಯವಾಗಿದೆ. ಇದರಿಂದ |

| | | | |
|---|---|---|---|
| ಅಧ್ಯಯನ ಮಾಡುವುದು. | ಸಂದರ್ಶನಗಳು | ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬ್ಯಾಂಕ್ ಅಧಿಕಾರಿಗಳು ಸೂಚಿಸುತ್ತಾರೆ. ಅಂತಹ ಪೂರ್ವಭಾವಿ ಅನುಮೋದನೆಯನ್ನು ಪಡೆಯುವಾಗ ಅರ್ಜಿದಾರರಿಗೆ ಯಾವುದೇ ಹೊಣೆಗಾರಿಕೆ ಇದೆಯೇ ಅಥವಾ ಇಲ್ಲವೇ ಎಂಬ ಪರಿಶೀಲನೆಯ ಆಧಾರದ ಮೇಲೆ ಅಭಿಪ್ರಾಯವನ್ನು ನೀಡಲಾಗುವುದು.<br>2. ಸಾಮಾನ್ಯವಾಗಿ ಅಂತಹ ಅಸಮ್ಮತಿಯೆಂದರೆ, ಅರ್ಜಿದಾರರು ಸಾಲದ ಭದ್ರತೆಗೆ ಪರ್ಯಾಯವಾಗಿ ಯಾವುದೇ ಮೇಲಾಧಾರವನ್ನು ಸಲ್ಲಿಸಲು ವಿಫಲರಾಗುತ್ತಾರೆ ಅಥವಾ ಬ್ಯಾಂಕಿನೊಂದಿಗೆ ಸಾಲ ಸುಸ್ತಿದಾರರಾಗಿರಲು ಇತರ ಯಾವುದೇ ಕುಟುಂಬ ಸದಸ್ಯರು ವಿಫಲರಾಗುತ್ತಾರೆ ಎಂದರ್ಥ. ಆಗಾಗ್ಗೆ ಸರ್ಕಾರದಿಂದ ಸಾಲ ಮನ್ನಾವನ್ನು ನಿರೀಕ್ಷಿಸುತ್ತಿದ್ದ ಫಲಾನುಭವಿಗಳು ಮರುಪಾವತಿಯಲ್ಲಿ ಉದ್ದೇಶ ಪೂರ್ವಕ ಸುಸ್ತಿದಾರರಾಗಲು ಬಯಸುತ್ತಾರೆ.<br><br>3. ಅಂತಹ ಬಾಕಿ ಇರುವ ಸಾಲಗಳು ಕೇವಲ ಸಂಬಂಧಪಟ್ಟ ವಾಣಿಜ್ಯ ಬ್ಯಾಂಕುಗಳೊಂದಿಗೆ ಮಾತ್ರವಲ್ಲ ಇತರ ಯಾವುದೇ ವಾಣಿಜ್ಯ ಬ್ಯಾಂಕ್ ನೊಂದಿಗೆ ಸಹ ಇವೆ. ಬ್ಯಾಂಕ್ ವಹಿವಾಟುಗಳ ಬಗ್ಗೆ ಮಾಹಿತಿಯ ಡಿಜಿಟಲ್ ಹಂಚಿಕೆಯನ್ನು ಗಮನಿಸಿದರೆ – ಯಾವುದೇ ಸಾಲಗಳ ಮಾಹಿತಿಯನ್ನು | ಫಲಾನುಭವಿಗಳು ಮತ್ತು ಯೋಜನೆ ಬೆಂಬಲಿಸುವ ನಿಯೋಗಗಳು/ಯೋಜನೆ ಅನುಷ್ಠಾನ ನಿಯೋಗಗಳು ಇಬ್ಬರನ್ನೂ ಕಷ್ಟಗಳಿಗೆ ಒಳಪಡಿಸಲಾಗುವುದಿಲ್ಲ. |

| | | | |
|---|---|---|---|
| | | ಮರೆಮಾಡುವುದು ಪ್ರಾಯೋಗಿಕವಾಗಿ ಅಸಾಧ್ಯ. ಅನೇಕವೇಳೆ, ವಾಣಿಜ್ಯ ಬ್ಯಾಂಕುಗಳು 'ಕೆಟ್ಟ ಸಾಲಗಳು' ಅಥವಾ ಕಾರ್ಯ ನಿರ್ವಹಿಸದ ಆಸ್ತಿ' ಬಗ್ಗೆ ಜಾಗರೂಕವಾಗಿವೆ. ಈ ನಿಯಮವನ್ನು ಕೇವಲ ಫಲಾನುಭವಿಗೆ ಮಾತ್ರವಲ್ಲದೆ ಫಲಾನುಭವಿಯ ಇತರ ಗೃಹ ಸದಸ್ಯರಿಗೂ ವಿಸ್ತರಿಸುತ್ತವೆ.<br>4.ಒಟ್ಟು ಸಾಲದ ಮೊತ್ತ 50,000 ರೂ.ಗಳಿಂದ, ಬ್ಯಾಂಕಿನ ನಿಜವಾದ ಮೊತ್ತ ಕೇವಲ 40,000 ಆಗಿದೆ. ಅನೇಕ ವೇಳೆ ಬ್ಯಾಂಕುಗಳು ಸರ್ಕಾರದಿಂದ ಪಡೆಯಬೇಕಾಗಿದ್ದ 10,000 ರೂ.ಗಳ ಸಹಾಯಧನ ಮೊತ್ತವನ್ನು ತಡೆಹಿಡಿಯುತ್ತವೆ. ಬದಲಾಗಿ, ಈ ಮೊತ್ತವನ್ನು ಉಳಿಸಿಕೊಳ್ಳಲಾಗಿದ್ದು ಇದನ್ನು ಸಾಲದ ಮರುಪಾವತಿಗೆ ವಿರುದ್ಧವಾಗಿ ಬಳಸಿಕೊಳ್ಳಲಾಗುತ್ತದೆ. | |
| ಯೋಜನೆಯ ಕಾರ್ಯಸಾಧ್ಯತೆಯನ್ನು ಅರ್ಥಮಾಡಿಕೊಳ್ಳುವುದು | | 1. ಯೋಜನೆಯ ಸ್ವಯಂ ಉದ್ಯೋಗ ಘಟಕದ ಫಲಾನುಭವಿಗಳಲ್ಲಿ ಸುಸ್ಥಿರ ಜೀವನೋಪಾಯಕ್ಕಾಗಿ ತಮ್ಮನ್ನು ತಾವು ಮರು ಕೌಶಲ್ಯಪೂರ್ಣತೆಗೆ ಒಳಗಾಗಿಸಿಕೊಳ್ಳುವ ಬದಲು ಹೆಚ್ಚುವರಿ ಆರ್ಥಿಕ ಪ್ರಯೋಜನಗಳನ್ನು ಪಡೆಯುವ ಮತ್ತೊಂದು ಯೋಜನೆಯಾಗಿ ಕಾರ್ಯಕ್ರಮವನ್ನು ನೋಡುವ ಬಲವಾದ ಪ್ರವೃತ್ತಿ ಇದೆ. ನಿಯೋಜನೆ ಸೇವೆಗಳ ಮೂಲಕ ಉದ್ಯೋಗವನ್ನು ಕಂಡುಕೊಂಡ ಸುಮಾರು ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ಒಂದು | 1. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಿಂದ ಅನೇಕ ಸರ್ಕಾರಿ ಇಲಾಖೆಗಳು (ಉದಾಹರಣೆಗೆ, ಸಮಾಜ ಕಲ್ಯಾಣ, ಕೌಶಲ್ಯ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ) ಕೌಶಲ್ಯ ತರಬೇತಿ ಕಾರ್ಯಕ್ರಮಗಳು, ನಿಯೋಜನೆ ಮತ್ತು ಸ್ವಯಂ ಉದ್ಯೋಗಾವಕಾಶಗಳಿಗಾಗಿ ಸಾಲಗಳನ್ನು ನೀಡುತ್ತವೆ ಮತ್ತು ಪ್ರಯೋಜನಗಳ ದ್ವಿಗುಣತೆ ತಡೆಗಟ್ಟಲು ಒಂದೇ ಸಂಸ್ಥೆಯ ಅಡಿಯಲ್ಲಿ ವಿಲೀನಗೊಳಿಸಬೇಕಾಗಿದೆ. |

| | | | |
|---|---|---|---|
